

## ಫೆಲೆಸ್ತೀನ್‌ನಲ್ಲಿ ನಡೆಯುತ್ತಿರುವುದೇನು?

ನಾಡಿನ ಹಿರಿಯ ಸತ್ಯವಾದಿ ಮತ್ತು ಸಮತಾವಾದಿ ಚಿಂತಕರು ಹಾಗೂ ಮಾಧ್ಯಮ ಪ್ರಮುಖರೂ ಆಗಿರುವ ಎ.ಎಸ್. ಪುತ್ತಿಗೆಯವರು ಬರೆದಿರುವ 'ಫೆಲೆಸ್ತೀನ್‌ನಲ್ಲಿ ನಡೆಯುತ್ತಿರುವುದೇನು' ಎಂಬ ಈ ಅತ್ಯಂತ ಮಹತ್ವದ ಪುಸ್ತಕ ತುಂಬಾ ಹಿಂದೆಯೇ ಕನ್ನಡ ಓದುಗರಿಗೆ ಸಿಗಬೇಕಿತ್ತು.

ಈ ಪುಸ್ತಕವನ್ನು ಪುತ್ತಿಗೆಯವರು ತಮ್ಮ ಅಪಾರ ಓದು, ಗ್ರಹಿಕೆ ಹಾಗೂ ಸತ್ಯಗಳನ್ನು ಆಧರಿಸಿ, ವಿಶ್ಲೇಷಣೆ ಮತ್ತು ನ್ಯಾಯಪ್ರಜ್ಞೆಯಿಂದ ಬರೆದಿದ್ದಾರೆ.

ಇಸ್ರೇಲ್-ಫೆಲೆಸ್ತೀನ್ ಸಂಘರ್ಷದ ಆಳ-ಅಗಲಗಳು ಅತ್ಯಂತ ಸರಳವಾಗಿ ಈ ಪುಸ್ತಕದಲ್ಲಿ ಓದುಗರಿಗೆ ದಕ್ಕುತ್ತವೆ. ಪುಸ್ತಕದುದ್ದಕ್ಕೂ ಹರಿದಿರುವ ವಸ್ತುನಿಷ್ಟ, ನಿಷ್ಪಕ್ಷಪಾತಿ ಹಾಗೂ ನ್ಯಾಯಪ್ರಜ್ಞೆಯ ನೋಟಗಳು ಕನ್ನಡದ ಓದುಗರಿಗೆ ಕಾರ್ಪೊರೇಟ್ ಮಾಧ್ಯಮಗಳ ಹಾಗೂ ಬಲಪಂಥೀಯರ ಪ್ರಚಾರಗಳ ಟೊಳ್ಳುತನವನ್ನು ಹಾಗೂ ಪೂರ್ವಗ್ರಹವನ್ನು ಅರಿಯಲು ಸುಲಭವಾಗಿ ಸಹಾಯ ಮಾಡುತ್ತದೆ.

ಈ ಪುಸ್ತಕ ಇಸ್ರೇಲ್-ಫೆಲೆಸ್ತೀನ್ ಸಂಘರ್ಷದ 360 ಡಿಗ್ರಿ ಚಿತ್ರಣವನ್ನು ಮತ್ತು ನ್ಯಾಯೋಚಿತ ಪರಿಹಾರವನ್ನು ಅತ್ಯಂತ ಸರಳವಾಗಿ ಸಮೃದ್ಧ ಮಾಹಿತಿಗಳೊಂದಿಗೆ ಮುಂದಿಡುತ್ತದೆ.

ಕನ್ನಡದ ಓದುಗರು ಈ ಅತ್ಯಂತ ಅಗತ್ಯವಾಗಿದ್ದ ಹಾಗೂ ಮಹತ್ವದ ಪುಸ್ತಕವನ್ನು ಆಸ್ಥೆಯಿಂದ ಬರಮಾಡಿಕೊಳ್ಳುತ್ತಾರೆ ಹಾಗೂ ನ್ಯಾಯದ ಪರವಾಗಿ ನಿಲ್ಲುತ್ತಾರೆ ಎಂಬ ಭರವಸೆಯೊಂದಿಗೆ...

– ಶಿವಸುಂದರ್

ಮಾಧ್ಯಮ ಪ್ರಕಾಶನ

ಬೆಲೆ: ರೂ. 230

ಫೆಲೆಸ್ತೀನ್‌ನಲ್ಲಿ ನಡೆಯುತ್ತಿರುವುದೇನು?

# ಫೆಲೆಸ್ತೀನ್‌ನಲ್ಲಿ ನಡೆಯುತ್ತಿರುವುದೇನು?

● ಎ.ಎಸ್. ಪುತ್ತಿಗೆ



# ಫೆಲೆಸ್ತೀನ್‌ನಲ್ಲಿ ನಡೆಯುತ್ತಿರುವುದೇನು?

ಎ.ಎಸ್.ಪುತ್ತಿಗೆ

ಮಾಧ್ಯಮ ಪ್ರಕಾಶನ
ಬೆಂಗಳೂರು

**Palestinenalli nadeyutthiruvudenu?**
(What is happening in Palestine?)
A collection of 25 articles written by **A.S.Puthige**
and published in **Vartha Bharati Kannada Daily** in the year 2021

**ಫೆಲೆಸ್ತೀನ್‌ನಲ್ಲಿ ನಡೆಯುತ್ತಿರುವುದೇನು?**
2021ರಲ್ಲಿ **ವಾರ್ತಾಭಾರತಿ** ಕನ್ನಡ ದೈನಿಕದಲ್ಲಿ 25 ಕಂತುಗಳಲ್ಲಿ ಪ್ರಕಟವಾದ **ಎ.ಎಸ್.ಪುತ್ತಿಗೆ**ಯವರ ಲೇಖನಗಳ ಸಂಗ್ರಹ.

Published by
**MADHYAMA PRAKASHANA**
Shamsuddin Memorial Building,
Hameed Shah Complex
Main Road, Cubbonpet
Bengaluru, Karnataka-560002
Contact : 080 22102676, 9961133202

© : **A.S.Puthige**
Contact : aputhige@gmail.com

First Edition : November 2023 - 2000 Copies
Book Size : Demy 1/8
Paper used : 80 gsm NS Maplitho
Pages : 192
Price : Rs. 230
Cover Photo : www.nbcnews.com
Cover Design : Satish Kalmady

Pages Designed & Printed at
**Aakrithi Prints**
Light House Hill Road
Mangaluru - 1
Tel. : 0824 2972002 / 7019225774

# ಮುನ್ನುಡಿ

## ಕಬ್ಬಿಣದ ಗೋಡೆಯಾಚೆಗಿರುವ ಘನಘೋರ ಸತ್ಯಗಳನ್ನು ಅರಿಯುವ ಮುನ್ನ...

ಈ ಪುಸ್ತಕ ನಿಮ್ಮ ಕೈ ಸೇರುವ ವೇಳೆಗೆ ಇಸ್ರೇಲ್ "ಹಮಾಸ್ ಭಯೋತ್ಪಾದನೆಯಿಂದ ತನ್ನ ದೇಶವನ್ನು ರಕ್ಷಿಸಿಕೊಳ್ಳಲು" 8,000ಕ್ಕೂ ಹೆಚ್ಚು ಫೆಲೆಸ್ತೀನ್ ಕಂದಮ್ಮಗಳನ್ನು ಬಾಂಬು ಹಾಕಿ ಕೊಂದಿರುತ್ತದೆ. ಒಟ್ಟಾರೆ ಗಾಝಾಪ್ರದೇಶದಲ್ಲಿ ಇಸ್ರೇಲಿನ ದಾಳಿಯಿಂದ 15,000ಕ್ಕೂ ಹೆಚ್ಚು ನಿಶ್ಯಸ್ತ್ರ ಜನರು ಕೊಲ್ಲಲ್ಪಟ್ಟಿರುತ್ತಾರೆ.

ಇದರ ಜೊತೆಗೆ ಈಗಾಗಲೇ ಅಲ್ಲಿ 26,000 ಫೆಲೆಸ್ತೀನ್ ನಾಗರಿಕರು ಮಾರಣಾಂತಿಕವಾಗಿ ಗಾಯಗೊಂಡಿದ್ದಾರೆ. ಅವರಲ್ಲಿ 10,000 ಮಕ್ಕಳು. ಇದಲ್ಲದೆ ಇಡೀ ಗಾಝಾ ಪ್ರದೇಶಕ್ಕೆ ಆಹಾರ, ಇಂಧನ, ಔಷಧಿ ಸರಬರಾಜನ್ನು ನಿಲ್ಲಿಸಿ ಗಾಝಾ ಪ್ರದೇಶದಲ್ಲಿ ವಾಸಿಸುವ ಇಡೀ 23 ಲಕ್ಷ ಫೆಲೆಸ್ತೀನ್ ನಾಗರಿಕರಿಗೂ ಇಸ್ರೇಲ್ ಸಾಮೂಹಿಕ ಶಿಕ್ಷೆ ವಿಧಿಸುತ್ತಿದೆ. ಕಳೆದ ಒಂದು ತಿಂಗಳಲ್ಲಿ ಪ್ರತಿ ಹತ್ತು ನಿಮಿಷಕ್ಕೆ ಒಂದು ಮಗುವನ್ನು ಬಲಿತೆಗೆದುಕೊಳ್ಳುತ್ತಿದೆ. ಪ್ರತಿ ಗಂಟೆಗೆ 16 ಜನ ಫೆಲೆಸ್ತೀನಿಯರನ್ನು ಕೊಂದುಹಾಕುತ್ತಿದೆ. ಪ್ರತಿ ಗಂಟೆಗೆ 45 ಬಾಂಬುಗಳನ್ನು ಗಾಝಾದ ಮೇಲೆ ಹಾಕುತ್ತಿದೆ. ಆ ಮೂಲಕ ಪ್ರತಿ ಗಂಟೆಗೆ ಗಾಝಾದ 12 ಕಟ್ಟಡಗಳನ್ನು ಧ್ವಂಸಗೊಳಿಸುತ್ತಿದೆ.

ಒಂದು ಸಂಘಟನೆ ಇಸ್ರೇಲಿನ ನಿರಾಯುಧ ನಾಗರಿಕರ ಮೇಲೆ ಮಾಡಿದ ಖಂಡನೀಯ ದಾಳಿಯ ವಿರುದ್ಧ ಕ್ರಮ ತೆಗೆದುಕೊಳ್ಳುವ ನೆಪದಲ್ಲಿ ಒಂದು ನಾಗರಿಕ ದೇಶ ತಾನು ಆಕ್ರಮಿಸಿರುವ ಪ್ರದೇಶದ ಇಡೀ ಜನತೆಗೆ ಸಾಮೂಹಿಕ ಶಿಕ್ಷೆ ವಿಧಿಸಬಹುದೇ?

ಇದು ವಸಾಹತುಶಾಹಿ ಕ್ರೌರ್ಯವಲ್ಲವೇ?

ಹಾಗಿದ್ದಲ್ಲಿ ಎರಡನೇ ಮಹಾಯುದ್ಧದ ನಂತರ ವಸಾಹತುಶಾಹಿ ವಿರೋಧಿ ವಿಮೋಚನಾ ಹೋರಾಟಗಳು ಎಲ್ಲಾ ರಾಷ್ಟ್ರೀಯತೆಗಳ ಹಕ್ಕು ಎಂಬ ನೆಲೆಯ ಮೇಲೆ ಅಸ್ತಿತ್ವಕ್ಕೆ ಬಂದ ವಿಶ್ವಸಂಸ್ಥೆ ಏಕೆ ಇಸ್ರೇಲಿನ ಈ ವಸಾಹತುಶಾಹಿ ಕ್ರೌರ್ಯವನ್ನು, ಆಕ್ರಮಣವನ್ನು ನಿಲ್ಲಿಸುತ್ತಿಲ್ಲ.?

ಏಕೆ ಅಮೆರಿಕ ನೇತೃತ್ವದ ಪಶ್ಚಿಮದ "ಪ್ರಜಾತಾಂತ್ರಿಕ ಜಗತ್ತು" ಇಸ್ರೇಲ್ ನಡೆಸುತ್ತಿರುವ ಹತ್ಯಕಾಂಡವನ್ನು ನಿಲ್ಲಿಸುವ ಬದಲು ಅದಕ್ಕೆ ಮದ್ದುಗುಂಡುಗಳನ್ನು ಸರಬರಾಜು ಮಾಡುತ್ತಿದೆ?

ಏಕೆ ತನ್ನ ದೇಶ ಪ್ರಜಾತಂತ್ರದ ಜನನಿ ಎಂದು ಕೊಚ್ಚಿಕೊಳ್ಳುವ ಭಾರತದ ಮೋದಿ ಸರಕಾರ ಕನಿಷ್ಠ ಮಾನವೀಯತೆಯ ದೃಷ್ಟಿಯಿಂದ ಕದನ ವಿರಾಮ ಘೋಷಿಸಿ ಗಾಝಾದ ನಿರಪರಾಧಿ ನಾಗರಿಕರಿಗೆ ಆಹಾರ–ಔಷಧಿಗಳನ್ನು ಸರಬರಾಜು ಮಾಡಬೇಕೆಂಬ ಗೊತ್ತುವಳಿಯನ್ನು ಬೆಂಬಲಿಸುವುದಿಲ್ಲ?

ಒಂದು ಕಡೆ "ಮಾನವೀಯತೆಯೇ ಕಟಕಟೆಯಲ್ಲಿರುವಾಗ, ಫೆಲೆಸ್ತೀನ್ ನಲ್ಲಿ ನ್ಯಾಯ ಮತ್ತು ಶಾಂತಿಯನ್ನು ಆಗ್ರಹಿಸಿ ಗಟ್ಟಿಯಾದ ಧ್ವನಿಗಳು ಹುಟ್ಟಿ ಬರಬೇಕು" ಎಂದು ಕಾಂಗ್ರೆಸಿನ ನಾಯಕಿ ಸೋನಿಯಾ ಗಾಂಧಿ ಹೇಳುತ್ತಿದ್ದರೂ ಮತ್ತೊಂದು ಕಡೆ ಕರ್ನಾಟಕದ ಕಾಂಗ್ರೆಸ್ ಸರಕಾರ ನ್ಯಾಯದ ಪರವಾದ ಗಟ್ಟಿ ಧ್ವನಿಗಳಿರಲಿ, ಪಿಸುಮಾತುಗಳೂ ಕೇಳಿಸದಂತೆ ನಿರ್ಬಂಧಗಳನ್ನು ವಿಧಿಸಿ, ಮತ್ತೊಂದೆಡೆ ಇಸ್ರೇಲಿನ ಅನ್ಯಾಯದ ಧ್ವನಿಗಳು ಮೊಳಗಲು ಅವಕಾಶ ಕಲ್ಪಿಸುತ್ತಿರುವುದು ಏಕೆ?

ಕನ್ನಡದ ಬಹುಪಾಲು ಮಾಧ್ಯಮಗಳು ಫೆಲೆಸ್ತೀನ್‌ನ ಕಂದಮ್ಮಗಳ ನರಮೇಧವನ್ನು ಭಾವಿ ಉಗ್ರರ ನಿರ್ನಾಮವೆಂದು ಸಂಭ್ರಮಿಸುವಷ್ಟು ಹಾಗೂ ಬಹುಪಾಲು ಜನರು ಅದನ್ನೇ ಸತ್ಯವೆಂದು ನಂಬುವಷ್ಟು ಸಂವೇದನಾ ಶೂನ್ಯರಾಗಿರುವುದೇಕೆ?

ಹಾಗೆ ನೋಡಿದರೆ ಇಸ್ರೇಲ್–ಫೆಲೆಸ್ತೀನ್‌ನ ಸತ್ಯಗಳು ಅರ್ಥಮಾಡಿಕೊಳ್ಳಲು ಹೆಚ್ಚು ಕಷ್ಟಪಡಬೇಕಿಲ್ಲ. ಮುಕ್ತ ಹಾಗೂ ನ್ಯಾಯಪರ ಮನಸ್ಸಿರಬೇಕು ಅಷ್ಟೆ.

ಇದಕ್ಕೆ ಜಗತ್ತಿನ ಪ್ರಖ್ಯಾತ ಯಹೂದಿ ಮತ್ತು ಇಸ್ರೇಲಿ ಇತಿಹಾಸಕಾರ ಇಲನ್ ಪಪ್ಪೆಯವರ ವಿದ್ವತ್ತಿನ ಪ್ರಯಾಣವೇ ಒಂದು ಉದಾಹರಣೆ. ಅವರು ತಮಗೆ ಈ ಸತ್ಯವು ಅರ್ಥವಾದ ಬಗೆಯನ್ನು ಅತ್ಯಂತ ಸರಳವಾಗಿ ವಿವರಿಸಿದ್ದಾರೆ. ಅವರೂ ಕೂಡ ಯಹೂದಿಗಳು ಫೆಲೆಸ್ತೀನ್‌ಗೆ ಬರುವ ಮುಂಚೆ ಅಲ್ಲಿ ಯಾರು ವಾಸಿಸುತ್ತಿರಲಿಲ್ಲ. ಹೀಗಾಗಿ ನಾಡಿಲ್ಲದ ಜನರಾದ ಯಹೂದಿಗಳು, ಜನರಿಲ್ಲದ ನಾಡಾಗಿದ್ದ ಫೆಲೆಸ್ತೀನ್‌ನಲ್ಲಿ ಇಸ್ರೇಲನ್ನು ಕಟ್ಟಿಕೊಂಡರು ಎಂಬ

ಇಸ್ರೇಲಿನ ಅಧಿಕೃತ ಇತಿಹಾಸವನ್ನೇ ನಿಜವೆಂದು ನಂಬಿಕೊಂಡಿದ್ದರು. ಆದರೆ ಅವರು ತಮ್ಮ ಉನ್ನತ ವಿದ್ಯಾಭ್ಯಾಸಕ್ಕೆ ಇಸ್ರೇಲ್ ಬಹಿರಂಗಪಡಿಸಿದ ಅಧಿಕೃತ ದಾಖಲೆಗಳನ್ನು ಅಧ್ಯಯನ ಮಾಡುತ್ತಿರುವಾಗ ವಿಶ್ವಸಂಸ್ಥೆಯ ದಾಖಲೆಗಳ ಪ್ರಕಾರವೇ 1948ರಲ್ಲಿ ಮೂಲ ಫೆಲೆಸ್ತೀನ್‌ನ ಒಟ್ಟಾರೆ ಜನಸಂಖ್ಯೆ 18 ಲಕ್ಷ ಮತ್ತು ಅದರಲ್ಲಿ 12 ಲಕ್ಷ ಅರಬ್ ಫೆಲೆಸ್ತೀನಿಯನ್ನರು ಮತ್ತು 6 ಲಕ್ಷ ಮಾತ್ರ ಯಹೂದಿಗಳು ಎಂದಿದ್ದನ್ನು ಗಮನಿಸಿದರು. ಹಾಗೂ ಇಸ್ರೇಲಿನ ಎಲ್ಲಾ ಅಧಿಕೃತ ದಾಖಲೆಗಳಲ್ಲೂ ಅದನ್ನೇ ಸ್ಪಷ್ಟಪಡಿಸಲಾಗಿತ್ತು.

ಆಗ ಪಪ್ಪೆ ಅವರಿಗೆ ಸಹಜವಾದ ಮತ್ತು ನ್ಯಾಯಯುತವಾದ ಒಂದು ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ಹಾಗಿದ್ದಲ್ಲಿ ಯಹೂದಿಗಳು ಬಂದಾಗ ಫೆಲೆಸ್ತೀನ್ ಜನರಿಲ್ಲದ ನಾಡಾಗಿರಲಿಲ್ಲ ಎಂಬುದು ಸುಳ್ಳು. ಅಲ್ಲಿ ಫೆಲೆಸ್ತೀನಿಯರಿದ್ದರು. ಹಾಗಾದರೆ ಅವರೇನಾದರು? ಎಂಬ ಪ್ರಶ್ನೆಯನ್ನು ಇಟ್ಟುಕೊಂಡು ಅಧ್ಯಯನ ಪ್ರಾರಂಭಿಸುತ್ತಾರೆ. ಹಾಗೂ ಹೇಗೆ 1947ರಿಂದಲೇ ಯಹೂದಿಗಳು ಫೆಲೆಸ್ತೀನಿಯರನ್ನು ಹೊಡೆದೋಡಿಸಿ ಸಂಪೂರ್ಣ ಯಹೂದಿಗಳ ರಾಷ್ಟ್ರ ಕಟ್ಟುವ ನೆಲಸಿಗ ವಸಾಹತುಶಾಹಿ ಧೋರಣೆಯನ್ನು ಹೊಂದಿದ್ದರು ಎಂಬುದನ್ನು ಮನಗಾಣುತ್ತಾರೆ. ಹಾಗೂ 2005 ರಲ್ಲಿ ಅದರ ಬಗ್ಗೆ "The Ethnic Cleansing of Palestine" ಎಂಬ ಅತ್ಯಂತ ಮಹತ್ವದ ಪುಸ್ತಕವನ್ನು ಬರೆಯುತ್ತಾರೆ. ಮಾತ್ರವಲ್ಲ ಇಸ್ರೇಲಿನ ವಿಶ್ವವಿದ್ಯಾಲಯದಿಂದ ಹೊರಹಾಕಲ್ಪಟ್ಟರೂ, ಈಗ ಬ್ರಿಟನ್‌ನ ಎಕ್ಸಿಟರ್ ವಿಶ್ವವಿದ್ಯಾಲಯದ ಪ್ರೊಫೆಸರ್ ಆಗಿರುವುದಲ್ಲದೆ ಫೆಲೆಸ್ತೀನ್ ಸಾಲಿಡಾರಿಟಿ ಸಮಿತಿಯ ಅತ್ಯಂತ ಸಕ್ರಿಯ ಸದಸ್ಯರೂ ಆಗಿದ್ದಾರೆ. ಜಗತ್ತಿನ ಪ್ರಖ್ಯಾತ ಯಹೂದಿ ವಿದ್ವಾಂಸ ನೋಮ್ ಚಾಮ್ಸ್ಕಿ ಮತ್ತೊಂದು ಪ್ರಖ್ಯಾತ ಉದಾಹರಣೆ. ಇಂಥ ಹಲವಾರು ಉದಾಹರಣೆಗಳಿವೆ.

ಆದರೂ ಬಹುಪಾಲು ಜಗತ್ತು ತನ್ನ ಕಣ್ಣೆದುರಿಗೇ ಸ್ಪಷ್ಟವಾಗಿ ಕಾಣುವ ಸತ್ಯ ಮತ್ತು ನ್ಯಾಯಗಳನ್ನು ನಿರಾಕರಿಸುತ್ತಿರುವುದೇಕೆ? ಇದಕ್ಕೆ ಕೆಲವು ಗಂಭೀರವಾದ ಕಾರಣಗಳಿವೆ.

ಕಳೆದ ಕೆಲವು ದಶಕಗಳಿಂದ ಒಟ್ಟಾರೆ ಜಗತ್ತು ದ್ವೇಷ ರಾಜಕಾರಣದ ಬಲಪಂಥೀಯತೆಯ ಕಡೆಗೆ ಸರಿಯುತ್ತಾ ನ್ಯಾಯಪ್ರಜ್ಞೆಯನ್ನು ಕಳೆದುಕೊಳ್ಳುತ್ತಿರುವುದು ಅದರಲ್ಲಿ ತುಂಬಾ ಮುಖ್ಯವಾದದ್ದು. ಅಸತ್ಯಗಳು ಸತ್ಯದ ರೂಪವನ್ನು ಧರಿಸಿ, ಅನ್ಯಾಯಗಳು ನ್ಯಾಯದ ವೇಷವನ್ನು ಧರಿಸಿ, ಬೇಟೆಗಾರರೇ ಬಲಿಪಶುಗಳ ಮುಖವಾಡ ಹಾಕಿಕೊಂಡಿರುವುದು ಕೂಡ ಇದಕ್ಕೆ ಮುಖ್ಯ ಕಾರಣ. ಇದು ದುರ್ಬಲರ ಬಗ್ಗೆ, ಅಸಹಾಯಕರ ಬಗ್ಗೆ, ಅಲ್ಪಸಂಖ್ಯಾತರ ಬಗ್ಗೆ ಸಹಾನುಭೂತಿಯ ಬದಲಿಗೆ ಅಸಹನೆ ಹಾಗೂ

ಪೂರ್ವಗ್ರಹಗಳನ್ನು ಬೆಳೆಸುತ್ತಿದೆ. ಇದರ ಜೊತೆಗೆ ವಿಷಯದ ಬಗ್ಗೆ ಜನರ ಅಜ್ಞಾನ ಮತ್ತು ಪೂರ್ವಗ್ರಹಗಳನ್ನು ಬಳಸಿಕೊಂಡು ಬಲಿಪಶುಗಳನ್ನೇ ಬೇಟೆಗಾರರೆಂದು ಬಣ್ಣಿಸುವ ಪ್ರಚಾರವನ್ನು ಕಾರ್ಪೊರೇಟ್ ಮಾಧ್ಯಮಗಳು ಬಹಳ ಯಶಸ್ವಿಯಾಗಿ ಮಾಡುತ್ತಾ ಬಂದಿವೆ. ಇದೂ ಕೂಡ ಕ್ರೌರ್ಯವನ್ನು ಸಮರ್ಥಿಸುವ ಮನಸ್ಸತ್ವವನ್ನು ಹುಟ್ಟಿಹಾಕಿದೆ.

ಇಸ್ರೇಲ್–ಫೆಲೆಸ್ತೀನ್ ವಿಷಯದಲ್ಲೂ ಸಂಘರ್ಷದ ಇತಿಹಾಸ ಪ್ರಾರಂಭವಾಗಿದ್ದೇ ಅಕ್ಟೋಬರ್ 7ರಂದು ಫೆಲೆಸ್ತೀನ್‌ನ ಹಮಾಸ್ ಎಂಬ ಸಂಘಟನೆ ಇಸ್ರೇಲಿನ ನಿರಾಯುಧ ನಾಗರಿಕರ ಮೇಲೆ ಮಾಡಿದ ಬರ್ಬರ ದಾಳಿಯಿಂದ ಎಂಬಂತೆ ಮಾಧ್ಯಮಗಳು ಹಾಗೂ ಬಹುಪಾಲು ಬಲಪಂಥೀಯ ಸರಕಾರಗಳು ಚಿತ್ರಿಸುತ್ತಿವೆ.

ಆದರೆ ವಿಶ್ವಸಂಸ್ಥೆಯ ಕಾರ್ಯದರ್ಶಿ ಗುಟೆರಸ್ ಅವರೇ ಹೇಳಿದಂತೆ ಈ ದಾಳಿ ಎಷ್ಟೇ ಖಂಡನೀಯವಾದರೂ, ಯಾವ ಕಾರಣಕ್ಕೂ ಸಮರ್ಥನೀಯವಲ್ಲವಾದರೂ ದಿಢೀರನೇ ನಡೆದಿದ್ದಲ್ಲ. ಅದರ ಹಿಂದೆ ಕಳೆದ 75 ವರ್ಷಗಳಿಂದ ಇಸ್ರೇಲ್ ಫೆಲೆಸ್ತೀನ್‌ಯನ್ನರ ಮೇಲೆ ನಡೆಸುತ್ತಿರುವ ಹಾಗೂ ಈಗಲೂ ಮುಂದುವರಿದಿರುವ ವಸಾಹತುಶಾಹಿ ದಬ್ಬಾಳಿಕೆ, ದೌರ್ಜನ್ಯ, ನರಮೇಧ ಹಾಗೂ ಜನಾಂಗೀಯ ನಿರ್ಮೂಲನೆಯ ಇತಿಹಾಸವಿದೆ. ಫೆಲೆಸ್ತೀನ್ ಯನ್ನರ ಜೊತೆ ಕೂಡಿ ಬಾಳುವ ಯಾವ ಒಪ್ಪಂದಗಳಿಗೂ ತಯಾರಿರದ, ಇಡೀ ಫೆಲೆಸ್ತೀನಿ ಜನರನ್ನು ಅವರ ನೆಲೆಯಿಂದ ಹೊರಹಾಕಿ ಇಡೀ ಭೂಭಾಗವನ್ನು ಇಸ್ರೇಲೀಕರಿಸುವ ಅತ್ಯುಗ್ರ ಜಿಯೋನಿಸ್ಟ್ ಜನಾಂಗೀಯವಾದಿ ಕುತಂತ್ರವಿದೆ.

ಅದು ಗಾಝಾ ಮೇಲೆ ಈಗ ನಡೆಸುತ್ತಿರುವ ವಿಧ್ವಂಸಕ ದಾಳಿಯ ಹಿಂದೆಯೂ ಗಾಝಾ ಪ್ರದೇಶದಲ್ಲಿ ವಾಸಿಸುತ್ತಿರುವ 23 ಲಕ್ಷ ಫೆಲೆಸ್ತೀನಿಯರನ್ನು ದಕ್ಷಿಣಕ್ಕೆ ದೂಡುತ್ತಾ ಅಂತಿಮವಾಗಿ ಈಜಿಪ್ಟಿಗೆ ಹೊರದಬ್ಬುವ ವ್ಯೂಹತಂತ್ರ ಇರುವುದನ್ನು ಸ್ವತಃ ಇಸ್ರೇಲಿನ ಬೇಹುಗಾರಿಕಾ ಮಂತ್ರಿಯೇ ಬಹಿರಂಗಪಡಿಸಿದ್ದಾರೆ.

ಹೀಗಾಗಿ ಇಸ್ರೇಲ್ ನಡೆಸುತ್ತಿರುವುದು ಆತ್ಮರಕ್ಷಣಾ ಯುದ್ಧವಲ್ಲ.

ಅಸಲಿಗೆ ಇದು ಯುದ್ಧವೇ ಅಲ್ಲ.

ಏಕೆಂದರೆ ಯುದ್ಧ ನಡೆಯುವುದು ಎರಡು ದೇಶಗಳ ನಡುವೆ. ಆದರೆ ಇಸ್ರೇಲ್ ಫೆಲೆಸ್ತೀನಿಯರನ್ನು ತಮ್ಮ ದೇಶದಲ್ಲೇ ನಿರಾಶ್ರಿತರನ್ನಾಗಿಸಿ ಈಗ ಆ ನಿರಾಯುಧ, ನಿಸ್ಸಹಾಯಕ ಜನತೆಯ ಮೇಲೆ ನಿರಂತರ ದಾಳಿ ನಡೆಸುತ್ತಾ ಅದನ್ನು ಆತ್ಮ ರಕ್ಷಣಾ ಯುದ್ಧವೆಂದು ಸಮರ್ಥಿಸಿಕೊಳ್ಳುತ್ತಿದೆ.

ಆದರೆ ಇದು ವಸಾಹತುಶಾಹಿ ದೇಶವೊಂದು ನಿರಾಶ್ರಿತ ಜನರ ಮೇಲೆ ನಡೆಸುತ್ತಿರುವ ಬರ್ಬರ ಆಕ್ರಮಣ. ಅದಕ್ಕೆ ಹಮಾಸ್ ಮಾಡಿದ ದಾಳಿ ಕೇವಲ

ಒಂದು ನೆಪ. ಏಕೆಂದರೆ ಹಮಾಸ್ ಸಂಘಟನೆ ಅಸ್ತಿತ್ವಕ್ಕೆ ಬಂದಿದ್ದೇ 1987ರಲ್ಲಿ. ಆದರೆ 1948ರಲ್ಲಿ ಇಸ್ರೇಲ್ ರಾಷ್ಟ್ರ ಘೋಷಣೆಯಾದಾಗಿನಿಂದಲೂ ಇಸ್ರೇಲ್ ಫೆಲೆಸ್ತೀನಿಯರನ್ನು ತಮ್ಮ ನಾಡಿನಿಂದ ಹೊರದೂಡಲು ಒಂದಲ್ಲ ಒಂದು ನೆಪಹೂಡಿ ಜನಾಂಗೀಯ ನಿರ್ಮೂಲನ ನರಮೇಧ ನಡೆಸುತ್ತಾ ಬಂದಿದೆ. ಹೀಗಾಗಿ ಫೆಲೆಸ್ತೀನಿಯರು ನಡೆಸುತ್ತಿರುವುದು ವಸಾಹತುಶಾಹಿ ವಿರೋಧಿ ಸ್ವಾತಂತ್ರ್ಯ ಹೋರಾಟವೇ ಆಗಿದೆ.

ವಿಪರ್ಯಾಸವೆಂದರೆ ಇಂದು ಇಸ್ರೇಲಿನ ಯಹೂದಿ ಜಿಯೋನಿಸ್ಟ್ ಸರಕಾರ ಫೆಲೆಸ್ತೀನಿಯರ ಮೇಲೆ ಯಾವ ನರಮೇಧವನ್ನು ಮಾಡುತ್ತಿದೆಯೋ, ಅದೇ ಬಗೆಯ ನರಮೇಧ ಮತ್ತು ದೌರ್ಜನ್ಯಗಳಿಗೆ ಯಹೂದಿಗಳು 19 ಮತ್ತು 20ನೇ ಶತಮಾನದಲ್ಲಿ ಗುರಿಯಾಗಿದ್ದರು. ಅದರಿಂದ ಬಚಾವಾಗಬೇಕೆಂಬ ಉದ್ದೇಶದಿಂದಲೇ ಒಂದು ಇಸ್ರೇಲನ್ನು ಕಟ್ಟಿಕೊಳ್ಳಬೇಕೆಂಬ ತೀರ್ಮಾನಕ್ಕೆ ಬಂದರು. ಮೊದಲು ಉಗಾಂಡಾ, ಅಮೆರಿಕ ಅಥವಾ ಮೆಡಗಾಸ್ಕರ್ ಅವರ ಆಯ್ಕೆಯಾಗಿತ್ತು. ಆದರೆ ಐತಿಹಾಸಿಕ ಹಾಗೂ ಧಾರ್ಮಿಕ ಕಾರಣಗಳಿಗೆ ಜೆರುಸುಲೇಮ್ ಮತ್ತು ಬೆತ್ಲೆಹೇಮ್‌ಗಳಿರುವ ಫೆಲೆಸ್ತೀನ್ ಅನ್ನು ಆಯ್ಕೆ ಮಾಡಿಕೊಂಡರು. ಆದರೆ ಇಲ್ಲಿ ಈಗಾಗಲೇ ವಾಸವಾಗಿದ್ದ ಫೆಲೆಸ್ತೀನಿಯನ್ನರ ಜೊತೆ ಹಂಚಿಕೊಂಡು ಬಾಳುವ ಇರಾದೆ ತೋರದೆ ಮೊದಲು ಬ್ರಿಟಿಷ್ ವಸಾಹತುಶಾಹಿಗಳ ಹಾಗೂ ಆ ನಂತರ ಅಮೆರಿಕ ನವ ವಸಾಹತುಶಾಹಿಯ ಬೆಂಬಲದೊಂದಿಗೆ ಮೂಲನಿವಾಸಿ ಫೆಲೆಸ್ತೀನಿಯರನ್ನು ಹೊರಹಾಕಿ ನೆಲಸುವ ನೆಲಸಿಗ ವಸಾಹತುಶಾಹಿಗಳಾಗಿಬಿಟ್ಟರು.

ನೆಲಸಿಗ ವಸಾಹತುಶಾಹಿಯ (Settler colonialism) ಅಸ್ತಿತ್ವದ ತರ್ಕವೇ ಮೂಲನಿವಾಸಿಗಳ ಸಂಪೂರ್ಣ ನಿರ್ಮೂಲನೆಯನ್ನು ಆಧರಿಸಿರುತ್ತದೆ. ಅದಕ್ಕೆ ಪೂರಕವಾಗಿ ಮೂಲನಿವಾಸಿಗಳ ಅಸ್ತಿತ್ವವನ್ನೇ ನಿರಾಕರಿಸುವ, ನಗಣ್ಯಗೊಳಿಸುವ ಮಾರ್ಗಗಳನ್ನು ಅನುಸರಿಸುತ್ತದೆ. ಯೂರೋಪಿನ ಬಿಳಿಯರು ಅಮೆರಿಕ, ಕೆನಡಾ, ಆಸ್ಟ್ರೇಲಿಯಾ, ನ್ಯೂಝಿಲ್ಯಾಂಡ್‌ಗಳಲ್ಲಿ ಸ್ಥಳೀಯ ಮೂಲನಿವಾಸಿಗಳ ನಿರ್ಮೂಲನೆ ಮಾಡಿದಂತೆ ಇಂದು ಇಸ್ರೇಲ್ ಅದೇ ರಾಷ್ಟ್ರಗಳ ಬೆಂಬಲದೊಂದಿಗೆ ಫೆಲೆಸ್ತೀನಿಯನ್ನರ ಅಸ್ತಿತ್ವ, ಇತಿಹಾಸಗಳನ್ನು ಭೌತಿಕವಾಗಿಯೇ ನಿರ್ಮೂಲನ ಮಾಡುತ್ತಿದೆ.

ಇಸ್ರೇಲಿನ ಈ ನೆಲಸಿಗ ವಸಾಹತುಶಾಹಿ ಅನ್ಯಾಯಗಳು, ನರಮೇಧಗಳು, ಅದರ ಜನಾಂಗೀಯ ನಿರ್ಮೂಲನ ಆಕ್ರಮಣಗಳು ಜನಮಾನಸದ ಹಾಗೂ ಜಗತ್ತಿನ ಕಣ್ಣಿಗೆ ಕಾಣದಂತೆ ಕಬ್ಬಿಣದ ಗೋಡೆಯನ್ನು ಕಟ್ಟಿದೆ.

ಎಲ್ಲಿಯತನಕ ಈ ಕಬ್ಬಿಣದ ಗೋಡೆಯನ್ನು ಕೆಡವಿ, ಅಲ್ಲಿ ನಡೆಯುತ್ತಿರುವ

ನರಮೇಧ, ಜನಾಂಗೀಯ ನಿರ್ಮೂಲನವು ಜನರ ಅರಿವಿಗೆ ಬರುವುದಿಲ್ಲವೋ ಅಲ್ಲಿಯತನಕ ಈ ಅನ್ಯಾಯಕ್ಕೆ ಜಾಗತಿಕ ಮನ್ನಣೆ ಮುಂದುವರಿಯುತ್ತದೆ.

ಆದ್ದರಿಂದ ಇಂದು ಈ ಅನ್ಯಾಯ ನಿಲ್ಲಬೇಕೆಂದರೆ ಅಸತ್ಯದ ಕಬ್ಬಿಣದ ಗೋಡೆಯನ್ನು ಕೆಡವಿ ಜಗತ್ತಿಗೆ ಸತ್ಯದರ್ಶನವನ್ನು ಮಾಡಿಸಬೇಕಿದೆ.

ಕರ್ನಾಟಕದಲ್ಲಂತೂ ಅದರ ಅಗತ್ಯ ಹಿಂದೆಂದಿಗಿಂತ ಹೆಚ್ಚಿನದಾಗಿದೆ. ಕನ್ನಡದಲ್ಲಿ ಫೆಲೆಸ್ತೀನಿನ ನೈಜ ಇತಿಹಾಸವನ್ನು, ಸಮಸ್ಯೆ ಮತ್ತು ಪರಿಹಾರಗಳನ್ನು ಒಂದು ಜನಪರ ಐತಿಹಾಸಿಕ ದೃಷ್ಟಿಕೋನದಲ್ಲಿ ಪರಿಚಯಿಸುವ ಪುಸ್ತಕಗಳು ತುಂಬಾ ಕಡಿಮೆ.

ಆದರೆ ಈ ಪುಸ್ತಕ ಆ ಕೆಲಸವನ್ನು ಅತ್ಯಂತ ಸಮರ್ಥವಾಗಿ ಮಾಡುತ್ತದೆ.

ನಾಡಿನ ಹಿರಿಯ ಸತ್ಯವಾದಿ ಮತ್ತು ಸಮತವಾದಿ ಚಿಂತಕರು ಹಾಗೂ ಮಾಧ್ಯಮ ಪ್ರಮುಖರೂ ಆಗಿರುವ ಎ.ಎಸ್.ಪುತ್ತಿಗೆಯವರು ಬರೆದಿರುವ "ಫೆಲೆಸ್ತೀನ್‌ನಲ್ಲಿ ನಡೆಯುತ್ತಿರುವುದೇನು" ಎಂಬ ಈ ಅತ್ಯಂತ ಮಹತ್ವದ ಪುಸ್ತಕ ತುಂಬಾ ಹಿಂದೆಯೇ ಕನ್ನಡ ಓದುಗರಿಗೆ ಸಿಗಬೇಕಿತ್ತು.

ಈ ಪುಸ್ತಕವನ್ನು ಪುತ್ತಿಗೆಯವರು ತಮ್ಮ ಅಪಾರ ಓದು, ಗ್ರಹಿಕೆ ಹಾಗೂ ಸತ್ಯಗಳನ್ನು ಆಧರಿಸಿ, ವಿಶ್ಲೇಷಣೆ ಮತ್ತು ನ್ಯಾಯಪ್ರಜ್ಞೆಯಿಂದ ಬರೆದಿದ್ದಾರೆ. ಇಸ್ರೇಲ್–ಫೆಲೆಸ್ತೀನ್ ಸಂಘರ್ಷದ ಆಳ–ಅಗಲಗಳು ಅತ್ಯಂತ ಸರಳವಾಗಿ ಈ ಪುಸ್ತಕದಲ್ಲಿ ಓದುಗರಿಗೆ ದಕ್ಕುತ್ತದೆ. ಪುಸ್ತಕದುದ್ದಕ್ಕೂ ಹರಿದಿರುವ ವಸ್ತುನಿಷ್ಠ, ನಿಷ್ಪಕ್ಷಪಾತಿ ಹಾಗೂ ನ್ಯಾಯಪ್ರಜ್ಞೆಯ ನೋಟಗಳು ಕನ್ನಡದ ಓದುಗರಿಗೆ ಕಾರ್ಪೊರೇಟ್ ಮಾಧ್ಯಮಗಳ ಹಾಗೂ ಬಲಪಂಥೀಯರ ಪ್ರಚಾರಗಳ ಟೊಳ್ಳುತನವನ್ನು ಹಾಗೂ ಪೂರ್ವಗ್ರಹವನ್ನು ಅರಿಯಲು ಸುಲಭವಾಗಿ ಸಹಾಯ ಮಾಡುತ್ತದೆ.

ಇದು 2021ರಲ್ಲಿ ಪುತ್ತಿಗೆಯವರು ವಾರ್ತಾಭಾರತಿ ದಿನಪತ್ರಿಕೆಗೆ 'ಫೆಲೆಸ್ತೀನ್‌ನಲ್ಲಿ ನಡೆಯುತ್ತಿರುವುದೇನು?' ಎಂದು ಬರೆದ 25 ಕಂತುಗಳ ಸರಣಿ ಬರಹದ ಪುಸ್ತಕ ರೂಪ. ಪ್ರತಿಯೊಂದು ಕಂತುಗಳು ಸಮಸ್ಯೆಯ ಒಂದೊಂದು ಆಯಾಮವನ್ನು ಆಳವಾಗಿ ವಿಶ್ಲೇಷಿಸುತ್ತದೆ. ಹಾಗೂ ಐತಿಹಾಸಿಕ ಅನುಕ್ರಮಣಿಕೆಯಲ್ಲಿರುವುದರಿಂದ ಆ 25 ಕಂತುಗಳು ಈ ಪುಸ್ತಕದ ಸಹಜ 25 ಅಧ್ಯಾಯಗಳಾಗಿವೆ.

ಇಸ್ರೇಲಿನ ಸೃಷ್ಟಿಯ ಹಿಂದಿನ ಜಾಗತಿಕ ನೇಪಥ್ಯ, ಅದರ ಹಿಂದಿನ ಶಕ್ತ ರಾಷ್ಟ್ರಗಳ ಕೈವಾಡ, 1948ರಲ್ಲಿ ಇಸ್ರೇಲ್ ಸೃಷ್ಟಿಯಾದಾಗಿನಿಂದ ಪ್ರಾರಂಭವಾದ ನಕ್ಬಾ–ಜನಾಂಗೀಯ ಎತ್ತಂಗಡಿ, 1967ರ ಯುದ್ಧದ ನಂತರ ಇಸ್ರೇಲ್‌ನ ಆಕ್ರಮಣದಡಿಯಲ್ಲಿರುವ ಫೆಲೆಸ್ತೀನ್‌ನ ಬದುಕು, ಇಸ್ರೇಲ್ ಬೆಂಬಲಕ್ಕೆ

ನಿಂತಿರುವ ಶಕ್ತ ರಾಷ್ಟ್ರಗಳ ಜಿಯೋ–ಪೊಲಿಟಿಕಲ್ ರಾಜಕಾರಣ, ಸ್ವಾರ್ಥ ಹಿತಾಸಕ್ತಿ ಮತ್ತು ದಾಯಾದಿ ದ್ವೇಷಗಳಿಂದ ಫೆಲೆಸ್ತೀನ್‌ನನ್ನು ಕೈಬಿಟ್ಟ ಅರಬ್ ದೇಶಗಳ ಸರ್ವಾಧಿಕಾರಿ ಸರಕಾರಗಳು, ಇಸ್ರೇಲ್ ನಡೆಸುತ್ತಿರುವ ಜನಾಂಗೀಯ ವರ್ಣಭೇದ ಮತ್ತು ನರಮೇಧದ ವಿರುದ್ಧ ಹುಟ್ಟಿಕೊಂಡ ಪಿಎಲ್‌ಒ ಹಮಾಸ್‌ನಂತಹ ಸಂಘಟನೆಗಳ ಏಳುಬೀಳುಗಳು ಮತ್ತು ಮಿತಿಗಳನ್ನು ಚಿಕಿತ್ಸಕ ದೃಷ್ಟಿಯಿಂದ ಓದುಗರ ಮುಂದಿಡುವ ಪುತ್ತಿಗೆಯವರು ಅಂತಿಮವಾಗಿ ಇಂದು ಫೆಲೆಸ್ತೀನಿನ ಜನರ ಪರಿಸ್ಥಿತಿ ಹಾಗೂ ಸಮಸೆಯ ಪರಿಹಾರಕ್ಕೆ ಇರುವ ಆಶಾವಾದಗಳ ನೆಲೆಗಳನ್ನು ಸ್ಪಷ್ಟವಾಗಿ ಗುರುತಿಸುತ್ತಾರೆ.

ಹೀಗೆ ಈ ಪುಸ್ತಕ ಇಸ್ರೇಲ್–ಫೆಲೆಸ್ತೀನ್ ಸಂಘರ್ಷದ 360 ಡಿಗ್ರಿ ಚಿತ್ರಣವನ್ನು ಮತ್ತು ನ್ಯಾಯೋಚಿತ ಪರಿಹಾರವನ್ನು ಅತ್ಯಂತ ಸರಳವಾಗಿ ಸಮೃದ್ಧ ಮಾಹಿತಿಗಳೊಂದಿಗೆ ಮುಂದಿಡುತ್ತದೆ.

ಈ ಪುಸ್ತಕ ಮೊದಲೇ ಬಂದಿದ್ದರೆ ಈ ವಿಷಯದ ಬಗ್ಗೆ ರಾಜ್ಯದ ಶಿಕ್ಷಿತರಲ್ಲೂ ಇರುವ ಅಜ್ಞಾನ ಮತ್ತು ಪೂರ್ವಗ್ರಹಗಳು ಸ್ವಲ್ಪ ಮಟ್ಟಿಗೆಯಾದರೂ ಕಡಿಮೆಯಾಗುತ್ತಿತ್ತು. ಹಾಗೂ ಕಳೆದ ಒಂದು ತಿಂಗಳಿಂದ ನಮ್ಮ ಕಣ್ಣೆದುರಿಗೇ ಇಸ್ರೇಲ್ ಫೆಲೆಸ್ತೀನ್ ಮೇಲೆ ನಡೆಸುತ್ತಿರುವ ಅಮಾನುಷ ನರಮೇಧದ ಬಗ್ಗೆ ಈ ರಾಜ್ಯದಲ್ಲಿ ಇಷ್ಟು ಮೌನ ಇರುತ್ತಿರಲಿಲ್ಲವೇನೋ?

ಕನ್ನಡದ ಓದುಗರು ಈ ಅತ್ಯಂತ ಅಗತ್ಯವಾಗಿದ್ದ ಹಾಗೂ ಮಹತ್ವದ ಪುಸ್ತಕವನ್ನು ಆಸ್ಥೆಯಿಂದ ಬರಮಾಡಿಕೊಳ್ಳುತ್ತಾರೆ ಹಾಗೂ ನ್ಯಾಯದ ಪರವಾಗಿ ನಿಲ್ಲುತ್ತಾರೆ ಎಂಬ ಭರವಸೆಯೊಂದಿಗೆ...

ಬೆಂಗಳೂರು **ಶಿವಸುಂದರ್**
10 ನವೆಂಬರ್ 2023

# ನ್ಯಾಯ ನೀಡದೆ ಶಾಂತಿ ಪಡೆಯುವುದು ಹೇಗೆ?

**(16 ಅಕ್ಟೋಬರ್ 2023ರಂದು 'ವಾರ್ತಾಭಾರತಿ'ಯಲ್ಲಿ ಪ್ರಕಟವಾದ ಸಂಪಾದಕೀಯ)**

ಅಕ್ಟೋಬರ್ 7ರಂದು ಇಸ್ರೇಲ್‌ನಲ್ಲಿ ನಡೆದದ್ದೇನು? ಇಂದಿನ ಮಧ್ಯಪ್ರಾಚ್ಯದ ಈ ಸನ್ನಿವೇಶದ ಕುರಿತು ಸರಳವಾಗಿ ಹೇಳಬೇಕೆಂದರೆ ಅದು, ಎಲ್ಲ ಇತಿ ಮಿತಿಗಳನ್ನೂ ಮೀರಿ ತಮ್ಮ ಮೇಲೆ ಸತತ ದುರಾಕ್ರಮ ನಡೆಸುವ ಒಂದು ದೇಶದ ಮೇಲೆ, ಆಕ್ರಮಿತ ನಾಡಿನ 'ಒಂದು ಗುಂಪು' ನಡೆಸಿದ ಸೀಮಿತ ಪ್ರತ್ಯಾಕ್ರಮಣವಾಗಿತ್ತು. ಹಲವು ದಶಕಗಳಿಂದ ನಿತ್ಯ ಮಾನವ ಹಕ್ಕುಗಳ ಉಲ್ಲಂಘನೆ ನಡೆಸುತ್ತಿರುವ ಇಸ್ರೇಲ್ ಎಂಬ ಒಂದು ದೇಶದ ವಿರುದ್ಧ, ಬಹುಕಾಲದಿಂದ ಕಠಿಣ ದಮನ ಮತ್ತು ದಿಗ್ಬಂಧನವನ್ನು ಎದುರಿಸುತ್ತಿರುವ ಫೆಲೆಸ್ತೀನ್‌ನ ಗಾಝಾ ಪಟ್ಟಿಯಿಂದ ನಡೆಸಲಾದ ಈ ಪ್ರತ್ಯಾಕ್ರಮಣದಲ್ಲಿ ಹಲವು ಮುಗ್ಧ ನಾಗರಿಕ ಜೀವಗಳು ಬಲಿಯಾಗಿವೆ. ಹಲವು ನಾಗರಿಕರ ಅಪಹರಣವಾಗಿದೆ. ಆಕ್ರಮಿತರು ಇಸ್ರೇಲ್ ಮೇಲೆ ನಡೆಸಿದ ಆಕ್ರಮಣದಲ್ಲಿ ಸಂಭವಿಸಿದ ನಾಗರಿಕರ ಈ ಸಾವು ನೋವುಗಳು ಮತ್ತು ನಾಶನಷ್ಟಗಳು ಜಗತ್ತಿನ ಎಲ್ಲ ಮಾನವರ ಒಕ್ಕೊರಲಿನ ಖಂಡನೆಗೆ ಯೋಗ್ಯವಾಗಿದೆ. ಅಂತಹ ಸಾವು ನೋವು, ನಾಶನಷ್ಟಗಳು ಎಂದೂ ಎಲ್ಲೂ ನಡೆಯದಂತೆ ಖಾತರಿಪಡಿಸಿಕೊಳ್ಳಲು ಲಭ್ಯವಿರುವ ಉಪಕ್ರಮಗಳ ಕುರಿತು ಜಾಗತಿಕ ಸಮುದಾಯವು ಗಂಭೀರವಾಗಿ ಚರ್ಚಿಸಬೇಕಾಗಿದೆ. ಇಸ್ರೇಲ್ ಮತ್ತು ಫೆಲೆಸ್ತೀನ್ ನಡುವಣ ಘರ್ಷಣೆಯ ಕುರಿತಾಗಿ ಇಂದು ನಡೆಯುತ್ತಿರುವ ಹೆಚ್ಚಿನ ಚರ್ಚೆಗಳ ದುರಂತವೇನೆಂದರೆ ದೀರ್ಘ ಇತಿಹಾಸವಿರುವ ಈ ಬಿಕ್ಕಟ್ಟನ್ನು ಕೇವಲ ಇತ್ತೀಚಿನ ಒಂದು ನಿರ್ದಿಷ್ಟ ಬೆಳವಣಿಗೆಯನ್ನು ಮಾತ್ರ ಕೇಂದ್ರವಾಗಿಟ್ಟು ನೋಡಲಾಗುತ್ತಿದೆ. ಹಾಗೆಯೇ, ಈ ಕುರಿತಾದ ಹಲವು ಪ್ರಮುಖ

ಚರ್ಚೆ–ಸಂವಾದಗಳ ದೊಡ್ಡ ಭಾಗವು, ಯಾರನ್ನು ಯಾವ ಹೆಸರಿಂದ ಕರೆಯಬೇಕು ಎಂಬ ಪ್ರಶ್ನೆಯ ಸುತ್ತಲೇ ಪ್ರದಕ್ಷಿಣೆ ನಡೆಸುತ್ತಿವೆ. ಮಾನವೀಯತೆಯ ಪ್ರಶ್ನೆ ಬಂದಾಗ ಕೂಡಾ ಎರಡು ಪಕ್ಷಗಳ ಮಧ್ಯೆ ಹಿಂಸಾತ್ಮಕ ಘರ್ಷಣೆ ನಡೆಯುತ್ತಿರುವಾಗ ಆ ಪೈಕಿ ಕೇವಲ ಒಂದು ಪಕ್ಷದವರನ್ನು ಮಾತ್ರ ಮಾನವರಾಗಿ ಕಾಣುವ ಮತ್ತು ಇನ್ನೊಂದು ಪಕ್ಷದವರಿಗೆ ಮಾನವೀಯ ಸ್ಥಾನಮಾನವನ್ನೇ ನಿರಾಕರಿಸುವ ಅಪಾಯಕಾರಿ ಕುರುಡು ಪ್ರವೃತ್ತಿ ದೈತ್ಯಗಾತ್ರದಲ್ಲಿ ಮೆರೆಯುತ್ತಿದೆ.

ಅಕ್ಟೋಬರ್ 7ರ ಮಿಸೈಲ್ ದಾಳಿಗಳ ಕುರಿತಾದ ಯಾವುದೇ ಚರ್ಚೆಯಲ್ಲಿ, ಆಕ್ರಮಣಕಾರಿ ಇಸ್ರೇಲ್ ಸರಕಾರ ಅಕ್ಟೋಬರ್ 7 ಕ್ಕಿಂತ ಮುನ್ನ ಹಲವು ದಶಕಗಳ ಕಾಲ ನಡೆಸಿರುವ ವ್ಯಾಪಕ ಅತಿಕ್ರಮಣಗಳನ್ನು, ಘೋರ ಯುದ್ಧಾಪರಾಧಗಳನ್ನು, ನರಮೇಧಗಳನ್ನು, ವಿಧ್ವಂಸಕ ಕೃತ್ಯಗಳನ್ನು, ಅಂತರ್‌ರಾಷ್ಟ್ರೀಯ ಕಾನೂನುಗಳ ಉಲ್ಲಂಘನೆಯನ್ನು, ಮಾನವ ಹಕ್ಕುಗಳ ಹರಣವನ್ನು ಹಾಗೂ ಅಕ್ಟೋಬರ್ 7ರ ಬಳಿಕ ಒಂದೇ ವಾರದಲ್ಲಿ ಅದು ಮೆರೆದಿರುವ ವಿನಾಶವನ್ನು ಮತ್ತು ಇದೆಲ್ಲದರ ಪರಿಣಾಮ ಮತ್ತು ಪ್ರತಿಕ್ರಿಯೆಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾದುದು ನ್ಯಾಯಪ್ರಜ್ಞೆಯ ಸಹಜ ಬೇಡಿಕೆಯಾಗಿದೆ.

ಇಸ್ರೇಲ್ ಮತ್ತು ಫೆಲೆಸ್ತೀನ್ ನಡುವಣ ಘರ್ಷಣೆಯ ಕುರಿತು ಮಾತನಾಡುವಾಗ ಅನೇಕರು ಇದು ಎರಡು ಸಮಾನ ದೇಶಗಳ ನಡುವಣ ಸಂಘರ್ಷ ಎಂಬಂತೆ ಮಾತನಾಡುತ್ತಾರೆ. ಫೆಲೆಸ್ತೀನ್ ಜನತೆ ನಿಜವಾಗಿ ಇಸ್ರೇಲ್ ಜನತೆಗೆ ಸಮಾನಾಂತರವಾದ ಒಂದು ಸಮಾಜವಾಗಲಿ ಸರಕಾರವಾಗಲಿ ಅಲ್ಲ. ಆರ್ಥಿಕ ಅಥವಾ ಸೈನಿಕ ಸಾಮರ್ಥ್ಯದ ದೃಷ್ಟಿಯಿಂದ ಅವೆರಡರ ನಡುವೆ ಯಾವ ಹೋಲಿಕೆಯೂ ಇಲ್ಲ. ಇಸ್ರೇಲ್, ಜಗತ್ತಿನ ಅತ್ಯಂತ ಶ್ರೀಮಂತ ಹಾಗೂ ಸೇನಾ ಶಕ್ತಿಯ ದೃಷ್ಟಿಯಿಂದ ಅತ್ಯಂತ ಬಲಿಷ್ಠ ದೇಶಗಳ ಸಾಲಲ್ಲಿ ನಿಂತಿದ್ದರೆ, ಫೆಲೆಸ್ತೀನ್ ಸರಕಾರ ಮತ್ತು ಅಲ್ಲಿನ ಎಲ್ಲ ಗುಂಪುಗಳ ಒಟ್ಟು ಸಾಮರ್ಥ್ಯವನ್ನು ಹೆಚ್ಚೆಂದರೆ ಯಾವುದಾದರೂ ಕಡು ಬಡ ದೇಶದ ಮಹಾ ನಗರಪಾಲಿಕೆಗೆ ಹೋಲಿಸಬಹುದಷ್ಟೇ.

ಒಂದೇ ದಿನ ಇಸ್ರೇಲ್ ಮೇಲೆ ಐದು ಸಾವಿರ ಮಿಸೈಲ್‌ಗಳನ್ನು ಎಸೆದದ್ದು, ಇಸ್ರೇಲಿನ ಸುಭದ್ರ ಗಡಿಗೋಡೆಗಳನ್ನು ಒಡೆದು ಹಾಕಿದ್ದು ಇವನ್ನೆಲ್ಲ ಕೆಲವು ಹಮಾಸ್ ಅಭಿಮಾನಿಗಳು ಹಮಾಸ್‌ನ ಸಾಹಸಮಯ ಹಾಗೂ ಜಾಣ ಸಾಧನೆಗಳೆಂದು ಪ್ರಶಂಸಿಸಿ ಪುಳಕಿತರಾಗುತ್ತಿದ್ದಾರೆ. ಇದೆಲ್ಲಾ ಇಸ್ರೇಲ್‌ನ ಗುಪ್ತಚರ ವ್ಯವಸ್ಥೆ ಸಂಪೂರ್ಣ ವಿಫಲವಾಗಿರುವುದಕ್ಕೆ ಸಾಕ್ಷಿ ಎಂದು ಸಂಭ್ರಮಿಸುತ್ತಿದ್ದಾರೆ. ನಿಜವಾಗಿ ಸ್ವಲ್ಪ ದೂರದೃಷ್ಟಿಯಿಂದ ನೋಡಿದರೆ ಹಮಾಸ್‌ನ ಕಾರ್ಯಾಚರಣೆಯಲ್ಲಿ ಸ್ವತಃ ಆಕ್ರಮಿತ ಹಾಗೂ ಮರ್ದಿತ

ಫೆಲೆಸ್ತೀನ್ ಜನತೆಗೆ ಹಿತಕ್ಕಿಂತ ಹೆಚ್ಚು ಅಹಿತವಾಗುವ ಸಾಧ್ಯತೆ ಎದ್ದು ಕಾಣುತ್ತದೆ. ತಮ್ಮ ಶಕ್ತಿ ಸಾಮರ್ಥ್ಯಗಳಿಗೆ ಹೋಲಿಸಿದರೆ ಹತ್ತಾರು ಪಾಲು ಕಡಿಮೆ ಶಕ್ತಿ ಇರುವ ಅಸಹಾಯಕ ದುರ್ಬಲರ ಮೇಲೆ ಆಕ್ರಮಣ ಮಾಡುವವರನ್ನು ನಾವು ವೀರಶೂರರೆಂದು ಬಣ್ಣಿಸುವ ಬದಲು ಪರಮ ಹೇಡಿಗಳೆಂದು ಗುರುತಿಸುತ್ತೇವೆ. ಹಾಗೆಯೇ, ತಮಗಿಂತ ನೂರಾರು ಪಾಲು ಹೆಚ್ಚು ಶಕ್ತಿ ಸಾಮರ್ಥ್ಯ ಇರುವವರ ಮೇಲೆ ಆಕ್ರಮಣ ಮಾಡುವವರ ಕೃತ್ಯವನ್ನು ಧೈರ್ಯ ಅಥವಾ ಪರಾಕ್ರಮ ಎಂದೆಲ್ಲ ಕರೆಯುವ ಬದಲು ಶುದ್ಧ ಭಂಡತನ ಎಂದೇ ಕರೆಯುತ್ತೇವೆ. ಹಮಾಸ್ ಮಾಡಿದ ದಾಳಿ ಕೇವಲ ಇಸ್ರೇಲ್‌ಗೆ ಒಂದಷ್ಟು ನಷ್ಟವುಂಟು ಮಾಡುವಲ್ಲಿ ಕೊನೆಗೊಳ್ಳುವುದಿಲ್ಲ. ಅದು ಸ್ವತಃ ಫೆಲೆಸ್ತೀನ್‌ನ ಅಸಹಾಯಕ ಜನತೆಯ ಮೇಲೆ ಭೀಕರ ಪ್ರಳಯವನ್ನು ಆಮಂತ್ರಿಸುವ ಮತ್ತು ಆ ಮೂಲಕ ಈಗಾಗಲೇ ತೀರಾ ದಾರುಣ ಸ್ಥಿತಿಯಲ್ಲಿರುವ ಅವರನ್ನು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿಸುವ ಕೃತ್ಯವಾಗುವ ಎಲ್ಲ ಸಾಧ್ಯತೆಗಳಿವೆ. ಹಮಾಸ್‌ನ ಇರಾದೆ ಏನೇ ಇದ್ದರೂ ಅದರ ಈ ದಾಳಿ ಫೆಲೆಸ್ತೀನ್ ಜನತೆಯ ಯಾವುದೇ ಅಗತ್ಯವನ್ನು ಈಡೇರಿಸುವ ಬದಲು ಅವರ ಶತ್ರುವಾದ ಇಸ್ರೇಲ್ ಮತ್ತು ಅಲ್ಲಿಯ ಭ್ರಷ್ಟ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಹಲವು ಅಗತ್ಯಗಳನ್ನು ಈಡೇರಿಸಿರುವ ಸಾಧ್ಯತೆ ಖಂಡಿತ ಇದೆ. ಇಸ್ರೇಲ್ ಸರಕಾರಕ್ಕೆ ಈ ಎಲ್ಲ ಕಾರ್ಯಾಚರಣೆಗಳ ಬಗ್ಗೆ ಮೊದಲೇ ತಿಳಿದಿದ್ದು, ಅದು ಫೆಲೆಸ್ತೀನ್ ವಿರುದ್ಧ ತಾನು ಈ ಹಿಂದೆಯೇ ಯೋಜಿಸಿದ್ದ ಒಂದು ದೊಡ್ಡ ಅಮಾನುಷ ಕಾರ್ಯಾಚರಣೆಗೆ ಇಸ್ರೇಲಿನೊಳಗಿಂದ ಹಾಗೂ ಹೊರಜಗತ್ತಿನಿಂದ ಬೆಂಬಲ ಪಡೆಯುವುದಕ್ಕಾಗಿ ಈ ಕುರಿತು ಜಾಣ ಕುರುಡು ಪ್ರದರ್ಶಿಸಿರುವ ಸಾಧ್ಯತೆಯೂ ಇದೆ. ದಿನೇದಿನೇ ಕುಸಿಯುತ್ತಿರುವ ತನ್ನ ಜನಪ್ರಿಯತೆಯನ್ನು ಮರಳಿ ಪಡೆದು ಇಸ್ರೇಲ್‌ನೊಳಗೆ ಕ್ಷಿಪ್ರವಾಗಿ ಬೆಳೆಯುತ್ತಿದ್ದ ತನ್ನ ವಿರೋಧಿಗಳನ್ನು ಹತ್ತಿಕ್ಕುವುದಕ್ಕೆ ಈ ಹಮಾಸ್ ದಾಳಿಯು ನೆತನ್ಯಾಹುರಿಗೆ ಒಂದು ಸುವರ್ಣಾವಕಾಶವನ್ನು ಒದಗಿಸಿದೆ ಎಂಬುದರಲ್ಲಂತೂ ಸಂದೇಹವೇ ಇಲ್ಲ.

ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ನಡೆದ ಮಿಸೈಲ್ ದಾಳಿ ಗಾಝಾ ಪಟ್ಟಿಯಿಂದ ನಡೆದಿತ್ತು. ಗಾಝಾ ಪಟ್ಟಿ ಎಂಬುದು ಒಂದು ಸ್ವತಂತ್ರ ದೇಶವಲ್ಲ. ಅದು ಕಳೆದ 56 ವರ್ಷಗಳಿಂದ ಇಸ್ರೇಲ್‌ನ ಅಕ್ರಮ ವಶದಲ್ಲಿರುವ ಒಂದು ಪ್ರದೇಶ. 1967ರಲ್ಲಿ ಈ ಪ್ರದೇಶವನ್ನು ಆಕ್ರಮಿಸಿಕೊಂಡಿದ್ದ ಇಸ್ರೇಲ್ ಸರಕಾರ 2005ರಲ್ಲಿ ತಾನು ಅದನ್ನು ಬಿಟ್ಟುಕೊಟ್ಟಿರುವುದಾಗಿ ಹೇಳಿಕೊಂಡಿತ್ತು. ಆದರೆ ವಿಶ್ವಸಂಸ್ಥೆ, ಯುರೋಪಿಯನ್ ಒಕ್ಕೂಟ ಮತ್ತು ಅನೇಕ ದೇಶಗಳು ಹಾಗೂ ಅಂತರ್‌ರಾಷ್ಟ್ರೀಯ ಸಂಸ್ಥೆಗಳು ಅದನ್ನು ಈಗಲೂ ಆಕ್ರಮಿತ ಪ್ರದೇಶವೆಂದೇ

ಗುರುತಿಸುತ್ತವೆ. ಗಾಝಾ ಪಟ್ಟಿಯ ಸ್ಥಿತಿಗತಿಗಳನ್ನು ಕೆಲವರು 'ಜಗತ್ತಿನ ಅತಿದೊಡ್ಡ ಓಪನ್ ಏರ್ ಬಂದಿಖಾನೆ' ಎಂದು ವರ್ಣಿಸಿದರೆ ಮತ್ತೆ ಕೆಲವರು ಅದನ್ನು 'ಜಗತ್ತಿನ ಅತ್ಯಧಿಕ ಜನದಟ್ಟಣೆ ಇರುವ ಕೊಳಚೆ ಪ್ರದೇಶಗಳಲ್ಲೊಂದು' ಎಂದು ಚಿತ್ರಿಸುತ್ತಾರೆ. ನಮ್ಮ ಬೆಂಗಳೂರು ನಗರ ಜಿಲ್ಲೆಯ ವಿಸ್ತೀರ್ಣ ಸುಮಾರು 2,200 ಚದರ ಕಿಲೋ ಮೀಟರ್ ಗಳಷ್ಟಿದ್ದರೆ, ಗಾಝಾ ಪಟ್ಟಿಯ ಒಟ್ಟು ವಿಸ್ತೀರ್ಣ ಕೇವಲ 365 ಚದರ ಕಿಲೋಮೀಟರ್‌ಗಳು. ಅಂದರೆ ಬೆಂಗಳೂರು ನಗರ ಜಿಲ್ಲೆಯ ಕೇವಲ ಸುಮಾರು 16 ಶೇ. ಭಾಗ. ಇಷ್ಟು ಸಣ್ಣ ಭೂಭಾಗದಲ್ಲಿ 22 ಲಕ್ಷಕ್ಕೂ ಹೆಚ್ಚು ಫೆಲೆಸ್ತೀನ್ ನಾಗರಿಕರು ಎಲ್ಲ ಬಗೆಯ ಮಾನವೀಯ ಮತ್ತು ನಾಗರಿಕ ಹಕ್ಕು ಹಾಗೂ ಸವಲತ್ತುಗಳಿಂದ ವಂಚಿತರಾಗಿ ಘೋರ ಅಸ್ಥಿರತೆ, ಅಭದ್ರತೆ, ದಾರಿದ್ರ್ಯ, ನಿರ್ಬಂಧ ಮತ್ತು ಅಪಮಾನದ ಬದುಕು ಸಾಗಿಸುತ್ತಿದ್ದಾರೆ. ಇಸ್ರೇಲ್ ಸರಕಾರ ಪದೇ ಪದೇ ಅವರ ನೀರು, ವಿದ್ಯುತ್ ಮಾತ್ರವಲ್ಲ ಆಹಾರ ಸರಬರಾಜಿಗೂ ತಡೆಯೊಡ್ಡುವ ಮೂಲಕ ಅವರ ದಾಸ್ಯವನ್ನು ಅವರಿಗೆ ನೆನಪಿಸುತ್ತಿರುತ್ತದೆ. ಅಲ್ಲಿ ಎಷ್ಟೇ ಗಟ್ಟಿಯ ಕಟ್ಟಡಗಳನ್ನು ಕಟ್ಟಿದರೂ ಅವು ಎಷ್ಟು ತಿಂಗಳು ನಿಂತಿರುತ್ತವೆಂದು ಹೇಳಲು ಯಾರಿಗೂ ಸಾಧ್ಯವಾಗುವುದಿಲ್ಲ. ಇದು ಗಾಝಾ ಪಟ್ಟಿಯಲ್ಲಿರುವ ಫೆಲೆಸ್ತೀನ್ ಜನತೆಯ ಕಥೆಯಾದರೆ, ಪಶ್ಚಿಮದಂಡೆಯಲ್ಲಿರುವ ಫೆಲೆಸ್ತೀನಿಗಳು, ವಿವಿಧ ಅರಬ್ ದೇಶಗಳಲ್ಲಿ ಮತ್ತು ಜಗತ್ತಿನ ಇತರ ಭಾಗಗಳಲ್ಲಿ ನೆಲೆಯಿಲ್ಲದ ನಿರಾಶ್ರಿತರಾಗಿ ಬದುಕುತ್ತಿರುವ ಫೆಲೆಸ್ತೀನಿಗಳು ಮತ್ತು ಸಾಕ್ಷಾತ್ ಇಸ್ರೇಲ್‌ನೊಳಗೆ ಎರಡನೇ ದರ್ಜೆಯ ನಾಗರಿಕರಾಗಿರುವ ಫೆಲಸ್ತೀನಿಗಳ ಕಥೆ ಬೇರೆಯೇ ಇದೆ. ಈ ಹಿನ್ನೆಲೆಯಲ್ಲಿ ಹಮಾಸ್‌ನ ದಾಳಿಯು, ಎಲ್ಲ ಬಗೆಯ ದಮನಕ್ಕೆ ತುತ್ತಾಗಿರುವ ಒಂದು ಅಸಹಾಯಕ ವರ್ಗದ ಹತಾಶ ಕ್ರಮವೆಂಬಂತೆ ತೋರುತ್ತದೆ.

ಕೆಲವರಿಗೆ ಈ ಒಟ್ಟು ಬಿಕ್ಕಟ್ಟಿನಲ್ಲಿ, ಹಮಾಸ್ ಅನ್ನು ಭಯೋತ್ಪಾದಕ ಸಂಘಟನೆ ಎಂದು ಕರೆಯಬೇಕೆಂದು ಆಗ್ರಹಿಸುವ ಅವಕಾಶ ಬಿಟ್ಟರೆ ಬೇರೇನೂ ಕಾಣಿಸುತ್ತಿಲ್ಲ. ಅವರು ಸೂಕ್ಷ್ಮದರ್ಶಕ ಹಿಡಿದು, ಹಾಗೆ ಕರೆಯಲು ಹಿಂಜರಿಯುವವರಿಗಾಗಿ ಹುಡುಕುತ್ತಲೇ ಇರುತ್ತಾರೆ. ಮೊನ್ನೆ ನಮ್ಮ ದೇಶದ ವಿದೇಶಾಂಗ ವ್ಯವಹಾರಗಳ ತಜ್ಞ ಶಶಿತರೂರ್, ಹಮಾಸ್ ಅನ್ನು ಹೊಗಳಲಿಲ್ಲ. ಅದರ ಆಕ್ರಮಣವನ್ನು ಸ್ಪಷ್ಟವಾಗಿ ಖಂಡಿಸಿದರು. ಆದರೆ ಅವರು ಹಮಾಸ್ ಕುರಿತು 'ಭಯೋತ್ಪಾದಕ' ಎಂಬ ಪದವನ್ನು ಬಳಸಲಿಲ್ಲ ಎಂಬ ಒಂದೇ ಕಾರಣಕ್ಕಾಗಿ ಹಲವಾರು ಮಂದಿ ಅವರನ್ನು ಬೇಟೆಯಾಡಲು ಹೊರಟರು. ಸಾಕ್ಷಾತ್ ಭಾರತ ಸರಕಾರವೇ ಹಮಾಸ್ ಅನ್ನು ಭಯೋತ್ಪಾದಕ ಸಂಘಟನೆಯೆಂದು ಹೆಸರಿಸಿಲ್ಲ ಎಂದು ತರೂರ್ ಒತ್ತಿ ಹೇಳಿದಾಗ ಬೇಟೆಯಾಳುಗಳು ತುಸು ಸುಮ್ಮನಾದರು. ಅತ್ತ

ಜಗದ್ವಿಖ್ಯಾತ ಸುದ್ದಿ ಸಂಸ್ಥೆ ಬಿಬಿಸಿ ಕೂಡಾ ಹಮಾಸ್ ಅನ್ನು ಭಯೋತ್ಪಾದಕ ಸಂಘಟನೆ ಎಂದು ಕರೆಯದೆ ಇದ್ದುದಕ್ಕಾಗಿ ಆಕ್ಷೇಪ ಮತ್ತು ಬೈಗಳ ಸುರಿ ಮಳೆಯನ್ನೇ ಎದುರಿಸಬೇಕಾಯಿತು. ಈ ಕುರಿತು ಸ್ಪಷ್ಟನೆ ನೀಡಿದ ಬಿಬಿಸಿಯ ಜಾಗತಿಕ ವ್ಯವಹಾರಗಳ ಸಂಪಾದಕ ಜಾನ್ ಸಿಂಪ್ಸನ್ ಅವರು ಹೀಗೆ ಬರೆದರು:



ಜಾನ್ ಸಿಂಪ್ಸನ್

'ಯಾರನ್ನು ಬೆಂಬಲಿಸಬೇಕು, ಯಾರನ್ನು ಖಂಡಿಸಬೇಕು, ಯಾರು ಸಜ್ಜನರು ಮತ್ತು ಯಾರು ದುಷ್ಟರು ಎಂಬುದನ್ನೆಲ್ಲ ಜನರಿಗೆ ತಿಳಿಸುವುದು ಬಿಬಿಸಿಯ ಕೆಲಸವಲ್ಲ. ನಾನು ಕಳೆದ 50 ವರ್ಷಗಳಿಂದ ಮಧ್ಯ ಪ್ರಾಚ್ಯದ ಬೆಳವಣಿಗೆಗಳ ಕುರಿತು ವರದಿ ಮಾಡುತ್ತಾ ಬಂದಿದ್ದೇನೆ. ಇದೀಗ ಇಸ್ರೇಲ್‌ನಲ್ಲಿ ನಡೆದಿರುವಂತಹ ದಾಳಿಯ ನಂತರ ಏನಾಗುತ್ತದೆಂಬುದನ್ನು ನೋಡಿದ್ದೇನೆ. ಹಾಗೆಯೇ, ಇದಕ್ಕೆ ಪ್ರತೀಕಾರವಾಗಿ ಇಸ್ರೇಲ್ ಸರಕಾರ ನಾಗರಿಕರನ್ನು ಗುರಿಯಾಗಿಸಿ ಲೆಬನಾನ್ ಮತ್ತು ಗಾಝಾದಲ್ಲಿ ನಡೆಸುವ ಬಾಂಬ್ ಮತ್ತು ಆರ್ಟಿಲರಿ ದಾಳಿಗಳ ನಂತರ ಏನಾಗುತ್ತದೆಂಬುದನ್ನೂ ನೋಡಿದ್ದೇನೆ. ಅವೆಲ್ಲಾ ಮನಸ್ಸಿನಿಂದ ಎಂದೂ ಮಾಸಿಹೋಗದಷ್ಟು ಭಯಾನಕವಾಗಿರುತ್ತವೆ.'

ಪ್ರಶ್ನೆ ಕೇವಲ ನಾಮಕರಣದ್ದಲ್ಲ. ಹಮಾಸ್ ಅನ್ನು ಭಯೋತ್ಪಾದಕ ಸಂಘಟನೆ ಎಂದು ಕರೆಯುವುದರಿಂದ ಯಾವುದಾದರೂ ಸಮಸ್ಯೆ ಬಗೆಹರಿಯುವುದಿದ್ದರೆ ಖಂಡಿತ ನಾವು ಸ್ವಲ್ಪವೂ ತಡಮಾಡದೆ ಒಕ್ಕೊರಲಿನಿಂದ ಆ ಕೆಲಸ ಮಾಡಬಹುದಿತ್ತು. ಹಮಾಸ್ ಮಾಡಿರುವ ಕೆಲಸ ಪ್ರೇಮೋತ್ಪಾದನೆಯಂತೂ ಅಲ್ಲ. ಅತ್ತ ಇಸ್ರೇಲ್ ಕೂಡ ಪ್ರೇಮೋತ್ಪಾದಕ ದೇಶವೇನೂ ಅಲ್ಲ. ಹಮಾಸ್‌ನ ಕಾರ್ಯಾಚರಣೆಗೆ ಹೋಲಿಸಿದರೆ ಅದಕ್ಕಿಂತ ಸಾವಿರ ಪಟ್ಟು ಭೀಕರ ಕಾರ್ಯಾಚರಣೆಗಳನ್ನು ಇಸ್ರೇಲ್ ಸರಕಾರ ಸಾವಿರ ಬಾರಿ ಮಾಡಿದೆ. ಜಗತ್ತಿನಲ್ಲಿ ಅತ್ಯಧಿಕ ಬಾರಿ ಅಂತರ್‌ರಾಷ್ಟ್ರೀಯ ನಿಯಮಗಳನ್ನು ಉಲ್ಲಂಘಿಸಿದ ದಾಖಲೆ ಇಸ್ರೇಲ್ ಹೆಸರಲ್ಲಿದೆ. ಅತ್ಯಧಿಕ ಬಾರಿ ವಿಶ್ವಸಂಸ್ಥೆಯಿಂದ ಖಂಡನಾ ನಿರ್ಣಯಗಳನ್ನು ಪಡೆದ ಶ್ರೇಯ ಕೂಡ ಇಸ್ರೇಲ್‌ಗೆ ಸೇರುತ್ತದೆ. ನಿಶ್ಶಸ್ತ್ರ ನಾಗರಿಕರು, ಮಹಿಳೆಯರು ಮತ್ತು ಮಕ್ಕಳನ್ನು ಕೊಲ್ಲುವ, ಅವರಿಂದ ಅವರ ಪೌರತ್ವ, ಜಮೀನು ಮತ್ತು ಮನೆಗಳನ್ನು

ಕಿತ್ತುಕೊಳ್ಳುವ, ಅವರಿಗೆ ಮಾನವ ಹಕ್ಕುಗಳು, ನಾಗರಿಕ ಹಕ್ಕುಗಳು, ಅನ್ನಾಹಾರ, ಶಿಕ್ಷಣ ಮತ್ತು ಚಿಕಿತ್ಸೆಯನ್ನು ನಿರಾಕರಿಸುವ ವಿಷಯದಲ್ಲಿ ಇಸ್ರೇಲ್‌ನ ಕರಾಳ ದಾಖಲೆಗೆ ಹೋಲಿಸಿದರೆ ಹಮಾಸ್‌ನ ಕುಕೃತ್ಯಗಳು ತೀರಾ ಕುಬ್ಜವಾಗಿ ಕಾಣಿಸುತ್ತವೆ. ಇದೇ ಕಾರಣಕ್ಕೆ ಹಲವರು ಇಸ್ರೇಲ್ ಅನ್ನು ಕಿಡಿಗೇಡಿ ದೇಶ ಹಾಗೂ ಭಯೋತ್ಪಾದಕ ದೇಶ ಎಂದು ಕರೆಯುತ್ತಾರೆ. ಒಬ್ಬರ ಭಯೋತ್ಪಾದಕ ಇನ್ನೊಬ್ಬರ ಸ್ವಾತಂತ್ರ್ಯ ಹೋರಾಟಗಾರನಾಗಿರುತ್ತಾನೆ. ನಮ್ಮ ಅನೇಕ ಮಹಾನ್ ಸ್ವಾತಂತ್ರ್ಯ ಹೋರಾಟಗಾರರು ಬ್ರಿಟಿಷರ ದೃಷ್ಟಿಯಲ್ಲಿ ಮಾತ್ರವಲ್ಲ ಅವರ ಅಧಿಕೃತ ದಾಖಲೆಗಳಲ್ಲಿ ಕೂಡಾ ಭಯೋತ್ಪಾದಕರಾಗಿದ್ದರು. ಅವರ ಇತಿಹಾಸ ಪುಸ್ತಕಗಳಲ್ಲಿ ವೀರಶೂರರೆಂದು ಬಣ್ಣಿಸಲಾದ ಅನೇಕರನ್ನು ನಾವು ಪರಮ ಕ್ರೂರ ನರಹಂತಕರ ಖಾತೆಗೆ ಸೇರಿಸಿರುತ್ತೇವೆ. ಎಂದೂ ಮುಗಿಯದ ಈ ನಾಮಕರಣದ ಪ್ರಕ್ರಿಯೆಯಿಂದ ಯಾರಿಗೂ ಲಾಭವಾಗುವ ಸಾಧ್ಯತೆಯಿಲ್ಲ.

ಹಮಾಸ್ ಸಂಘಟನೆ ಎಲ್ಲ ಫೆಲೆಸ್ತೀನ್ ನಾಗರಿಕರನ್ನು ಅಥವಾ ಎಲ್ಲ ಅರಬ್ ನಾಗರಿಕರನ್ನು ಪ್ರತಿನಿಧಿಸುವುದಿಲ್ಲ ಎಂಬುದು ಎಷ್ಟು ಸತ್ಯವೋ, ಇಸ್ರೇಲ್ ಸರಕಾರವು ಯಹೂದಿ ಧರ್ಮವನ್ನಾಗಲಿ, ಜಾಗತಿಕ ಯಹೂದಿ ಸಮುದಾಯವನ್ನಾಗಲಿ ಸ್ವತಃ ಇಸ್ರೇಲ್‌ನೊಳಗಿನ ಯಹೂದಿಯರನ್ನಾಗಲಿ ಪ್ರತಿನಿಧಿಸುವುದಿಲ್ಲ ಎಂಬುದೂ ಅಷ್ಟೇ ಸತ್ಯ. ಇದಕ್ಕೆ ಪುರಾವೆ ಎಂಬಂತೆ ಇಂದು ಅಮೆರಿಕ, ಯುರೋಪ್ ಮಾತ್ರವಲ್ಲ ಸಾಕ್ಷಾತ್ ಇಸ್ರೇಲ್‌ನ ಒಳಗಿರುವ ಹಮಾಸ್ ವಿರೋಧಿ ಯಹೂದಿಗಳು ದೊಡ್ಡ ಸಂಖ್ಯೆಯಲ್ಲಿ ಇಸ್ರೇಲ್ ಸರಕಾರದ ಧೋರಣೆಗಳ ವಿರುದ್ಧ ಧ್ವನಿಯೆತ್ತುತ್ತಿದ್ದಾರೆ. ಇಸ್ರೇಲ್‌ನಿಂದ ಹೊರಡುವ ಬಹುಭಾಷಾ ಪತ್ರಿಕೆ 'ಟೈಮ್ಸ್ ಆಫ್ ಇಸ್ರೇಲ್' ವರದಿ ಮಾಡಿರುವಂತೆ, ಕೆಲವು ವರ್ಷಗಳಿಂದ ಅಮೆರಿಕದಲ್ಲಿ ಸಕ್ರಿಯವಾಗಿರುವ ಅಲ್ಲಿನ ಯಹೂದಿಗಳ ಸಂಘಟನೆ 'ಇಫ್ ನಾಟ್ ನೌ' ಇಸ್ರೇಲ್‌ನ ಧೋರಣೆಯನ್ನು ಖಂಡಿಸಿದೆ. 'ಫೆಲೆಸ್ತೀನ್ ಉಗ್ರವಾದಿಗಳು ನಡೆಸಿರುವ ದಾಳಿಯನ್ನು ನಾವು ಅಪ್ರಚೋದಿತ ಎಂದು ಪರಿಗಣಿಸುವುದಿಲ್ಲ. ಇಸ್ರೇಲ್ ಸರಕಾರದ ವರ್ಣಭೇದ ವ್ಯವಸ್ಥೆಯಡಿಯಲ್ಲಿ ಪ್ರತಿಯೊಂದು ದಿನವೂ ಪ್ರಚೋದನೆಯಾಗಿದೆ. ಗಾಝಾದ ಮೇಲೆ ಹೇರಲಾಗಿರುವ ಉಸಿರುಗಟ್ಟಿಸುವ ದಿಗ್ಬಂಧನ ಕೂಡಾ ಪ್ರಚೋದನೆಯಾಗಿದೆ' ಎಂದು ಸಂಘಟನೆಯು ತನ್ನ ಪತ್ರಿಕಾ ಪ್ರಕಟಣೆಯಲ್ಲಿ ಹೇಳಿದೆ. 'ಅಕ್ಟೋಬರ್ 7ರ ದಾಳಿಯಲ್ಲಿ ಹತರಾದವರ ಕುರಿತು, ಅವರ ರಕ್ತದ ಕಲೆಗಳು ಇಸ್ರೇಲ್ ಸರಕಾರದ ಕೈಗಳ ಮೇಲಿವೆ. ಹಾಗೆಯೇ ಅವು ಇಸ್ರೇಲ್ ಸರಕಾರಕ್ಕೆ ಧನಸಹಾಯ ಮಾಡುವ ಹಾಗೂ ಅದರ ಎಲ್ಲ ಅತಿಕ್ರಮಗಳನ್ನು ಕ್ಷಮಿಸುವ ಅಮೆರಿಕ ಸರಕಾರ ಮತ್ತು ಹಲವು ದಶಕಗಳಿಂದ ಫೆಲೆಸ್ತೀನ್ ಜನತೆಯ ಮೇಲೆ

ನಡೆಯುತ್ತಿರುವ ಅನ್ಯಾಯಗಳು ಹಾಗೂ ಅದರಿಂದ ಫೆಲೆಸ್ತೀನ್ ಮತ್ತು ಇಸ್ರೇಲ್‌ಗಳಿಗೆ ಆಗಿರುವ ನಷ್ಟಗಳನ್ನು ಕಡೆಗಣಿಸುವ ಪ್ರತಿಯೊಬ್ಬ ಅಂತರ್‌ರಾಷ್ಟ್ರೀಯ ನಾಯಕನ ಕೈಗಳ ಮೇಲೂ ಆ ಕಲೆಗಳಿವೆ' ಎಂದು ಪ್ರಸ್ತುತ ಹೇಳಿಕೆಯಲ್ಲಿ ವಾದಿಸಲಾಗಿದೆ. ಇಂದು ಒಂದು ಸಮ್ಮೇಳನದಲ್ಲಿ ಅಮೆರಿಕ ಅಧ್ಯಕ್ಷ ಜೋ ಬೈಡೆನ್ ಅವರು ಭಾಷಣ ಮಾಡುತ್ತಿದ್ದಾಗ, ಗಾಝಾ ದಲ್ಲಿ ಯುದ್ಧ ನಿಲುಗಡೆ ಘೋಷಿಸಬೇಕು ಮತ್ತು ನಾಗರಿಕರ ಹತ್ಯೆಯನ್ನು ತಕ್ಷಣ ನಿಲ್ಲಿಸಬೇಕು ಎಂಬ ಘೋಷಣೆಗಳು ಮೊಳಗಿದವು. ಯುದ್ಧ ನಿಲುಗಡೆಗೆ ಆಗ್ರಹಿಸಿ ಇಸ್ರೇಲ್‌ನೊಳಗೂ ಪ್ರದರ್ಶನಗಳು ನಡೆದಿವೆ.

ಸದ್ಯ ಇಸ್ರೇಲ್ ನಲ್ಲಿ ತಲೆ ಎತ್ತಿರುವ ಬೆಳವಣಿಗೆಗಳಿಗೆ ಇನ್ನೊಂದು ಭಯಾನಕ ಆಯಾಮವಿದೆ. ಪ್ರಸ್ತುತ ಬಿಕ್ಕಟ್ಟು ಕೇವಲ ಇಸ್ರೇಲ್ ಮತ್ತು ಫೆಲೆಸ್ತೀನ್‌ನವರಿಗೆ ಸೀಮಿತವಾಗಿ ಉಳಿಯದೆ ಇತರ ಹಲವು ದೇಶಗಳು ಇದರಲ್ಲಿ ಭಾಗವಹಿಸುವ ಮತ್ತು ಸನ್ನಿವೇಶ ಕೈ ಮೀರಿದರೆ ಇದು, ಮಾನವಕುಲದ ಮೇಲೆ, ಊಹಿಸಲಿಕ್ಕೂ ಸಾಧ್ಯವಿಲ್ಲದ ನಾಶನಷ್ಟಗಳನ್ನು ತಂದೊಡ್ಡಬಲ್ಲ ಮೂರನೆಯ ಜಾಗತಿಕ ಮಹಾ ಯುದ್ಧಕ್ಕೆ ದಾರಿ ಮಾಡಿಕೊಡುವ ಸಾಧ್ಯತೆ ಕೂಡಾ ಇದೆ. ಜಗತ್ತಿನಲ್ಲಿ ಹೆಚ್ಚಿನ ದೇಶಗಳಿಗೆ ಮತ್ತು ಅವುಗಳನ್ನು ನಿಯಂತ್ರಿಸುವ ರಾಜಕಾರಣಿಗಳಿಗೆ ಯಾವುದೇ ತತ್ವ ಸಿದ್ಧಾಂತ ಅಥವಾ ಮೌಲ್ಯಕ್ಕಿಂತ ತಮ್ಮ ತಕ್ಷಣದ ಹಿತ ಮುಖ್ಯವಾಗಿರುತ್ತದೆ. ನಾವಿಂದು ಇಂತಹ ಭೀಕರ ಸಾಧ್ಯತೆಗಳ ಬಗ್ಗೆ ಯೋಚಿಸಿ ಅಂಜುತ್ತಿರುವಾಗಲೇ, ಜಾಗತಿಕ ಶಾಂತಿಯ ಏಕಮಾತ್ರ ವಿಶ್ವಾಸಾರ್ಹ ಬುನಾದಿಯಾದ ನ್ಯಾಯ ಎಂಬ ಮೌಲ್ಯವನ್ನು ಎತ್ತಿ ಹಿಡಿಯಬೇಕಾಗಿದೆ. ಕರ್ಫ್ಯೂ, ಮಾರ್ಷಲ್ ಲಾ, ಯುದ್ಧ, ಬಾಂಬುದಾಳಿ ಇವೆಲ್ಲಾ ವಿನಾಶಕ್ಕೆ ಕಾರಣವಾಗುತ್ತವೆಯೇ ಹೊರತು ಶಾಂತಿಯನ್ನು ತರುವುದಿಲ್ಲ. ದೀರ್ಘ ಕಾಲ ಬಾಳುವ ಶಾಂತಿಯನ್ನು ಸ್ಥಾಪಿಸುವ ಶಕ್ತಿ ಇರುವುದು ನ್ಯಾಯಕ್ಕೆ ಮಾತ್ರ. ಜಾಗತಿಕ ರಾಜಕೀಯದ ಎಲ್ಲ ಪಾತ್ರಧಾರಿಗಳು ಸೇರಿ ಮನಸ್ಸು ಮಾಡಿದರೆ ದೇಶ, ಧರ್ಮ, ಜನಾಂಗ ಇತ್ಯಾದಿ ಎಲ್ಲ ಗೋಡೆಗಳನ್ನು ಮೀರಿ ಎಲ್ಲರಿಗೆ ನ್ಯಾಯ ಒದಗಿಸಬಲ್ಲ ಸರ್ವ ಸಮ್ಮತ ಅಂತರ್‌ರಾಷ್ಟ್ರೀಯ ಕಾನೂನುಗಳ ಮೂಲಕವೇ ಎಲ್ಲ ವಿವಾದಗಳನ್ನು ಬಗೆಹರಿಸಿ, ಎಲ್ಲರಿಗೆ ಅವರ ಹಕ್ಕುಗಳು ಸಿಗುವಂತೆ ಮಾಡಲು ಖಂಡಿತ ಸಾಧ್ಯವಿದೆ.

# ಪುಟನೋಟ


1. ತೆರೆಮರೆಯ ಒಂದಷ್ಟು ಇತಿಹಾಸ ಮತ್ತು ವರ್ತಮಾನ .......... 21
2. ಫೆಲೆಸ್ತೀನ್ ನಿರಾಶ್ರಿತರ ಸಮಸ್ಯೆ .......... 34
3. ಅತಿ ಸರಳೀಕೃತ ವಿಶ್ಲೇಷಣೆಗಳು .......... 43
4. ಆಕ್ರಮಿತ ನಾಗರಿಕರಿಗೆ ಐಡಿ ಎಂಬ ಮೂಗುದಾರ .......... 49
5. ಇಸ್ರೇಲ್ ಜನಾಂಗವಾದಿ ಎಂಬುದು ಕೇವಲ ಆರೋಪವೇ? .......... 58
6. ಇಸ್ರೇಲ್ ಯುದ್ಧಾಪರಾಧಗಳು: ಅಂತರ್‌ರಾಷ್ಟ್ರೀಯ ಕ್ರಿಮಿನಲ್ ಕೋರ್ಟ್‌ನಿಂದ ತನಿಖೆ .......... 68
7. ಆಕ್ರಮಣದಿಂದ ಲಾಭ ಇಲ್ಲವೆಂದವರಾರು? .......... 75
8. ಇಸ್ರೇಲ್ ಮತ್ತು ಝಿಯೋನಿಝಮ್ ಬಗ್ಗೆ ಕ್ರೈಸ್ತರ ನಿಲುವೇನು? .......... 81
9. ಜೆರುಸಲೇಮ್‌ನ ನಿವೃತ್ತ ಆರ್ಚ್ ಬಿಷಪ್‌ರ ಮನವಿ .......... 86
10. ಫೆಲೆಸ್ತೀನಿಗಳಿಗೆ ಏಕಪಕ್ಷೀಯ ಮಾಧ್ಯಮಗಳ ಸವಾಲು .......... 90
11. ಸತ್ಯದ ಮೇಲೆ ಕತ್ತಲೆ ಹೇರಿದ ತಂತ್ರಜ್ಞಾನ .......... 95
12. ಫೆಲೆಸ್ತೀನ್: ಮಿತ್ರರಿಂದಲೇ ಪದೇ ಪದೇ ಬೆನ್ನಿಗೆ ಇರಿಸಿಕೊಂಡ ಅನುಭವ .......... 99
13. ದ್ರೋಹವೆಸಗಿದ್ದು ಸಾಲದ್ದಕ್ಕೆ ಭಾವನೆಗಳನ್ನು ಅಣಕಿಸುವ ಕ್ರೌರ್ಯ! .......... 106

14. ಅನ್ವರ್ ಸಾದಾತ್ ತಂದಿತ್ತ
ಕ್ಷಣಿಕ ಉನ್ಮಾದ ಮತ್ತು ಶಾಶ್ವತ ನಿರಾಶೆ ................................ 112

15. ಯಾಸಿರ್ ಅರಫಾತ್: ಹೋರಾಟದಲ್ಲಿ
ಮಿನುಗಿ ರಾಜಿಯಲ್ಲಿ ಮರೆಯಾದ ನಾಯಕ ......................... 118

16. ಪಿಎಲ್‌ಒ : ಅರಫಾತ್ ಮುಂದೆ ಎರಡು ಕಠಿಣ ಸವಾಲು....... 124

17. ಇನ್ತಿಫಾದಃವನ್ನು ಹತ್ತಿಕ್ಕಲು ಅರಫಾತ್ ಬೇಕಾದರೇ?.............. 132

18. ಶೇಖ್ ಅಹ್ಮದ್ ಯಾಸೀನ್:
ಎಲ್ಲೆಡೆ ಸಂಚಲನ ಮೂಡಿಸಿದ ನಿಶ್ಚಲ ಮನುಷ್ಯ .................. 139

19. ವಿಮೋಚನಾ ಸಂಗ್ರಾಮಕ್ಕೆ ಜೀವ ತುಂಬಿದ 'ಇನ್ತಿಫಾದಃ'......... 143

20. ಅರಬ್ ಮತ್ತು ಮುಸ್ಲಿಮ್ ಬಾಹುಳ್ಯದ
ದೇಶಗಳೇಕೆ ನಿಷ್ಕ್ರಿಯವಾಗಿವೆ?............................................... 151

21. ಕೊಲ್ಲಿಯ ದೇಶಗಳ ಆಂತರಿಕ ಸ್ಥಿತಿ ಹೇಗಿದೆ?
ಪರಸ್ಪರ ನಂಟುಗಳು ಹೇಗಿವೆ?............................................. 157

22. ಸೌದಿ–ಯಮನ್ ನಡುವಣ ಕಲಹ ..................................... 163

23. ಅಮೆರಿಕ ಅಷ್ಟೊಂದು ನಿಷ್ಠೆಯಿಂದ
ಇಸ್ರೇಲ್ ಬೆಂಬಲಕ್ಕೆ ನಿಂತಿರುವುದೇಕೆ?................................... 169

24. ಶೀತಲ ಸಮರದಲ್ಲಿ ಪಾಲುದಾರರ ಶೋಧ........................... 175

25. ಆಶಾವಾದಕ್ಕೆ ಕೆಲವು ತಳಹದಿಗಳು........................................ 180

# 1

# ತೆರೆಮರೆಯ ಒಂದಷ್ಟು ಇತಿಹಾಸ ಮತ್ತು ವರ್ತಮಾನ

ಮಳೆ, ಗಾಳಿ, ಶೀತ, ಜ್ವರ ಇತ್ಯಾದಿ ಎಲ್ಲದರ ಹಿಂದೆ ರಾಜಕೀಯಕ್ಕೆ ಏನಾದರೊಂದು ಪಾತ್ರ ಇದ್ದೇ ಇರುತ್ತದೆ. ಮಿಲಿಟರಿ ಕಾರ್ಯಾಚರಣೆಗಳ ಹಿಂದಂತೂ ಅಂತರ್‌ರಾಷ್ಟ್ರೀಯ ಭದ್ರತಾ ಸನ್ನಿವೇಶಗಳಿಗಿಂತ ಆಂತರಿಕ ರಾಜಕೀಯ ಸನ್ನಿವೇಶಗಳಿಗೆ ಹೆಚ್ಚಿನ ಪಾತ್ರ ಇರುತ್ತದೆ. ಈ ಹಿನ್ನೆಲೆಯಲ್ಲಿ ನಾವು ಫೆಲೆಸ್ತೀನ್ ಮತ್ತು ಇಸ್ರೇಲ್‌ಗಳ ನಡುವೆ ಸದ್ಯ ಏರ್ಪಟ್ಟಿರುವ ಘರ್ಷಣೆಯನ್ನು ಚರ್ಚಿಸುವ ಮುನ್ನ ಇಸ್ರೇಲ್‌ನ ವರ್ತಮಾನ ರಾಜಕೀಯ ಸನ್ನಿವೇಶದ ಮೇಲೊಮ್ಮೆ ಕಣ್ಣೋಡಿಸುವುದು ಉಚಿತವೆನಿಸುತ್ತದೆ. ಇಸ್ರೇಲ್ ಸರಕಾರ ಬಹುಕಾಲದಿಂದ ಆಂತರಿಕವಾಗಿ ತೀವ್ರ ಸ್ವರೂಪದ ರಾಜಕೀಯ ಅಸ್ಥಿರತೆ ಮತ್ತು ಬಿಕ್ಕಟ್ಟನ್ನು ಎದುರಿಸುತ್ತಿದೆ. ನಮ್ಮ ಬೆಂಗಳೂರು ಮಹಾನಗರದ ಜನಸಂಖ್ಯೆ 1.27 ಕೋಟಿಯಷ್ಟಿದ್ದರೆ ಇಸ್ರೇಲ್ ದೇಶದ ಒಟ್ಟು ಜನಸಂಖ್ಯೆ 90.5 ಲಕ್ಷ ಮಾತ್ರ! ತನ್ನನ್ನು ಯಹೂದಿ ಪ್ರಜಾಸತ್ತಾತ್ಮಕ ದೇಶ ಎಂದು ಕರೆದುಕೊಳ್ಳುವ ಈ ದೇಶದ ಮತದಾರರು ರಾಜಕೀಯವಾಗಿ ಪ್ರಬುದ್ಧರಾಗಿದ್ದರೂ ತುಂಬಾ ವಿಚ್ಛಿದ್ರರಾಗಿದ್ದಾರೆ. ಅಲ್ಲಿ 2019 ಎಪ್ರಿಲ್, 2019 ಸೆಪ್ಟಂಬರ್, 2020 ಮಾರ್ಚ್ ಮತ್ತು 2021 ಮಾರ್ಚ್ – ಹೀಗೆ ಕಳೆದ ಎರಡೇ ವರ್ಷಗಳಲ್ಲಿ ನಾಲ್ಕು ಮಹಾಚುನಾವಣೆಗಳು ನಡೆದಿದ್ದು,



**ಬೆಂಜಮಿನ್ ನೆತನ್ಯಾಹು**

ಮೂರು ಬಾರಿ ಸಂಸತ್ತು ವಿಸರ್ಜಿತವಾಗಿದೆ. ಒಂದು ಸ್ಥಿರ ಸರಕಾರವನ್ನು ರಚಿಸಲು ಅಲ್ಲಿ ಯಾರಿಗೂ ಸಾಧ್ಯವಾಗಿಲ್ಲ.

120 ಸದಸ್ಯರಿರುವ ಅಲ್ಲಿನ ಸಂಸತ್ತು ನೆಸ್ಸೆಟ್(Knesset)ಗೆ ಈ ವರ್ಷ ಮಾರ್ಚ್ ತಿಂಗಳಲ್ಲಷ್ಟೇ ಮಹಾ ಚುನಾವಣೆ ನಡೆದಿತ್ತು. ಆದರೆ ಓಟುಗಳು 13 ವಿಭಿನ್ನ ಪಕ್ಷಗಳ ನಡುವೆ ಹಂಚಿಹೋಗಿದ್ದರಿಂದ ಯಾರಿಗೂ ಸ್ಪಷ್ಟ ಬಹುಮತ ಸಿಗಲಿಲ್ಲ. ಇಸ್ರೇಲ್‌ನಲ್ಲಿ ಸದ್ಯ ಇರುವ ನಾಯಕರ ಪೈಕಿ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅತ್ಯಂತ ಬಲಿಷ್ಠರೆನ್ನಬಹುದು. ಆದರೆ ಕಳೆದ ಚುನಾವಣೆಯಲ್ಲಿ ಅವರ ಶಕ್ತಿಶಾಲಿ ಲಿಕುಡ್ ಪಕ್ಷಕ್ಕೆ ಕೇವಲ 24ಶೇ. ಮತಗಳು ಮತ್ತು 25ಶೇ. ಸೀಟುಗಳು ಮಾತ್ರ ದೊರೆತವು. ಅವರಿಗೆ ಮಿತ್ರಪಕ್ಷಗಳ ಜೊತೆ ಸೇರಿ ಬಹುಮತ ಸಾಬೀತು ಪಡಿಸಲು ನೀಡಲಾಗಿದ್ದ 28 ದಿನಗಳ ವಿಶೇಷ ಗಡುವು ಈಗಾಗಲೇ ಮುಗಿದಿದ್ದು, ಅವರೀಗ ಮತ್ತೆ ಕಾಲಾವಕಾಶಕ್ಕಾಗಿ ಅಂಗಲಾಚುತ್ತಿದ್ದಾರೆ. ಒಂದು ಕಾಲದಲ್ಲಿ ಜನಪ್ರಿಯರಾಗಿದ್ದ ನೆತನ್ಯಾಹು ಅವರ ಮೇಲೆ ಗಂಭೀರವಾದ ಭ್ರಷ್ಟಾಚಾರ ಹಗರಣಗಳ ಆರೋಪಗಳಿದ್ದು, ಅವರನ್ನು ವಿರೋಧಿಸಿ ಇಸ್ರೇಲ್‌ನ ಬೀದಿಗಳಲ್ಲಿ ತಿಂಗಳುಗಟ್ಟಲೆ ಉಗ್ರ ಮತಪ್ರದರ್ಶನಗಳು ನಡೆದಿವೆ. ಇಸ್ರೇಲ್‌ನ ವರ್ತಮಾನ ರಾಜಕೀಯ ಅಸ್ಥಿರತೆಯ ದುಸ್ಥಿತಿ ನೋಡಿದರೆ ಅಲ್ಲಿ ಶೀಘ್ರವೇ ಇನ್ನೊಂದುಮಹಾಚುನಾವಣೆ ಅನಿವಾರ್ಯವಾಗಿ ಬಿಡುತ್ತದೆಂಬುದು ಬಹುತೇಕ ಖಚಿತವಾಗಿದೆ.

ಈ ಹಿನ್ನೆಲೆಯಲ್ಲಿ, ಕಳೆದ ಕೆಲವು ದಿನಗಳಲ್ಲಿ ಅಲ್ಲಿನ ಸರಕಾರವು ಬಡ ಫೆಲೆಸ್ತೀನಿಗಳ ಮೇಲೆ ಬಾಂಬ್‌ಗಳ ಮಳೆ ಸುರಿಸುವ ಮೂಲಕ ಮೆರೆಯುತ್ತಿರುವ ಸಾಹಸವೆಲ್ಲ ಕೇವಲ ನಮ್ಮ ಸರ್ಜಿಕಲ್ ಸ್ಟ್ರೈಕ್ ಥರದ, ಜನಮರುಳು ಕವಾಯತ್ತಾಗಿರಬಹುದೇ ಎಂದು ಹಲವು ವೀಕ್ಷಕರು ದಟ್ಟ ಸಂಶಯ ಪ್ರಕಟಿಸಿದ್ದಾರೆ.

## ಝಿಯೋನಿಸ್ಟ್ ಆಂದೋಲನ ಮತ್ತು ಪ್ರತ್ಯೇಕ ಯಹೂದಿ ದೇಶದ ಕನಸು

ಇಸ್ರೇಲ್ ಎಂಬ 'ಯಹೂದಿಗಳದ್ದೇ ದೇಶ'ದ ಕಲ್ಪನೆಗೆ ಜನ್ಮ ನೀಡಿದ್ದು 19ನೇ ಶತಮಾನದ ಉತ್ತರಾರ್ಧದಲ್ಲಿ ಪೂರ್ವ ಯುರೋಪಿನಲ್ಲಿ ತಲೆ ಎತ್ತಿದ 'ಝಿಯೋನಿಸ್ಟ್' ಆಂದೋಲನ. 'ಝಿಯೋನ್' ಎಂಬುದು ಪ್ರಾಚೀನ

ಜೆರುಸಲೇಮ್ ಅಥವಾ ಎರುಶಲೇಮ್ ನಗರದಲ್ಲಿದ್ದ ಒಂದು ಬೆಟ್ಟದ ಹೆಸರು. ನಿಜವಾಗಿ ಈ ಆಂದೋಲನವು ಆ ಕಾಲದ ಯುರೋಪಿಯನ್ ದೇಶಗಳಲ್ಲಿ ಮತ್ತು ಅದರಲ್ಲೂ ವಿಶೇಷವಾಗಿ ಮಧ್ಯ ಹಾಗೂ ಪೂರ್ವ ಯೂರೋಪಿನ ದೇಶಗಳಲ್ಲಿ ಯಹೂದಿಗಳ ವಿರುದ್ಧ ವ್ಯಾಪಕ ಪ್ರಮಾಣದಲ್ಲಿ ಕಂಡುಬಂದಿದ್ದ ತಾತ್ಸಾರ, ಸಂಶಯ, ಹಿಂಸೆ ಮತ್ತು ಹತ್ಯಾಕಾಂಡಗಳಿಗೆ ಪ್ರತಿಕ್ರಿಯೆಯಾಗಿ ಹುಟ್ಟಿಕೊಂಡಿತ್ತು.

ಮೊದಲು ಯಹೂದಿಗಳು ಇದ್ದಲ್ಲೆಲ್ಲಾ ಹಲವು ಸಣ್ಣ ಪ್ರತಿರೋಧಕ ಗುಂಪುಗಳ ರೂಪದಲ್ಲಿ ತಲೆ ಎತ್ತಿದ ಈ ಪ್ರಕ್ರಿಯೆ ಕ್ರಮೇಣ ಇಂತಹ ಗುಂಪುಗಳ ವಿಲೀನದೊಂದಿಗೆ ಒಂದು ಬಲಿಷ್ಠ ಆಂದೋಲನ ರೂಪ ಪಡೆದುಕೊಂಡಿತು. ಹಲವು ಯಹೂದಿ ಮೇಧಾವಿಗಳು ಈ ಆಂದೋಲನಕ್ಕೆ ತಮ್ಮದೇ ಆದ ವೈಚಾರಿಕ ಕೊಡುಗೆಗಳನ್ನು ನೀಡಿದ್ದರು. ಜಾಗತಿಕ ಯಹೂದಿ ಸಮುದಾಯದಲ್ಲಿ ಜಾಗೃತಿ, ಆತ್ಮವಿಶ್ವಾಸ ಮತ್ತು ಹೊಸ ಚೈತನ್ಯವನ್ನು ಬೆಳೆಸಬೇಕೆಂಬುದು ಅದರ ಘೋಷಿತ ಧ್ಯೇಯವಾಗಿತ್ತು. ಅದರ ಭಾಗವಾಗಿ ಯಹೂದಿ ಇತಿಹಾಸದ ವೈಭವವನ್ನು ನೆನಪಿಸುವ, ಹಿಬ್ರೂ ಭಾಷೆ ಮತ್ತು ಸಾಹಿತ್ಯಕ್ಕೆ ಪುನಶ್ಚೇತನ ನೀಡುವ ಹಾಗೂ ಕಲೆ, ಸಾಹಿತ್ಯ, ಶಿಕ್ಷಣ, ಕೃಷಿ, ವ್ಯವಸಾಯ, ಕಾರ್ಮಿಕ ರಂಗ ಇತ್ಯಾದಿ ವಿಭಿನ್ನ ಕ್ಷೇತ್ರಗಳಲ್ಲಿ ಯಹೂದಿಗಳನ್ನು ಸಂಘಟಿಸಿ ಸಕ್ರಿಯಗೊಳಿಸುವ ಚಟುವಟಿಕೆಗಳು ಆರಂಭವಾದವು. ಜೊತೆಗೇ 'ಯಹೂದಿಗಳದ್ದೇ ದೇಶ' ಎಂಬ ಕನಸಿನ ಮಾರಾಟವೂ ಆರಂಭವಾಯಿತು. ಪ್ರಸ್ತುತ ಝಿಯೋನಿಸ್ಟ್ ಆಂದೋಲನದ ವೈಚಾರಿಕ ಶಿಲ್ಪಿಗಳಲ್ಲೊಬ್ಬರಾಗಿದ್ದ ಹಂಗೇರಿ ಮೂಲದ ಥಿಯೋಡರ್ ಹೆರ್ಝ್‌ಲ್ (Theodor Herzl) 1896ರಲ್ಲಿ 'ಡೆರ್ ಜೂಡೆನ್ ಸ್ಟ್ಯಾಟ್' (ಯಹೂದಿ ದೇಶ) ಎಂಬೊಂದು ಕಿರುಹೊತ್ತಗೆಯನ್ನು ಪ್ರಕಟಿಸಿದರು. ಅದರಲ್ಲಿ ಅವರು ಹೀಗೆ ಬರೆದಿದ್ದರು: "ಯಹೂದಿಗಳು ಗಣ್ಯ ಸಂಖ್ಯೆಯಲ್ಲಿ



**ಥಿಯೋಡರ್ ಹೆರ್ಝ್‌ಲ್**



DER

JUDENSTAAT.

VERSUCH

MODERNEN LÖSUNG DER JUDENFRAGE

THEODOR HERZL

LEIPZIG und WIEN 1896.
M. BREITENSTEIN'S VERLAGS-BUCHHANDLUNG
WIEN, IX., WÄHRINGERSTRASSE 5.


**'ಡೆರ್ ಜೂಡೆನ್ ಸ್ಟ್ಯಾಟ್'**

ಇರುವಲ್ಲೆಲ್ಲಾ ಯಹೂದಿ ಕೇಂದ್ರಿತ ಬಿಕ್ಕಟ್ಟಿದೆ. ಅದು ಇಲ್ಲದಲ್ಲಿ, ಯಹೂದಿ ವಲಸಿಗರ ಆಗಮನದೊಂದಿಗೆ ಅದು ಬಂದು ಬಿಡುತ್ತದೆ. ಸ್ವಾಭಾವಿಕವಾಗಿಯೇ ನಾವು ನಮ್ಮ ದಮನ ನಡೆಯದ ಸ್ಥಳಗಳ ಕಡೆಗೆ ಆಕರ್ಷಿತರಾಗಿ ಅಲ್ಲಿಗೆ ಹೋಗಿ ಬಿಡುತ್ತೇವೆ. ಆದರೆ ಅಲ್ಲಿ ನಾವು ಕಂಡುಬಂದೊಡನೆ ನಮ್ಮ ದಮನ ಆರಂಭವಾಗಿ ಬಿಡುತ್ತದೆ. ಅತ್ಯಂತ ನಾಗರಿಕ ನಾಡುಗಳೂ ಸೇರಿದಂತೆ ಎಲ್ಲ ಕಡೆಯೂ ಈಗ ಇದೇ ಪರಿಸ್ಥಿತಿ ಇದೆ. ಉದಾಹರಣೆಗೆ ಫ್ರಾನ್ಸ್ ಅನ್ನೇ ನೋಡಿ. ಯಹೂದಿ ಕೇಂದ್ರಿತ ಬಿಕ್ಕಟ್ಟಿಗೆ ಒಂದು ರಾಜಕೀಯ ಪರಿಹಾರ ಕಂಡುಕೊಳ್ಳುವ ತನಕ ಇದೇ ಪರಿಸ್ಥಿತಿ ಮುಂದುವರಿಯಲಿದೆ. ... ತಮ್ಮದೇ ಆದ ಒಂದು ದೇಶಕ್ಕಾಗಿ ಹಾತೊರೆಯುವ ಯಹೂದಿಗಳು ಖಂಡಿತ ಅದನ್ನು ಪಡೆಯುವರು. ಕೊನೆಗೂ ನಮಗೆ ನಮ್ಮದೇ ನೆಲದಲ್ಲಿ, ನಮ್ಮದೇ ಮನೆಗಳಲ್ಲಿ ಸ್ವತಂತ್ರ ಪುರುಷರಾಗಿ ನೆಮ್ಮದಿಯಿಂದ ಸಾಯಲು ಸಾಧ್ಯವಾಗುವುದು."

ಝಿಯೋನಿಸ್ಟ್ ಆಂದೋಲನದ ಧ್ಯೇಯೋದ್ದೇಶಗಳ ಬಗ್ಗೆ ಎಲ್ಲ ಯಹೂದಿಗಳಿಗೆ ಸಹಮತ ಇರಲಿಲ್ಲವಾದರೂ ಅವರ ಒಂದು ಗಣ್ಯ, ಶಕ್ತಿಶಾಲಿ ವರ್ಗವು ತನ್ನನ್ನು ಈ ಆಂದೋಲನದ ಜೊತೆ ಗುರುತಿಸಿಕೊಂಡಿತು. ಜಗತ್ತಿನ ಶ್ರೀಮಂತರು ಮತ್ತು ಅಧಿಕಾರಸ್ಥ ವ್ಯಕ್ತಿಗಳು ಮತ್ತು ಸಂಸ್ಥೆಗಳ ಮೇಲೆ ಪ್ರಭಾವ ಬೀರಿ ಅವರ ಮನವೊಲಿಸಲು ಸಾಧ್ಯವಾದರೆ ನಮ್ಮ ಗುರಿಸಾಧನೆ ಸುಲಭವಾಗುತ್ತದೆ ಎಂದು ನಂಬಿದ್ದ ಝಿಯೋನಿಸ್ಟ್ ನಾಯಕರು ಆ ನಿಟ್ಟಿನಲ್ಲಿ ಅವಿರತ ಶ್ರಮ ಆರಂಭಿಸಿದರು. ತಮ್ಮ ಸಮಾಜದ ಅಭಿವೃದ್ಧಿ ಮತ್ತು ತಮ್ಮ ಜನಾಂಗದ ದೀರ್ಘಕಾಲೀನ ಹಿತಾಸಕ್ತಿಗಳ ರಕ್ಷಣೆಗಾಗಿ ದೂರಗಾಮಿ ಯೋಜನೆಗಳನ್ನು ರೂಪಿಸಿದರು. ಅವರ ವ್ಯೂಹ ರಚನೆ ಮತ್ತು ಕಾರ್ಯಯೋಜನೆಗಳೆಲ್ಲಾ ಬಹಳ ಪರಿಣಾಮಕಾರಿಯಾಗಿದ್ದವೆಂಬುದು ಮುಂದಿನ ದಿನಗಳಲ್ಲಿ ಸಾಬೀತಾಯಿತು. ಝಿಯೋನಿಸ್ಟ್ ಆಂದೋಲನ ಅಸ್ತಿತ್ವಕ್ಕೆ ಬಂದ ಕೆಲವೇ ದಶಕಗಳ ಒಳಗೆ ಯಹೂದಿ ರಾಷ್ಟ್ರ ಸ್ಥಾಪನೆಯ ನಿಟ್ಟಿನಲ್ಲಿ ಒಂದು ದೊಡ್ಡ ಮುನ್ನಡೆಯನ್ನು ಸಾಧಿಸಲಾಯಿತು. ಬ್ರಿಟಿಷ್ ಸರಕಾರಕ್ಕೆ ನಿಕಟರಾಗಿದ್ದು ಯಹೂದಿ ದೇಶದ ಸ್ಥಾಪನೆಗಾಗಿ ಬ್ರಿಟನ್‌ನ ಸಹಾಯ ಯಾಚಿಸುತ್ತಾ ಇದ್ದ ಬ್ರಿಟನ್‌ನ ಓರ್ವ ಯಹೂದಿ ನಾಯಕನಿಗೆ ಶೀಘ್ರವೇ ಒಂದು ಐತಿಹಾಸಿಕ ಶುಭವಾರ್ತೆ ಸಿಕ್ಕಿಬಿಟ್ಟಿತು.

### 'ಯಹೂದಿ ದೇಶ'ದ ಸ್ಥಾಪನೆಯ ನಿಟ್ಟಿನಲ್ಲಿ ಮೊದಲ ದೊಡ್ಡ ಹೆಜ್ಜೆ

ಇಪ್ಪತ್ತನೇ ಶತಮಾನದ ಆದಿಯಲ್ಲಿ ಫೆಲೆಸ್ತೀನ್ ಎಂಬ ಅರಬ್ ನಾಡು ಖಿಲಾಫತ್ ಉಸ್ಮಾನಿಯಾ ಎಂಬ ಬೃಹತ್ ಮುಸ್ಲಿಮ್ ಸಾಮ್ರಾಜ್ಯದ ಅಧೀನದಲ್ಲಿತ್ತು. ಅಲ್ಲಿ ಯಹೂದಿ ದೇಶವೊಂದರ ಸ್ಥಾಪನೆಯ ನಿಟ್ಟಿನಲ್ಲಿ ಪ್ರಥಮ



Foreign Office,
November 2nd, 1917.

Dear Lord Rothschild,

I have much pleasure in conveying to you, on behalf of His Majesty's Government, the following declaration of sympathy with Jewish Zionist aspirations which has been submitted to, and approved by, the Cabinet

"His Majesty's Government view with favour the establishment in Palestine of a national home for the Jewish people, and will use their best endeavours to facilitate the achievement of this object, it being clearly understood that nothing shall be done which may prejudice the civil and religious rights of existing non-Jewish communities in Palestine, or the rights and political status enjoyed by Jews in any other country"

I should be grateful if you would bring this declaration to the knowledge of the Zionist Federation.



ಆರ್ಥರ್ ಬಾಲ್ ಫೋರ್

ಅಧಿಕೃತ ಹೆಜ್ಜೆ ಇಟ್ಟದ್ದು ಬ್ರಿಟಿಷ್ ಸರಕಾರ.

ಪ್ರಥಮ ಜಾಗತಿಕ ಯುದ್ಧದ ನಡುವೆ 1917ರಲ್ಲಿ ಬಲಿಷ್ಠ ವಸಾಹತುಶಾಹಿ ಬ್ರಿಟಿಷ್ ಸಾಮ್ರಾಜ್ಯವು ಉಸ್ಮಾನಿಯಾ (Ottoman) ಸಾಮ್ರಾಟರನ್ನು ಸೋಲಿಸಿ ಫೆಲೆಸ್ತೀನ್ ಅನ್ನು ಅವರಿಂದ ಕಿತ್ತುಕೊಂಡಿತು. ಆ ವರ್ಷ ನವೆಂಬರ್ 2ರಂದು ಘೋಷಿಸಲಾದ 'ಬಾಲ್ ಫೋರ್ ಪ್ರಕಟಣೆ'ಯಲ್ಲಿ ಫೆಲೆಸ್ತೀನ್‌ನಲ್ಲಿ ಯಹೂದಿ ಜನಾಂಗಕ್ಕಾಗಿ ಒಂದು ರಾಷ್ಟ್ರವನ್ನು ಸ್ಥಾಪಿಸುವ



ಲಾರ್ಡ್ ರಾತ್ಸ್ ಚೈಲ್ಡ್

ಸಂಕಲ್ಪವನ್ನು ಪ್ರಕಟಿಸಲಾಯಿತು. ಇಲ್ಲಿ ಬಹಳ ಗಮನಾರ್ಹವಾದ ಒಂದು ಅಂಶವೇನೆಂದರೆ 'ಬಾಲ್ ಫೋರ್ ಪ್ರಕಟಣೆ' ಎಂಬುದು ಒಂದು ಒಪ್ಪಂದ ಅಥವಾ ಗೊತ್ತುವಳಿಯ ರೂಪದಲ್ಲಿರಲಿಲ್ಲ. ಅದು ಬ್ರಿಟನ್ ಸಾಮ್ರಾಜ್ಯದ ವಿದೇಶ ಕಾರ್ಯದರ್ಶಿ ಆರ್ಥರ್ ಬಾಲ್ ಫೋರ್ (Arthur Balfour) ಅವರು, ಬ್ರಿಟನ್‌ನ ಯಹೂದಿ ಸಮುದಾಯದ ಪ್ರಭಾವಿ, ಶ್ರೀಮಂತ ನಾಯಕ ಹಾಗೂ ಝಿಯೋನಿಸ್ಟ್ ಆಂದೋಲನದ ಪ್ರತಿನಿಧಿ ಲಾರ್ಡ್ ರಾತ್ಸ್ ಚೈಲ್ಡ್ (Lord Rothschild) ಅವರಿಗೆ ಬರೆದ ಒಂದು ಬಹಿರಂಗ ಪತ್ರದ ರೂಪದಲ್ಲಿತ್ತು. ಪ್ರಸ್ತುತ ಪತ್ರದಲ್ಲಿ ಫೆಲೆಸ್ತೀನ್‌ನಲ್ಲಿ ಯಹೂದಿಗಳದ್ದೇ ಆದ ದೇಶವೊಂದನ್ನು ನಿರ್ಮಿಸುವ ನಿಟ್ಟಿನಲ್ಲಿ ಬ್ರಿಟಿಷ್ ಸರಕಾರವು ತನ್ನ ಕೈಲಾದ ಗರಿಷ್ಠ ಶ್ರಮ ನಡೆಸುವುದು ಎಂಬ ಸ್ಪಷ್ಟ ಆಶ್ವಾಸನೆ ನೀಡಲಾಗಿತ್ತು. ಸಾಲದ್ದಕ್ಕೆ, ಈ ವಿಷಯವನ್ನು 'ಝಿಯೋನಿಸ್ಟ್ ಫೆಡರೇಷನ್'ನ ಗಮನಕ್ಕೆ ತರಬೇಕೆಂದು ಮನವಿಯನ್ನೂ ಮಾಡಲಾಗಿತ್ತು. 1917 ನವೆಂಬರ್ 9ರಂದು ಈ ಪತ್ರವನ್ನು ಮಾಧ್ಯಮಗಳಲ್ಲಿ ಪ್ರಕಟಿಸಲಾಯಿತು. ಇದು ಇಸ್ರೇಲ್ ದೇಶದ ಸ್ಥಾಪನೆಯ ನಿಟ್ಟಿನಲ್ಲಿ ಮೊದಲ ದೊಡ್ಡ ಹೆಜ್ಜೆಯಾಗಿತ್ತು.

### ಎರಡನೆಯ ನಿರ್ಣಾಯಕ ಹೆಜ್ಜೆ

1922ರಲ್ಲಿ ವಿಶ್ವಸಂಸ್ಥೆಯ ಆಗಿನ ಪೂರ್ವಾವತಾರವಾಗಿದ್ದ ಲೀಗ್ ಆಫ್ ನೇಶನ್ಸ್ ಸಂಸ್ಥೆಯು ಅಧಿಕೃತ ಆದೇಶವೊಂದನ್ನು ಹೊರಡಿಸಿತು. ಬ್ರಿಟಿಷ್ ಸರಕಾರವು, ಉಸ್ಮಾನಿಯಾ ಆಡಳಿತಗಾರರ ಕೈಯಿಂದ ಕಿತ್ತುಕೊಂಡು ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದ ಜೋರ್ಡನ್ ಮತ್ತು ಫೆಲೆಸ್ತೀನ್ ಪ್ರದೇಶಗಳ ಪೈಕಿ ಫೆಲೆಸ್ತೀನ್‌ನಲ್ಲಿ ಯಹೂದಿ ರಾಷ್ಟ್ರವೊಂದನ್ನು ಸ್ಥಾಪಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕೆಂಬುದೇ ಆ ಆದೇಶವಾಗಿತ್ತು. ಜಗತ್ತಿನಾದ್ಯಂತ ಭಾರೀ ಭಾವನಾತ್ಮಕ ಚರ್ಚೆಗೊಳಗಾದ ಈ ಆದೇಶವು ಇಸ್ರೇಲ್ ದೇಶದ ನಿರ್ಮಾಣದ ಹಾದಿಯಲ್ಲಿ ಎರಡನೆಯ ನಿರ್ಣಾಯಕ ಹೆಜ್ಜೆಯಾಗಿತ್ತು.

## ಮೂರನೆಯ ಮಹಾ ಹೆಜ್ಜೆ



ಇಝ್ಝುದ್ದೀನ್ ಅಲ್ ಖಸ್ಸಾಮ್



ಮುಫ್ತಿ ಅಮೀನ್ ಅಲ್ ಹುಸೈನಿ

ಯೂರೋಪಿನ ಯಹೂದಿಗಳು ಫೆಲೆಸ್ತೀನ್ ನಾಡಿಗೆ ವಲಸೆ ಹೋಗುವ ಪ್ರಕ್ರಿಯೆ 20ನೇ ಶತಮಾನದ ಆರಂಭದಲ್ಲಿ ತುಂಬಾ ವ್ಯಾಪಕವಾಗಿ ಬಿಟ್ಟಿತು. ಯುರೋಪಿನಲ್ಲಿ ಕ್ರೈಸ್ತ ಮತ್ತು ಬಿಳಿಯ ಜನಾಂಗವಾದಿಗಳ ಕೈಯಲ್ಲಿ ಲಕ್ಷಾಂತರ ಯಹೂದಿಗಳ ಸಾಮೂಹಿಕ ಹತ್ಯಾಕಾಂಡಗಳು ನಡೆಯಲಾರಂಭಿಸಿದ ಬಳಿಕ ಅಂದರೆ ನಲ್ವತ್ತರ ದಶಕದಲ್ಲಿ ಈ ಪ್ರಕ್ರಿಯೆ ಮಹಾವಲಸೆಯ ರೂಪ ತಾಳಿಕೊಂಡಿತು. ಅತ್ತ ಅರಬ್ ಜನತೆಯಲ್ಲಿ ಈ ಪ್ರಕ್ರಿಯೆಯ ವಿರುದ್ಧ ಇದ್ದ ಅಸಮಾಧಾನವು ಧಾರ್ಮಿಕ ಹಾಗೂ ರಾಷ್ಟ್ರೀಯವಾದಿ ಆಯಾಮಗಳನ್ನು ಪಡೆದುಕೊಂಡು ಕುದಿಯತೊಡಗಿತು. ಅಲ್ಲಲ್ಲಿ ವಲಸಿಗರ ಮತ್ತು ಅವರ ರಕ್ಷಣೆಗೆ ಬದ್ಧರಾಗಿದ್ದ ಬ್ರಿಟಿಷ್ ವಸಾಹತುಶಾಹಿಗಳ ವಿರುದ್ಧ ಪ್ರತಿಭಟನೆಗಳು ಆರಂಭವಾದವು. 1935ರಲ್ಲಿ ಬ್ರಿಟನ್ ಏಜಂಟರು ಬ್ರಿಟಿಷ್ ವಿರೋಧಿ ಅರಬ್ ನಾಯಕ ಇಝ್ಝುದ್ದೀನ್ ಅಲ್ ಖಸ್ಸಾಮ್‌ರ ಹತ್ಯೆ ನಡೆಸಿದರು. ಅದರ ಬೆನ್ನಿಗೆ, ಫೆಲೆಸ್ತೀನ್ ಪ್ರದೇಶದ ವಿವಿಧ ಅರಬ್ ಪಕ್ಷ ಮತ್ತು ಸಂಘಟನೆಗಳು ಜೆರುಸಲೇಮನು ಮುಸ್ಲಿಮ್ ವಿದ್ವಾಂಸ ಮುಫ್ತಿ ಅಮೀನ್ ಅಲ್ ಹುಸೈನಿ ಅವರ ನೇತೃತ್ವದಲ್ಲಿ ಒಂದು ಅರಬ್ ಒಕ್ಕೂಟವನ್ನು ರಚಿಸಿಕೊಂಡರು. ಪ್ರಸ್ತುತ ಒಕ್ಕೂಟವು ಸಾಮೂಹಿಕ ಮುಷ್ಕರಕ್ಕೆ ಕರೆನೀಡಿದ್ದಲ್ಲದೆ, ಫೆಲೆಸ್ತೀನ್‌ಗೆ ಸ್ವತಂತ್ರ ದೇಶದ ಸ್ಥಾನಮಾನ ನೀಡಬೇಕು, ಯಹೂದಿಗಳ ವಲಸೆಯನ್ನು ತಡೆಯಬೇಕು, ವಲಸಿಗರಿಗೆ ಜಮೀನು ಮಾರಾಟ ಮಾಡುವುದನ್ನು ನಿಷೇಧಿಸಬೇಕು ಮುಂತಾದ ಬೇಡಿಕೆಗಳನ್ನು ಮಂಡಿಸಿತು. ತೆರಿಗೆ ನಿರಾಕರಣೆ ಮತ್ತು ಸರಕಾರೀ ಪೌರ ಸಂಸ್ಥೆಗಳ ಬಹಿಷ್ಕಾರ ಕೂಡಾ ಈ ಚಳವಳಿಯ ಭಾಗವಾಗಿತ್ತು. ಫೆಲೆಸ್ತೀನ್‌ನ

ಉತ್ತರ ಭಾಗದಲ್ಲಿ ಸ್ಥಳೀಯ ಮತ್ತು ನೆರೆಹೊರೆಯ ಕೆಲವು ಸಶಸ್ತ್ರ ಯುವ ಗುಂಪುಗಳು ಕೆಲವು ಆಯಕಟ್ಟಿನ ಸ್ಥಳಗಳನ್ನು ವಶಪಡಿಸಿಕೊಂಡು ಬ್ರಿಟಿಷ್ ಚೆಕ್ ಪೋಸ್ಟ್‌ಗಳ ಮೇಲೆ, ಅವರ ಯೋಧರು ಹಾಗೂ ಸರಕಾರೀ ಸೊತ್ತುಗಳ ಮೇಲೆ ಮತ್ತು ವಲಸಿಗರ ಬಡಾವಣೆಗಳ ಮೇಲೆ ದಾಳಿಗಳನ್ನು ನಡೆಸಲಾರಂಭಿಸಿದರು. ಹೀಗೆ ವ್ಯಾಪಕ ಬಂಡಾಯದ ಸನ್ನಿವೇಶವೊಂದು ತಲೆದೋರಿತು. ಸಾಮಾನ್ಯ ಮಟ್ಟದ ವಿರೋಧವನ್ನು ಮಾತ್ರ ನಿರೀಕ್ಷಿಸಿದ್ದ ಬ್ರಿಟಿಷ್ ಆಡಳಿತವು ಪ್ರಸ್ತುತ ಬಂಡಾಯದ ಆಳ ಹಾಗೂ ವ್ಯಾಪಕ ಸ್ವರೂಪವನ್ನು ನೋಡಿ ಬೆಚ್ಚಿಬಿತ್ತು. ಈ ವಿರೋಧವನ್ನು ಹತ್ತಿಕ್ಕಲು 1937ರಲ್ಲಿ ಬ್ರಿಟಿಷ್ ಆಡಳಿತವು ಒಟ್ಟು ದೇಶದಲ್ಲಿ ಕಟ್ಟುನಿಟ್ಟಿನ ಕರ್ಫ್ಯೂ ಹೇರಿತು. ಬ್ರಿಟನ್‌ನಿಂದ 20,000 ಸಶಸ್ತ್ರ ಯೋಧರ ವಿಶೇಷ ಪಡೆಯೊಂದನ್ನು ಫೆಲೆಸ್ತೀನ್‌ಗೆ ತರಿಸಿಕೊಂಡಿತು. ಜೊತೆಗೇ ತಾವು ಈಗಾಗಲೇ ತರಬೇತಿಗೊಳಿಸಿದ್ದ 15,000 ವಲಸಿಗ ಯಹೂದಿ ಯೋಧರಿಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಒದಗಿಸಿತು. ಹೀಗೆ ಬಲಪ್ರಯೋಗಿಸಿ ಅರಬ್ ಬಂಡಾಯವನ್ನು ಹತ್ತಿಕ್ಕಲಾಯಿತು. ಈ ದಮನ ಕಾರ್ಯಾಚರಣೆಯಲ್ಲಿ 5,000 ಅರಬ್ ಪ್ರಜೆಗಳು ಹತರಾದರು. 15,000 ಮಂದಿ ಗಾಯಗೊಂಡರು. 5,600 ಮಂದಿಯನ್ನು ಜೈಲಿಗೆ ತಳ್ಳಲಾಯಿತು. ಕೊಲ್ಲುವಾಗ ಚಳವಳಿಯ ನಾಯಕರ ಜೀವಗಳಿಗೆ ವಿಶೇಷ ಪ್ರಾಶಸ್ತ್ಯ ನೀಡಲಾಗಿತ್ತು. ಸರಕಾರ ವಿರೋಧಿ ಅರಬ್ ಹೋರಾಟಗಾರರು ಸಮರ್ಥ ನಾಯಕರ ಅನುಪಸ್ಥಿತಿಯಲ್ಲಿ ಪಕ್ಷ, ಪಂಥಗಳ ಹೆಸರಲ್ಲಿ ವಿಭಜಿತರಾಗಿದ್ದರು. ಅವರಿಗೆ ತಮ್ಮ ಚಳವಳಿಯ ಕಾವನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಅತ್ತ ತೀವ್ರ ಅಭದ್ರತೆಯ ಕರಿನೆರಳಲ್ಲಿ, ಸಮಾನ ದಮನಿತ ಪ್ರಜ್ಞೆಯಿಂದ ನರಳುತ್ತಿದ್ದ ವಲಸಿಗ ಯಹೂದಿಗಳು ಒಟ್ಟಾಗಿದ್ದರು. ಬ್ರಿಟಿಷ್ ಸರಕಾರದ ಸಂಪೂರ್ಣ ರಕ್ಷಣೆ ಮತ್ತು ಪೋಷಣೆಯೂ ಅವರಿಗೆ ಪ್ರಾಪ್ತವಿತ್ತು. ಅವರು ತಮ್ಮ ಗುರಿಯೆಡೆಗೆ ಮುನ್ನಡೆಯುತ್ತಲೇ ಇದ್ದರು.

ಆದರೆ 1939ರಲ್ಲಿ ಎರಡನೆಯ ಜಾಗತಿಕ ಯುದ್ಧವು ಆರಂಭವಾಯಿತು. ಆ ಸಂದರ್ಭದಲ್ಲಿ ಬ್ರಿಟಿಷ್ ಸರಕಾರಕ್ಕೆ ಎಲ್ಲ ಅರಬ್ ದೇಶಗಳ ಸಹಕಾರದ ಅಗತ್ಯವಿತ್ತು. ಆದ್ದರಿಂದ ಅದು ಫೆಲೆಸ್ತೀನ್‌ನಲ್ಲಿ ಅರಬ್ ಬಂಡಾಯವನ್ನು ಹತ್ತಿಕ್ಕಿದೊಡನೆ, ಪೂರ್ಣಪ್ರಮಾಣದ ಯಹೂದಿ ರಾಷ್ಟ್ರವನ್ನು ಸ್ಥಾಪಿಸುವ ತನ್ನ ಯೋಜನೆಯನ್ನು ಅನುಷ್ಠಾನಿಸುವುದಕ್ಕೆ ಆತುರ ಪಡಲಿಲ್ಲ. ಅದು ತನ್ನ ಯೋಜನೆಯನ್ನು ಕೆಲವು ಹಂತಗಳಲ್ಲಿ ಅನುಷ್ಠಾನಿಸುವ ಕಾರ್ಯತಂತ್ರ ರೂಪಿಸಿತು. 1939ರಲ್ಲಿ ಬ್ರಿಟಿಷ್ ಸರಕಾರವು ಒಂದು ಶ್ವೇತ ಪತ್ರವನ್ನು ಹೊರಡಿಸಿ ಅದರಲ್ಲಿ ಈ ಕೆಳಗಿನ ಪ್ರಸ್ತಾವಗಳನ್ನು ಮುಂದಿಟ್ಟಿತು.

### ವಲಸೆಯ ಪರ್ವ

ಯಹೂದಿಗಳೆಲ್ಲ ತಮ್ಮ ಇತಿಹಾಸದುದ್ದಕ್ಕೂ ಇಂದಿನ ಇಸ್ರೇಲ್ ಅಥವಾ ಫೆಲೆಸ್ತೀನ್‌ನಲ್ಲೇ ಇದ್ದವರೇನಲ್ಲ. ಫೆಲೆಸ್ತೀನ್‌ನಲ್ಲಿ ಯಹೂದಿಗಳ ಸಂಖ್ಯೆ ಕ್ರಮೇಣ ಹೆಚ್ಚುತ್ತಾ ಅಲ್ಲಿನ ಜನಸಂಖ್ಯೆಯ ಅನುಪಾತ ಬದಲಾಗುತ್ತಾ ಹೋದ ಇತಿಹಾಸ ತುಂಬಾ ಸ್ವಾರಸ್ಯಕರವಾಗಿದೆ. ಕ್ರಿ.ಶ. 1800 ರಲ್ಲಿ ಅಂದರೆ 19ನೇ ಶತಮಾನದ ಆರಂಭದ ವೇಳೆ ಫೆಲೆಸ್ತೀನ್ ನ ಒಟ್ಟು ಜನಸಂಖ್ಯೆ 2.75 ಲಕ್ಷವಿತ್ತು. ಆಗ ಅಲ್ಲಿ 2.46 ಲಕ್ಷ ಮುಸ್ಲಿಮರು, 22 ಸಾವಿರ ಕ್ರೈಸ್ತರು ಮತ್ತು ಕೇವಲ 7 ಸಾವಿರ ಯಹೂದಿಗಳಿದ್ದರು. ಆ ಶತಮಾನದ ಉತ್ತರಾರ್ಧದಲ್ಲಿ ಒಟ್ಟು ಜಾಗತಿಕ ಯಹೂದಿ ಜನಸಂಖ್ಯೆಯ ಬಹುತೇಕ 90ಶೇ. ಭಾಗವು ವಿವಿಧ ಯುರೋಪಿಯನ್ ನಾಡುಗಳಲ್ಲಿ ಚದರಿಕೊಂಡಿತ್ತು. ಯುರೋಪಿನ ವಿವಿಧ ದೇಶಗಳಲ್ಲಿ ಮತ್ತು ವಿಶೇಷವಾಗಿ ರಶ್ಯದ ಝಾರ್ ಗಳ ಅಧೀನವಿದ್ದ ಪ್ರದೇಶಗಳಲ್ಲಿ ಯಹೂದಿಗಳ ವಿರುದ್ಧ ತಾರತಮ್ಯ, ಅಸಹಿಷ್ಣುತೆ ಮತ್ತು ಹಿಂಸೆ ಹೆಚ್ಚುತ್ತಾ ಹೋದಂತೆ ಅಲ್ಲಿನ ಯಹೂದಿಗಳು ಧಾರ್ಮಿಕ ಹಾಗೂ ಐತಿಹಾಸಿಕವಾಗಿ ತಮಗೆ ಆಪ್ತವಾಗಿದ್ದ ಫೆಲೆಸ್ತೀನ್ ಮತ್ತದರ ಅಕ್ಕಪಕ್ಕದ ನಾಡುಗಳಿಗೆ ವಲಸೆ ಹೋಗಲಾರಂಭಿಸಿದರು. ಸಹಸ್ರಾರು ಸಂಖ್ಯೆಯಲ್ಲಿ ಯಹೂದಿಗಳು ವಲಸೆ ಬಂದು ಈ ಪ್ರದೇಶಗಳಲ್ಲಿ ಜಮೀನುಗಳನ್ನು ಖರೀದಿಸಿ ಕೃಷಿ, ವ್ಯವಸಾಯ ಮತ್ತು ವ್ಯಾಪಾರಗಳಲ್ಲಿ ತೊಡಗಿಕೊಂಡರು. 1890ರಲ್ಲಿ ಫೆಲೆಸ್ತೀನ್ ಮತ್ತದರ ಸುತ್ತಮುತ್ತ, ಯಹೂದಿಗಳ ಜನಸಂಖ್ಯೆ 43 ಸಾವಿರಕ್ಕೇರಿತು. ಮೊದಲ ಹಂತದಲ್ಲಿ ಈ ವಲಸೆಯ ವಿರುದ್ಧ ಪ್ರತಿರೋಧ ಕ್ಷೀಣವಾಗಿತ್ತು. 1896ರಲ್ಲಿ ಥಿಯೋಡರ್ ಹೆರ್ಝ್‌ಲ್ ಅವರ 'ಡೆರ್ ಜೂಡೆನ್ ಸ್ಟಾಟ್' (ಯಹೂದಿ ದೇಶ) ಎಂಬ ಕಿರುಪುಸ್ತಕ ಪ್ರಕಟವಾಗಿ ಯಹೂದಿಗಳ ಕನಸಿನ ದೇಶದ ಕುರಿತಾದ ಚರ್ಚೆ ಹೆಚ್ಚಿದಂತೆ, ವಲಸಿಗರ ಸಂಖ್ಯೆಯೂ ಹೆಚ್ಚತೊಡಗಿತು. 1914ರಲ್ಲಿ ಫೆಲೆಸ್ತೀನ್‌ನ ಒಟ್ಟು ಜನಸಂಖ್ಯೆ 7 ಲಕ್ಷದ ಆಸುಪಾಸಿನಲ್ಲಿದ್ದು, ಅಲ್ಲಿ ಕ್ರಮವಾಗಿ 5.25 ಲಕ್ಷ ಮುಸ್ಲಿಮರು ಮತ್ತು 70 ಸಾವಿರ ಕ್ರೈಸ್ತರಿದ್ದಾಗ ಯಹೂದಿಗಳ ಸಂಖ್ಯೆ 94 ಸಾವಿರದಷ್ಟಿತ್ತು. 1931 ರಹೊತ್ತಿಗೆ ಯಹೂದಿಗಳ ಸಂಖ್ಯೆ 1.75 ಲಕ್ಷದಷ್ಟಾಯಿತು. ಅಂದರೆ 13 ದಶಕಗಳ ಅವಧಿಯಲ್ಲಿ ಫೆಲೆಸ್ತೀನ್‌ನ ಮುಸ್ಲಿಮರ ಸಂಖ್ಯೆಯಲ್ಲಿ ಕೇವಲ 3 ಪಟ್ಟು ಹಾಗೂ ಕ್ರೈಸ್ತರ ಸಂಖ್ಯೆಯಲ್ಲಿ 4 ಪಟ್ಟು ವೃದ್ಧಿಯಾಗಿದ್ದರೆ ಯಹೂದಿಗಳ ಸಂಖ್ಯೆಯಲ್ಲಿ 25 ಪಟ್ಟು ವೃದ್ಧಿಯಾಗಿತ್ತು. ಈ ರೀತಿ ಯಹೂದಿ ಜನಸಂಖ್ಯೆಯಲ್ಲಿ ಅಸಾಮಾನ್ಯ ಹೆಚ್ಚಳವಾದಂತೆ ಈ ಪ್ರದೇಶದಲ್ಲಿ ಜನಸಂಖ್ಯಾ ಅನುಪಾತದ ಜೊತೆ ಸಾಮಾಜಿಕ ಸಮತೋಲನದಲ್ಲೂ ವ್ಯತ್ಯಯ ಉಂಟಾಗತೊಡಗಿತು. ಧರ್ಮ, ಭಾಷೆ, ಸಂಸ್ಕೃತಿ ಮತ್ತು ಪ್ರವೃತ್ತಿಗಳಲ್ಲಿ ಇದ್ದ ವ್ಯತ್ಯಾಸಗಳು ಸ್ಥಳೀಯ ಅರಬ್ ಕ್ರೈಸ್ತರು

ಮತ್ತು ಮುಸ್ಲಿಮರು ವಲಸಿಗ ಯಹೂದಿಗಳನ್ನು ಪ್ರತಿಕೂಲವಾಗಿ ನೋಡುವಂತೆ ಮಾಡಿತ್ತು. ವಿಶೇಷವಾಗಿ ಬಾಲ್ ಫೋರ್ ಪ್ರಕಟಣೆಯ ಹಿನ್ನೆಲೆಯಲ್ಲಿ, ಯಹೂದಿ ವಲಸಿಗರು ಕ್ರಮೇಣ ಫೆಲೆಸ್ತೀನ್ ಮತ್ತದರ ಆಸುಪಾಸಿನ ಪ್ರದೇಶವನ್ನು ಸಂಪೂರ್ಣವಾಗಿ ತಮ್ಮದಾಗಿಸಿಕೊಂಡು ಪರಂಪರಾಗತವಾಗಿ ಅಲ್ಲಿ ವಾಸಿಸುತ್ತಾ ಬಂದಿದ್ದ ಕ್ರೈಸ್ತರು ಮತ್ತು ಮುಸ್ಲಿಮರನ್ನು ಅಲ್ಲಿಂದ ಹೊರದಬ್ಬಲಿದ್ದಾರೆ ಎಂಬ ಆಶಂಕೆ ವ್ಯಾಪಕವಾಯಿತು. ಈ ಆಶಂಕೆ ವಲಸಿಗ ಯಹೂದಿಗಳ ವಿರುದ್ಧ ಅಸಾಮಾಧಾನವು ಹೆಚ್ಚುತ್ತಾ ಕೊನೆಗೆ 1936ರಲ್ಲಿ ಹಿಂಸೆಯ ರೂಪದಲ್ಲಿ ಸ್ಫೋಟವಾಗಲು ಮುಖ್ಯ ಕಾರಣವಾಯಿತು. ಬ್ರಿಟಿಷ್ ಪಡೆಗಳು ಮತ್ತು ಸಶಸ್ತ್ರ ಯಹೂದಿ ವಲಸಿಗ ಮಿಲೀಷಿಯಗಳು ಬಲಪ್ರಯೋಗಿಸಿ ಅರಬ್ ಬಂಡಾಯವನ್ನು ಹೊಸಕಿ ಹಾಕಿದವು. ಯಹೂದಿ ವಲಸಿಗರ ಒಂದು ವರ್ಗವು ನಗರಗಳಲ್ಲಿ ಇತರ ಸಮುದಾಯಗಳ ನಡುವೆ ಬದುಕುತ್ತಿದ್ದರೆ, ಗ್ರಾಮೀಣ ಪ್ರದೇಶಗಳಲ್ಲಿ ಝಿಯೋನಿಸ್ಟ್ ಗುಂಪುಗಳು ದೊಡ್ಡ ಜಮೀನುಗಳನ್ನು ಖರೀದಿಸಿ ಯಹೂದಿಗಳಿಗೆ ಮಾತ್ರ ಮೀಸಲಾದ ಕಾಲನಿಗಳನ್ನು ಕಟ್ಟಲಾರಂಭಿಸಿದ್ದರು. ನಲ್ವತ್ತರ ದಶಕದ ಕೊನೆಯ ವೇಳೆಗೆ ಅಂತಹ 200 ಕ್ಕೂ ಹೆಚ್ಚಿನ ಕಾಲನಿಗಳು ನಿರ್ಮಾಣವಾಗಿದ್ದವು. ಫೆಲೆಸ್ತೀನ್‌ನ ಬಹುತೇಕ 15 ಶೇ. ವ್ಯವಸಾಯ ಯೋಗ್ಯ ಜಮೀನು ಯಹೂದಿಗಳ ಮಾಲಕತ್ವಕ್ಕೆ ಬಂತು. ಜನಸಂಖ್ಯೆಯಲ್ಲಿ ವಲಸಿಗರ ಪ್ರಮಾಣ 30ಶೇ. ವನ್ನು ದಾಟಿತು. ಈ ಒಟ್ಟು ಪ್ರಕ್ರಿಯೆ ಮೌನವಾಗಿ, ಆದರೆ ಬಹಳ ವ್ಯವಸ್ಥಿತವಾಗಿ ನಡೆಯಿತು.

### ಯಹೂದಿಗಳ ವಿರುದ್ಧ ಪ್ರತಿರೋಧವೇಕೆ?

ಪೂರ್ವವಿರಲಿ, ಪಶ್ಚಿಮವಿರಲಿ ಯಹೂದಿಗಳು ಹೋದ ಹೆಚ್ಚಿನೆಡೆ ಅವರ ವಿರುದ್ಧ ಪ್ರತಿಕೂಲ ವಾತಾವರಣ ತಲೆದೋರಿದ್ದಕ್ಕೆ ಕಾರಣವೇನು ಎಂಬ ಕುತೂಹಲ ಹಲವರಲ್ಲಿದೆ. ನಿಜವಾಗಿ, ಒಂದು ಕಡೆ ಇತರ ಸಮುದಾಯಗಳಲ್ಲಿ ಯಹೂದಿಗಳ ವಿರುದ್ಧ ಇದ್ದ ಪರಂಪರಾಗತ ಪೂರ್ವಗ್ರಹಗಳು ಈ ಬೆಳವಣಿಗೆಗೆ ಕಾರಣವಾಗಿದ್ದರೆ ಇನ್ನೊಂದೆಡೆ ಸ್ವತಃ ಯಹೂದಿಗಳಲ್ಲಿನ ಕೆಲವು ಪಂಗಡಗಳು ತಾಳಿದ್ದ ವಿಪರೀತ ಮಡಿವಂತಿಕೆಯ ಧೋರಣೆಗಳೂ ಇದಕ್ಕೆ ಕಾರಣವಾಗಿದ್ದವು. ಅವರಲ್ಲಿ ಹೆಚ್ಚಿನವರು, ವಿಶೇಷವಾಗಿ ಸಂಪ್ರದಾಯಸ್ಥರು, ತಾವು ಜನ್ಮನಃ ಪವಿತ್ರರು

ಮತ್ತು ತಮ್ಮ ಜನಾಂಗವೇ ಸರ್ವ ಶ್ರೇಷ್ಠ ಎಂಬ ಜನಾಂಗೀಯ ಮೇಲ್ಮೆಯ ರೋಗದಿಂದ ಬಳಲುತ್ತಿದ್ದರು. ನಮ್ಮಲ್ಲಿನ ಮನುವಾದಿ ಬ್ರಾಹ್ಮಣರಂತೆ ಇತರರನ್ನು ಕೀಳಾಗಿ ಕಾಣುತ್ತಿದ್ದರು. ಇತರ ಜನಾಂಗಗಳ ಜನರ ವಿರುದ್ಧ ತಾವು ಅಪರಾಧಗಳನ್ನೆಸಗಿದರೂ ಅದು ದೇವರ ದೃಷ್ಟಿಯಲ್ಲಿ ಕ್ಷಮ್ಯ ಎಂಬಿತ್ಯಾದಿ ಅಪಾಯಕಾರಿ ಮೌಢ್ಯಗಳನ್ನು ಪೋಷಿಸಿಕೊಂಡಿದ್ದರು. ಆಂತರಿಕವಾಗಿ ತಮ್ಮ ಸಮುದಾಯವನ್ನು ಮದ್ಯ, ಬಡ್ಡಿ, ಜೂಜು ಮತ್ತು ಅನೈತಿಕ ಚಟುವಟಿಕೆಗಳಿಂದ ಮುಕ್ತವಾಗಿಟ್ಟರೆ ಸಾಕು, ಇತರ ಸಮುದಾಯಗಳನ್ನು ಈ ವ್ಯವಹಾರಗಳಲ್ಲಿ ತೊಡಗಿಸಿ ದಂಧೆ ನಡೆಸಿದರೆ ಅದರಲ್ಲೇನೂ ಪಾಪವಿಲ್ಲ ಎಂಬ ಭ್ರಮೆಯಲ್ಲಿದ್ದರು. ಇಪ್ಪತ್ತನೇ ಶತಮಾನಕ್ಕೆ ಮುಂಚಿನ ಇಂಗ್ಲಿಷ್ ಸಾಹಿತ್ಯದ ಕಥೆ, ಕಾದಂಬರಿ, ನಾಟಕ, ಮಹಾಕಾವ್ಯ ಇತ್ಯಾದಿ ವಿವಿಧ ಪ್ರಕಾರಗಳಲ್ಲಿ, ವಿವಿಧ ಯುರೋಪಿಯನ್ ಸಾಮಾಜಿಕ ಸನ್ನಿವೇಶಗಳಲ್ಲಿ, ಬಡ್ಡಿಕೋರ, ಸಂಚುಕೋರ, ತಲೆಹಿಡುಕ, ಮಾಟಗಾರ ಇತ್ಯಾದಿ ಖಳನಾಯಕರ ಪಾತ್ರಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಯಹೂದಿಗಳೇ ಮೆರೆಯುತ್ತಿರುವುದು ಎದ್ದು ಕಾಣುತ್ತದೆ. ಈ ಕುರಿತು ನೂರಾರು ಸಂಶೋಧನೆಗಳು ನಡೆದಿದ್ದು, ಹೆಚ್ಚಿನವರು, ಇದು ಕೇವಲ ಆಕಸ್ಮಿಕವಾಗಲಿ, ಕ್ರೈಸ್ತ ಬರಹಗಾರರ ಪೂರ್ವಗ್ರಹದ ಫಲವಾಗಲಿ ಆಗಿರದೆ ಆಯಾ ಕಾಲದ ಸಾಮಾಜಿಕ ವಾಸ್ತವದ ಆಂಶಿಕ ಪ್ರತಿಫಲನವಾಗಿದೆ ಎಂಬ ತೀರ್ಮಾನಕ್ಕೆ ಬಂದಿದ್ದಾರೆ.

## ಇಸ್ರೇಲ್ ಎಷ್ಟು ಸಭ್ಯ ರಾಷ್ಟ್ರ?

ಇಸ್ರೇಲ್ ಸರಕಾರದ ಇತಿಹಾಸ ಹೆಚ್ಚೇನೂ ದೀರ್ಘವಿಲ್ಲ. ಆದರೆ ಅದರ ಕಿಡಿಗೇಡಿತನಗಳ ಪಟ್ಟಿ ಮಾತ್ರ ಸಾಕಷ್ಟು ದೀರ್ಘವಾಗಿದೆ. ಜಾಗತಿಕ ಸಮುದಾಯದ ಸದಸ್ಯನಾಗಿ ಇಸ್ರೇಲ್ ಸರಕಾರದ ವರ್ತನೆಯು ಸದಾ ಬೇಜವಾಬ್ದಾರಿತನದ್ದಾಗಿದ್ದು ಮಾನವೀಯ ಹಾಗೂ ನಾಗರಿಕ ನಿಯಮಗಳ ಉಲ್ಲಂಘನೆಯ ವಿಷಯದಲ್ಲಿ ಇಸ್ರೇಲ್‌ನ ದಾಖಲೆಯು ಲೋಕದ ಬೇರಾವುದೇ ದೇಶಕ್ಕಿಂತ ನೂರಾರು ಪಾಲು ಕೆಟ್ಟದ್ದಾಗಿದೆ. ಇದಕ್ಕೆ ಜಾಗತಿಕ ಮಾನ್ಯತೆ ಇರುವ ವಿಶ್ವಸಂಸ್ಥೆ, ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ

ಮತ್ತು ವಿಶ್ವಸಂಸ್ಥೆಯ ಮಾನವಹಕ್ಕು ವಿಭಾಗಗಳ ದಾಖಲೆಗಳೇ ಪರ್ಯಾಪ್ತ ಪುರಾವೆಗಳಾಗಿವೆ: 2020 ಡಿಸೆಂಬರ್ 21ರಂದು ಒಂದೇ ದಿನದಲ್ಲಿ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯು ಇಸ್ರೇಲ್ ಸರಕಾರದ ಕೆಲವು ಧೋರಣೆಗಳನ್ನು ಖಂಡಿಸುವ ಎರಡು ಪ್ರತ್ಯೇಕ ನಿರ್ಣಯಗಳನ್ನು ಅಂಗೀಕರಿಸಿತ್ತು. ಫೆಲೆಸ್ತೀನ್ ವಿಷಯದಲ್ಲಿ ಇಸ್ರೇಲ್ ಮಾಡುತ್ತಿರುವ ಅಂತರ್‌ರಾಷ್ಟ್ರೀಯ ನಿಯಮಗಳ ಉಲ್ಲಂಘನೆಗಳನ್ನು ಖಂಡಿಸಿ ಕೇವಲ ವರ್ಷ 2020ರಲ್ಲೇ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯು 17 ನಿರ್ಣಯಗಳನ್ನು ಅಂಗೀಕರಿಸಿತ್ತು. ಈ ನಿರ್ಣಯಗಳನ್ನು ಜಗತ್ತಿನ 150ಕ್ಕೂ ಹೆಚ್ಚಿನ ದೇಶಗಳು ಬೆಂಬಲಿಸಿದ್ದವು. ಅಂತರ್‌ರಾಷ್ಟ್ರೀಯ ನಿಯಮಗಳನ್ನು ಮತ್ತು ಒಪ್ಪಂದಗಳನ್ನು ಉಲ್ಲಂಘಿಸಿ ಇಸ್ರೇಲ್ ನಡೆಸುತ್ತಿರುವ ವಿವಿಧ ಅಕ್ರಮ ಚಟುವಟಿಕೆಗಳನ್ನು ವಿರೋಧಿಸಿ ಮತ್ತು ಖಂಡಿಸಿ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯು (UNGA) ಈ ವರೆಗೆ 112 ನಿರ್ಣಯಗಳನ್ನು ಅಂಗೀಕರಿಸಿದೆ! ಅತ್ತ ಇಸ್ರೇಲ್, ತಾನು ಆಕ್ರಮಿಸಿರುವ ಅರಬ್ ನಾಡುಗಳಲ್ಲಿ ನಡೆಸುತ್ತಿರುವ ಮಾನವ ಹಕ್ಕುಗಳ ಘೋರ ಉಲ್ಲಂಘನೆಗಳನ್ನು ಖಂಡಿಸಿ ವಿಶ್ವಸಂಸ್ಥೆಯ ಮಾನವ ಹಕ್ಕು ವಿಭಾಗವು (UNHRC) 94ಕ್ಕೂ ಹೆಚ್ಚಿನ ನಿರ್ಣಯಗಳನ್ನು ಅಂಗೀಕರಿಸಿದೆ. ವಿಶ್ವಸಂಸ್ಥೆಯ ಇತಿಹಾಸದಲ್ಲಿ ಜಗತ್ತಿನ ಬೇರಾವುದೇ ದೇಶದ ವಿರುದ್ಧ ಇಷ್ಟೊಂದು ನಿರ್ಣಯಗಳನ್ನು ಕೈಗೊಳ್ಳಲಾದ ದಾಖಲೆ ಇಲ್ಲ. ಏಕೆಂದರೆ ಅಂತರ್‌ರಾಷ್ಟ್ರೀಯ ನಿಯಮಗಳನ್ನು ಮತ್ತು ಮಾನವ ಹಕ್ಕುಗಳನ್ನು ಉಲ್ಲಂಘಿಸುವ ವಿಷಯದಲ್ಲಿ ಇಸ್ರೇಲ್ ಮಾಡಿರುವಷ್ಟು ಕರಾಳ ಅಪರಾಧಗಳನ್ನು ಜಗತ್ತಿನ ಬೇರಾವುದೇ ದೇಶ ಮಾಡಿಲ್ಲ. ಸಾಲದ್ದಕ್ಕೆ, ಇಸ್ರೇಲ್ ಸರಕಾರವು ವಿಶ್ವಸಂಸ್ಥೆ ಮತ್ತು ವಿಶ್ವ ಸಮುದಾಯದ ಮನವಿ, ಗೊತ್ತುವಳಿ ಇತ್ಯಾದಿಗಳನ್ನು ಗಣನೆಗೆ ತೆಗೆದುಕೊಂಡು ತನ್ನ ನಡವಳಿಕೆಯನ್ನು ತಿದ್ದಿಕೊಳ್ಳುವ ಬದಲು ವಿಶ್ವಸಂಸ್ಥೆ ಮತ್ತು ವಿಶ್ವಸಮುದಾಯದ ವಿರುದ್ಧವೇ ಹರಿಹಾಯುವ ಪರಿಪಾಠ ಬೆಳೆಸಿಕೊಂಡಿದೆ. ಕಳೆದ ವರ್ಷ ಅದು ವಿಶ್ವಸಂಸ್ಥೆಯ ಮಾನವ ಹಕ್ಕು ಉನ್ನತಾಯೋಗದ (OHCHR) ಜೊತೆ ಸಂಪರ್ಕ ಕಳಚಿಕೊಂಡಿತ್ತು. ಕಳೆದ ವರ್ಷವೇ ಇಸ್ರೇಲ್ ಸರಕಾರವು ಫೆಲೆಸ್ತೀನ್‌ನಲ್ಲಿ ಸಕ್ರಿಯರಾಗಿದ್ದ ವಿಶ್ವಸಂಸ್ಥೆಯ ಮಾನವ ಹಕ್ಕು ಅಧಿಕಾರಿಗಳು ಮತ್ತು ಕಾರ್ಯಕರ್ತರಿಗೆ

ವೀಸಾ ನಿರಾಕರಿಸಿದ್ದು ಮಾತ್ರವಲ್ಲದೆ UNHRCಯ ನಿರ್ದೇಶಕ ಜೇಮ್ಸ್ ಹೀನಾಂ ಸಹಿತ ಹಲವು ಅಧಿಕಾರಿಗಳನ್ನು ದೇಶ ಬಿಟ್ಟು ತೆರಳುವಂತೆ ನಿರ್ಬಂಧಿಸಿತ್ತು. ಅಮೆರಿಕ ಮತ್ತದರ ಕೆಲವು ಮಿತ್ರ ರಾಷ್ಟಗಳ ವೀಟೋ ಅಧಿಕಾರ ಮಾತ್ರವೇ ಹತ್ತಾರು ಬಾರಿ ಇಸ್ರೇಲ್ ಸರಕಾರವನ್ನು ಜಾಗತಿಕ ಬಹಿಷ್ಕಾರದಿಂದ ಮತ್ತು ಅಂತರ್‌ರಾಷ್ಟ್ರೀಯ ಹಸ್ತಕ್ಷೇಪದಿಂದ ರಕ್ಷಿಸಿದ್ದು ಅನ್ಯಥಾ ಅದು ತನ್ನೆಲ್ಲ ಆರ್ಥಿಕ, ತಾಂತ್ರಿಕ ಮತ್ತು ಸೈನಿಕ ಶಕ್ತಿಗಳ ಹೊರತಾಗಿಯೂ ತನ್ನದೇ ಅಪರಾಧಗಳ ಭಾರದಡಿಯಲ್ಲಿ ಎಂದೋ ಕುಸಿದು ಬೀಳುತ್ತಿತ್ತು.

❖ ❖ ❖

## 2

# ಫೆಲೆಸ್ತೀನ್ ನಿರಾಶ್ರಿತರ ಸಮಸ್ಯೆ

ಇಸ್ರೇಲ್ ಎಂಬ ನೂತನ ದೇಶದ ಸ್ಥಾಪನೆಯ ಮೂಲಕ ಜಗತ್ತಿನ 150ಕ್ಕೂ ಹೆಚ್ಚಿನ ದೇಶಗಳಲ್ಲಿ ತೀರಾ ಅಭದ್ರ ಸ್ಥಿತಿಯಲ್ಲಿದ್ದ ಲಕ್ಷಾಂತರ ಯಹೂದಿಗಳಿಗೆ ಭದ್ರ ನೆಲೆ ದೊರೆಯಿತು ಎಂಬುದು ನಿಜಕ್ಕೂ ಒಂದು ನೆಮ್ಮದಿಯ ವಿಚಾರ. ಆದರೆ ಈ ಬೆಳವಣಿಗೆಯ ಇನ್ನೊಂದು ಮುಖ ಭಾರೀ ಭಯಾನಕವಾಗಿದೆ. ಒಂದು ಪಂಗಡಕ್ಕೆ ಭದ್ರ ನೆಲೆ ಒದಗಿಸುವ ಈ ಪ್ರಕ್ರಿಯೆಯ ಹಿಂದೆ ಅಡಗಿದ್ದ ನೀಚ ಸಂಚುಗಳು ಆಧುನಿಕ ಜಗತ್ತಿನ ಅತಿದೊಡ್ಡ ಪ್ರಮಾಣದ ನಿರಾಶ್ರಿತ ಬಿಕ್ಕಟ್ಟಿಗೆ ಜನ್ಮ ನೀಡಿವೆ.

150ಕ್ಕೂ ಹೆಚ್ಚಿನ ದೇಶಗಳಿಂದ ಬಂದ ವಲಸಿಗ ಯಹೂದಿಗಳಿಗೆ ಆಶ್ರಯ ನೀಡಿದ ಇಸ್ರೇಲ್‌ನ ಒಟ್ಟು ಜನಸಂಖ್ಯೆ ಕೇವಲ 90 ಲಕ್ಷದ ಆಸುಪಾಸಿನಲ್ಲಿದೆ. ಆದರೆ ಈ ದೇಶದ ಅಮಾನುಷ ಜನಾಂಗವಾದಿ ಧೋರಣೆಗಳಿಂದಾಗಿ, ಇವರು ತಮ್ಮ ಆಶ್ರಯಧಾಮವಾಗಿಸಿಕೊಂಡ ಫೆಲೆಸ್ತೀನ್‌ನಲ್ಲಿ ನಿರಾಶ್ರಿತರಾದ ಫೆಲೆಸ್ತೀನ್ ನಾಗರಿಕರ ಸಂಖ್ಯೆ 1.3 ಕೋಟಿಗಿಂತ ಅಧಿಕವಿದೆ! ಇಸ್ರೇಲ್ ಸರಕಾರವು 150ಕ್ಕೂ ಹೆಚ್ಚಿನ ದೇಶಗಳಿಂದ ವಲಸೆ ಬಂದ ಯಹೂದಿಗಳಿಗೆ ಭದ್ರ ನೆಲೆ ಒದಗಿಸುವ ತನ್ನ ಯೋಜನೆಯನ್ನು ಯಾವ ರೀತಿಯಲ್ಲಿ ಅನುಷ್ಠಾನಿಸಿತೆಂದರೆ, ಈ ಪ್ರಕ್ರಿಯೆಯಲ್ಲಿ, ಪರಂಪರಾಗತವಾಗಿ ಹಲವು ತಲೆಮಾರು

ಗಳಿಂದ ಫೆಲೆಸ್ತೀನ್‌ನಲ್ಲಿ ನೆಲೆಸಿದ್ದ 1.3 ಕೋಟಿಗೂ ಹೆಚ್ಚಿನ ಅರಬ್ ಮೂಲನಿವಾಸಿಗಳು ತಮ್ಮದೇ ನೆಲದಿಂದ ನಿರ್ವಸಿತರಾಗಿ ಬಿಟ್ಟರು. ಅವರೆಲ್ಲಾ ಹತ್ತಾರು ದೇಶಗಳಲ್ಲಿ ದಿಕ್ಕಿಲ್ಲದೆ ಅಲೆದಾಡುವ ಅಥವಾ ನಿರಾಶ್ರಿತ ಶಿಬಿರಗಳಲ್ಲಿ ಬದುಕಬೇಕಾದ ಹೀನಾಯ ಸ್ಥಿತಿಗೆ ತಳ್ಳಲ್ಪಟ್ಟರು. 1948ರ ಯುದ್ಧದ ಬಳಿಕ ಸುಮಾರು 9 ಲಕ್ಷ ಅರಬ್ ಫೆಲೆಸ್ತೀನಿಗಳನ್ನು ನಾಡಿನಿಂದ ಹೊರದಬ್ಬಿದ್ದ ಇಸ್ರೇಲ್ 1967ರ ಯುದ್ಧದ ಬಳಿಕ ಮತ್ತೆ ಸುಮಾರು 3 ಲಕ್ಷ ಅರಬ್ ನಾಗರಿಕರನ್ನು ಹೊರದಬ್ಬಿತ್ತು.

ಇಂದು ಫೆಲೆಸ್ತೀನ್ ಮೂಲದ ನಿರಾಶ್ರಿತರು ಜಗತ್ತಿನ ಅತಿದೊಡ್ಡ ನಿರಾಶ್ರಿತ ಮತ್ತು ನಿರ್ವಸಿತ ಸಮುದಾಯವಾಗಿದ್ದಾರೆ. ಮಾತ್ರವಲ್ಲ ಏಳು ದಶಕಗಳ ಅವಧಿಯಲ್ಲಿ ಅವರ ಸಮಸ್ಯೆ ಬಗೆಹರಿಯುವ ಬದಲು ಮತ್ತಷ್ಟು ಹಿಗ್ಗುತ್ತಾ, ಜಟಿಲವಾಗುತ್ತಾ ಹೋಗಿದೆ.

ಫೆಲೆಸ್ತೀನ್ ನಿರಾಶ್ರಿತರ ಒಂದು ದೊಡ್ಡ ಸಂಖ್ಯೆ ಜೋರ್ಡನ್, ಲೆಬನಾನ್, ಸಿರಿಯಾ ಪಶ್ಚಿಮ ದಂಡೆ ಮತ್ತು ಗಾಝಾ ಪಟ್ಟಿಯಲ್ಲಿರುವ ಸುಮಾರು 70 ರಷ್ಟು ಬೃಹತ್ ನಿರಾಶ್ರಿತ ಶಿಬಿರಗಳಲ್ಲಿ ಬದುಕುತ್ತಿದ್ದಾರೆ. ದುಬಾರಿ, ವಿಲಾಸಿ ಸವಲತ್ತುಗಳಿಂದ ಮಾತ್ರವಲ್ಲ, ಬದುಕಿನ ತೀರಾ ಮೂಲಭೂತ ಸೌಲಭ್ಯಗಳಿಂದಲೂ ಅವರು ವಂಚಿತರಾಗಿದ್ದಾರೆ. ಕಾಲಕಳೆದಂತೆ, ಕಾರ್ಗತ್ತಲಿನ ಪರ್ವ ದೀರ್ಘ ವಾಗುತ್ತಾ ಹೋದಂತೆ, ತಮ್ಮ ಹಾಗೂ ತಮ್ಮ ಮಕ್ಕಳ ಭವಿಷ್ಯದ ಕುರಿತು ಅವರು ಹೆಚ್ಚೆಚ್ಚು ನಿರಾಶರಾಗುತ್ತಿದ್ದಾರೆ.

2019ರ ಮಾಹಿತಿ ಪ್ರಕಾರ ತಮ್ಮ ಹೆಸರುಗಳನ್ನು 'ಫೆಲೆಸ್ತೀನ್ ನಿರಾಶ್ರಿತರು' ಎಂದು UNRWA ಎಂಬ ವಿಶ್ವಸಂಸ್ಥೆಯ ನಿರಾಶ್ರಿತ ಪರಿಹಾರ ವಿಭಾಗದಲ್ಲಿ ನೋಂದಾಯಿಸಿ ಕೊಂಡಿರುವವರ ಸಂಖ್ಯೆ 56 ಲಕ್ಷಕ್ಕಿಂತಲೂ ಅಧಿಕವಿದೆ. 'ನಿರಾಶ್ರಿತ' ಎಂಬ ಪದದ ವ್ಯಾಖ್ಯಾನದ ಬಗ್ಗೆ ವಿಶ್ವಸಂಸ್ಥೆ, ಮಾನವ ಹಕ್ಕು ಸಂಸ್ಥೆಗಳು ಮತ್ತು ಜಾಗತಿಕ ಮಟ್ಟದ ವಿವಿಧ ಕಾನೂನು ಸಮಿತಿಗಳ ನಡುವೆ ಇರುವ ಭಿನ್ನತೆಯಿಂದಾಗಿ ಅನೇಕ ನೈಜ ನಿರಾಶ್ರಿತರು, ನಿರಾಶ್ರಿತರೆಂಬ ಸ್ಥಾನಮಾನದಿಂದಲೂ ವಂಚಿತರಾಗಿದ್ದಾರೆ.

### ವಲಸಿಗ ನಿವಾಸಗಳ ವಿವಾದ

ಬೇರೆ ವಿಷಯಗಳಲ್ಲಿ ಇಸ್ರೇಲ್ ಬಗ್ಗೆ ಸಹಾನುಭೂತಿ ತೋರುವವರು ಕೂಡಾ, ಯಹೂದಿ ವಲಸಿಗರನ್ನು ಆಕ್ರಮಿತ ಅರಬ್ ಪ್ರದೇಶಗಳಲ್ಲಿ ವಾಸಗೊಳಿಸುವ ವಿಷಯದಲ್ಲಿ ಇಸ್ರೇಲ್ ಸರಕಾರ ತಾಳಿರುವ ಉದ್ಧಟ ಧೋರಣೆಯನ್ನು ಕಟುವಾಗಿ ಖಂಡಿಸುತ್ತಾರೆ. ಇಸ್ರೇಲ್ ಸರಕಾರವು ಆಕ್ರಮಿತ ಫೆಲೆಸ್ತೀನ್

ಪ್ರದೇಶಗಳಲ್ಲಿ ಸ್ಥಳೀಯರ ಜಮೀನುಗಳನ್ನು ಬಲವಂತವಾಗಿ ಕಿತ್ತುಕೊಂಡು ಅಲ್ಲಿ ವಲಸಿಗರಿಗಾಗಿ ಮೀಸಲು ಬಡಾವಣೆಗಳನ್ನು ಕಟ್ಟುತ್ತಿದೆ. ಕಳೆದ ವರ್ಷದ ಮಾಹಿತಿ ಪ್ರಕಾರ ಇಸ್ರೇಲ್ ಸರಕಾರವು ಆಕ್ರಮಿತ ಪಶ್ಚಿಮದಂಡೆ ಮತ್ತು ಪೂರ್ವ ಜೆರುಸಲೇಮ್‌ನಲ್ಲಿ ಬಲವಂತವಾಗಿ ಅರಬ್ ನಾಗರಿಕರ ಜಮೀನುಗಳನ್ನು ಕಿತ್ತುಕೊಂಡು ಆ ಸ್ಥಳಗಳಲ್ಲಿ ಯಹೂದಿ ವಲಸಿಗರಿಗಾಗಿ 250ಕ್ಕೂ ಹೆಚ್ಚು ಬಡಾವಣೆಗಳನ್ನು ನಿರ್ಮಿಸಿದೆ ಮತ್ತು ಅಲ್ಲಿ ಸುಮಾರು 7 ಲಕ್ಷದಷ್ಟು ಯಹೂದಿ ವಲಸಿಗರನ್ನು ವಾಸಗೊಳಿಸಿದೆ. ಈ ರೀತಿಯ ಒಂದೊಂದು ಬಡಾವಣೆಯನ್ನು ನಿರ್ಮಿಸಿದ ಬಳಿಕವೂ ಇಸ್ರೇಲ್ ಸರಕಾರವು ಆ ಬಡಾವಣೆಗಳಿಗೆ ಭದ್ರತೆ ಒದಗಿಸುವ ಹೆಸರಲ್ಲಿ ಅದರ ಸುತ್ತ ಮುತ್ತಲ ಪ್ರದೇಶಗಳ ಹಾಗೂ ಅಲ್ಲಿನ ಅರಬ್ ನಿವಾಸಿಗಳ ಮೇಲೆ ಹಲವು ಕಠಿಣ ನಿರ್ಬಂಧಗಳನ್ನು ಹೇರುತ್ತಿದೆ.

**ಇಸ್ರೇಲ್ ಚಾಲಿತ ಗಡಿ ಗೊಂದಲ**

ಜಗತ್ತಿನ ಎಲ್ಲ ದೇಶಗಳಿಗೆ ಒಂದು ನಿರ್ದಿಷ್ಟ ಗಡಿ ಇರುತ್ತದೆ. ಹೆಚ್ಚೆಂದರೆ ಗಡಿಯ ಕೆಲವು ಭಾಗಗಳ ಕುರಿತು ಮಾತ್ರ ವಿವಾದವಿರುತ್ತದೆ. ಇಸ್ರೇಲ್‌ಗೆ ಈ ನಿಯಮ ಅನ್ವಯಿಸುವುದಿಲ್ಲ. ಏಳು ದಶಕಗಳ ಹಿಂದೆ ಇಸ್ರೇಲ್ ಎಂಬ ದೇಶದ ಸ್ಥಾಪನೆಯಾಗಿರುವುದೇ ತೀರಾ ವಿವಾದಾಸ್ಪದ ರೀತಿಯಲ್ಲಿ, ಅನೈತಿಕವಾಗಿ ಆಕ್ರಮಿಸಿಕೊಳ್ಳಲಾದ ಅಕ್ರಮ ಗಡಿಗಳ ಒಳಗೆ. ಅಂದಿನಿಂದ ಈ ವರೆಗೂ ಅದು ತನ್ನ ಅಕ್ರಮ ಗಡಿಗಳನ್ನು ಅನೈತಿಕ ಮತ್ತು ಅಕ್ರಮ ವಿಧಾನಗಳಿಂದ ವಿಸ್ತರಿಸುತ್ತಾ ಬಂದಿದೆ. ಇದು ಏಕಕಾಲದ ಪ್ರಕ್ರಿಯೆಯೇನಲ್ಲ. ಪದೇ ಪದೇ ನಡೆಯುತ್ತಲೇ ಇರುವ ಸತತ ಪ್ರಕ್ರಿಯೆ. ಇಸ್ರೇಲ್ ಗಡಿಗಳು ಸದಾ ಚಲನಶೀಲವಾಗಿರುತ್ತವೆ. ಬದಲಾಗುತ್ತಲೇ ಇರುತ್ತವೆ. ಇಂದಿನ ಗಡಿ ನಿನ್ನೆಗಿಂತ ಮತ್ತು ನಾಳೆಯ ಗಡಿ ಇಂದಿಗಿಂತ ಭಿನ್ನವಾಗಿರುತ್ತದೆ. ಆದ್ದರಿಂದಲೇ ಇಸ್ರೇಲ್‌ನ ಗಡಿ ಯಾವುದೆಂಬುದನ್ನು ನಿರ್ದಿಷ್ಟವಾಗಿ ಹೇಳಲು ಯಾರಿಗೂ ಸಾಧ್ಯವಾಗುವುದಿಲ್ಲ. ಒಂದು ವಿಷಯ ಮಾತ್ರ ಸದಾ ನಿಜವಾಗಿರುತ್ತದೆ. ಅದೇನೆಂದರೆ, ಇಸ್ರೇಲ್ ತನ್ನದೆಂದು ಹೇಳಿಕೊಳ್ಳುವ ಗಡಿಯು ಅಂತರ್‌ರಾಷ್ಟ್ರೀಯ ಸಮುದಾಯವು ಅಂಗೀಕರಿಸುವ ಗಡಿಗಿಂತ ಸದಾ ಹಲವು ಪಟ್ಟು ದೊಡ್ಡದಾಗಿರುತ್ತದೆ.

ಮಿಲಿಟರಿ ಬಲ ಬಳಸಿ ಇನ್ನೊಬ್ಬರ ಗಡಿಯೊಳಗಿನ ಪ್ರದೇಶಗಳನ್ನು ಆಕ್ರಮಿಸಿಕೊಂಡು, ಅದನ್ನು ತನ್ನ ಇತರ ಹಿತಾಸಕ್ತಿಗಳಿಗಾಗಿ ಚೌಕಾಶಿಯ ಸಾಧನವಾಗಿ ಬಳಸುವುದು ಅದರ ಹಳೆಯ ಚಾಳಿಯಾಗಿದೆ.

ಪ್ರಥಮ ಜಾಗತಿಕ ಯುದ್ಧದ ವೇಳೆ ಎಲೈಡ್ ಫೋರ್ಸಸ್ (Allied Forces) ಗಳ ಕೈಯಲ್ಲಿ ಉಸ್ಮಾನಿಯಾ ಸಾಮ್ರಾಜ್ಯವು ಹೀನಾಯ ಸೋಲನ್ನುಂಡಿತು.

ಆಗ ಹಲವು ಶತಮಾನಗಳಿಂದ ಟರ್ಕಿ ಮೂಲದ ಉಸ್ಮಾನಿಯಾ ಸಾಮ್ರಾಜ್ಯದ ಅಧೀನದಲ್ಲಿದ್ದ ಫೆಲೆಸ್ತೀನ್ ಎಂಬ ಅರಬ್ ದೇಶ 'ಎಲೈಡ್ ಫೋರ್ಸಸ್'ಗಳ ವಶಕ್ಕೆ ಹೋಯಿತು. ಅವರು ಫೆಲೆಸ್ತೀನ್‌ನ ಉಸ್ತುವಾರಿಯನ್ನು, ತಮ್ಮ ಒಕ್ಕೂಟದ ಭಾಗವಾಗಿದ್ದ ಬ್ರಿಟನ್ ಸಾಮ್ರಾಜ್ಯಕ್ಕೆ ವಹಿಸಿಕೊಟ್ಟರು. ಆದರೆ ಅದು ಶಾಶ್ವತ ಉಸ್ತುವಾರಿಯಾಗಿರದೆ, 1948 ಮೇ ತಿಂಗಳ ತನಕ ಎಂಬ ಗಡುವಿನೊಂದಿಗೆ ನೀಡಲಾದ ಉಸ್ತುವಾರಿಯಾಗಿತ್ತು. ಪ್ರಸ್ತುತ ಗಡು ಮುಗಿಯುವ ಮುನ್ನವೇ ಆ ನಾಡಿನ ಆಡಳಿತ ಚುಕ್ಕಾಣಿಯನ್ನು ಅದರ ಅಸಲಿ ಪ್ರಜೆಗಳಾದ ಫೆಲೆಸ್ತೀನಿಗಳಿಗೆ ವರ್ಗಾಯಿಸಬೇಕಾದುದು ಬ್ರಿಟನ್‌ನ ಕರ್ತವ್ಯವಾಗಿತ್ತು. ಆದರೆ ಅದು ಫೆಲೆಸ್ತೀನ್‌ನ ಒಂದು ಭಾಗವನ್ನು, ಯಹೂದಿ ರಾಷ್ಟ್ರವೊಂದರ ಸ್ಥಾಪನೆಗಾಗಿ ಯಹೂದಿ ಸಮುದಾಯಕ್ಕೆ ಒಪ್ಪಿಸಲು ನಿರ್ಧರಿಸಿತು. 1917ರಲ್ಲಿ ಬಾಲ್ ಫೋರ್ ಪ್ರಕಟನೆಯ ಮೂಲಕ ಬ್ರಿಟನ್ ತನ್ನ ನಿರ್ಧಾರವನ್ನು ಜಗತ್ತಿಗೆ ತಿಳಿಸಿತು. ಆಗ ಬ್ರಿಟನ್‌ನ ಘೋಷಿತ ಉದ್ದೇಶ ಯಹೂದಿಗಳು ಸಾಂಪ್ರದಾಯಿಕವಾಗಿ ತಮ್ಮ ಪಾವನ ಭೂಮಿ ಎಂದು ಕರೆಯುತ್ತಿದ್ದ, ಜೋರ್ಡನ್ ನದಿಯ ಪಶ್ಚಿಮಕ್ಕಿದ್ದ ಒಂದು ಸೀಮಿತ ಭೂಭಾಗವನ್ನು ಯಹೂದಿಗಳಿಗೆ ಒಪ್ಪಿಸುವುದಾಗಿತ್ತು. "ಬೇರಾವುದೇ ಸಮುದಾಯದ ಧಾರ್ಮಿಕ ಅಥವಾ ನಾಗರಿಕ ಅಧಿಕಾರಗಳಿಗೆ ಯಾವುದೇ ಕುಂದು ಬರದಂತೆ ಈ ಯೋಜನೆಯನ್ನು ಅನುಷ್ಠಾನಿಸಬೇಕು" ಎಂಬ ಷರತ್ತಿನೊಂದಿಗೆ ಅಂದಿನ 'ಲೀಗ್ ಆಫ್ ನೇಶನ್ಸ್' ಈ ಯೋಜನೆಗೆ ಅನುಮೋದನೆ ನೀಡಿತ್ತು.

**1948ರ ಗಡಿ**

ಫೆಲೆಸ್ತೀನ್ ಮೇಲೆ ಮೂರು ದಶಕಗಳಷ್ಟು ದೀರ್ಘ ಕಾಲ ಜಾರಿಯಲ್ಲಿದ್ದ ಬ್ರಿಟಿಷ್ ಆಡಳಿತಾವಧಿಯು ಮುಗಿಯುತ್ತಾ ಬಂದಾಗ, 1947ರಲ್ಲಿ ವಿಶ್ವಸಂಸ್ಥೆಯು ಒಂದು ಯೋಜನೆಯನ್ನು ರೂಪಿಸಿತು. ಈ ವಿಭಾಜಕ ಯೋಜನೆಯ ಪ್ರಕಾರ ಫೆಲೆಸ್ತೀನ್‌ನ ಒಂದು ಭಾಗವನ್ನು ಸ್ವತಂತ್ರ ಯಹೂದಿ ದೇಶವಾಗಿ ಮತ್ತು ಇನ್ನೊಂದು ಭಾಗವನ್ನು ಸ್ವತಂತ್ರ ಅರಬ್ ದೇಶವಾಗಿ ವಿಂಗಡಿಸಲು ಮತ್ತು ಜೆರುಸಲೇಮ್ ನಗರವನ್ನು ವಿಶ್ವಸಂಸ್ಥೆಯ ಮೇಲ್ವಿಚಾರಣೆಯಲ್ಲಿರುವ ಒಂದು ಅಂತರ್‌ರಾಷ್ಟ್ರೀಯ ಆಡಳಿತ ಮಂಡಳಿಗೆ ಒಪ್ಪಿಸುವ ನಿರ್ಧಾರ ಕೈಗೊಳ್ಳಲಾಯಿತು. ಯಹೂದಿಗಳು ಈ ಪ್ರಸ್ತಾವವನ್ನು ಸ್ವಾಗತಿಸಿದರು. ಆದರೆ ಅರಬ್ ಪಕ್ಷಗಳು ತಮ್ಮ ಜನಸಂಖ್ಯೆಯ ಅನುಪಾತಕ್ಕನುಸಾರ ತಮಗೆ ಹೆಚ್ಚಿನ ಭೂಭಾಗ ನೀಡಬೇಕೆಂದು ಆಗ್ರಹಿಸಿ ಈ ಪ್ರಸ್ತಾವವನ್ನು ತಿರಸ್ಕರಿಸಿದವು. ಪೂರ್ವ ನಿರ್ಧಾರದಂತೆ 1948 ಮೇ ತಿಂಗಳಲ್ಲಿ ಬ್ರಿಟನ್ ಫೆಲೆಸ್ತೀನ್ ಅನ್ನು

ಬಿಟ್ಟುಕೊಟ್ಟಿತು. ಇದರ ಬೆನ್ನಿಗೇ ಝಿಯೋನಿಸ್ಟ್ ಯಹೂದಿ ನಾಯಕರು ತಮ್ಮ ಇಸ್ರೇಲ್ ಸರಕಾರದ ಸ್ಥಾಪನೆಯನ್ನು ಘೋಷಿಸಿದರು. ಫೆಲೆಸ್ತೀನ್‌ನ ಅರಬರು ಮತ್ತು ನೆರೆಯ ಜೋರ್ಡನ್, ಇರಾಕ್, ಸಿರಿಯಾ, ಈಜಿಪ್ಟ್ ಮತ್ತು ಲಿಬಿಯಾ ಎಂಬ ಐದು ನೆರೆಯ ಅರಬ್ ದೇಶಗಳು ಇಸ್ರೇಲ್‌ನ ಸ್ಥಾಪನೆಯನ್ನು ಮತ್ತು ಅದು ತನ್ನದೆಂದು ಘೋಷಿಸಿಕೊಂಡಿದ್ದ ಗಡಿಗಳನ್ನು ವಿರೋಧಿಸಿದವು. ಪರಿಣಾಮವಾಗಿ ಒಂದು ದೊಡ್ಡ ಪ್ರಮಾಣದ ಯುದ್ಧ ಸ್ಫೋಟಿಸಿತು. 'ನವಜಾತ ಇಸ್ರೇಲ್‌ನ ಸ್ವಾತಂತ್ರ್ಯ ಸಮರ' ಎಂದೇ ಗುರುತಿಸಲಾದ ಈ ಯುದ್ಧದಲ್ಲಿ ಇಸ್ರೇಲ್‌ಗೆ ಪಶ್ಚಿಮದ ದೇಶಗಳ, ವಿಶೇಷವಾಗಿ ಬ್ರಿಟನ್ ಮತ್ತು ಅಮೆರಿಕದ ಸಹಾನುಭೂತಿ ಮಾತ್ರವಲ್ಲದೆ ಎಲ್ಲ ಬಗೆಯ ಮಾರ್ಗದರ್ಶನ ಮತ್ತು ನೆರವೂ ಪ್ರಾಪ್ತವಾಯಿತು.

**1949ರ ಗಡಿ**

ಎಂಟು ತಿಂಗಳ ಬಳಿಕ, 1949 ಜುಲೈಯಲ್ಲಿ ಯುದ್ಧ ಮುಗಿದಾಗ ಇಸ್ರೇಲ್ ಗಡಿಗಳು, ಅದು ಈ ಹಿಂದೆ ಘೋಷಿಸಿದ್ದ ವ್ಯಾಪ್ತಿಗಿಂತ ಹಲವು ಪಟ್ಟು ಹೆಚ್ಚು ವಿಸ್ತಾರವಾಗಿ ಬಿಟ್ಟಿದ್ದವು. ವಿಶ್ವಸಂಸ್ಥೆಯ ಯೋಜನೆಯಲ್ಲಿ ಅರಬರಿಗೆಂದು ಮೀಸಲಿಡಲಾಗಿದ್ದ ಹಲವು ಭೂಭಾಗಗಳು ಇಸ್ರೇಲ್‌ನ ವಶವಾದವು. ನಿಜವಾಗಿ ಈ ಯುದ್ಧದ ಕೊನೆಯಲ್ಲಿ ಐತಿಹಾಸಿಕ ಫೆಲೆಸ್ತೀನ್‌ನ 78ಶೇ. ಭಾಗವನ್ನು ಇಸ್ರೇಲ್ ಆಕ್ರಮಿಸಿಕೊಂಡಿತ್ತು. ಕೇವಲ 22ಶೇ. ಭಾಗ ಮಾತ್ರ ಅರಬಿಗಳ ವಶದಲ್ಲಿ ಉಳಿಯಿತು. ಆ 22ಶೇ. ಭಾಗ ಕೂಡಾ ಅವಿಭಕ್ತ ಭೂಭಾಗವಾಗಿರಲಿಲ್ಲ. ಗಾಝಾ ಎಂಬ ಅದರ ಒಂದು ತುಂಡು ದೇಶದ ಪೂರ್ವ ಭಾಗದಲ್ಲಿದ್ದರೆ, ವೆಸ್ಟ್ ಬ್ಯಾಂಕ್ ಅಥವಾ ಪಶ್ಚಿಮ ದಂಡೆ ಎಂಬ ಇನ್ನೊಂದು ಭಾಗವು ಪಶ್ಚಿಮ ಭಾಗದಲ್ಲಿತ್ತು. ಈ ರೀತಿ ತಾನು ಜನಿಸಿದ ವರ್ಷವೇ ಇಸ್ರೇಲ್ ತನ್ನ ಘೋಷಿತ ಗಡಿಗಳನ್ನು ಗಣನೀಯವಾಗಿ ವಿಸ್ತರಿಸಿಕೊಂಡಿತು. ಆದರೆ ಆಪೈಕಿ ಹೆಚ್ಚಿನ ಭಾಗವು ಅಕ್ರಮವಾಗಿತ್ತು. ಅದರ ಬಲವಂತದ ವಿಸ್ತೃತ ಗಡಿಗೆ ಅಂತರ್‌ರಾಷ್ಟ್ರೀಯ ಮಾನ್ಯತೆ ಇರಲಿಲ್ಲ. ಯುದ್ಧದಲ್ಲಿ ಫೆಲೆಸ್ತೀನ್‌ನ ಅರಬ್ ನಾಗರಿಕರು ಭಾರೀ ನಾಶನಷ್ಟಗಳನ್ನು ಎದುರಿಸಬೇಕಾಯಿತು. ಸುಮಾರು 600 ಅರಬ್ ಗ್ರಾಮಗಳು ಧ್ವಂಸಗೊಂಡವು. ಅವರ ಎಷ್ಟೋ ಐತಿಹಾಸಿಕ ಸ್ಮಾರಕಗಳು ನೆಲಸಮವಾದವು. ಸುಮಾರು 9 ಲಕ್ಷ ಫೆಲೆಸ್ತೀನ್ ನಾಗರಿಕರು ನಿರಾಶ್ರಿತ ಹಾಗೂ ನಿರ್ವಸಿತರಾಗಿ ಬಿಟ್ಟರು.

ವಿಪರ್ಯಾಸವೇನೆಂದರೆ, ಯುರೋಪಿನಲ್ಲಿ ಯಹೂದಿಗಳ ಬದುಕು ಅಭದ್ರವಾಗಿ ಅವರು ನಿರ್ವಸಿತರಾಗಬೇಕಾಯಿತು ಎಂದು ಹೇಳುತ್ತಾ ಅದರ ಆಧಾರದಲ್ಲೇ ಜಗತ್ತಿನ ಅನುಕಂಪ ಸಂಪಾದಿಸಿದ ಯಹೂದಿ ಸಮುದಾಯದ ಝಿಯೋನಿಸ್ಟ್ ನಾಯಕರು ತಮಗೆ ಆಶ್ರಯ ನೀಡಿದ ಫೆಲೆಸ್ತೀನ್‌ನಲ್ಲಿ

ಅಲ್ಲಿನ ಮೂಲನಿವಾಸಿ ಅರಬ್ ಜನತೆಯನ್ನು ಅಲ್ಲಿಂದ ನಿರ್ವಸಿತರಾಗಿಸಿ ಹೊರದಬ್ಬುವುದನ್ನೇ ತಮ್ಮ ಪ್ರಥಮ ಧ್ಯೇಯವಾಗಿಸಿಕೊಂಡರು. ಅವರು, ತಮಗೆ ಸೇರಿದ್ದೆಂದು ತಾವೇ ಗುರುತಿಸಿದ್ದ 'ಪವಿತ್ರಭೂಮಿ' ತಮಗೆ ದೊರೆತ ಬಳಿಕವೂ ತೃಪ್ತರಾಗದೆ, ಫೆಲೆಸ್ತೀನ್ ನ ಎಷ್ಟು ಭಾಗ ದೊರೆತರೂ ವಿರಮಿಸದೆ, ಉಳಿದ ಭಾಗಗಳನ್ನು ಕಬಳಿಸುವ ಮತ್ತು ಅಲ್ಲಿನ ಸಕ್ರಮ ನಿವಾಸಿಗಳನ್ನು ಅಲ್ಲಿಂದ ಹೊರದಬ್ಬುವ ಅಥವಾ ಅವರನ್ನು ನಿರಾಶ್ರಿತ ಜೀತದಾಳುಗಳಾಗಿಸುವ ಕಾಯಕದಲ್ಲಿ ತೊಡಗಿದರು.

### 1967 – 6 ದಿನಗಳ ಪ್ರಳಯ – ಹೊಸ ಗಡಿ

1967 ಜೂನ್ 5ರ ಮುಂಜಾನೆ ಇಸ್ರೇಲ್ ವಾಯುಸೇನೆ ಏಕಕಾಲದಲ್ಲಿ ತನ್ನ ನೆರೆಯ ಈಜಿಪ್ಟ್ ದೇಶದ ಸಿನಾಯ್ ಮತ್ತು ಸುಯೆಜ್ ಪ್ರಾಂತದ ಪ್ರಮುಖ ವೈಮಾನಿಕ ನೆಲೆಗಳನ್ನು ಗುರಿಯಾಗಿಟ್ಟು ಹಠಾತ್ ವಾಯು ದಾಳಿ ನಡೆಸಿತು. ಪ್ರಳಯ ಸದೃಶವಾಗಿದ್ದ ಪ್ರಸ್ತುತ ವ್ಯಾಪಕ ಕಾರ್ಯಾಚರಣೆಯ ಪರಿಣಾಮವಾಗಿ ಈಜಿಪ್ಟ್ ದೇಶದ ವಾಯುಪಡೆ ಬಹುತೇಕ 90ಶೇ. ನಿಷ್ಕ್ರಿಯವಾಗಿ ಬಿಟ್ಟಿತು. ಇದರೊಂದಿಗೆ ಇಸ್ರೇಲ್ ಸೇನೆಗೆ ಹೆಚ್ಚಿನ ಪ್ರತಿರೋಧವಿಲ್ಲದೆ ಗಾಝಾ ಪಟ್ಟಿ ಮತ್ತು ಪಶ್ಚಿಮ ದಂಡೆಯ ಸಹಿತ ಐತಿಹಾಸಿಕ ಫೆಲೆಸ್ತೀನ್ ಅನ್ನು ಸಂಪೂರ್ಣವಾಗಿ ಆಕ್ರಮಿಸಿಕೊಳ್ಳಲು ಮಾತ್ರವಲ್ಲದೆ, ಹೆಚ್ಚುವರಿಯಾಗಿ ಈಜಿಪ್ಟ್‌ನ ಅಧೀನವಿದ್ದ ಸಿನಾಯ್ ಪರ್ಯಾಯ ದ್ವೀಪವನ್ನು ವಶಪಡಿಸಿಕೊಳ್ಳಲು ಸಾಧ್ಯವಾಯಿತು. ಅದರ ಒಂದು ಭಾಗವನ್ನು ಇಸ್ರೇಲ್ 1956ರಲ್ಲೇ ಬ್ರಿಟನ್ ಹಾಗೂ ಫ್ರಾನ್ಸ್‌ಗಳ ಸಹಭಾಗಿತ್ವದೊಂದಿಗೆ ನಡೆಸಲಾದ ಒಂದು ಕ್ಷಿಪ್ರ ಕಾರ್ಯಾಚರಣೆಯ ಮೂಲಕ ವಶಪಡಿಸಿಕೊಂಡಿತ್ತು. (ಮುಂದೆ 1978 ರಲ್ಲಿ ಇಸ್ರೇಲ್ ಮತ್ತು ಈಜಿಪ್ಟ್ ಮಧ್ಯೆ ನಡೆದ ಒಪ್ಪಂದವೊಂದರ ಪ್ರಕಾರ ಇಸ್ರೇಲ್ ಸರಕಾರವು ಸಿನಾಯ್ ಪ್ರಾಂತ ಸೇರಿದಂತೆ ತನ್ನ ವಶವಿದ್ದ ಈಜಿಪ್ಟ್‌ನ ಎಲ್ಲ ಭೂಭಾಗಗಳನ್ನು ಬಿಟ್ಟುಕೊಟ್ಟಿತು). ಆರು ದಿನಗಳ ಈ ಯುದ್ಧದ ಮೂಲಕ ಇಸ್ರೇಲ್‌ಗೆ ಕೇವಲ ಆರೇ ದಿನಗಳಲ್ಲಿ ತನ್ನಮೂಲ ಗಡಿಯ ಗಾತ್ರವನ್ನು 350ಶೇ. ದಷ್ಟು ಹೆಚ್ಚಿಸಿಕೊಳ್ಳಲು ಸಾಧ್ಯವಾಯಿತು. ಜೂನ್ 5 ರಿಂದ 10ರ ತನಕ ನಡೆದ ಈ ಯುದ್ಧಕ್ಕಾಗಿ ಇಸ್ರೇಲ್ ಭಾರೀ ಪೂರ್ವ ಸಿದ್ಧತೆ ನಡೆಸಿತ್ತು. ಅಮೆರಿಕ ಮತ್ತು ಹಲವು ಯುರೋಪಿಯನ್ ದೇಶಗಳ ನೆರವನ್ನೂ ಮೊದಲೇ ಪಡೆದಿತ್ತು. ಆದರೆ ಈಜಿಪ್ಟ್, ಜೋರ್ಡನ್ ಮತ್ತು ಸಿರಿಯಾ ಎಂಬ ಮೂರು ಅರಬ್ ದೇಶಗಳು ಅಷ್ಟು ದೊಡ್ಡ ಪ್ರಮಾಣದ ಯೋಜಿತ ದಾಳಿಯನ್ನು ನಿರೀಕ್ಷಿಸಿರಲಿಲ್ಲ. ಅದಕ್ಕೆ ಸಿದ್ಧರೂ ಆಗಿರಲಿಲ್ಲ. 1967ರ ಆರುದಿನಗಳ ಯುದ್ಧದ ಬಳಿಕ 1970ರ ತನಕವೂ ಇಸ್ರೇಲ್ ಮತ್ತದರ

ನೆರೆದೇಶಗಳ ನಡುವೆ ಸಣ್ಣಪುಟ್ಟ ಸಂಘರ್ಷಗಳು ನಡೆಯುತ್ತಲೇ ಇದ್ದವು. 1978ರಲ್ಲಿ ನೆರೆಯ ಲೆಬನಾನ್ ಮೇಲೆ ದಾಳಿಗಳ ದೀರ್ಘ ಸರಣಿಯೊಂದನ್ನು ಆರಂಭಿಸಿತು. 1982ರಲ್ಲಿ ಈ ಘರ್ಷಣೆ ಕೊನೆಗೊಂಡಾಗ ಲೆಬನಾನ್‌ನಲ್ಲಿ ಇಸ್ರೇಲ್, ತನ್ನದೇ ಆದ ಭದ್ರತಾ ವಲಯವೊಂದನ್ನು ಸ್ಥಾಪಿಸಿತ್ತು.

## ನ್ಯಾಯದ ಒಡಲಿಗೆ ವೀಟೋ ಕೊಡಲಿ

ಇಸ್ರೇಲ್ ಸರಕಾರದ ಜನಾಂಗವಾದಿ ಧೋರಣೆಗಳು ಮತ್ತು ಫೆಲೆಸ್ತೀನ್ ಮೂಲದ ನಾಗರಿಕರ ವಿಷಯದಲ್ಲಿ ಅದು ಅನುಸರಿಸುತ್ತಿರುವ ತೀವ್ರ ಪಕ್ಷಪಾತ ಮತ್ತು ಅನ್ಯಾಯದ ನೀತಿಗಳನ್ನು ಜಗತ್ತಿನ ಹೆಚ್ಚಿನೆಲ್ಲ ಸಮಾಜ ಮತ್ತು ದೇಶಗಳು ಖಂಡಿಸುತ್ತಲೇ ಬಂದಿವೆ. ವಿಶ್ವಸಂಸ್ಥೆ ಮತ್ತು ವಿವಿಧ ಜಾಗತಿಕ ವೇದಿಕೆಗಳಲ್ಲಿ ಈ ಕುರಿತು ಚರ್ಚೆಗಳು ನಡೆದಾಗಲೆಲ್ಲಾ ಇಸ್ರೇಲ್ ವಿರುದ್ಧ ಭಾರೀ ಆಕ್ರೋಶ ಪ್ರಕಟವಾಗಿದ್ದು, ಅದನ್ನು ಸರಿದಾರಿಗೆ ತರಲು ಅಂತರ್‌ರಾಷ್ಟ್ರೀಯ ದಿಗ್ಬಂಧನ, ಮಿಲಿಟರಿ ಹಸ್ತಕ್ಷೇಪವೇ ಮುಂತಾದ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕೆಂಬ ಆಗ್ರಹವೂ ವ್ಯಕ್ತವಾಗಿದೆ. ಆದರೆ ಜಾಗತಿಕ ಸಮುದಾಯಕ್ಕೆ ಈ ವಿಷಯದಲ್ಲಿ ಔಪಚಾರಿಕ ಖಂಡನಾ ನಿರ್ಣಯಗಳ ಆಚೆ ಯಾವುದೇ ಹೆಜ್ಜೆ ಇಡಲು ಸಾಧ್ಯವಾಗಿಲ್ಲ. ಏಕೆಂದರೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಇಸ್ರೇಲ್ ವಿರುದ್ಧ ಯಾವುದೇ ಪರಿಣಾಮಕಾರಿ ಕ್ರಮಕ್ಕೆ ಚಾಲನೆ ನೀಡುವ ಪ್ರಶ್ನೆ ಬಂದಾಗಲೆಲ್ಲ 'ವೀಟೋ' ಮೂಲಕ ಅದಕ್ಕೆ ತಡೆ ಒಡ್ಡಲಾಗಿದೆ.

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ 5 ರಾಷ್ಟ್ರಗಳಿಗೆ ಶಾಶ್ವತ ಸದಸ್ಯರ ಸ್ಥಾನವಿದೆ. ಯು.ಎಸ್.ಎ, ರಶ್ಯ, ಚೈನಾ, ಬ್ರಿಟನ್ ಮತ್ತು ಫ್ರಾನ್ಸ್ ಎಂಬ ಈ 5 ಶಾಶ್ವತ ಸದಸ್ಯರ ಬಳಿ ವೀಟೋ ಎಂಬೊಂದು ವಿಶೇಷಾಧಿಕಾರವಿದೆ. ಈ ದೇಶಗಳು ಭದ್ರತಾ ಮಂಡಳಿಯಲ್ಲಿ ಬಹುಮತದೊಂದಿಗೆ ಅಂಗೀಕರಿಸಲಾದ ಯಾವುದೇ ನಿರ್ಣಯಕ್ಕೆ ತಡೆಯೊಡ್ಡಲು ತಮ್ಮ ವೀಟೋ ಅಧಿಕಾರವನ್ನು ಪ್ರಯೋಗಿಸಬಹುದು.

ಕೇವಲ ಅಮೆರಿಕ ಅಥವಾ ಯುಎಸ್ಎ ಎಂಬ ಒಂದೇ ಸರಕಾರ 1972 ಮತ್ತು 2018ರ ಮಧ್ಯೆ 44 ಬಾರಿ ಈ ತನ್ನ ವಿಶೇಷಾಸ್ತ್ರವನ್ನು, ಇಸ್ರೇಲ್‌ನ ವಿರುದ್ಧದ ನಿರ್ಣಯಗಳನ್ನು ತಡೆಯಲಿಕ್ಕಾಗಿ ಮತ್ತು ಆಮೂಲಕ ನ್ಯಾಯ ಹಾಗೂ ಮಾನವೀಯ ಹಿತಾಸಕ್ತಿಗಳನ್ನು ಕೊಂದು ಇಸ್ರೇಲ್ ಹಿತಾಸಕ್ತಿಗಳನ್ನು ರಕ್ಷಿಸಲಿಕ್ಕಾಗಿ ಬಳಸಿಕೊಂಡಿದೆ. 2016ರಲ್ಲಿ ಒಮ್ಮೆ ಮಾತ್ರ, ಈ ಕೊಳಕು ಪರಂಪರೆಗೆ ಅಪವಾದ ಸ್ವರೂಪವಾದ ಒಂದು ಘಟನೆ ನಡೆದಿತ್ತು. ಆಗ ಬರಾಕ್ ಒಬಾಮಾ ಅಮೇರಿಕದ ಅಧ್ಯಕ್ಷರಾಗಿದ್ದರು. "ಆಕ್ರಮಿತ ಫೆಲೆಸ್ತೀನ್ ಪ್ರದೇಶಗಳಲ್ಲಿ

ಇಸ್ರೇಲ್ ನಡೆಸುತ್ತಿರುವ, ಯಹೂದಿ ಬಡಾವಣೆಗಳನ್ನು ಕಟ್ಟುವ ಚಟುವಟಿಕೆಗಳು ಅಂತರ್‌ರಾಷ್ಟ್ರೀಯ ಕಾನೂನುಗಳ ಘೋರ ಉಲ್ಲಂಘನೆಯಾಗಿದ್ದು ಅವುಗಳಿಗೆ ಯಾವುದೇ ಕಾನೂನಿನ ಮಾನ್ಯತೆ ಇಲ್ಲ" ಎಂದು ಪ್ರತಿಪಾದಿಸುವ ನಿರ್ಣಯವೊಂದನ್ನು (ಕ್ರಮ ಸಂಖ್ಯೆ – 2334) ಭದ್ರತಾ ಮಂಡಳಿಯಲ್ಲಿ ಮತಕ್ಕೆ ಹಾಕಲಾಗಿತ್ತು. ಈ ನಿರ್ಣಯಕ್ಕೆ ತಡೆ ತರಲು ಇಸ್ರೇಲ್ ಸಾಕಷ್ಟು ಶ್ರಮಿಸಿತ್ತು. ಅಮೆರಿಕ ಸರಕಾರ ಎಂದಿನಂತೆ ವೀಟೋ ಬಳಸಿ ತನ್ನ ರಕ್ಷಣೆಗೆ ನಿಲ್ಲುತ್ತದೆ ಎಂದು ನಿರೀಕ್ಷಿಸಿತ್ತು. ಆದರೆ ಈ ಬಾರಿ ಅಮೆರಿಕ ಈ ವಿಷಯದಲ್ಲಿ ಮತದಾನ ನಡೆಸದಿರುವ ಮೂಲಕ, ನಿರ್ಣಯದ ಅಂಗೀಕಾರಕ್ಕೆ ದಾರಿ ಸುಗಮಗೊಳಿಸಿ ಇಸ್ರೇಲನ್ನು ನಿರಾಶೆಗೊಳಿಸಿತು. ಜಾಗತಿಕ ಸಮುದಾಯದಲ್ಲಿ ಆಶಾವಾದ ಚಿಗುರಿಸಿತು.

ಆದರೆ ಈಗಾಗಲೇ ವಿಶ್ವಸಂಸ್ಥೆಯು ಇಸ್ರೇಲ್ ಧೋರಣೆಗಳನ್ನು ಖಂಡಿಸಿ ಹೊರಡಿಸಿರುವ ನೂರಾರು ನಿರ್ಣಯ ಮತ್ತು ಠರಾವುಗಳು ಇಸ್ರೇಲ್ ಮೇಲಂತೂ ಯಾವುದೇ ಪರಿಣಾಮ ಬೀರಿಲ್ಲ.

## ಎಲ್ಲರ ಜೊತೆ ಯುದ್ಧದ ಅನುಭವ!

ಇಸ್ರೇಲ್‌ನ ಭೂಪಟ ನೋಡಿದರೆ, ಅದರ ಗಡಿಗಳ ಸುತ್ತ ಹಲವು ನೆರೆದೇಶಗಳಿವೆ. ಅದರ ಉತ್ತರಕ್ಕೆ ಲೆಬನಾನ್, ಈಶಾನ್ಯಕ್ಕೆ ಸಿರಿಯಾ, ನೈರುತ್ಯಕ್ಕೆ ಈಜಿಪ್ಟ್ ಮತ್ತು ಪಶ್ಚಿಮಕ್ಕೆ ಮೆಡಿಟರೇನಿಯನ್ ಸಮುದ್ರವಿದೆ. ಈ ಪೈಕಿ ಮೆಡಿಟರೇನಿಯನ್ ಸಮುದ್ರವೊಂದನ್ನು ಬಿಟ್ಟರೆ ಬೇರೆಲ್ಲ ನೆರೆಯವರ ಜೊತೆ ಯುದ್ಧ ಮಾಡಿದ ಅನುಭವ ಇಸ್ರೇಲ್‌ಗಿದೆ.

## ಯಾರ ಬಳಿ ಎಷ್ಟು ನೆಲವಿದೆ?

ಇಸ್ರೇಲ್ ಮತ್ತು ಫೆಲೆಸ್ತೀನ್ ಸೇರಿ ಇಸ್ರೇಲ್‌ನ ನಿಯಂತ್ರಣ ದಲ್ಲಿರುವ ಒಟ್ಟು ಪ್ರದೇಶದ (ಭೂಭಾಗ ಮತ್ತು ಜಲಭಾಗ ಸೇರಿ) ವಿಸ್ತೀರ್ಣ 26,790 ಚದರ ಕಿ.ಮೀ.ಗಳು. (ನಮ್ಮ ಪಕ್ಕದ ಕೇರಳ ರಾಜ್ಯದ ವಿಸ್ತೀರ್ಣಕ್ಕೆ ಹೋಲಿಸಿದರೆ ಇದು ಅದರ ಸುಮಾರು

65 ಶೇ. ದಷ್ಟಾಗುತ್ತದೆ). ಈ ಪೈಕಿ ಇಸ್ರೇಲ್ ಅಕ್ರಮವಾಗಿ ಆಕ್ರಮಿಸಿಕೊಂಡಿರುವ ಗಾಝಾ, ಪಶ್ಚಿಮ ದಂಡೆ ಮತ್ತು ಪೂರ್ವ ಜೆರುಸಲೇಮ್‌ಗಳ ಒಟ್ಟು ವಿಸ್ತೀರ್ಣ 6,020 ಚದರ ಕಿ.ಮೀ. ಗಳು. ಅದರಲ್ಲೂ ಗಾಝಾ ಪಟ್ಟಿಯ ವಿಸ್ತೀರ್ಣ ಕೇವಲ 365 ಚದರ ಕಿ.ಮೀ. (ನಮ್ಮ ಬೆಂಗಳೂರು ನಗರದ ಅರ್ಧ ಭಾಗ). ಈ ಪೈಕಿ ಗಾಝಾ ಪಟ್ಟಿಯ ಜನಸಂಖ್ಯೆ 20 ಲಕ್ಷವಿದ್ದರೆ, ಪಶ್ಚಿಮ ದಂಡೆ ಮತ್ತು ಪೂರ್ವ ಜೆರುಸಲೇಮ್‌ಗಳ ಒಟ್ಟು ಜನಸಂಖ್ಯೆ 30 ಲಕ್ಷ. ಕೇವಲ 365 ಚದರ ಕಿ.ಮೀ. ಪ್ರದೇಶದಲ್ಲಿ 20 ಲಕ್ಷ ಜನ ವಾಸಿಸುತ್ತಿದ್ದಾರೆ. ಅಲ್ಲಿನ ಜೀವನ ಮಟ್ಟ ಹೇಗಿರಬಹುದೆಂಬುದನ್ನು ಊಹಿಸಲಿಕ್ಕೂ ಕಷ್ಟವಿದೆ.

❖ ❖ ❖

3

# ಅತಿ ಸರಳೀಕೃತ ವಿಶ್ಲೇಷಣೆಗಳು

**ಇಸ್ರೇಲ್‌ನಲ್ಲಿ ಇಂದು ನಡೆಯುತ್ತಿರುವುದೇನು?**

ಈ ಪ್ರಶ್ನೆಗೆ ಉತ್ತರವಾಗಿ ಕೆಲವು ಶುದ್ಧ ಸುಳ್ಳುಗಳು ಮತ್ತು ಅತಿ ಸರಳೀಕೃತ ವಿಶ್ಲೇಷಣೆಗಳು ವ್ಯಾಪಕವಾಗಿ ಚಲಾವಣೆಯಲ್ಲಿವೆ. ಉದಾ:

1. ಇಸ್ರೇಲ್ ಎಂಬುದು ಜಗತ್ತಿನೆಲ್ಲೆಡೆ ದಮನಿತರಾಗಿದ್ದ ಒಂದು ಸಮುದಾಯದವರು ತಮ್ಮ ಐತಿಹಾಸಿಕ ಮಾತೃ ಭೂಮಿಯಲ್ಲಿ ತಮ್ಮ ಶ್ರಮದಿಂದ ಕಟ್ಟಿ ಬೆಳೆಸಿದ ದೇಶ.
2. ಇಸ್ರೇಲ್ ಮಧ್ಯಪ್ರಾಚ್ಯದ ಏಕಮಾತ್ರ ಅಪ್ಪಟ ಪ್ರಜಾಸತ್ತಾತ್ಮಕ, ಸೆಕ್ಯುಲರ್ ದೇಶ.
3. ಇಸ್ರೇಲ್ ಆಧುನಿಕ, ವೈಜ್ಞಾನಿಕ ಮತ್ತು ವೈಚಾರಿಕ ಸ್ಫೂರ್ತಿ ತುಂಬಿರುವ ಪ್ರಗತಿಪರ ವಿಚಾರಧಾರೆಯ, ಉದಾರ ಧೋರಣೆಯ ಸಂಪನ್ನ, ವಿದ್ಯಾವಂತರ ದೇಶ.
4. ಇಸ್ರೇಲ್ ಸರಕಾರವೆಂಬುದು ಸದಾ ಶಾಂತಿಯನ್ನೇ ಬಯಸುವ ಶಾಂತಿಪ್ರಿಯ ಸರಕಾರ ಮತ್ತು ಅಲ್ಲಿಯ ನಾಗರಿಕರು ಕೂಡಾ ಸದಾ ಶಾಂತಿಯನ್ನೇ ಬಯಸುತ್ತಾರೆ.
5. ಇಸ್ರೇಲ್‌ನ ಔದಾರ್ಯದಿಂದ ಅಲ್ಲಿನ ಪೌರತ್ವ ಪಡೆದಿರುವ ಮತ್ತು ಇಸ್ರೇಲ್ ದೇಶದೊಳಗೆ ಆಶ್ರಯ ಪಡೆದಿರುವ ಮುಸ್ಲಿಮ್ ಮತ್ತು ಅರಬ್ ಮೂಲದ ಜನರು ತಮಗೆ ದೊರೆತಿರುವ

ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿ ಕೊಳ್ಳುತ್ತಿದ್ದಾರೆ. ಅವರು ಯಾವಾಗಲೂ ಇಸ್ರೇಲ್ ಸರಕಾರ ಮತ್ತು ನಾಗರಿಕರಿಗೆ ಕಿರುಕುಳ ನೀಡುತ್ತಲೇ ಇರುತ್ತಾರೆ. ಟಯರ್‌ಗಳನ್ನು ಸುಟ್ಟು ಪರಿಸರವನ್ನು ಮಲಿನಗೊಳಿಸುತ್ತಾರೆ. ಅವರ ಪುಂಡ ಪೋಕರಿ ಹುಡುಗರು ನಿತ್ಯವೆಂಬಂತೆ ಇಸ್ರೇಲಿನ ಪೊಲೀಸ್ ಮತ್ತು ಮಿಲಿಟರಿ ಅಧಿಕಾರಿಗಳ ಮೇಲೆ, ಮಾತ್ರವಲ್ಲ, ಮುಗ್ಧ ನಾಗರಿಕರ ಮೇಲೂ ಕಲ್ಲು, ಪೆಟ್ರೋಲ್ ಬಾಂಬ್ ಇತ್ಯಾದಿಗಳನ್ನು ಎಸೆದು ಹಿಂಸಿಸುತ್ತಿರುತ್ತಾರೆ. ಕವೆ ಕೋಲು (ಕವಣೆ)ಗಳ ಮೂಲಕ ಅಧಿಕಾರಿಗಳ ಮೇಲೆ ಹಲ್ಲೆ ನಡೆಸುತ್ತಾರೆ. ಆತ್ಮಾಹುತಿ ಬಾಂಬ್ ದಾಳಿಗಳನ್ನೂ ನಡೆಸುತ್ತಾರೆ. ಅವರು ತಮ್ಮ ಹಿಂಸಾತ್ಮಕ ಹಾಗೂ ಭಯೋತ್ಪಾದಕ ಚಟುವಟಿಕೆಗಳ ಮೂಲಕ ಇಸ್ರೇಲಿಗರ ಪಾಲಿಗೆ ಬದುಕನ್ನೇ ದುಸ್ತರಗೊಳಿಸಿಬಿಟ್ಟಿದ್ದಾರೆ.

6. ಇಸ್ರೇಲ್‌ನ ಅಕ್ಕಪಕ್ಕದಲ್ಲಿರುವ ಸರ್ವಾಧಿಕಾರಿ, ಅನಾಗರಿಕ ಅರಬ್ ಮತ್ತು ಮುಸ್ಲಿಮ್ ದೇಶಗಳಿಗೆ ತಮ್ಮ ನೆರೆಯಲ್ಲಿ ಒಂದು ಆಧುನಿಕ, ಪ್ರಗತಿಪರ, ವಿದ್ಯಾವಂತ, ಪ್ರಜಾಸತ್ತಾತ್ಮಕ ಹಾಗೂ ಸಭ್ಯ ಯಹೂದಿ ದೇಶವು ಅಭಿವೃದ್ಧಿ ಸಾಧಿಸುತ್ತಿರುವುದನ್ನು ಸಹಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದಲೇ ಆ ದೇಶಗಳೆಲ್ಲ ಒಂದಾಗಿ ಇಸ್ರೇಲ್‌ನ ಭದ್ರತೆ ಮತ್ತು ಅಸ್ತಿತ್ವಕ್ಕೆ ಅಪಾಯ ಒಡ್ಡುತ್ತಲೇ ಇರುತ್ತವೆ. ಅಲ್ಲಿನ ಸರಕಾರಗಳು, ಸೇನೆಗಳು ಮತ್ತು ಭಯೋತ್ಪಾದಕ ಸಂಘಟನೆಗಳು ಆಗಾಗ ಇಸ್ರೇಲ್ ಮೇಲೆ ಮಿಸೈಲ್‌ಗಳನ್ನು ಎಸೆದು ಇಸ್ರೇಲಿಗರ ಜೀವ ಮತ್ತು ಸೊತ್ತುಗಳಿಗೆ ಹಾನಿ ಮಾಡುತ್ತಿರುತ್ತವೆ. ಏಕ ಪಕ್ಷೀಯ ಸುಳ್ಳು ಪ್ರಚಾರಗಳಿಗೆ ಮತ್ತು ವಿಕೃತ ವಿಶ್ಲೇಷಣೆಗಳಿಗೆ ಬಲಿ ಬಿದ್ದು ಮುಗ್ಧವಾಗಿ ಈ ಬಗೆಯ ಮೌಢ್ಯ ಆಧಾರಿತ ಪೂರ್ವಾಗ್ರಹಗಳನ್ನು ತಮ್ಮೊಳಗೆ ಪೋಷಿಸಿ ಕೊಳ್ಳುತ್ತಿರುವವರು ಈ ತಮ್ಮ ದಾರುಣ ಸ್ಥಿತಿಯಿಂದ ಹೊರಬರಲು ತುಂಬಾ ದೂರವೇನೂ ಹೋಗಬೇಕಾಗಿಲ್ಲ. ಇಸ್ರೇಲ್ ಮತ್ತು ಫೆಲೆಸ್ತೀನ್‌ಗಳ ಇತಿಹಾಸ ಮತ್ತು ವರ್ತಮಾನದ ಕುರಿತು ವಸ್ತುನಿಷ್ಠ ಮೂಲಗಳ ಮೂಲಕ ಲಭ್ಯವಿರುವ ಮಾಹಿತಿಗಳನ್ನೊಮ್ಮೆ ಕಣ್ಣುತೆರೆದು ನೋಡಿದರೆ ಸಾಕು. ಅವರ ನಂಬಿಕೆಗಳ ಲೋಕವೇ ಬದಲಾಗಿಬಿಡುವುದು ಖಚಿತ.

**ಇಸ್ರೇಲ್ ಮತ್ತು ಫೆಲೆಸ್ತೀನ್ ಎರಡು ಸಮಾನಾಂತರ ಸರಕಾರಗಳಲ್ಲ**

ಕೆಲವರು ಇಸ್ರೇಲ್ ಮತ್ತು ಫೆಲೆಸ್ತೀನ್‌ಗಳನ್ನು ಎರಡು ಸಮಾನಾಂತರ ಸರಕಾರಗಳೆಂಬಂತೆ ಚಿತ್ರಿಸುತ್ತಾರೆ. ಹಾಗೆಂದು ಹಲವರು ನಂಬಿಕೊಂಡೂ ಇದ್ದಾರೆ. ಎಷ್ಟೋ ಜನರ ನಿರ್ಧಾರ ಮತ್ತು ತೀರ್ಮಾನಗಳು ಈ ನಂಬಿಕೆಯನ್ನೇ ಆಧರಿಸಿವೆ. ನಿಜವಾಗಿ ಈ ಎರಡು ಸರಕಾರಗಳ ನಡುವೆ ಅಜ – ಗಜ

ಮಾತ್ರವಲ್ಲ ಭೂಮಿ – ಆಕಾಶಗಳ ಅಂತರವಿದೆ. ಅಂತಹ ಕೆಲವು ಪ್ರಮುಖ ವ್ಯತ್ಯಾಸಗಳ ಪಟ್ಟಿ ಇಲ್ಲಿದೆ:

ಇಸ್ರೇಲ್ ಬಳಿ ತಾಂತ್ರಿಕವಾಗಿ ಜಗತ್ತಿನಲ್ಲೇ ಅತ್ಯಂತ ಮುಂದುವರಿದ ತಂತ್ರಜ್ಞಾನ, ಆಯುಧ ಮತ್ತು ಸಲಕರಣೆಗಳಿಂದ ಸಜ್ಜಿತವಾದ 5 ಲಕ್ಷಕ್ಕೂ ಹೆಚ್ಚಿನ ಯೋಧರು ಇರುವ ಬಲಿಷ್ಠ ಭೂಸೇನೆ ಇದೆ. ಇಸ್ರೇಲ್ ಪೂರ್ಣಪ್ರಮಾಣದ ಅಣ್ವಸ್ತ್ರ ಸಜ್ಜಿತ ದೇಶವಾಗಿದೆ. ಅದರ ಬಳಿ ಸುಮಾರು 400 ಅಣು ಬಾಂಬ್ ಸಜ್ಜಿತ ಕ್ಷಿಪಣಿಗಳಿವೆ. ಇಸ್ರೇಲ್ ಬಳಿ ಸಾಟಿಯೇ ಇಲ್ಲದಂತಹ ಒಂದು ಅಜೇಯ ವಾಯುಸೇನೆ ಇದೆ. 1967ರಲ್ಲೇ ಇಸ್ರೇಲ್ ವಾಯುಸೇನೆ ಎಷ್ಟು ಬಲಿಷ್ಠವಾಗಿತ್ತೆಂದರೆ ಅದರ ಮುಂದೆ ಎಲ್ಲ ನೆರೆದೇಶಗಳ ಒಟ್ಟು ವಾಯುಸೇನಾ ಸಾಮರ್ಥ್ಯವು ನಿರರ್ಥಕವಾಗಿ ಬಿಟ್ಟಿತ್ತು. ಇದೀಗ 54 ವರ್ಷಗಳ ಬಳಿಕ ಅದು ಎಷ್ಟು ಬಲಾಢ್ಯವಾಗಿರಬಹುದೆಂಬುದನ್ನು ಯಾರಾದರೂ ಊಹಿಸಬಹುದು. ಇಸ್ರೇಲ್ ಬಳಿ 60ಕ್ಕೂ ಹೆಚ್ಚು ಸರ್ವ ಸಜ್ಜಿತ ಯುದ್ಧನೌಕೆಗಳು, 20,000ಕ್ಕೂ ಹೆಚ್ಚು ನೌಕಾ ಯೋಧರು ಮತ್ತು ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಸಜ್ಜಿತ ನೌಕಾಪಡೆ ಇದೆ. ಇಸ್ರೇಲಿನ ವಾರ್ಷಿಕ ಮಿಲಿಟರಿ ಬಜೆಟ್ 20.5 ಶತಕೋಟಿ ಡಾಲರ್ ನಷ್ಟಿದೆ. ಸಾಲದ್ದಕ್ಕೆ ಪ್ರತಿವರ್ಷ ಅಮೆರಿಕದಿಂದ ಭಾರೀ ಮೊತ್ತದ ಮಿಲಿಟರಿ ಸಹಾಯಧನವೂ ಇಸ್ರೇಲ್‌ಗೆ ಸಿಗುತ್ತದೆ. ಈವರೆಗೆ ಅಧಿಕೃತವಾಗಿ ಇಸ್ರೇಲ್‌ಗೆ ಅಮೆರಿಕ ನೀಡಿರುವ ಮಿಲಿಟರಿ ಸಹಾಯಧನ 146 ಶತಕೋಟಿ ಡಾಲರ್ ನಷ್ಟಾಗುತ್ತದೆ. ಅನಧಿಕೃತ ನೆರವಿನ ಮೊತ್ತ ಬೇರೆಯೇ ಇದೆ. ಇದಕ್ಕೆಲ್ಲ ಹೋಲಿಸಿದರೆ ಫೆಲೆಸ್ತೀನ್ ಸರಕಾರದ ಸಾಮರ್ಥ್ಯ ಎಷ್ಟು ಗೊತ್ತೇ? 'ಫೆಲೆಸ್ತೀನ್ ಸರಕಾರ' ಎಂಬುದು ಜಗತ್ತಿನ ಕಣ್ಣಿಗೆ ಮಣ್ಣೆರಚಲು ನಿರ್ಮಿಸಲಾಗಿರುವ ಒಂದು ಅಣಕ ಸಂಸ್ಥೆಯೇ ಹೊರತು ಅದು ಒಂದು ಪೂರ್ಣ ಪ್ರಮಾಣದ ಸರಕಾರವೇ ಅಲ್ಲ. ಜಗತ್ತಿನ 138 ದೇಶಗಳು ಫೆಲೆಸ್ತೀನ್ ಸರಕಾರಕ್ಕೆ ಅಧಿಕೃತ ಮಾನ್ಯತೆ ನೀಡಿವೆ. ಆದರೆ ಇಸ್ರೇಲ್ ಸರಕಾರಕ್ಕಿರುವ ಸಾಮರ್ಥ್ಯ ಮತ್ತು ಅಧಿಕಾರಗಳಿಗೆ ಹೋಲಿಸಿದರೆ ಫೆಲೆಸ್ತೀನ್ ಸರಕಾರದ ಸಾಮರ್ಥ್ಯ ಮತ್ತು ಅಧಿಕಾರಗಳು ಒಂದು ನಗರ ಪಾಲಿಕೆಯಷ್ಟೂ ಇಲ್ಲ. ಹೆಚ್ಚೆಂದರೆ ಅದನ್ನು, ಬಲಿಷ್ಠ ಕೇಂದ್ರ ಸರಕಾರವೊಂದರ ಕಪಿ ಮುಷ್ಟಿಯಲ್ಲಿರುವ ಸ್ಥಳೀಯ ಆಡಳಿತ ಪ್ರಾಧಿಕಾರ ಎಂದು ಕರೆಯಬಹುದು. ಮುಖ್ಯವಾಗಿ ಭೂಸೇನೆ, ವಾಯು ಸೇನೆ, ನೌಕಾಪಡೆ ಮುಂತಾದ ಯಾವುದೇ ಬಗೆಯ ಸೇನೆಯನ್ನು ಇಟ್ಟುಕೊಳ್ಳುವ ಅಧಿಕಾರ ಫೆಲೆಸ್ತೀನ್ ಸರಕಾರಕ್ಕಿಲ್ಲ! ಕ್ರೂರ ತಮಾಷೆ ಏನೆಂದರೆ, ಫೆಲೆಸ್ತೀನ್ ಸರಕಾರಕ್ಕೆ ತನ್ನ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿ ವಿದ್ಯುತ್ ಮತ್ತು ಜಲ ಸರಬರಾಜು ವ್ಯವಸ್ಥೆಯ ಮೇಲೂ ನಿಯಂತ್ರಣವಿಲ್ಲ. ಅದನ್ನೆಲ್ಲ ಇಸ್ರೇಲ್ ಸರಕಾರ ತನ್ನ ನಿಯಂತ್ರಣದಲ್ಲೇ

ಇಟ್ಟುಕೊಂಡಿದೆ. ಫೆಲೆಸ್ತೀನ್ ಸರಕಾರದ ಅಧೀನವಿದೆ ಎನ್ನಲಾಗುವ ಪ್ರದೇಶಗಳು ಕೂಡ ಸಂಪೂರ್ಣವಾಗಿ ಅದರ ಅಧೀನದಲ್ಲಿಲ್ಲ. ಅವೆಲ್ಲ ಇಸ್ರೇಲ್ ಆಕ್ರಮಿತ ಪ್ರದೇಶಗಳಾಗಿದ್ದು ನೇರವಾಗಿ ಇಸ್ರೇಲ್‌ನ ನಿಯಂತ್ರಣದಲ್ಲಿವೆ. ಅಲ್ಲಿ ಎಲ್ಲ ವಿಷಯಗಳಲ್ಲೂ ಅಂತಿಮ ನಿರ್ಧಾರ ಇಸ್ರೇಲ್‌ನದ್ದೇ. ಅಲ್ಲಿ ಇಸ್ರೇಲ್ ಪಡೆಗಳು ತಮ್ಮ ಇಚ್ಛಾನುಸಾರ ಪ್ರವೇಶಿಸಬಹುದು. ತನಿಖೆ, ವಿಚಾರಣೆ, ಶೋಧನೆ, ಬಂಧನ ಇತ್ಯಾದಿ ಎಲ್ಲ ಬಗೆಯ ಕಾರ್ಯಾಚರಣೆಗಳನ್ನು ನಡೆಸಬಹುದು. ಫೆಲೆಸ್ತೀನ್ ಸರಕಾರದ ಅಧೀನವಿದೆ ಎನ್ನಲಾಗುವ ಪ್ರದೇಶಗಳ ಒಳಗೆ ಇಸ್ರೇಲ್ ಸರಕಾರ ತನಗೆ ಮನಸ್ಸದಾಗಲೆಲ್ಲ ನುಗ್ಗಿ, ತಾನಿಚ್ಛಿಸುವ ಅರಬ್ ಪ್ರದೇಶಗಳನ್ನು ವಶ ಪಡಿಸಿಕೊಂಡು ಅಲ್ಲಿ ತನ್ನ ಇಚ್ಛಾನುಸಾರ ಯಹೂದಿ ವಲಸಿಗರಿಗಾಗಿ ಹೊಸ ಬಡಾವಣೆ ಮತ್ತು ನಿವಾಸಗಳನ್ನು ನಿರ್ಮಿಸಿ ಕೊಡಬಹುದು. ಆ ಬಡಾವಣೆಗಳಿಗೆ ಭದ್ರತೆ ಒದಗಿಸುವ ಹೆಸರಲ್ಲಿ ಅವುಗಳ ಸುತ್ತಮುತ್ತಲ ಪ್ರದೇಶಗಳನ್ನು ವಶಪಡಿಸಿಕೊಂಡು ಅಲ್ಲಿ ಸ್ಥಳೀಯರ ಚಲನವಲನಗಳ ಮೇಲೆ ನಿರ್ಬಂಧ ಹೇರಬಹುದು. ತಥಾಕಥಿತ ಫೆಲೆಸ್ತೀನ್ ಸರಕಾರ ಅಸ್ತಿತ್ವಕ್ಕೆ ಬಂದ ಬಳಿಕವೂ ಅದರ ಅಧೀನವಿದೆ ಎನ್ನಲಾಗುವ ಪ್ರದೇಶಗಳಲ್ಲಿ ಯಹೂದಿ ವಲಸಿಗರಿಗೆಂದೇ ಮೀಸಲಾಗಿರುವ ಬೃಹತ್ ಬಡಾವಣೆಗಳನ್ನು ನಿರ್ಮಿಸುವ ತನ್ನ ಕಾರ್ಯಾಚರಣೆಯನ್ನು ಇಸ್ರೇಲ್ ಸರಕಾರ ಎಗ್ಗಿಲ್ಲದೆ ಮುಂದುವರಿಸಿದೆ. ಇಸ್ರೇಲ್ ಸರಕಾರವು ಈಗಾಗಲೇ ತನ್ನೊಳಗಿನ ಯಹೂದಿ ಜನಸಂಖ್ಯೆಯ ಕನಿಷ್ಠ 11ಶೇ. ಭಾಗವನ್ನು ಫೆಲೆಸ್ತೀನ್ ಸರಕಾರವಿರುವ ಆಕ್ರಮಿತ ಪ್ರದೇಶಗಳಿಗೆ ವರ್ಗಾಯಿಸಿದೆ. ಈ ಮೂಲಕ ಆ ಪ್ರದೇಶಗಳ ಜನಸಂಖ್ಯೆಯಲ್ಲಿ ಯಹೂದಿ ಮತ್ತು ಅರಬ್ ಅನುಪಾತದಲ್ಲಿ ತೀವ್ರ ಏರುಪೇರು ಉಂಟಾಗುತ್ತಿದೆ. 2020ರ ಮಾಹಿತಿ ಪ್ರಕಾರ ಇಸ್ರೇಲ್ ಸರಕಾರದ ವಾರ್ಷಿಕ ಜಿಡಿಪಿ 40,264 ಕೋಟಿ ಡಾಲರ್‌ಗಳಾಗಿದ್ದರೆ ಫೆಲೆಸ್ತೀನ್ ಸರಕಾರದ ವಾರ್ಷಿಕ ಜಿಡಿಪಿ ಕೇವಲ 1,713 ಕೋಟಿ ಡಾಲರ್‌ಗಳು ಮಾತ್ರ.

**ಪುಟಾಣಿ ಇಸ್ರೇಲ್‌ನ ದೈತ್ಯ ಶಕ್ತಿಯ ಹಿಂದಿದೆ ಬಿಳಿಯ ಜಗತ್ತಿನ ಕರಾಳ ದ್ವಂದ್ವ ನೀತಿ**

ಸ್ವಾತಂತ್ರ್ಯ, ಸ್ವಾಯತ್ತೆ, ಮಾನವಹಕ್ಕುಗಳು ಇತ್ಯಾದಿಗಳ ಬಗ್ಗೆ ಜಗತ್ತಿಗೆಲ್ಲ ಸದಾ ಉಪದೇಶ ನೀಡುತ್ತಲಿರುವ ಅಮೆರಿಕ ಮತ್ತು ಯುರೋಪಿಯನ್ ದೇಶಗಳು ಮಧ್ಯ ಪ್ರಾಚ್ಯದಲ್ಲಿ ಯಹೂದಿಗಳಿಗೆ ಒಂದು ನೆಲೆ ಒದಗಿಸುವ ಮತ್ತು ನಿರ್ವಸಿತ ಯಹೂದಿಗಳಿಗೆ ಪುನರ್ವಸತಿ ಕಲ್ಪಿಸಿಕೊಡುವ ಬಗ್ಗೆ ಮಾತನಾಡುವುದು ಅರ್ಥವಾಗುತ್ತದೆ. ಆದರೆ ಒಂದು ಸಣ್ಣ ವಲಸಿಗ ಸಮುದಾಯಕ್ಕೆ ಪುನರ್ವಸತಿ ಮತ್ತು ಭದ್ರತೆ ಒದಗಿಸುವ ಹೆಸರಲ್ಲಿ ಒಂದು ನಾಡಿನಲ್ಲಿ ಶತಮಾನಗಳಿಂದ

ಬದುಕುತ್ತಿರುವ ಒಂದು ದೊಡ್ಡ ಸಮುದಾಯವನ್ನು ಬಲವಂತವಾಗಿ ನಿರ್ವಸಿತಗೊಳಿಸುವುದು, ಅವರಿಂದ ಅವರ ನೆಲ, ಸೊತ್ತು, ಪ್ರಾಥಮಿಕ ಪೌರ ಸವಲತ್ತುಗಳನ್ನು ಮಾತ್ರವಲ್ಲ ಅವರ ಮೂಲಭೂತ ಮಾನವ ಹಕ್ಕುಗಳನ್ನು ಮತ್ತು ನಾಗರಿಕ ಅಧಿಕಾರಗಳನ್ನೆಲ್ಲ ಕಿತ್ತುಕೊಳ್ಳುವುದು ಅವರ ಬದುಕನ್ನು ಅಭದ್ರಗೊಳಿಸುವುದು, ಅವರು ಬದುಕುವ ಪ್ರದೇಶಗಳನ್ನೇ ಸಂಪೂರ್ಣ ಸೆರೆಮನೆಗಳಾಗಿ ಪರಿವರ್ತಿಸುವುದು ಇದು ಎಲ್ಲಿಯ ನ್ಯಾಯ?

1950ಕ್ಕಿಂತ ಮೊದಲಿನ ಒಂದು ಶತಮಾನದ ಅವಧಿಯಲ್ಲಿ ಜಗತ್ತಿನ ಮತ್ತು ವಿಶೇಷವಾಗಿ ಯೂರೋಪಿನ ಹಲವೆಡೆ ಯಹೂದಿಗಳನ್ನು ಎಲ್ಲ ಬಗೆಯ ಅಪಮಾನಗಳಿಗೆ ತುತ್ತಾಗಿಸಿ ಅವರಿಗೆ ಎಲ್ಲ ಬಗೆಯ ಹಿಂಸೆ, ಕಿರುಕುಳ ನೀಡಲಾಗಿತ್ತು ಮತ್ತು ಹಲವೆಡೆ ಅವರ ಸಾಮೂಹಿಕ ಹತ್ಯಾಕಾಂಡ ಕೂಡ ನಡೆಸಲಾಗಿತ್ತು ಎಂಬುದು ನಿಜ. ಆದರೆ ಈ ಅಪರಾಧ ಎಸಗಿದವರು ಯಾರು? ಯಹೂದಿಗಳ ವಿರುದ್ಧ ಜನಾಂಗವಾದದ ಕಿಚ್ಚು ಹಚ್ಚಿದವರು ಯಾರು? ಈ ಅಪರಾಧಗಳಲ್ಲಿ ಫೆಲೆಸ್ತೀನ್‌ನ ಅರಬರಿಗೆ ಕಿಂಚಿತ್ ಪಾತ್ರವೂ ಇರಲಿಲ್ಲ ಎಂಬುದು ಖಚಿತವಲ್ಲವೇ? ಹೀಗಿರುವಾಗ ಯಾರೋ ಮಾಡಿದ ಅಪರಾಧಕ್ಕೆ ಅವರೇಕೆ ಬೆಲೆತೆರಬೇಕು? ಅವರಿಗೇಕೆ ಈ ಶಿಕ್ಷೆ? ಈ ಪ್ರಶ್ನೆಗಳಿಗೆ ಬಿಳಿಯ ಜಗತ್ತಿನವರ ಬಳಿ ಯಾವ ಉತ್ತರವೂ ಇಲ್ಲ. ಬಿಳಿಯರು ಕೆಲವು ದಶಕಗಳ ತನಕ ಯಹೂದಿಗಳ ವಿರುದ್ಧ ತಾವು ಎಸಗಿದ ಅಪರಾಧಕ್ಕೆ ಪ್ರಾಯಶ್ಚಿತ ಮಾಡಲು ಹೊರಟದ್ದು ಖಂಡಿತ ಸ್ವಾಗತಾರ್ಹ. ಆದರೆ ಅವರ ಪ್ರಾಯಶ್ಚಿತವು ಇನ್ನೊಂದು ದೀರ್ಘಕಾಲೀನ ಮಹಾಪರಾಧದ ಸರಣಿಯ ರೂಪದಲ್ಲಿದೆ ಎಂಬುದೇ ದುರಂತ. ಬಿಳಿಯ ಜಗತ್ತು ತನ್ನದೇ ನೆಲದಲ್ಲಿ ಯಹೂದಿಗಳಿಗೆ ಘನತೆಯ ಮತ್ತು ಭದ್ರತೆಯೊಂದಿಗೆ ಬದುಕುವ ಸನ್ನಿವೇಶವನ್ನು ಒದಗಿಸಿಕೊಟ್ಟಿದ್ದರೆ ಯಹೂದಿಗಳು ಅಷ್ಟು ದೊಡ್ಡ ಸಂಖ್ಯೆಯಲ್ಲಿ ಯುರೋಪಿನಿಂದ ವಲಸೆ ಹೋಗುವ ಅಗತ್ಯವೇ ತಲೆದೋರುತ್ತಿರಲಿಲ್ಲ. ಆದರೆ ಬಿಳಿಯರು ತಮ್ಮ ಒಂದು ಪಾಪಕ್ಕೆ ಪರಿಹಾರವಾಗಿ ಇನ್ನೊಂದು ಪಾಪದ ಮಾರ್ಗವನ್ನು ಆರಿಸಿಕೊಂಡರು. ತಮ್ಮ ಬಲಿಪಶುಗಳಾಗಿದ್ದ ಯಹೂದಿಗಳಿಗೆ ನೆಲೆ ಒದಗಿಸಲು ಇನ್ನೊಂದು ಜನಾಂಗ ಮತ್ತು ಪ್ರದೇಶವನ್ನು ಬಲಿಪಶುವಾಗಿಸಿಬಿಟ್ಟರು. ಈ ನೀತಿಯ ಫಲಿತಾಂಶವೇ ಫೆಲೆಸ್ತೀನ್ ಎಂಬ ಅರಬ್ ನೆಲದಲ್ಲಿ ಇಸ್ರೇಲ್ ಎಂಬ ಜನಾಂಗೀಯ ದೇಶದ ಅಕ್ರಮ ಸ್ಥಾಪನೆ. ಈ ಅಪರಾಧವನ್ನು ಅವರು ಒಂದು ಸೀಮಿತ ಪ್ರದೇಶದಲ್ಲಿ ಒಂದು ಬಾರಿ ಮಾತ್ರ ಮಾಡಿದ್ದರೆ ಬಹುಶಃ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಅದಕ್ಕೆ ಮನ್ನಣೆಯೂ ಸಿಗುತ್ತಿತ್ತು ಮತ್ತು ಕಾಲಕ್ರಮೇಣ ಆ ಅಪರಾಧ ಮರೆತು ಹೋಗುವ ಸಾಧ್ಯತೆಯೂ ಇತ್ತು. ಆದರೆ ಮೇಲ್ನೋಟಕ್ಕೆ ಮುಗ್ಧವಾಗಿದ್ದ ಅವರ

ಸರಳ ಪ್ರಸ್ತಾವವು ವಾಮನಾವತಾರದ ಮೂರು ಹೆಜ್ಜೆಗಳಂತೆ ಎಲ್ಲವನ್ನೂ ಕಬಳಿಸಿಬಿಡುವ ಸಂಚಾಗಿತ್ತು ಎಂಬುದನ್ನು ಜಗತ್ತೀಗ ಕಣ್ಣಾರೆ ಕಾಣುತ್ತಿದೆ.

ಇಸ್ರೇಲ್ ಎಂಬ ಒಂದು ಪುಟಾಣಿ ದೇಶಕ್ಕೆ ಸತತವಾಗಿ ಕಳೆದ 7 ದಶಕಗಳಿಗಿಂತಲೂ ಹೆಚ್ಚಿನ ಅವಧಿಯಲ್ಲಿ ಎಲ್ಲ ಮಾನವೀಯ ಮೌಲ್ಯಗಳು, ಸರ್ವಮಾನ್ಯ ಅಂತರ್‌ರಾಷ್ಟ್ರೀಯ ಕಾನೂನು ನಿಯಮಗಳು ಮತ್ತು ಬಲಿಷ್ಠ ಜಾಗತಿಕ ಜನಾಭಿಪ್ರಾಯ ಇವೆಲ್ಲವನ್ನೂ ಮೆಟ್ಟಿ ನಿಲ್ಲಲು ಹೇಗೆ ತಾನೇ ಸಾಧ್ಯವಾಗುತ್ತದೆ? ಭಾರೀ ಪ್ರತಿರೋಧದ ಎದುರು, ಒಂದು ದೊಡ್ಡ ಜನಸಮುದಾಯ ಮತ್ತು ಒಂದು ಪ್ರದೇಶದ ವಿರುದ್ಧ ಪದೇ ಪದೇ ಅಮಾನುಷ ದೌರ್ಜನ್ಯಗಳನ್ನು ಎಸಗಿ ತನ್ನ ಆಕ್ರಮಣಕಾರಿ ಜನಾಂಗವಾದಿ ಯೋಜನೆಗಳನ್ನು ಎಗ್ಗಿಲ್ಲದೆ ಅನುಷ್ಠಾನಿಸುತ್ತಾ ಹೋಗುವ ಸಾಮರ್ಥ್ಯ ಅದಕ್ಕೆ ಎಲ್ಲಿಂದ ಬರುತ್ತದೆ? ಹೀಗೆಂದು ಅಚ್ಚರಿ ಪಡುವವರು ತಿಳಿದಿರಬೇಕು : ಇಸ್ರೇಲ್ ದೇಶ ಈವರೆಗೆ ತಾನು ಸಾಧಿಸಿದ ಯಾವುದನ್ನೂ ಒಂಟಿಯಾಗಿ ಸಾಧಿಸಿಲ್ಲ. ಪ್ರಭಾವಶಾಲಿ ಝಿಯೋನಿಸ್ಟ್ ಸಂಘಟನೆಗಳಿರುವ ಅಮೆರಿಕ ಮತ್ತು ಒಂದು ಕಾಲದಲ್ಲಿ ತಮ್ಮ ನೆಲದಿಂದ ಓಡಿ ಹೋಗಲು ಯಹೂದಿಗಳನ್ನು ನಿರ್ಬಂಧಿಸಿದ್ದ ಯೂರೋಪಿನ ದೇಶಗಳು ಆರಂಭದಿಂದಲೂ ಇಸ್ರೇಲ್‌ಗೆ ಎಲ್ಲ ಬಗೆಯ ಆರ್ಥಿಕ, ತಾಂತ್ರಿಕ ಮತ್ತು ಸೈನಿಕ ನೆರವನ್ನು ಒದಗಿಸುತ್ತಾ ಬಂದಿವೆ. ಇಂದು ಕೂಡಾ ಅವು ಹೆಜ್ಜೆಹೆಜ್ಜೆಗೂ ಇಸ್ರೇಲ್ ಜೊತೆ ನಿಂತಿವೆ. ಮಾತ್ರವಲ್ಲ, ಎಲ್ಲ ಅಂತರ್‌ರಾಷ್ಟ್ರೀಯ ಕಾನೂನು ಮತ್ತು ಒತ್ತಡಗಳಿಂದ ಅದನ್ನು ರಕ್ಷಿಸುವುದಕ್ಕೆ ಕಂಕಣಬದ್ಧವಾಗಿವೆ. ಈ ಹಿನ್ನೆಲೆಯಲ್ಲಿ, ಇಸ್ರೇಲ್ ಅನ್ನು ಮಣಿಸಲು ಬಯಸುವವರು ಪ್ರಸ್ತುತ ಎಲ್ಲ ಶಕ್ತಿಗಳನ್ನು ಮಣಿಸುವ ಸಾಮರ್ಥ್ಯವನ್ನು ತಮ್ಮಲ್ಲಿ ಬೆಳೆಸಿಕೊಳ್ಳಬೇಕಾಗುತ್ತದೆ.

❖ ❖ ❖

## 4

# ಆಕ್ರಮಿತ ನಾಗರಿಕರಿಗೆ ಐಡಿ ಎಂಬ ಮೂಗುದಾರ

ಫೆಲೆಸ್ತೀನ್‌ನ ಅರಬ್ ನಿವಾಸಿಗಳೆಂದರೆ ಇಸ್ರೇಲ್ ಭೂಮಿಯಲ್ಲಿರುವ ಅಲ್ಲಿನ ಮೂಲ ನಿವಾಸಿಗಳು. ಅವರ ವಿಷಯದಲ್ಲಿ ಇಸ್ರೇಲ್ ಸರಕಾರದ ಧೋರಣೆ ಏನು? ಇದನ್ನು ಅರಿಯಲು ನೀವು ದಾಖಲೆ ಪತ್ರಗಳನ್ನು ಹುಡುಕಿಕೊಂಡು ಹೋಗಬೇಕಾಗಿಲ್ಲ. ಪತ್ತೇದಾರಿಕೆ ನಡೆಸಬೇಕಾಗಿಲ್ಲ. ತನ್ನ ಇತಿಹಾಸದುದ್ದಕ್ಕೂ ಇಸ್ರೇಲ್ ಸರಕಾರ ಫೆಲೆಸ್ತೀನ್ ನಿವಾಸಿಗಳ ಜೊತೆ ಯಾವ ರೀತಿ ನಡೆದುಕೊಂಡಿದೆ ಎಂಬುದು ಬಹಳ ಸ್ಪಷ್ಟವಾಗಿ ಎಲ್ಲ ಬಗೆಯ ಲಿಖಿತ ಮತ್ತು ವೀಡಿಯೊ ಪುರಾವೆಗಳೊಂದಿಗೆ ಜಗತ್ತಿನ ಮುಂದಿದೆ.

ಇಸ್ರೇಲ್‌ನ ಜನಾಂಗವಾದಿ ವ್ಯವಸ್ಥೆಯಲ್ಲಿ ನಾಗರಿಕರನ್ನು ಹಲವು ವಿಭಿನ್ನ ವರ್ಗಗಳಾಗಿ ವಿಂಗಡಿಸಲಾಗಿದೆ. ಅಲ್ಲಿ ನಾಗರಿಕರಿಗೆ ಇಸ್ರೇಲ್ ಸರಕಾರದಿಂದ ನೀಡಲಾಗುವ ಗುರುತಿನ ಚೀಟಿ (ID) ಗಳಲ್ಲಿ ಆರು ವಿಭಿನ್ನ ಪ್ರಕಾರಗಳಿವೆ. ಇದು ಒಂದು ರೀತಿಯಲ್ಲಿ ಚಾತುರ್ವರ್ಣ್ಯದ ವಿಸ್ತರಣೆ ಎನ್ನಬಹುದು. ಈ ಎಲ್ಲ ಕಾರ್ಡ್‌ಗಳನ್ನೂ ವಿಭಿನ್ನ ರೀತಿಯಲ್ಲಿ ಕಲರ್ ಕೋಡಿಂಗ್ ಮಾಡಲಾಗಿದೆ. ಯಾರು ಎಷ್ಟು ಹಕ್ಕುಗಳಿಗೆ ಅರ್ಹರು? ಯಾರು ಯಾವ ಸವಲತ್ತುಗಳಿಗೆ ಅರ್ಹರು? ಯಾರು ಎಲ್ಲಿಗೆ ಪ್ರಯಾಣಿಸಬಹುದು? ಮತ್ತು ಅಂತಿಮವಾಗಿ, ಯಾರು ಎಷ್ಟು

ಘನತೆ ಮತ್ತು ಗೌರವಕ್ಕೆ ಅರ್ಹರು ಎಂಬುದೆಲ್ಲಾ ಅವರವರ ಗುರುತು ಚೀಟಿಯ ಬಣ್ಣವನ್ನು ಅವಲಂಬಿಸಿರುತ್ತದೆ. ತಾನು ಜನಾಂಗವಾದಿ ಎಂಬುದನ್ನು ಒಪ್ಪಲೊಲ್ಲದ ಇಸ್ರೇಲ್ ಸರಕಾರ ತನ್ನ ಜನಾಂಗವಾದದ ಅನುಷ್ಠಾನಕ್ಕಾಗಿ ಐಡಿ ಪದ್ಧತಿಯನ್ನು ಯಾವ ರೀತಿ ಬಳಸಿಕೊಳ್ಳುತ್ತಾ ಬಂದಿದೆ ಎಂಬುದು ಒಂದು ಅಧ್ಯಯನಾರ್ಹ, ಸ್ವಾರಸ್ಯಕರ ವಿಷಯವಾಗಿದೆ.

ಈ ಐಡಿ ಪದ್ಧತಿ ಆರಂಭವಾದದ್ದು 1967ರ ಭಯಾನಕ ಯುದ್ಧದ ಬಳಿಕ. ಯುದ್ಧದ ವೇಳೆ ತಾನು ವಶಪಡಿಸಿಕೊಂಡ ಎಲ್ಲ ಅರಬ್ ಪ್ರದೇಶಗಳನ್ನು ಅಂದರೆ ಈಜಿಪ್ಟ್ ಕೈಯಿಂದ ಕಿತ್ತುಕೊಂಡ ಗಾಝಾ ಪಟ್ಟಿ ಮತ್ತು ಜೋರ್ಡನ್ ಕೈಯಿಂದ ಕಿತ್ತುಕೊಂಡ ಪಶ್ಚಿಮ ದಂಡೆಯನ್ನು ಇಸ್ರೇಲ್ ಸರಕಾರವು ನಿರ್ಬಂಧಿತ ಪ್ರದೇಶಗಳೆಂದು ಘೋಷಿಸಿತು. ಅಲ್ಲಿಯ ಫೆಲೆಸ್ತೀನೀ ನಿವಾಸಿಗಳು, ಅಲ್ಲಿಂದ ಹೊರಹೋಗಲು ಅಥವಾ ಹೊರಹೋದರೆ ಮರಳಿ ಅಲ್ಲಿಗೆ ಬರಲು ಸರಕಾರದಿಂದ ವಿಶೇಷ ಐಡಿ ಕಾರ್ಡ್‌ಗಳನ್ನು ಪಡೆದಿರಬೇಕು ಎಂಬ ನಿಯಮವನ್ನು ಜಾರಿಗೊಳಿಸಿತು. ಆದರೆ ಜನರು ಐಡಿ ಕಾರ್ಡ್‌ಗಳಿಗಾಗಿ ಅರ್ಜಿ ಸಲ್ಲಿಸಲಾರಂಭಿಸಿದಾಗ ಸರಕಾರವು ಅವರಿಗೆ ಅದನ್ನು ನೀಡುವ ಬದಲು ಬೇರೆಯೇ ಒಂದು ನಿರ್ಣಾಯಕ ಕಾರ್ಯಾಚರಣೆಯನ್ನು ಆರಂಭಿಸಿತು. ಅಂದರೆ, ಅದೇ ವರ್ಷ ಸೆಪ್ಟಂಬರ್ ತಿಂಗಳಲ್ಲಿ ಇಸ್ರೇಲ್ ಸರಕಾರವು, ತಾನು ಆಕ್ರಮಿಸಿಕೊಂಡ ಅರಬ್ ಪ್ರದೇಶಗಳಲ್ಲಿ ಆತುರಾತುರವಾಗಿ ಒಂದು ಜನಗಣತಿ ನಡೆಸಿತು. ಜನಗಣತಿಯ ದಾಖಲೆಯಲ್ಲಿ ಹೆಸರು ನಮೂದಿಸಲಾದವರಿಗೆ ಮಾತ್ರ ಐಡಿ ಕಾರ್ಡ್‌ಗಳನ್ನು ನೀಡಲಾಗುವುದು ಎಂದು ಘೋಷಿಸಿತು.

ಇಸ್ರೇಲ್ ಸರಕಾರವು ಈರೀತಿ, ಯುದ್ಧದ ಕಾವು ಆರುವ ಮುನ್ನವೇ ಜನಗಣತಿ ನಡೆಸಲು ಅಷ್ಟೊಂದು ಆತುರ ಪಟ್ಟಿದ್ದೇಕೆ ಎಂಬುದು ಆಗ ಹೆಚ್ಚಿನವರಿಗೆ ಅರ್ಥವಾಗಿರಲಿಲ್ಲ. ನಿಜವಾಗಿ ಆ ಜನಗಣತಿಯು ಸರಕಾರದ ಒಂದು ದೂರಗಾಮಿ ಸಂಚಿನ ಭಾಗವಾಗಿತ್ತು. ಯುದ್ಧಕ್ಕೆ ಮುಂಚೆ ಪ್ರಸ್ತುತ ಆಕ್ರಮಿತ ಪ್ರದೇಶಗಳ ಅರಬ್ ನಿವಾಸಿಗಳ ಒಟ್ಟು ಜನಸಂಖ್ಯೆ ಸುಮಾರು 11.50 ಲಕ್ಷದಷ್ಟಿತ್ತು. ಅವರ ಪೈಕಿ ಸುಮಾರು 3 ಲಕ್ಷ ಜನ ತಮ್ಮ ಜೀವ ಉಳಿಸಿಕೊಳ್ಳಲು ಮತ್ತು ಯುದ್ಧದ ನಾಶನಷ್ಟಗಳಿಂದ ತಪ್ಪಿಸಿಕೊಳ್ಳಲು ಆ ಪ್ರದೇಶಗಳಿಂದ, ಅಕ್ಕಪಕ್ಕದ ಬೇರೆ ಪ್ರದೇಶಗಳಿಗೆ ವಲಸೆ ಹೋಗಿದ್ದರು. ಪ್ರಸ್ತುತ 3 ಲಕ್ಷ ಜನರು ಮರಳಿ ಬರುವ ಮುನ್ನವೇ ತನ್ನ ಜನಗಣತಿ ಶಾಸ್ತ್ರವನ್ನು ಮುಗಿಸಿಕೊಂಡ ಸರಕಾರವು ಉಪಸ್ಥಿತ 9.55 ಲಕ್ಷ ಜನರ ಹೆಸರುಗಳನ್ನು ಮಾತ್ರ ಜನಗಣತಿಯಲ್ಲಿ ದಾಖಲಿಸಿಕೊಂಡಿತು. ಕೇವಲ ತಾತ್ಕಾಲಿಕವಾಗಿ ವಲಸೆ ಹೋಗಿದ್ದ ಆ ಪ್ರದೇಶಗಳ ಪರಂಪರಾಗತ ನಿವಾಸಿಗಳು ಮರಳಿ ಬಂದಾಗ

ಅವರಿಗೆ ಜನಗಣತಿಯ ದಾಖಲೆಯಲ್ಲಿ ತಮ್ಮ ಹೆಸರುಗಳನ್ನು ಸೇರಿಸಲು ಸರಕಾರ ಏನಾದರೂ ಏರ್ಪಾಟು ಮಾಡುವುದೆಂದು ಜನರು ನಿರೀಕ್ಷಿಸಿದ್ದರು. ಆದರೆ 53 ವರ್ಷಗಳ ಬಳಿಕ ಇಂದು ಕೂಡಾ ಆ ನಿರೀಕ್ಷೆ ಈಡೇರಿಲ್ಲ.

ಇಸ್ರೇಲ್ ಸರಕಾರದ ಔದಾರ್ಯವೆಲ್ಲಾ ಯುರೋಪಿನಿಂದ ಬಂದ ಶಾಶ್ವತ ಯಹೂದಿ ವಲಸಿಗರಿಗೆ ಮೀಸಲಾಗಿತ್ತು. 'ಸ್ಥಳೀಯ ತಾತ್ಕಾಲಿಕ ಅರಬ್ ವಲಸಿಗರು' ಮಾತ್ರ ಅದರ ದೃಷ್ಟಿಯಲ್ಲಿ ಕಿಂಚಿತ್ ಮಾನವೀಯ ರಿಯಾಯ್ತಿಗೂ ಅರ್ಹರಾಗಿರಲಿಲ್ಲ. ಪ್ರಸ್ತುತ ಮೂರು ಲಕ್ಷ ಮಂದಿಗಾಗಲಿ ಅವರ ಸಂತಾನಗಳಿಗಾಗಲಿ ಜನಗಣತಿಯ ದಾಖಲೆಯಲ್ಲಿ ಜಾಗ ಸಿಕ್ಕಿಲ್ಲ ಮತ್ತು ಆ ಕಾರಣಕ್ಕಾಗಿ ಐಡಿ ಕೂಡಾ ಸಿಕ್ಕಿಲ್ಲ! ಈರೀತಿ, ಅವರು ಮತ್ತವರ ಸಂತಾನಗಳು ತಮ್ಮದೇ ನಾಡಿನಲ್ಲಿ 'ಶಾಶ್ವತ ನಿರಾಶ್ರಿತರು' ಮತ್ತು ನಿರ್ಗತಿಕರಾಗಿ ಬಿಟ್ಟರು.

### ಐಡಿ ಪಡೆದವರ ಪಾಡೇನು?

ಸ್ಥಳೀಯ ಪೌರಾಡಳಿತದ ಸಹಭಾಗಿತ್ವದೊಂದಿಗೆ ಇಸ್ರೇಲ್ ನ ಮಿಲಿಟರಿ ಕಚೇರಿಗಳ ಮೂಲಕ ಒದಗಿಸಲಾಗುತ್ತಿದ್ದ ಪ್ರಸ್ತುತ ಕಾರ್ಡ್ ವ್ಯವಸ್ಥೆಯಲ್ಲಿ 1981ರಲ್ಲಿ, ಕೆಲವು ತಾಂತ್ರಿಕ ಬದಲಾವಣೆಗಳನ್ನು ಮಾಡಲಾಯಿತು. ವಯಸ್ಸು16 ವರ್ಷ ಪೂರ್ತಿಯಾದವರಿಗೆ ಈ ಕಾರ್ಡ್‌ಗಳನ್ನು ನೀಡಲಾಗುತ್ತದೆ. ಇಸ್ರೇಲ್ ನಾಗರಿಕರಿಗೆ ಕಡು ನೀಲಿ ಬಣ್ಣದ ಐಡಿ ಕಾರ್ಡ್. ಅದು ಮಹಾಭಾಗ್ಯ ಶಾಲಿಗಳ ಕಾರ್ಡ್. ಅತ್ಯಧಿಕ ಹಕ್ಕು, ಅಧಿಕಾರ ಮತ್ತು ಗೌರವ ಈ ವರ್ಗಕ್ಕೆ ಮೀಸಲಾಗಿರುತ್ತದೆ. ಅವರಿಗೆ ಮತದಾನದ ಹಕ್ಕಿರುತ್ತದೆ. ಇಸ್ರೇಲ್‌ನ ಯಾವುದೇ ಭಾಗದಲ್ಲಿ ಮತ್ತು ಆಕ್ರಮಿತ ಪಶ್ಚಿಮ ದಂಡೆಯ ಶೇ.80 ಭಾಗಗಳಲ್ಲಿ ಸಂಚರಿಸುವ ಅಧಿಕಾರವಿರುತ್ತದೆ.

ಪೂರ್ವ ಜೆರುಸಲೇಮ್‌ನ ಫೆಲೆಸ್ತೀನಿ ನಾಗರಿಕರಿಗೆ ಲಘು ನೀಲಿ ಬಣ್ಣದ ಕಾರ್ಡ್. ಅವರಿಗೆ ಮತದಾನದ ಹಕ್ಕಿಲ್ಲ. ಇಸ್ರೇಲ್‌ನ ಹೆಚ್ಚಿನ ಭಾಗಗಳಲ್ಲಿ ಅವರು ಸಂಚರಿಸಬಹುದು. ಆದರೆ ಅವರು ತಮ್ಮ ಜೆರುಸಲೇಮ್ ಪ್ರದೇಶದಿಂದ ಹೊರಗೆ ಹೋದರೆ ಅವರ ಕಾರ್ಡ್ ರದ್ದಾಗಿ ಬಿಡುವ ಎಲ್ಲ ಸಾಧ್ಯತೆಗಳಿರುತ್ತವೆ.

ಪಶ್ಚಿಮ ದಂಡೆಯ ಫೆಲೆಸ್ತೀನಿಗಳಿಗೆ ಲಘು ಹಸಿರು ಬಣ್ಣದ ಕಾರ್ಡ್. ಅವರಿಗೂ ಮತದಾನದ ಹಕ್ಕಿಲ್ಲ. ಅವರು ಹೆಚ್ಚೆಂದರೆ ಪಶ್ಚಿಮದಂಡೆಯ ಸುಮಾರು ಶೇ.40 ಭಾಗದಲ್ಲಿ ಸಂಚರಿಸಬಹುದು. ಅಲ್ಲಿಂದ ಹೊರಹೋದರೆ ಅವರು ಹಲವು ಬಗೆಯ ಕಠಿಣ ನಿರ್ಬಂಧಗಳಿಗೆ ತುತ್ತಾಗುತ್ತಾರೆ.

ಆರಂಭದಲ್ಲಿ ಗಾಝಾ ಪಟ್ಟಿಯ ನಿವಾಸಿ ಫೆಲೆಸ್ತೀನಿಗಳಿಗೂ ಇದೇ ಕಾರ್ಡ್ ಅನ್ನು ನೀಡಲಾಗುತ್ತಿತ್ತು. 2007ರ ಬಳಿಕ ಅವರಿಗೆ ಲಘು ಹಸಿರು ಬಣ್ಣದ

ಕಾರ್ಡ್‌ಗಳನ್ನು ನೀಡಲಾಯಿತು. ಅವರಿಗೆ ಮತದಾನದ ಹಕ್ಕಿಲ್ಲ. ಅವರಲ್ಲಿ ಯಾರಿಗೂ ತಾತ್ಕಾಲಿಕವಾಗಿ ಕೂಡಾ ಗಾಝಾದ ಹೊರಗೆ ವಾಸಿಸಲು ಅನುಮತಿ ಇಲ್ಲ.

ಇಷ್ಟಲ್ಲದೆ ಅವರ್ಣರ ಒಂದು ಬೃಹತ್ ವರ್ಗವೂ ಇದೆ. ಅವರೇ ನಿರಾಶ್ರಿತ ಮತ್ತು ನಿರ್ವಸಿತ ಫೆಲೆಸ್ತೀನಿಯರು. ಅವರಿಗೆ ಯಾವ ಬಣ್ಣದ ಕಾರ್ಡ್ ಕೂಡಾ ಇಲ್ಲ. ಆದ್ದರಿಂದಲೇ ಇಸ್ರೇಲ್‌ನಲ್ಲಿ ಅವರಿಗೆ ಯಾವ ಹಕ್ಕು, ಅಧಿಕಾರಗಳೂ ಇಲ್ಲ. ಮಾತ್ರವಲ್ಲ ಇಸ್ರೇಲ್ ಅಥವಾ ಆಕ್ರಮಿತ ಪ್ರದೇಶಗಳಿಗೆ ಮರಳಿ ಹೋಗುವ ಅವಕಾಶವೂ ಇಲ್ಲ. ಅವರು ಯಾವುದಾದರೂ ಸಣ್ಣ ಕೊಳಚೆ ಪ್ರದೇಶದಲ್ಲಿ, ತೀರಾ ಸೀಮಿತ ಸಂಖ್ಯೆಯಲ್ಲಿ ವಾಸಿಸುತ್ತಿರುವ ಪುಟಾಣಿ ಸಮುದಾಯವೇನಲ್ಲ. ಇಸ್ರೇಲ್‌ನ ನೆರೆಯ ಅರಬ್ ದೇಶಗಳಲ್ಲಿ ಮತ್ತು ಜಗತ್ತಿನ ವಿವಿಧ ಭಾಗಗಳಲ್ಲಿ ಚದುರಿಕೊಂಡಿರುವ ಈ ಅವರ್ಣರ ಸಂಖ್ಯೆ ಸುಮಾರು 60 ಲಕ್ಷದಷ್ಟಿದೆ.

ರಸ್ತೆಯಲ್ಲಿ ನಡೆದಾಡುವ ಹಕ್ಕಿನಿಂದ ಆರಂಭಿಸಿ ಶಾಲೆಗೆ ಸೇರ್ಪಡೆ, ಆಸ್ಪತ್ರೆಗೆ ದಾಖಲಾತಿ, ನೌಕರಿ, ಬ್ಯಾಂಕ್ ಖಾತೆ, ಕೌಟುಂಬಿಕ ಸಮಾರಂಭಗಳಲ್ಲಿ ಹಾಜರಾತಿ ಹೀಗೆ ಎಲ್ಲದರಲ್ಲೂ ಈ ಕಾರ್ಡ್‌ನ ಪಾತ್ರ ನಿರ್ಣಾಯಕವಾಗಿರುತ್ತದೆ. 1993 ರಲ್ಲಿ ಆಕ್ರಮಿತ ಪ್ರದೇಶಗಳ ಸ್ಥಳೀಯ ಆಡಳಿತವು ಫೆಲೆಸ್ತೀನ್ ಪ್ರಾಧಿಕಾರದ ಸರಕಾರಕ್ಕೆ ವರ್ಗವಾದ ಬಳಿಕವೂ ಇಲ್ಲಿ ಪ್ರಸ್ತುತ ಕಾರ್ಡ್‌ಗಳನ್ನು ಒದಗಿಸುವ ಅಧಿಕಾರ ಮಾತ್ರ ಇಸ್ರೇಲಿ ಮಿಲಿಟರಿ ಅಧಿಕಾರಿಗಳ ಕೈಯಲ್ಲೇ ಉಳಿದಿದೆ. ಪಶ್ಚಿಮ ದಂಡೆ ಮತ್ತು ಗಾಝಾ ಪಟ್ಟಿಯಲ್ಲಿ ಕಾರ್ಡ್ ಒದಗಿಸುವ ವಿಷಯದಲ್ಲಿ ಫೆಲೆಸ್ತೀನ್ ಆಡಳಿತಕ್ಕಿರುವುದು ಕೇವಲ ಗುಮಾಸ್ತರ ಪಾತ್ರ ಮಾತ್ರ. ಯಾರು ಯಾವ ಭಾಗದ ನಿವಾಸಿ ಮತ್ತು ಯಾರು ಯಾವ ಕಾರ್ಡ್‌ಗೆ ಅರ್ಹರು ಎಂಬುದನ್ನೆಲ್ಲಾ ಇಸ್ರೇಲ್ ಸರಕಾರವೇ ನಿರ್ಧರಿಸುತ್ತದೆ. ಇಸ್ರೇಲ್ ಸರಕಾರವು ಜನಗಣತಿ ಪಟ್ಟಿಯಿಂದ ಹೊರಗಿಟ್ಟವರಿಗೆ ಕಾರ್ಡ್ ಒದಗಿಸುವ ಹಕ್ಕು ಫೆಲೆಸ್ತೀನ್ ಸರಕಾರಕ್ಕೂ ಇಲ್ಲ. ಈರೀತಿ ಇಸ್ರೇಲ್ ಸರಕಾರವು ಜನಗಣತಿ ದಾಖಲೆಯ ಮೂಲಕ ಗುರುತು ಚೀಟಿಗಳನ್ನು ಮತ್ತು ಗುರುತು ಚೀಟಿಗಳ ಮೂಲಕ ನಾಗರಿಕರ ಸಂಚಾರ ಹಾಗೂ ಚಲನವಲನವನ್ನು ನಿಯಂತ್ರಿಸುತ್ತದೆ.

ಆಕ್ರಮಿತ ಪಶ್ಚಿಮ ದಂಡೆಯೊಳಗೆ ಅಲ್ಲಲ್ಲಿ ಚೆಕ್ ಪೋಸ್ಟ್‌ಗಳಿದ್ದು, ಯಾರಿಗೂ ಕಾರ್ಡ್ ಇಲ್ಲದೆ ಆ ಚೆಕ್‌ಪೋಸ್ಟ್‌ಗಳನ್ನು ದಾಟಿ ಹೋಗಲಿಕ್ಕಾಗುವುದಿಲ್ಲ. ಈ ರೀತಿ ಸ್ವತಃ ತಮ್ಮದೇ ಸೀಮಿತ ಪ್ರದೇಶದೊಳಗೂ ಫೆಲೆಸ್ತೀನಿಗಳ ಚಲನೆ ತೀವ್ರ ನಿರ್ಬಂಧಕ್ಕೆ ಒಳಪಟ್ಟಿರುತ್ತದೆ. ದಕ್ಷಿಣ ಆಫ್ರಿಕಾದ ಬಿಳಿಯ ಜನಾಂಗವಾದಿ ಸರಕಾರವು ಅಲ್ಲಿನ ಕರಿಯರನ್ನು ಮತ್ತು ಮಿಶ್ರ ವರ್ಣೀಯರನ್ನು ನಿಯಂತ್ರಿಸಲಿಕ್ಕಾಗಿ ಇದೇ ವಿಧಾನವನ್ನು ಬಳಸಿತ್ತು. ಇಸ್ರೇಲ್ ಮತ್ತದರ ಆಕ್ರಮಿತ



ಚೆಕ್ ಪೋಸ್ಟ್

ಪ್ರದೇಶಗಳ ಅರಬ್ ನಾಗರಿಕರು ಕಳೆದ ಐದು ದಶಕಗಳಿಂದ ಈ ಬಗೆಯ ನಿರ್ಬಂಧದಡಿಯಲ್ಲಿ ನರಳುತ್ತಿದ್ದಾರೆ. ನಿರ್ಬಂಧಗಳ ಸ್ವರೂಪ ದಿನೇದಿನೇ ಹೆಚ್ಚೆಚ್ಚು ಕ್ಲಿಷ್ಟವಾಗುತ್ತಾ ಸಾಗಿದೆ. ಫೆಲೆಸ್ತೀನ್‌ನ ನಾಗರಿಕರು ಪಶ್ಚಿಮ ದಂಡೆಯಿಂದ ಗಾಝಾ ಪಟ್ಟಿಗೆ ಅಥವಾ ಗಾಝಾ ಪಟ್ಟಿಯಿಂದ ಪಶ್ಚಿಮ ದಂಡೆಗೆ ಪ್ರಯಾಣಿಸ ಬೇಕಿದ್ದರೆ ಇಸ್ರೇಲ್ ಸರಕಾರದಿಂದ ವಿಶೇಷ ಅನುಮತಿ ಪತ್ರವೊಂದನ್ನು ಪಡೆಯಬೇಕಾಗುತ್ತದೆ. ಪ್ರಸ್ತುತ ಎರಡೂ ಪ್ರದೇಶಗಳನ್ನು ಕಟ್ಟುನಿಟ್ಟಿನ ನಿಯಂತ್ರಣದಲ್ಲಿಟ್ಟುಕೊಳ್ಳಲಿಕ್ಕಾಗಿ ಇಸ್ರೇಲ್ ಸರಕಾರವು ಅವುಗಳ ನಿಯಂತ್ರಣವನ್ನು ತನ್ನದೇ ಮಿಲಿಟರಿಯ ಎರಡು ಪ್ರತ್ಯೇಕ ಕಮಾಂಡರ್‌ಗಳಿಗೆ ವಹಿಸಿದೆ.

1967 ಮತ್ತು 1994ರ ಮಧ್ಯೆ ಇಸ್ರೇಲ್ ಸರಕಾರವು ವಿವಿಧ ಕುಂಟು ನೆಪಗಳನ್ನು ಮುಂದಿಟ್ಟು 1,30,000ಕ್ಕೂ ಹೆಚ್ಚು ನೋಂದಾಯಿತ ಫೆಲೆಸ್ತೀನಿ ನಿವಾಸಿಗಳ ಐಡಿ ಕಾರ್ಡ್‌ಗಳನ್ನು ಶಾಶ್ವತವಾಗಿ ರದ್ದುಗೊಳಿಸಿದೆ. ವರ್ಷ 2000 ದಿಂದಲಂತೂ ಇಸ್ರೇಲ್ ಸರಕಾರವು ಸ್ಥಳೀಯ ಅರಬ್ ನಿವಾಸಿಗಳಿಗೆ ಮನೆ ಬದಲಾವಣೆ, ಪ್ರಾಂತ ಬದಲಾವಣೆ, ವಿಳಾಸ ಬದಲಾವಣೆ ಇತ್ಯಾದಿ ಯಾವುದೇ ಆಧಾರದಲ್ಲಿ ಹೊಸ ಅಥವಾ ಪರಿಷ್ಕೃತ ಕಾರ್ಡ್‌ಗಳನ್ನು ಒದಗಿಸುವ ಸವಲತ್ತನ್ನೂ ನಿಲ್ಲಿಸಿಬಿಟ್ಟಿದೆ. ಇದರಿಂದಾಗಿ ಒಬ್ಬ ವ್ಯಕ್ತಿಗೆ ಎಷ್ಟು ತುರ್ತು ಅಗತ್ಯವಿದ್ದರೂ ಅವನು ತನ್ನ ಮನೆ ಬದಲಾಯಿಸಲು ಸಾಧ್ಯವಾಗುವುದಿಲ್ಲ. ವಿಶೇಷವಾಗಿ ಶಿಕ್ಷಣಕ್ಕಾಗಿ ಗಾಝಾ ಪಟ್ಟಿ ಮತ್ತು ಪಶ್ಚಿಮ ದಂಡೆಯ ನಡುವೆ ಪ್ರಯಾಣಿಸಬಯಸುವ ಸಾವಿರಾರು ವಿದ್ಯಾರ್ಥಿಗಳ ಶಿಕ್ಷಣವು ಈ ನಿರ್ಬಂಧಗಳಿಂದಾಗಿ ಮೊಟಕುಗೊಂಡಿದೆ. ಒಟ್ಟಿನಲ್ಲಿ ಫೆಲೆಸ್ತೀನ್‌ನ ಮೂಲ

ನಿವಾಸಿಗಳು ತಮ್ಮದೇ ನಾಡಿನಲ್ಲಿ ಕಠಿಣ ಸೆರೆವಾಸದ ಸ್ಥಿತಿಯಲ್ಲಿದ್ದಾರೆ.

2005ರಲ್ಲಿ ಇಸ್ರೇಲಿನ ಯಹೂದಿಗಳ ಖಾಸಗಿ ಮಾನವಹಕ್ಕು ಸಂಸ್ಥೆಯೊಂದು (B'Tselem) ನಡೆಸಿದ ಸಮೀಕ್ಷೆಯಿಂದ ತಿಳಿದು ಬಂದಂತೆ, ಪಶ್ಚಿಮ ದಂಡೆ ಅಥವಾ ಗಾಝಾದಲ್ಲಿರುವ ನೋಂದಾಯಿತ ಫೆಲೆಸ್ತೀನ್ ನಾಗರಿಕರ ಪೈಕಿ 6,40,000 ಮಂದಿಯ (ಶೇ.17.2) ತಂದೆ, ತಾಯಿ, ಮಕ್ಕಳು, ಪತಿ, ಪತ್ನಿ ಅಥವಾ ಸಹೋದರ ಸಹೋದರಿಯರ ಪೈಕಿ ಯಾರಾದರೊಬ್ಬರನ್ನು, ಸ್ಥಳೀಯ ನಿವಾಸಿ ಎಂದು ನೋಂದಾಯಿಸಲು ಮಿಲಿಟರಿ ಮತ್ತು ಸರಕಾರಿ ಅಧಿಕಾರಿಗಳು ನಿರಾಕರಿಸಿದ್ದಾರೆ. ಹೆಚ್ಚಿನ ಪ್ರಕರಣಗಳಲ್ಲಿ ಅಧಿಕಾರಿಗಳು ತಮ್ಮ ನಿರಾಕರಣೆಗೆ ಯಾವುದೇ ಕಾರಣವನ್ನೂ ತಿಳಿಸಿಲ್ಲ. ಈ ರೀತಿ, ವಿರಹವೆಂಬುದು ಅಷ್ಟೊಂದು ದೊಡ್ಡ ಸಂಖ್ಯೆಯ ಫೆಲೆಸ್ತೀನಿಗಳ ಬದುಕಿನ ನಿತ್ಯಭಾಗ್ಯವಾಗಿ ಬಿಟ್ಟಿದೆ.

**ಉಸಿರು ಗಟ್ಟಿಸುವ ಚೆಕ್ ಪಾಯಿಂಟ್‌ಗಳ ಹಾವಳಿ**

ಪಶ್ಚಿಮ ದಂಡೆಯಲ್ಲಿ ಇಸ್ರೇಲ್‌ನಿಂದ ವರ್ಕ್ ಪರ್ಮಿಟ್ ಪಡೆದಿರುವ 70,000ಕ್ಕೂ ಹೆಚ್ಚಿನ ಕಾರ್ಮಿಕರಿದ್ದಾರೆ. ಅವರು ತಮ್ಮ ಉದ್ಯೋಗಕ್ಕಾಗಿ ನಿತ್ಯ ಪ್ರಯಾಣಿಸಬೇಕಾಗುತ್ತದೆ. ಆದರೆ ಅಲ್ಲಿ ಪ್ರಯಾಣಿಸುವುದೆಂದರೆ ಹಿಮಾಲಯ ಹತ್ತುವುದಕ್ಕಿಂತಲೂ ಹೆಚ್ಚು ಪ್ರಯಾಸದ ಸಾಹಸವಾಗಿರುತ್ತದೆ. ಕೇವಲ ಪಶ್ಚಿಮ ದಂಡೆಯೊಂದರಲ್ಲೇ ಇಸ್ರೇಲ್ ಸರಕಾರ 140 ಮಿಲಿಟರಿ ಚೆಕ್ ಪಾಯಿಂಟ್‌ಗಳ ಸಹಿತ 700 ಕ್ಕೂ ಹೆಚ್ಚು ರಸ್ತೆ ತಡೆಗಳನ್ನು ನಿರ್ಮಿಸಿದೆ. ಯಾವುದೇ ಕಾರಣಕ್ಕಾಗಿ ಒಂದೆಡೆಯಿಂದ ಇನ್ನೊಂಡೆಗೆ ತಲುಪ ಬಯಸುವವರು ರಸ್ತೆತಡೆಗಳನ್ನು ದಾಟುತ್ತಾ ತೀರಾ ನಿಧಾನಗತಿಯಲ್ಲಿ ಪ್ರಯಾಣಿಸಬೇಕು. ಮಾತ್ರವಲ್ಲ, ಚೆಕ್ ಪಾಯಿಂಟ್‌ಗಳಲ್ಲಿ ಪದೇ ಪದೇ ತಪಾಸಣೆಗೆ ಒಳಗಾಗಬೇಕು. ಇದರ ಪರಿಣಾಮವಾಗಿ ತುರ್ತು ಚಿಕಿತ್ಸೆಗೆಂದು ಹೋಗುವ ಎಷ್ಟೋ ಮಂದಿ ಚೆಕ್ ಪಾಯಿಂಟ್‌ಗಳಲ್ಲಿ ಕೊನೆಯುಸಿರೆಳೆಯುತ್ತಾರೆ. ತುರ್ತಾಗಿ ಹೆರಿಗೆಗೆಂದು ಆಸ್ಪತ್ರೆಗೆ ಧಾವಿಸುತ್ತಿರುವ ಎಷ್ಟೋ ಮಹಿಳೆಯರು ಒಂದೋ ಚೆಕ್ ಪಾಯಿಂಟ್‌ಗಳಲ್ಲೇ ಹೆರುತ್ತಾರೆ ಅಥವಾ ಹೆರುವ ಶ್ರಮದಲ್ಲಿ ರಕ್ತಸ್ರಾವವಾಗಿ, ವೈದ್ಯಕೀಯ ನೆರವು ಸಿಗದೇ ರಸ್ತೆಯಲ್ಲೇ ಸಾಯುತ್ತಾರೆ.

**ವೈದ್ಯಕೀಯ ಜನಾಂಗವಾದ**

ಒಂದು ಸಮಾಜದಲ್ಲಿ ಜನಾಂಗವಾದ ಬಂತೆಂದರೆ ಅಲ್ಲಿ ಮಾನವೀಯತೆ ಸತ್ತು ಮಣ್ಣಾಯಿತು ಎಂದೇ ಅರ್ಥ. ವೃತ್ತಿಪರ ಅಪರಾಧಿಗಳು ಮತ್ತು ದರೋಡೆಕೋರರು ಕೂಡಾ ಹಲವೊಮ್ಮೆ ಮಾನವೀಯ ಅನುಕಂಪ ತೋರುವುದುಂಟು. ವೃದ್ಧರು,

ಮಹಿಳೆಯರು ಮತ್ತು ಮಕ್ಕಳ ಮೇಲೆ ದಯೆ ತೋರುವುದುಂಟು. ಆದರೆ ಜನಾಂಗವಾದ ಹಾಗಲ್ಲ. ಇಲ್ಲಿ ಸಂತೃಪ್ತಿ ಮತ್ತು ವಿಜಯದ ಸಂಭ್ರಮ ಸಿಗುವುದೇ ಕ್ರೌರ್ಯ ಮತ್ತು ಅಮಾನುಷತೆ ಮೆರೆಯುವುದರಲ್ಲಿ.

ಇಸ್ರೇಲ್ ಸರಕಾರವು ತನ್ನ ಮಿಲಿಟರಿ ಆಡಳಿತದಲ್ಲಿರುವ ಆಕ್ರಮಿತ ಫೆಲೆಸ್ತೀನ್‌ನ ಪ್ರದೇಶಗಳ ಜನರ ಚಲನೆಯ ಮೇಲೆ ಮಾತ್ರವಲ್ಲ ಅಲ್ಲಿ ಸರಕು – ಸಾಮಾನುಗಳ ಸಾಗಾಟದ ಮೇಲೂ ಅಪಾರ ನಿರ್ಬಂಧಗಳನ್ನು ಹೇರಿದೆ. ಪ್ರಸ್ತುತ ಪ್ರದೇಶದ ಯಾವುದೇ ವಿಮಾನ ನಿಲ್ದಾಣ ಅಥವಾ ಬಂದರಿನ ಮೇಲೆ ಫೆಲೆಸ್ತೀನ್ ಜನತೆಗಾಗಲಿ ಅವರನ್ನು ಪ್ರತಿನಿಧಿಸುವ ಪ್ರಾಧಿಕಾರಗಳಿಗಾಗಲಿ ಯಾವುದೇ ನಿಯಂತ್ರಣವಿಲ್ಲ. ಆದ್ದರಿಂದ ಅದೆಷ್ಟೋ ಅತ್ಯಾವಶ್ಯಕ ಔಷಧಿಗಳು ಮತ್ತು ವೈದ್ಯಕೀಯ ಸಲಕರಣೆಗಳು ಫೆಲೆಸ್ತೀನಿನ ಆಸ್ಪತ್ರೆಗಳ ಪಾಲಿಗೆ ಅಲಭ್ಯವಾಗಿವೆ. ಲೇಸರ್ ಮೂಲದ ಎಷ್ಟೋ ಯಂತ್ರಗಳ ಸಾಗಣೆಯನ್ನು ಇಸ್ರೇಲ್ ಸರಕಾರವು ಸ್ಪಷ್ಟವಾಗಿ ನಿಷೇಧಿಸಿದೆ.

ಸಂಚಾರದ ಮೇಲಿನ ನಿರ್ಬಂಧಗಳು ಮತ್ತು ದಾಖಲೆಪತ್ರಗಳ ಕುರಿತಾದ ವಿಪರೀತ ಔಪಚಾರಿಕತೆಯು ಇಲ್ಲಿ ಅನೇಕ ದುರಂತಗಳಿಗೆ ಕಾರಣವಾಗಿದೆ. ಉದಾ: ಮಾನವಹಕ್ಕು ಸಂಸ್ಥೆಯೊಂದರ ವರದಿ ಪ್ರಕಾರ 2017ರ ಒಂದೇ ವರ್ಷದಲ್ಲಿ, ಚಿಕಿತ್ಸೆಗಾಗಿ ಪ್ರಯಾಣಿಸಲು ಅನುಮತಿಗಾಗಿ ಅರ್ಜಿ ಸಲ್ಲಿಸಿ, ಅನುಮತಿ ಸಿಗದ ಕಾರಣ ಗಾಝಾದಲ್ಲಿ 46 ಫೆಲೆಸ್ತೀನಿ ಕ್ಯಾನ್ಸರ್ ರೋಗಿಗಳು ಜೀವಕಳೆದುಕೊಂಡಿದ್ದಾರೆ.

## ಇಸ್ರೇಲ್‌ನ ಕೋವಿಡ್ ಜನಾಂಗವಾದ



ಮೈಕೆಲ್ ಚೇ

ಇಸ್ರೇಲನ್ನು ಹೊಗಳುವುದನ್ನೇ ವೃತ್ತಿಯಾಗಿಸಿಕೊಂಡಿರುವ ಕೆಲವು ಬಕ್ಕೆಟ್ ವಲಯಗಳು ಇಸ್ರೇಲ್ ಸರಕಾರವು ಕೋವಿಡ್ ನಿಯಂತ್ರಣದ ವಿಷಯದಲ್ಲಿ ಭಾರೀ ದಕ್ಷತೆ ಮೆರೆದಿದೆ ಎಂದು ಅಲ್ಲಲ್ಲಿ ಮಂತ್ರ ಜಪಿಸುವುದು ಕಂಡು ಬಂದಿದೆ. ಆದರೆ ಕೋವಿಡ್ ಲಸಿಕೆಯ ವಿತರಣೆಯ ವೇಳೆ ಇಸ್ರೇಲ್ ತೋರಿದ ಅಕ್ಷಮ್ಯ ಜನಾಂಗವಾದವು ಜಗತ್ತಿನ ಗಮನಕ್ಕೆ ಬರುವಷ್ಟು ನಿಚ್ಚಳವಾಗಿತ್ತು. ಜಾಗತಿಕ ಮಾನ್ಯತೆ ಇರುವ ಖ್ಯಾತ ಮಾನವಹಕ್ಕು

ಸಂರಕ್ಷಣಾ ಸಂಘಟನೆ ಹ್ಯೂಮನ್ ರೈಟ್ಸ್ ವಾಚ್ (HRW) ವರದಿ ಪ್ರಕಾರ, ಮಾರ್ಚ್ ತಿಂಗಳ ಹೊತ್ತಿಗೆ ಇಸ್ರೇಲ್‌ನೊಳಗಿನ ಇಸ್ರೇಲಿಗಳು ಕೋವಿಡ್ ಪಿಡುಗಿನಿಂದ ತಾವು ಮುಕ್ತರಾಗುತ್ತಿದ್ದೇವೆಂದು ನೆಮ್ಮದಿಯ ನಿಟ್ಟುಸಿರು ಬಿಡತೊಡಗಿದ್ದರು. ಆದರೆ ಅದೇ ವೇಳೆ, ಇಸ್ರೇಲ್‌ನ ನಿಯಂತ್ರಣದಲ್ಲಿರುವ ಪ್ರದೇಶಗಳ 50 ಲಕ್ಷಕ್ಕೂ ಅಧಿಕ ಫೆಲೆಸ್ತೀನ್ ನಾಗರಿಕರು ಲಸಿಕೆಗಳಿಗಾಗಿ ಪರದಾಡುತ್ತಿದ್ದರು. ಅವರಿಗೆ ಲಸಿಕೆಗಳನ್ನು ಒದಗಿಸುವ ನಿಟ್ಟಿನಲ್ಲಿ ಇಸ್ರೇಲ್ ಸರಕಾರ ಯಾವುದೇ ಆಸಕ್ತಿ ವಹಿಸಲಿಲ್ಲ. ಸರಕಾರದ ಉತ್ಸಾಹವೆಲ್ಲ ಆ ಪ್ರದೇಶಗಳಲ್ಲಿರುವ ಯಹೂದಿ ವಲಸಿಗರಿಗೆ ಲಸಿಕೆ ತಲುಪಿಸುವುದಕ್ಕೆ ಸೀಮಿತವಾಗಿತ್ತು. ಸಾಲದ್ದಕ್ಕೆ ಆ ಪ್ರದೇಶಗಳಲ್ಲಿ ಜನ ಸಂಚಾರ ಮತ್ತು ಸರಕು ಸಾಗಣೆಯ ಮೇಲೆ ತಾನು ಹೇರಿರುವ ಕಠಿಣ ನಿರ್ಬಂಧಗಳನ್ನು ಸಡಿಲಿಸುವುದಕ್ಕೂ ನಿರಾಕರಿಸಿತು. ಈ ಮೂಲಕ, ಫೆಲೆಸ್ತೀನ್ ಪ್ರಾಧಿಕಾರದವರು ಕೂಡ ಲಸಿಕೆಗಳನ್ನು ಹೊರಗಿನಿಂದ ತರಿಸಿಕೊಳ್ಳದಂತೆ ಇಸ್ರೇಲ್ ಸರಕಾರ ನೋಡಿಕೊಂಡಿತು.

ಈ ಹಿನ್ನೆಲೆಯಲ್ಲಿ, ಅಮೆರಿಕದ ಜನಪ್ರಿಯ ಕಾಮಿಡಿ ಶೋ 'ಸಾಟರ್ಡೆ ನೈಟ್ ಲೈವ್'ನಲ್ಲಿ ಖ್ಯಾತ ಕಾಮಿಡಿ ಕಲಾವಿದ ಮೈಕೆಲ್ ಚೇ ಹಾರಿಸಿದ ಒಂದು ಚಟಾಕಿ ಬಹಳ ಚರ್ಚಿತವಾಗಿತ್ತು. "ತಾನು ಈಗಾಗಲೇ ತನ್ನ ಅರ್ಧ ಜನಸಂಖ್ಯೆಗೆ ಕೋವಿಡ್ ಲಸಿಕೆ ನೀಡಿ ಆಗಿದೆ ಎಂದು ಇಸ್ರೇಲ್ ಸರಕಾರ ಹೇಳಿಕೊಂಡಿದೆ. ನನಗನಿಸುವಂತೆ ಅದು ಅಲ್ಲಿನ ಯಹೂದಿ ಜನಸಂಖ್ಯೆ ಇರಬಹುದು" ಎಂದು ಅವರು ಹೇಳಿದ್ದರು. ಇದರ ವಿರುದ್ಧ ಬಕ್ಕೆಟ್ ವಲಯಗಳು ತುಂಬಾ ರೇಗಾಡಿದ್ದವು.

ಗಾಝಾದಲ್ಲಿ ಬದುಕುವುದೆಂದರೆ... 2017ರಲ್ಲಿ ವಿಶ್ವಸಂಸ್ಥೆ ಪ್ರಕಟಿಸಿದ ಒಂದು ವರದಿಯ ಪ್ರಕಾರ ಇಸ್ರೇಲ್ ಆಕ್ರಮಿತ ಗಾಝಾದಲ್ಲಿ ಪರಿಸ್ಥಿತಿ ದಿನಗಳೆದಂತೆ ಬಿಗಡಾಯಿಸುತ್ತಿದ್ದು, ಆ ಪ್ರದೇಶವು ಮಾನವ ಬದುಕಿಗೆ ಅಯೋಗ್ಯವಾಗಿ ಬಿಟ್ಟಿದೆ. 2007ರಲ್ಲಿ ಗಾಝಾದ ಮೇಲೆ ಇಸ್ರೇಲ್ ಸರಕಾರವು ದಿಗ್ಬಂಧನ ಹೇರಿದ ಬಳಿಕ ಅಲ್ಲಿನ ಕೈಗಾರಿಕೆ ಸಂಪೂರ್ಣ ಕುಸಿದು ಬಿದ್ದಿದೆ. ನಿರುದ್ಯೋಗದ ಪ್ರಮಾಣವೂ ಶೇ.42 ರಷ್ಟಿದೆ. ಅಲ್ಲಿ ಲಭ್ಯವಿರುವ ಹೆಚ್ಚಿನ ನೀರು ಕುಡಿಯಲು ಯೋಗ್ಯವಾಗಿಲ್ಲ. ದಿನಕ್ಕೆ ಹೆಚ್ಚೆಂದರೆ ಮೂರರಿಂದ ನಾಲ್ಕು ಗಂಟೆ ಮಾತ್ರ ವಿದ್ಯುತ್ ಲಭ್ಯವಿರುತ್ತದೆ. ಸ್ಥಳೀಯರು ಮತ್ತು ಸರಕಾರದ ನಡುವೆ ಘರ್ಷಣೆ ಏರ್ಪಟ್ಟರಂತೂ



ವಿದ್ಯುತ್ ಸಂಪೂರ್ಣ ಇಲ್ಲವಾಗಿ ಎಲ್ಲಡೆ ಕತ್ತಲು ಕವಿದು ಬಿಡುತ್ತದೆ.

ಇಸ್ರೇಲ್ ಕಡೆಯಿಂದ ಪದೇ ಪದೇ ನಡೆಯುವ ಕ್ರೂರ ಮಿಲಿಟರಿ ಕಾರ್ಯಾಚರಣೆಗಳು ಗಾಝಾದ ಪ್ರಾಥಮಿಕ ಪೌರ ಸವಲತ್ತುಗಳನ್ನು ನಾಶ ಮಾಡಿರುವುದು ಮಾತ್ರವಲ್ಲದೆ ಅಲ್ಲಿನ ಪುಟ್ಟ, ಮುಗ್ಧ ಮಕ್ಕಳ ಮಾನಸಿಕ ಆರೋಗ್ಯದ ಮೇಲೂ ತೀವ್ರ ದುಷ್ಪರಿಣಾಮಗಳನ್ನು ಬೀರಿವೆ. ಗಾಝಾದ ಕಮ್ಯೂನಿಟಿ ಮೆಂಟಲ್ ಹೆಲ್ತ್ ಸಂಸ್ಥೆಯ ವರದಿ ಪ್ರಕಾರ ಅಲ್ಲಿನ ಶೇ.51 ಮಕ್ಕಳು PTSD ಎಂಬ ಮಾನಸಿಕ ಅಸ್ವಸ್ಥದಿಂದ ಬಳಲುತ್ತಿದ್ದಾರೆ.

❖ ❖ ❖

# 5


# ಇಸ್ರೇಲ್ ಜನಾಂಗವಾದಿ ಎಂಬುದು ಕೇವಲ ಆರೋಪವೇ?

ವಿಶ್ವಸಂಸ್ಥೆಯ, ಪಶ್ಚಿಮ ಏಶ್ಯ ಆರ್ಥಿಕ ಮತ್ತು ಸಾಮಾಜಿಕ ಆಯೋಗ (ESCWA) ಸಂಸ್ಥೆಯು 2017ರ ಮೇ ತಿಂಗಳಲ್ಲಿ ಮುಂದಿಟ್ಟ ತನ್ನ ವರದಿಯಲ್ಲಿ, ಇಸ್ರೇಲ್ ಸರಕಾರವು ವರ್ಣಭೇದದ ಹಾಗೂ ಜನಾಂಗವಾದದ ವ್ಯವಸ್ಥೆಯನ್ನು ಫೆಲೆಸ್ತೀನ್ ಜನತೆಯ ಮೇಲೆ ಹೇರುತ್ತಿದೆ ಎಂದು ಬಹಳ ಸ್ಪಷ್ಟವಾಗಿ ಆರೋಪಿಸಿತ್ತು. ಇಸ್ರೇಲ್ ಸರಕಾರವು ಸಂಪೂರ್ಣ ಫೆಲೆಸ್ತೀನ್ ಜನತೆಯನ್ನು ಅಧೀನಗೊಳಿಸುವ ಒಂದು ಜನಾಂಗವಾದಿ ವ್ಯವಸ್ಥೆಯನ್ನು ಸ್ಥಾಪಿಸಿದೆ ಎಂಬುದು ವರದಿಯ ಸಮಾರೋಪ ತೀರ್ಪಾಗಿತ್ತು. ಈ ವರದಿಯ ವಿರುದ್ಧ ಇಸ್ರೇಲ್, ಅಮೆರಿಕ ಮತ್ತು ವಿಶ್ವಸಂಸ್ಥೆಯೊಳಗಿನ ಕೆಲವು ಅಧಿಕಾರಿಗಳು ಭಾರೀ ಆಕ್ರೋಶ ಪ್ರಕಟಿಸಿದ್ದರು. ವರದಿಯನ್ನು ತಿದ್ದುವಂತೆ ಆಯೋಗದ ಅಧ್ಯಕ್ಷೆ ರೀಮಾ ಖಲಾಫ್ ಅವರ ಮೇಲೆ ತುಂಬಾ ಒತ್ತಡ ಹೇರಿದ್ದರು. ಆದರೆ ಖಲಾಫ್ ಅವರು ಒತ್ತಡಕ್ಕೆ ಮಣಿಯುವ ಬದಲು ಆಯೋಗಕ್ಕೆ ರಾಜೀನಾಮೆ ಕೊಟ್ಟು ಬಿಟ್ಟರು.

ಜಾಗತಿಕ ಮಾನ್ಯತೆ ಇರುವ ಮಾನವ ಹಕ್ಕು ರಕ್ಷಕ ಸಂಘಟನೆ 'ಹ್ಯೂಮನ್ ರೈಟ್ಸ್ ವಾಚ್' (HRW) ಈ ವರ್ಷ ಎಪ್ರಿಲ್ 27ರಂದು ಪ್ರಕಟಿಸಿದ 213 ಪುಟಗಳ ಸವಿಸ್ತಾರ ವರದಿಯಲ್ಲಿ ಇಸ್ರೇಲ್ ಸರಕಾರವು ಮಾನವೀಯತೆಯ ವಿರುದ್ಧ

ಜನಾಂಗವಾದದ ಅಪರಾಧ ಎಸಗುತ್ತಿದೆ ಮತ್ತು ಆಕ್ರಮಿತ ಫೆಲೆಸ್ತೀನ್‌ನಲ್ಲೂ ಸ್ವತಃ ಇಸ್ರೇಲ್‌ನ ಒಳಗೂ ಫೆಲೆಸ್ತೀನಿಗಳನ್ನು ದಮನಿಸುವ ಕೆಲಸ ಮಾಡುತ್ತಿದೆ ಎಂದು ಆರೋಪಿಸಿದೆ.

ಸಂಘಟನೆಯ ನಿರ್ದೇಶಕ ಕೆನ್ನೆತ್ ರಾಥ್ ಹೇಳುತ್ತಾರೆ: ಕಳೆದ ಅರ್ಧ ಶತಮಾನದಿಂದ ಫೆಲೆಸ್ತೀನ್ ಪ್ರದೇಶಗಳನ್ನು ಇಸ್ರೇಲ್ ತನ್ನ ಅಕ್ರಮ ವಶದಲ್ಲಿಟ್ಟುಕೊಂಡಿದ್ದು, ಜಗತ್ತಿನ ಹೆಚ್ಚಿನ ಜನರು ಇದು ಒಂದು ತಾತ್ಕಾಲಿಕ ಪ್ರಕ್ರಿಯೆ ಎಂದು ಮತ್ತು ಹಲವು ದಶಕಗಳಿಂದ ನಡೆಯುತ್ತಿರುವ ಶಾಂತಿ ಪ್ರಕ್ರಿಯೆಯ ಫಲವಾಗಿ ಕ್ರಮೇಣ ಆಕ್ರಮಿತ ಪ್ರದೇಶಗಳನ್ನು ತೆರವುಗೊಳಿಸಲಾಗುವುದು ಎಂದು ನಂಬುತ್ತಾ ಬಂದಿದ್ದಾರೆ. ಆದರೆ ಇತ್ತ ಇಸ್ರೇಲ್ ಕಡೆಯಿಂದ ಫೆಲೆಸ್ತೀನ್ ಜನತೆಯನ್ನು ದಮನಿಸುವ ಪ್ರಕ್ರಿಯೆಯು ಚರಮ ಸೀಮೆಯನ್ನು ತಲುಪಿದ್ದು ಶಾಶ್ವತ ಸ್ವರೂಪ ತಾಳಿದೆ. ಈ ಪ್ರಕ್ರಿಯೆಯು ಜನಾಂಗವಾದ ಮತ್ತು ದಮನ ನೀತಿ ಎಂಬ ಅಪರಾಧಗಳಿಗಿರುವ ಎಲ್ಲ ವ್ಯಾಖ್ಯಾನಗಳ ಅನುಸಾರವಾಗಿಯೇ ಇದೆ.


**ಆರ್ಚ್ ಬಿಷಪ್ ದೆಸ್ಮಂಡ್ ಟೂಟು**

ದಕ್ಷಿಣ ಆಫ್ರಿಕದ ಆತ್ಮಸಾಕ್ಷಿ ಎಂದೇ ಖ್ಯಾತರಾಗಿರುವ ವರ್ಣಭೇದ ವಿರೋಧಿ ಹೋರಾಟಗಾರ ಆರ್ಚ್ ಬಿಷಪ್ ದೆಸ್ಮಂಡ್ ಟೂಟು 2002ರಲ್ಲಿ ಜೆರುಸಲೇಮ್‌ಗೆ ಭೇಟಿ ನೀಡಿದ್ದರು. ಭೇಟಿ ಮುಗಿದಾಗ ಅವರು ನೀಡಿದ ಹೇಳಿಕೆ ಹೀಗಿತ್ತು: ಇಸ್ರೇಲ್‌ನಲ್ಲಿ ಫೆಲೆಸ್ತೀನಿಗಳ ಜೊತೆ ಯಾವ ರೀತಿಯಲ್ಲಿ ವರ್ತಿಸಲಾಗುತ್ತಿದೆ ಎಂಬ ಕುರಿತಂತೆ ನಾನು ನೋಡಿದ ದೃಶ್ಯಗಳು ಹಿಂದೆ ದಕ್ಷಿಣ ಆಫ್ರಿಕಾದಲ್ಲಿ ನಮ್ಮ ಕರಿಯ ಜನರನ್ನು ಯಾವ ರೀತಿ ನಡೆಸಿಕೊಳ್ಳಲಾಗಿತ್ತು ಎಂಬುದನ್ನು ನೆನಪಿಸಿತು. ಈ ಅಭಿಪ್ರಾಯವನ್ನು ಅವರು ಮುಂದೆಯೂ ಹಲವು ಬಾರಿ ಪುನರಾವರ್ತಿಸಿದ್ದರು.

### ಇಸ್ರೇಲ್ ಬರ್ಬರತೆಯ ಉದ್ದೇಶ ಆತ್ಮ ರಕ್ಷಣೆಯೇ? ಜನಾಂಗವಾದದ ಅನುಷ್ಠಾನವೇ?

ಇಂದು ಭಾರತ ಸಹಿತ ಹಲವೆಡೆ ಇಸ್ರೇಲ್ ಅನ್ನು ಬೆಂಬಲಿಸುವ ಕೆಲವು ಅಂಧ ಭಕ್ತರು ಫೆಲೆಸ್ತೀನ್‌ನ ವಿವಿಧ ಭಾಗಗಳ ಮೇಲೆ ಇಸ್ರೇಲ್ ನಡೆಸುತ್ತಿರುವ ಬರ್ಬರ ದಾಳಿಯನ್ನು ಬಲವಾಗಿ ಸಮರ್ಥಿಸುತ್ತಿದ್ದಾರೆ. ಫೆಲೆಸ್ತೀನ್‌ನ ಹಮಾಸ್ ನಂತಹ ಕೆಲವು ಸಂಘಟನೆಗಳ ಸದಸ್ಯರು ನಡೆಸಿರುವ ಕೆಲವು ಹಿಂಸಾತ್ಮಕ

ಚಟುವಟಿಕೆಗಳನ್ನು ಮತ್ತು ಅವರು ಎಸೆದಿರುವ, (ಇಸ್ರೇಲ್‌ನ ತಂತ್ರಜ್ಞಾನಕ್ಕೆ ಹೋಲಿಸಿದರೆ ಕೇವಲ ನಾಡ ಪಟಾಕಿಯ ಮಟ್ಟದ) ರಾಕೆಟ್‌ಗಳನ್ನು ಪ್ರಸ್ತಾಪಿಸಿ, ಇಂತಹ ಆಕ್ರಮಣಗಳಿಂದಾಗಿ, ಅತ್ಯುಗ್ರ ಪ್ರತಿಕ್ರಮಗಳನ್ನು ಕೈಗೊಳ್ಳಲು ಇಸ್ರೇಲ್ ಸರಕಾರವು ನಿರ್ಬಂಧಿತವಾಗಿದೆ ಎಂದು ಅವರು ವಾದಿಸುತ್ತಿದ್ದಾರೆ. ಇಂಥವರು ಸ್ವತಃ ಇಸ್ರೇಲ್ ದೇಶದ ಯಹೂದಿ ಮತಸ್ಥರಾದ ಖ್ಯಾತ ಪತ್ರಕರ್ತ ಮೈಖೇಲ್ ಶೇಫರ್ ಅವರ ಒಂದು ಹೇಳಿಕೆಯನ್ನು ಗಮನಿಸಿ, ತಮ್ಮ ಮುಚ್ಚಿದ ಕಣ್ಣುಗಳನ್ನು ತೆರೆಯುವ ಯತ್ನ ನಡೆಸಬೇಕು. "ಹಮಾಸ್ ಎಂಬುದು ಇಸ್ರೇಲ್ ಬಳಸುವ ಒಂದು ಅನುಕೂಲಕರ ಕುಂಟು ನೆಪ ಮಾತ್ರ. ನಿಜವಾಗಿ ಇಸ್ರೇಲ್‌ಗೆ ಅಂತಹ ಯಾವುದೇ ನೆಪದ ಅಗತ್ಯವೇ ಇಲ್ಲ. ಫೆಲೆಸ್ತೀನಿಗಳ ರಾಜಕೀಯ ಚಟುವಟಿಕೆಗಳನ್ನು ಹತ್ತಿಕ್ಕಲಿಕ್ಕಾಗಿ ಮತ್ತು ವಿಶೇಷವಾಗಿ ಅವರ ಜನಸಾಮಾನ್ಯರು ಬೀದಿಗೆ ಬಂದು ಪ್ರತಿಭಟಿಸುವುದನ್ನು ಹಿಂಸಾತ್ಮಕವಾಗಿ ತಡೆಗಟ್ಟಲಿಕ್ಕಾಗಿ ಇಸ್ರೇಲ್‌ಗೆ ಇಂತಹ ನೆಪಗಳ ಅಗತ್ಯ ಎಂದೂ ಇರಲಿಲ್ಲ."

ಹಿಂದೆ ಜೆರುಸಲೇಮ್ ಪೋಸ್ಟ್‌ನಲ್ಲಿ ಹಿರಿಯ ಹುದ್ದೆಯಲ್ಲಿದ್ದ ಶೇಫರ್ ಪ್ರಸ್ತುತ ಹೇಳಿಕೆ ನೀಡಿದ್ದು ಈ ವರ್ಷ ಮೇ ತಿಂಗಳಲ್ಲಿ ಇಸ್ರೇಲ್ ಆರಂಭಿಸಿರುವ ನರಹತ್ಯಾ ಅಭಿಯಾನಕ್ಕೆ ಪ್ರತಿಕ್ರಿಯೆಯಾಗಿ ಅಲ್ಲ. ನಿಜವಾಗಿ ಅವರ ಹೇಳಿಕೆಯು 2018ರ ಮಾರ್ಚ್ 30 ರಂದು ಗಾಝಾದಲ್ಲಿ ಆರಂಭವಾದ 'ಜಿ.ಎಮ್. ಆರ್.' (ಗ್ರೇಟ್ ಮಾರ್ಚ್ ಆಫ್ ರಿಟರ್ನ್) ಅಥವಾ 'ಮಹಾ ಮರಳಿಕೆಯ ಆಂದೋಲನ' ಎಂಬ ದೀರ್ಘ, ಶಾಂತಿಯುತ ಚಳವಳಿ ಮತ್ತು ಅದಕ್ಕೆ ಒದಗಿದ ದಾರುಣ ಗತಿಯನ್ನು ಕಂಡು ನೀಡಿದ ಪ್ರತಿಕ್ರಿಯೆಯಾಗಿತ್ತು.

ವಿಶ್ವಸಂಸ್ಥೆಯು ಪ್ರಸ್ತುತ ದಿಗ್ಬಂಧನವನ್ನು ಅಕ್ರಮ, ಸಾಮೂಹಿಕ ದಂಡನೆ, ಅಮಾನುಷ ಎಂದೆಲ್ಲಾ ಖಂಡಿಸಿದ್ದರೂ ಯಾವುದೇ ಸತ್ಪರಿಣಾಮ ಉಂಟಾಗಲಿಲ್ಲ. ಸಾಲದ್ದಕ್ಕೆ 2008 – 2009, 2012 ಮತ್ತು 2014ರಲ್ಲಿ ವಿವಿಧ ನೆಪಗಳನ್ನೊಡ್ಡಿ ಇಸ್ರೇಲ್ ಸರಕಾರವು ಈ ಪ್ರದೇಶಕ್ಕೆ ತನ್ನ ಪಡೆಗಳನ್ನು ಕಳಿಸಿ ನಡೆಸಿದ 3 ಪ್ರಮುಖ ಕಾರ್ಯಾಚರಣೆಗಳಲ್ಲಿ 90 ಇಸ್ರೇಲಿ ಯೋಧರು ಹತರಾಗಿದ್ದರೆ, ಫೆಲೆಸ್ತೀನಿಗಳ ಪಾಳಯದಲ್ಲಿ ನೂರಾರು ಮಕ್ಕಳ ಸಹಿತ 3,500 ನಾಗರಿಕರು ಕೊಲ್ಲಲ್ಪಟ್ಟಿದ್ದಾರೆ ಮತ್ತು15,000 ಕ್ಕೂ ಹೆಚ್ಚಿನ ನಾಗರಿಕರು ಗಾಯಗೊಂಡಿದ್ದಾರೆ. ಅವರಲ್ಲಿ ಹಲವು ಸಾವಿರ ಮಂದಿ ಶಾಶ್ವತವಾಗಿ ಅಂಗವಿಕಲರಾಗಿ ಬಿಟ್ಟಿದ್ದಾರೆ. (ಆಧಾರ: ಹೆಲ್ತ್ ಅಂಡ್ ಹ್ಯೂಮನ್ ರೈಟ್ಸ್ ಜರ್ನಲ್ Vol - 22/1, June 2020)

ಈ ವಿಪರೀತ ಸನ್ನಿವೇಶದ ಹಿನ್ನೆಲೆಯಲ್ಲಿ 2018 ಮಾರ್ಚ್ 30 ರಂದು ಇಲ್ಲೊಂದು ಚಳವಳಿ ಆರಂಭವಾಯಿತು. ಜಿ.ಎಮ್.ಆರ್. (ಗ್ರೇಟ್ ಮಾರ್ಚ್ ಆಫ್ ರಿಟರ್ನ್) ಎಂದೇ ಖ್ಯಾತವಾಗಿರುವ ಮತ್ತು ಜಗತ್ತಿನ ಹೆಚ್ಚಿನವರ

ಗಮನಸೆಳೆದ ಈ ಪ್ರಶಾಂತ ಚಳವಳಿಯನ್ನು ಕ್ರಮೇಣ ಹಮಾಸ್ ಸಂಘಟನೆಯು ತನ್ನ ನಿಯಂತ್ರಣಕ್ಕೆ ತೆಗೆದು ಕೊಂಡಿತಾದರೂ ಮೂಲತಃ ಇದು ಕೆಲವು ಸಕ್ರಿಯ ಸಾಮಾಜಿಕ ಕಾರ್ಯಕರ್ತರು ಆರಂಭಿಸಿದ ಚಳವಳಿಯಾಗಿತ್ತು. ಅದರಲ್ಲಿ ಫೆಲೆಸ್ತೀನ್‌ನ ಹಲವು ವಿಭಿನ್ನ ವಲಯಗಳ ಪಾತ್ರ ಮತ್ತು ಪ್ರಾತಿನಿಧ್ಯವಿತ್ತು.

1. ಫೆಲೆಸ್ತೀನ್ ಪ್ರದೇಶಗಳ ಮೇಲಿನ ದಿಗ್ಬಂಧನವನ್ನು ಹಿಂದೆಗೆದು ಕೊಳ್ಳಬೇಕು.
2. ಆಕ್ರಮಿತ ಪ್ರದೇಶಗಳಲ್ಲಿ ಜನ ಸಂಚಾರ ಮತ್ತು ಸರಕು ಸಾಗಾಟದ ಮೇಲಿನ ನಿರ್ಬಂಧಗಳನ್ನು ರದ್ದುಗೊಳಿಸಬೇಕು.
3. ಫೆಲೆಸ್ತೀನ್ ವಲಸಿಗರಿಗೆ ಮರಳಿ ತಮ್ಮ ನಾಡಿಗೆ ಬಂದು ನೆಲೆಸಲು ಅನುಮತಿಸಬೇಕು.

– ಇವು ಪ್ರಸ್ತುತ ಚಳವಳಿಗಾರರ ಪ್ರಮುಖ ಬೇಡಿಕೆಗಳಾಗಿದ್ದವು.

ಜನರು, ವಿಶೇಷವಾಗಿ ಹೊಸ ತಲೆಮಾರಿನ ಯುವಕ ಯುವತಿಯರು ದೊಡ್ಡ ಸಂಖ್ಯೆಯಲ್ಲಿ, ಭಾರೀ ಉತ್ಸಾಹದೊಂದಿಗೆ ಈ ಚಳವಳಿಯಲ್ಲಿ ಭಾಗವಹಿಸಿದ್ದರು. ಈ ಚಳವಳಿಯ ಸರಣಿಯಲ್ಲಿ ಪ್ರತಿಭಟನೆಯ ಹಲವು ನೂತನ ಹಾಗೂ ಸೃಜನಶೀಲ ವಿಧಾನಗಳನ್ನು ಬಳಸಿದ್ದರು. ಪ್ರತಿ ಶುಕ್ರವಾರ ಅಥವಾ ವಿಶೇಷ ದಿನಗಳಲ್ಲಿ ಮತಪ್ರದರ್ಶಕರು ಯಾವುದಾದರೂ ಬೀಚ್, ಕ್ರೀಡಾಂಗಣ ಮುಂತಾದ ಸಾರ್ವಜನಿಕ ಸ್ಥಳದಲ್ಲಿ ಅಥವಾ ಗಾಝಾದ ಸುತ್ತ ಇಸ್ರೇಲ್ ಕಟ್ಟಿರುವ ಗಡಿ ಬೇಲಿಯ ಬಳಿ ಬಂದು ಜಮಾಯಿಸುತ್ತಿದ್ದರು. ಈ ಹಿಂದೆ ಇಸ್ರೇಲ್ ಸರಕಾರವು ಬಲವಂತವಾಗಿ ತೆರವುಗೊಳಿಸಿರುವ ಪ್ರದೇಶಗಳಲ್ಲಿರುವ ಹಳೆಯ ಫೆಲೆಸ್ತೀನಿ ಮನೆಗಳು ಮತ್ತು ಐತಿಹಾಸಿಕ ಕಟ್ಟಡಗಳ ಬಳಿ ಬಂದು ಸೇರುತ್ತಿದ್ದರು. ಪ್ರಾಸಬದ್ಧ ಘೋಷಣೆಗಳನ್ನು ಕೂಗುತ್ತಿದ್ದರು. ರಂಗುರಂಗಿನ ಕಲಾಕೃತಿಗಳ ರೂಪದಲ್ಲಿರುವ ಘೋಷಣಾ ಫಲಕಗಳನ್ನು ಪ್ರದರ್ಶಿಸುತ್ತಿದ್ದರು. ಸಾಂಸ್ಕೃತಿಕ ಗಾಯನದ ಧಾಟಿಯಲ್ಲಿ ಕ್ರಾಂತಿಕಾರಿ ಹಾಡುಗಳನ್ನು ಹಾಡುತ್ತಿದ್ದರು. ಫೆಲೆಸ್ತೀನ್ ಧ್ವಜದ ಬಣ್ಣಗಳಿರುವ ಬೆಲೂನ್ ಹಾಗೂ ಗಾಳಿಪಟಗಳನ್ನು ಹಾರಿಸುತ್ತಿದ್ದರು. ವಿಶ್ವಸಂಸ್ಥೆಯ ವರದಿ ಪ್ರಕಾರ ಜಿ.ಎಮ್.ಆರ್. ಪ್ರದರ್ಶನಕಾರರು ನಿಶಸ್ತ್ರರಾಗಿರುತ್ತಿದ್ದರು. ಪೊಲೀಸರ ಕಡೆಯಿಂದ ಅನಗತ್ಯ ಅಡೆ ತಡೆ ಉಂಟಾದಾಗ ಅವರಲ್ಲಿ ಕೆಲವರು ಕಲ್ಲು ತೂರಾಟ ನಡೆಸುತ್ತಿದ್ದರು. ಕೆಲವೆಡೆ ಗಡಿ ಬೇಲಿಯ ಸಮೀಪ ಪೆಟ್ರೋಲ್ ಬಾಂಬ್‌ಗಳನ್ನು ಬಳಸಿದ ಹಾಗೂ ಟಯರ್‌ಗಳನ್ನು ಸುಟ್ಟ ಘಟನೆಗಳೂ ನಡೆದಿದ್ದವು. ಕೆಲವು ಪ್ರತಿಭಟನಾಕಾರರು ದಾಳಿಯ ಮೂಲಕ ಇಸ್ರೇಲ್ ಕಡೆಗೆ ಹಾರಿಸುತ್ತಿದ್ದ ಗಾಳಿಪಟ ಮತ್ತು ಬೆಲೂನುಗಳಲ್ಲಿ ಸಣ್ಣ ದೀಪಗಳಿರುತ್ತಿದ್ದವು. ಇಸ್ರೇಲ್ ಸರಕಾರ ಆರೋಪಿಸುವಂತೆ ಅವು ಇಸ್ರೇಲ್‌ನ ಹೊಲ, ತೋಟ ಮತ್ತಿತರ ಸೊತ್ತುಗಳ ಮೇಲೆ ಬಿದ್ದು, ಬೆಂಕಿ ಹೊತ್ತಿಕೊಂಡು,

ಆ ಸೊತ್ತುಗಳಿಗೆ ಅಪಾರ ಹಾನಿ ಉಂಟು ಮಾಡುತ್ತಿದ್ದವು.

ಆದರೆ, ಅಪವಾದ ಸ್ವರೂಪದ ಹಿಂಸೆಗಳ ಹೊರತಾಗಿಯೂ ಸಾಮಾನ್ಯವಾಗಿ ಶಾಂತಿಯುತವಾಗಿದ್ದ ಈ ಚಳವಳಿ ಇಸ್ರೇಲ್ ಪಾಲಿಗೆ ಸಹನೀಯವಾಗಿರಲಿಲ್ಲ. ಇಸ್ರೇಲ್ ಪಡೆಗಳು ಅನೇಕ ಬಾರಿ ಪ್ರದರ್ಶನಕಾರರ ವಿರುದ್ಧ ಹಿಂಸೆಗಿಳಿದವು. ಡ್ರೋನ್‌ಗಳನ್ನು ಹಾಗೂ ಬಹಳ ದೂರ ಅವಿತಿರುವ ಮುಸುಕುಧಾರಿ ಸ್ನಯಿಪರ್‌ಗಳನ್ನು ಬಳಸಿ ಮತ್ತು ಹಲವೊಮ್ಮೆ ನೇರವಾಗಿ, ಚಳವಳಿ ನಿರತ ನಾಗರಿಕರ ಮೇಲೆ ಗುಂಡು, ಅಶ್ರುವಾಯು ಶೆಲ್, ರಬ್ಬರ್ ಲೇಪಿತ ಗುಂಡು ಇತ್ಯಾದಿಗಳ ಮಳೆ ಸುರಿಸಿದವು. ಒಟ್ಟು ಸುಮಾರು 20 ತಿಂಗಳ ಅವಧಿಯಲ್ಲಿ ಇಸ್ರೇಲ್ ಯೋಧರು 46 ಮಕ್ಕಳ ಸಹಿತ 214 ಫೆಲೆಸ್ತೀನಿಗಳನ್ನು ಕೊಂದು ಹಾಕಿದರು ಮತ್ತು 8,800 ಮಕ್ಕಳ ಸಹಿತ 36,100 ಮಂದಿಯನ್ನು ಗಾಯಗೊಳಿಸಿದರು. ಈ ಪೈಕಿ 8 ಸಾವಿರ ಮಂದಿಗೆ ನೇರವಾಗಿ ಗುಂಡೇಟು ತಗಲಿತ್ತು. ಕೊನೆಗೆ 2019ರ ಕೊನೆಯಲ್ಲಿ ಅನಿವಾರ್ಯವಾಗಿ ಈ ಚಳವಳಿಯನ್ನು ಹಿಂದೆಗೆದುಕೊಳ್ಳಲಾಯಿತು.

ಈ ಚಳವಳಿಯುದ್ದಕ್ಕೂ ಪ್ರದರ್ಶನಕಾರರು ಶಾಂತಿಯುತರಾಗಿದ್ದು ಸಂಯಮ ಪಾಲಿಸಿದ್ದರು ಮತ್ತು ಇಸ್ರೇಲ್ ಪಡೆಗಳು ನಡೆಸಿದ ಹಿಂಸಾಚಾರವೆಲ್ಲಾ ಅಪ್ರಚೋದಿತ ಹಾಗೂ ಏಕಪಕ್ಷೀಯವಾಗಿತ್ತು ಎಂಬುದಕ್ಕೆ ಪುರಾವೆ ಏನೆಂದರೆ, ಪ್ರಸ್ತುತ 20 ತಿಂಗಳ ಅವಧಿಯಲ್ಲಿ ಇಸ್ರೇಲ್ ಕಡೆಯಲ್ಲಿ ಕೇವಲ ಒಬ್ಬ ಸೈನಿಕ ಮಾತ್ರ ಹತನಾಗಿದ್ದು 7 ಮಂದಿ ಮಾತ್ರ ಗಾಯಗೊಂಡಿದ್ದರು !

**ಸಮೂಹ ಹತ್ಯೆಯ ಮುನ್ನೆಚ್ಚರಿಕೆ**

'ಅಲಯನ್ಸ್ ಎಗೇನ್‌ಸ್ಟ್ ಜಿನೋಸೈಡ್' (Alliance Against Genocide) ಇದು ಜಗತ್ತಿನ ಬೇರೆ ಬೇರೆ ಭಾಗಗಳ ಸುಮಾರು 75 ಮಾನವ ಹಕ್ಕು ಸಂಘಟನೆಗಳ ಒಕ್ಕೂಟ. 1999 ರಲ್ಲಿ ಸ್ಥಾಪಿತವಾದ ಈ ಒಕ್ಕೂಟದ ಸಮನ್ವಯ ಸಂಸ್ಥೆಯ ಹೆಸರು 'ಜಿನೋಸೈಡ್ ವಾಚ್' (Genocide Watch). ಜಗತ್ತಿನ ಯಾವುದೇ ಭಾಗದಲ್ಲಿ ಹಿಂಸಾತ್ಮಕ ಘರ್ಷಣೆಗಳು ನಡೆಯುತ್ತಿದ್ದರೆ ಅಥವಾ ಯುದ್ಧದಂತಹ ಸನ್ನಿವೇಶವಿದ್ದರೆ, ಅಲ್ಲಿನ ಪರಿಸ್ಥಿತಿ ಮತ್ತು ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡುವುದು ಮತ್ತು ಅಲ್ಲಿ ಸಾಮೂಹಿಕ ನರಹತ್ಯೆಯ ಸಾಧ್ಯತೆಗಳಿವೆಯೇ ಎಂಬುದನ್ನು ಗುರುತಿಸಿ, ಇದ್ದರೆ ಜಗತ್ತಿಗೆ ಮುನ್ನೆಚ್ಚರಿಕೆ ನೀಡುವುದು ಈ ಸಂಸ್ಥೆಯ ಮುಖ್ಯ ಕೆಲಸ. ತನ್ನ ಕೆಲಸವನ್ನು ಬಹಳ ವಸ್ತುನಿಷ್ಠ ಹಾಗೂ ವೃತ್ತಿಪರವಾಗಿ ಮಾಡಿರುವ ಇತಿಹಾಸ ಈ ಸಂಸ್ಥೆಯ ಹಿಂದೆ ಇರುವುದರಿಂದ ಮತ್ತು ಹಲವು ಸನ್ನಿವೇಶಗಳ ಕುರಿತು ಈ ಸಂಸ್ಥೆ ನೀಡಿರುವ ವಿಶ್ಲೇಷಣೆಗಳು ಮುಂದೆ ಸತ್ಯವೆಂದು ಸಾಬೀತಾಗಿರುವುದರಿಂದ ಅದರ ಮುನ್ನೆಚ್ಚರಿಕೆಗಳನ್ನು ಜಾಗತಿಕ ಬೆಳವಣಿಗೆಗಳ

ವೀಕ್ಷಕರು ಗಂಭೀರವಾಗಿ ಪರಿಗಣಿಸುತ್ತಾರೆ. ಇಸ್ರೇಲ್ – ಫೆಲೆಸ್ತೀನ್ ಪ್ರದೇಶವು ಆರಂಭದಿಂದಲೂ ಈ ಸಂಸ್ಥೆಯ ವೀಕ್ಷಣೆಯಲ್ಲಿದ್ದು, ಅಲ್ಲಿ ಸಮೂಹ ಹತ್ಯೆಯ ಸಾಧ್ಯತೆಗಳ ಬಗ್ಗೆ ಅದು ಎಚ್ಚರಿಸುತ್ತಾ ಬಂದಿದೆ.

ಈ ಸಂಸ್ಥೆ ಮೇ 18ರಂದು ಪ್ರಕಟಿಸಿದ ವರದಿಯ ಪ್ರಕಾರ ಇಸ್ರೇಲ್ ಮತ್ತು ಗಾಝಾ ನಡುವೆ ಸದ್ಯ ನಡೆಯುತ್ತಿರುವ ಘರ್ಷಣೆಯಲ್ಲಿ ಹಮಾಸ್ ಕಡೆಯಿಂದ ಇಸ್ರೇಲ್ ನಾಗರಿಕರ ಮೇಲೆ 3,000 ಕ್ಕೂ ಹೆಚ್ಚಿನ ರಾಕೆಟ್‌ಗಳನ್ನು ಎಸೆಯಲಾಗಿದೆ. ಇದರಲ್ಲಿ ಇಬ್ಬರು ಮಕ್ಕಳ ಸಹಿತ 12 ಮಂದಿ ಇಸ್ರೇಲ್ ನಾಗರಿಕರು ಹತರಾಗಿದ್ದಾರೆ. ಈ ರೀತಿ ಹಮಾಸ್ ಉದ್ದೇಶಪೂರ್ವಕ, ನಾಗರಿಕರನ್ನು ಗುರಿಯಾಗಿಸಿ ದಾಳಿ ಮಾಡುತ್ತಿರುವುದು ಜಿನೇವಾ ಕನ್ವೆನ್ಷನ್ ಪ್ರಕಾರ ಯುದ್ಧಾಪರಾಧವಾಗಿದೆ. ಅತ್ತ ಇಸ್ರೇಲ್ ಭದ್ರತಾ ಪಡೆಗಳು, ನಾಗರಿಕರಿಗೆ ಮುನ್ನೆಚ್ಚರಿಕೆ ನೀಡದೆ, ತೆರವುಗೊಳಿಸಲು ಸಮಯಾವಕಾಶ ನೀಡದೆ ರಾತ್ರಿ ಹೊತ್ತು ಬಾಂಬ್ ದಾಳಿಗಳನ್ನು ನಡೆಸುತ್ತಿವೆ. ಇದರ ಪರಿಣಾಮವಾಗಿ ಈಗಾಗಲೇ ಗಾಝಾದ 100 ಮಕ್ಕಳು ಮತ್ತು ಮಹಿಳೆಯರ ಸಹಿತ 212 ಫೆಲೆಸ್ತೀನಿ ನಾಗರಿಕರು ಹತರಾಗಿದ್ದು ನಾಗರಿಕ ಸವಲತ್ತುಗಳೆಲ್ಲಾ ಧ್ವಂಸವಾಗಿವೆ. ಗಾಝಾದ 52,000 ನಾಗರಿಕರು ನಿರ್ವಸಿತರಾಗಿದ್ದಾರೆ.

ಜಿನೋಸೈಡ್ ವಾಚ್ ಸಂಸ್ಥೆ ಗುರುತಿಸುವಂತೆ ಈ ಪ್ರದೇಶದಲ್ಲಿ ಸನ್ನಿವೇಶವು ಪಕ್ಷಪಾತದ ದೃಷ್ಟಿಯಿಂದ 3ನೇ ಹಂತದಲ್ಲಿ, ಧ್ರುವೀಕರಣದ ದೃಷ್ಟಿಯಿಂದ 6ನೇ ಹಂತದಲ್ಲಿ ಮತ್ತು ದಮನದ ದೃಷ್ಟಿಯಿಂದ 8ನೇ ಹಂತದಲ್ಲಿದೆ. ಇಲ್ಲಿ ಪರಿಸ್ಥಿತಿ ಇನ್ನಷ್ಟು ಹದಗೆಡದೆ ಇರಲು ಸಂಸ್ಥೆಯು ಮಾಡಿರುವ ಶಿಫಾರಸುಗಳು ಹೀಗಿವೆ:

ಇಸ್ರೇಲ್ ಮತ್ತು ಹಮಾಸ್ ತಕ್ಷಣ ಯುದ್ಧ ವಿರಾಮ ಘೋಷಿಸಬೇಕು.

ಎರಡೂ ಕಡೆಯವರು ನೇರ ಮಾತುಕತೆಯನ್ನು ಮತ್ತೆ ಆರಂಭಿಸುವ ಮೂಲಕ ಬಿಕ್ಕಟ್ಟಿನ ಪರಿಹಾರಕ್ಕೆ ಹಾಗೂ ಶಾಂತಿ ಪ್ರಕ್ರಿಯೆಗೆ ಚಾಲನೆ ನೀಡಬೇಕು. ಇಸ್ರೇಲ್ ಸರಕಾರವು ಪಶ್ಚಿಮ ದಂಡೆ ಮತ್ತು ಪೂರ್ವ ಜೆರುಸಲೇಮ್ ನಲ್ಲಿ ತನ್ನ ಅಕ್ರಮ ಬಡಾವಣೆಗಳ ನಿರ್ಮಾಣಕಾರ್ಯವನ್ನು ನಿಲ್ಲಿಸಬೇಕು ಮತ್ತು ಶೇಕ್ ಜರಾ ಸಹಿತ ಎಲ್ಲ ಕಡೆಗಳಲ್ಲಿ ಫೆಲೆಸ್ತೀನ್ ನಾಗರಿಕರನ್ನು ಅವರ ಮನೆಗಳಿಂದ ಹೊರ ಹಾಕಿ ನಿರ್ವಸಿತರಾಗಿಸುವ ಚಟುವಟಿಕೆಯನ್ನು ನಿಲ್ಲಿಸಬೇಕು. ಅಮೆರಿಕ ಸರಕಾರವು ಇಸ್ರೇಲ್ ಸರಕಾರಕ್ಕೆ ನೀಡಲು ಹೊರಟಿರುವ 4 ಶತಕೋಟಿ ಡಾಲರ್‌ಗಳ ನೆರವು ಮತ್ತು ಶಸ್ತ್ರಾಸ್ತ್ರ ಸರಬರಾಜನ್ನು ಶರ್ತಬದ್ಧಗೊಳಿಸಬೇಕು. ಅಮೆರಿಕದ ಸರಕಾರವು ಇಸ್ರೇಲ್‌ಗೆ ತನ್ನ ನೆರವನ್ನು ಮುಂದುವರಿಸಲು, ಇಸ್ರೇಲ್ ಸರಕಾರದ ಮೇಲೆ ಈ ಕೆಳಗಿನ ಷರತ್ತುಗಳನ್ನು ವಿಧಿಸಬೇಕು ಎಂದು ಜಿನೋಸೈಡ್ ವಾಚ್ ಸಂಸ್ಥೆ ಆಗ್ರಹಿಸಿದೆ: ಇಸ್ರೇಲ್ ಸರಕಾರವು ಯುದ್ಧ ವಿರಾಮ

ಘೋಷಿಸಬೇಕು, ಶಾಂತಿ ಮಾತುಕತೆ ಆರಂಭಿಸಬೇಕು ಮತ್ತು ಪಶ್ಚಿಮ ದಂಡೆ ಹಾಗೂ ಪೂರ್ವ ಜೆರುಸಲೇಮ್‌ಗಳಲ್ಲಿ ಹೊಸ ಯಹೂದಿ ಬಡಾವಣೆಗಳ ನಿರ್ಮಾಣವನ್ನು ನಿಲ್ಲಿಸಬೇಕು.

**ಇಸ್ರೇಲ್ ಜನಾಂಗವಾದದ ಅಂತಿಮ ಗುರಿ ಏನು?**

ಫೆಲೆಸ್ತೀನ್ ಜನತೆಯ ವಿರುದ್ಧ ಇಸ್ರೇಲ್ ಇಷ್ಟೊಂದು ಅಮಾನುಷವಾಗಿ ಯಾಕೆ ವರ್ತಿಸುತ್ತಿದೆ? ಇದು ಸಹಸ್ರಾರು ಯಹೂದಿಗಳ ಸಹಿತ ಜಗತ್ತಿನೆಲ್ಲೆಡೆ ಅನೇಕರು ಕೇಳುವ ಪ್ರಶ್ನೆ. ಇಸ್ರೇಲ್ ಸರಕಾರದ ಸ್ಥಾಪನೆ ಮತ್ತು ಅನಂತರದ ಇಸ್ರೇಲ್‌ನ ಹೆಚ್ಚಿನೆಲ್ಲ ಸಾಧನೆಗಳ ಹಿಂದೆ ಸಕ್ರಿಯವಾಗಿರುವುದು 'ಝಿಯೋನಿಸ್ಟ್' ಎಂಬ ಒಂದು ಬಲಿಷ್ಠ ಜನಾಂಗವಾದಿ ಸಂಚುಕೂಟ. ಮಿದುಳು, ಹಣ, ನಂಟುಗಳು, ಸಾಧನಗಳು, ಪ್ರಭಾವ ಮತ್ತು ಸಂಪರ್ಕ ಜಾಲಗಳ ದೃಷ್ಟಿಯಿಂದ ಇದನ್ನು ಜಗತ್ತಿನ ಅತ್ಯಂತ ಬಲಿಷ್ಠ ಖಾಸಗಿ ಗುಂಪುಗಳಲ್ಲೊಂದು ಎಂದು ಪರಿಗಣಿಸಲಾಗುತ್ತದೆ. ಈ ಗುಂಪಿನ ಇರಾದೆಗಳ ಪರಿಚಯ ಇರುವ ಯಾರಿಗೂ ಇಸ್ರೇಲ್‌ನ ಕಿಡಿಗೇಡಿ ನಡವಳಿಕೆಯನ್ನು ಕಂಡು ಅಚ್ಚರಿಯಾಗುವುದಿಲ್ಲ. ಅವರು ಗುರುತಿಸಿರುವಂತೆ ಝಿಯೋನಿಸ್ಟರ ಎಲ್ಲ ಧೋರಣೆ ಮತ್ತು ಕಾರ್ಯಾಚರಣೆಗಳ ಹಿಂದಿನ ಅಂತಿಮ ಗುರಿ ಕೇವಲ ಯಹೂದಿಗಳು ಮಾತ್ರ ಇರುವ ಮತ್ತು ಪ್ರಶ್ನಾತೀತವಾಗಿ ಯಹೂದಿಗಳ ನಿಯಂತ್ರಣದಲ್ಲಿರುವ ಒಂದು ವಿಶಾಲ ಇಸ್ರೇಲ್ ಅನ್ನು ಸ್ಥಾಪಿಸುವುದಾಗಿದೆ. ಭೌಗೋಳಿಕವಾಗಿ ಅವರು ಅಕ್ಕಪಕ್ಕದ ಅರಬ್ ದೇಶಗಳ ಆಯಕಟ್ಟಿನ ಭೂಭಾಗಗಳನ್ನು ವಶಪಡಿಸಿಕೊಳ್ಳುವ ಮೂಲಕ ತಮ್ಮ ಕನಸಿನ ವಿಶಾಲ ಇಸ್ರೇಲ್ ಸ್ಥಾಪನೆಯ ನಿಟ್ಟಿನಲ್ಲಿ ಸಾಕಷ್ಟು ಮುನ್ನಡೆದಿದ್ದಾರೆ. ಇನ್ನಷ್ಟು ಭೂಭಾಗಗಳು ಅವರ ಗುರಿಯಲ್ಲಿದ್ದು ಅವುಗಳನ್ನು ವಶಪಡಿಸಿಕೊಳ್ಳಲು ಬೇಕಾದ ಯೋಜನೆ ಮತ್ತು ಸಿದ್ಧತೆಯೂ ಅವರ ಬಳಿ ಇದೆ. ಇದೀಗ ಬಾಕಿ ಉಳಿದಿರುವ ಅವರ ಇನ್ನೊಂದು ಗುರಿ, ತಮ್ಮ ನಡುವಣ ಇತರೆಲ್ಲ ಭಿನ್ನತೆಗಳ ಹೊರತಾಗಿಯೂ ಕನ್ಯೆ ಮೇರಿಯ ಪುತ್ರ ಏಸುವನ್ನು ಸಮನಾಗಿ ಗೌರವಿಸುವ, ಅರಬ್ ಮೂಲದ ಮುಸ್ಲಿಮರು ಮತ್ತು ಕ್ರೈಸ್ತ ರಿಂದ ಇಸ್ರೇಲನ್ನು ಮುಕ್ತಗೊಳಿಸುವುದಾಗಿದೆ. ಜನಾಂಗೀಯ ಶುಚೀಕರಣದ ಈ ಯೋಜನೆಯನ್ನು ಅನುಷ್ಠಾನಿಸುವುದಕ್ಕಾಗಿ ಅವರು ಅನುಸರಿಸುತ್ತಿರುವ ಹಲವು ಹಂತಗಳ ಸುಸಜ್ಜಿತ ಕಾರ್ಯ ತಂತ್ರ ಹೀಗಿದೆ: ಕಳೆದ ಒಂದು ಶತಮಾನದ ಅವಧಿಯಲ್ಲಿ ಯುದ್ಧ, ಆಕ್ರಮಣ, ದಾರಿದ್ರ್ಯ ಮುಂತಾದ ವಿವಿಧ ಕಾರಣಗಳಿಂದ ಫೆಲೆಸ್ತೀನ್ ನೆಲದಿಂದ ಹೊರತಳ್ಳಲ್ಪಟ್ಟಿರುವ ಅಥವಾ ಹೊರನಾಡುಗಳಿಗೆ ವಲಸೆ ಹೋಗಿರುವ ಫೆಲೆಸ್ತೀನ್ ಮೂಲದ ನಾಗರಿಕರು ಮತ್ತವರ ಸಂತತಿಗಳು ಯಾರೂ ಮತ್ತೆಂದೂ ಮರಳಿ ಫೆಲೆಸ್ತೀನ್‌ಗೆ ಬರದಂತೆ ನೋಡಿಕೊಳ್ಳುವುದು. ಫೆಲೆಸ್ತೀನಿಗಳ ಬಾಹುಳ್ಯವಿರುವ

ಇಸ್ರೇಲ್ ಆಕ್ರಮಿತ ಪ್ರದೇಶಗಳಲ್ಲೂ ಭಾರೀ ಸಂಖ್ಯೆಯಲ್ಲಿ ಯಹೂದಿಗಳಿಗೆಂದೇ ಮೀಸಲಾಗಿರುವ ಬೃಹತ್ ಬಡಾವಣೆಗಳನ್ನು ನಿರ್ಮಿಸಿ, ಅಲ್ಲಿನ ಜನಸಂಖ್ಯೆಯ ಅನುಪಾತವನ್ನು ಬದಲಿಸಿ, ಕ್ರಮೇಣ ಆ ಪ್ರದೇಶಗಳನ್ನೂ ಯಹೂದಿ ಬಾಹುಳ್ಯದ ಪ್ರದೇಶಗಳಾಗಿ ಪರಿವರ್ತಿಸುವುದು. ಇಸ್ರೇಲ್ ಆಕ್ರಮಿತ ಪ್ರದೇಶಗಳಲ್ಲಿ ಫೆಲೆಸ್ತೀನ್ ಮೂಲದವರ ಪಾಲಿಗೆ ಲಭ್ಯವಿರುವ ಶುದ್ಧ ನೆಲ, ಜಲ ಮತ್ತು ವಾಯುವಿನ ಪ್ರಮಾಣವನ್ನು ಕುಗ್ಗಿಸುತ್ತಾ, ಸೀಮಿತಗೊಳಿಸುತ್ತಾ ಹೋಗುವುದು. ಈ ಮೂಲಕ ಅವರು ಆ ನೆಲಗಳನ್ನು ಬಿಟ್ಟು, ಬದುಕುವ ಅವಕಾಶಗಳನ್ನು ಹುಡುಕುತ್ತಾ ಬೇರೆ ನಾಡುಗಳಿಗೆ ವಲಸೆ ಹೋಗುವಂತೆ ನಿರ್ಬಂಧಿಸುವುದು. ಫೆಲೆಸ್ತೀನ್ ಮೂಲದ ಜನರ ಪಾಲಿಗೆ ಮೂಲಭೂತ ಮಾನವ ಹಕ್ಕುಗಳನ್ನು ಮತ್ತು ಪ್ರಾಥಮಿಕ ಪೌರ ಸೌಲಭ್ಯಗಳನ್ನು ನಿರಾಕರಿಸುವ ಮೂಲಕ ಕ್ರಮೇಣ ಅವರು ತಮ್ಮ ಅಸ್ತಿತ್ವದ ಬಗ್ಗೆ ತಾವೇ ಜಿಗುಪ್ಸೆ ತಾಳುವಂತಹ ವಾತಾವರಣವನ್ನು ನಿರ್ಮಿಸುವುದು. ವಿವಿಧ ಕ್ರಮಗಳ ಮೂಲಕ, ಫೆಲೆಸ್ತೀನಿಗಳಿಗೆ ಲಭ್ಯವಿರುವ ನೆಲದ ವ್ಯಾಪ್ತಿಯನ್ನು ಕುಗ್ಗಿಸುತ್ತಾ ಜನಸಂಖ್ಯಾ ಸಾಂದ್ರತೆಯನ್ನು ವಿಪರೀತವಾಗಿ ಹೆಚ್ಚಿಸುವುದು. ಜೊತೆಗೆ, ಔಷಧಿ, ಚಿಕಿತ್ಸೆ ಮತ್ತು ವೈದ್ಯಕೀಯ ಸವಲತ್ತುಗಳನ್ನು ನಿರ್ಬಂಧಿಸಿ, ಸಾಂಕ್ರಾಮಿಕ ವ್ಯಾಧಿಗಳಿಗೆ ದಾರಿಮಾಡಿ ಕೊಟ್ಟು ಅವರ ಪಾಲಿಗೆ ಬದುಕಿಗಿಂತ ಸಾವಿನ ಅವಕಾಶಗಳನ್ನು ಹೆಚ್ಚಿಸುವುದು.

ಅಪರಾಧ ನಿಯಂತ್ರಣ ಅಥವಾ ಭದ್ರತಾ ಕ್ರಮಗಳ ಹೆಸರಲ್ಲಿ ಅವರ ವಿರುದ್ಧ ಪದೇ ಪದೇ ಹಿಂಸಾತ್ಮಕ ಪೊಲೀಸ್ ಮತ್ತು ಮಿಲಿಟರಿ ಕಾರ್ಯಾಚರಣೆಗಳನ್ನು ನಡೆಸಿ, ಬಾಂಬುಗಳ ಮಳೆ ಸುರಿಸಿ ಹಂತಹಂತವಾಗಿ ಅವರ ಜನಸಂಖ್ಯೆಯನ್ನು ಇಲ್ಲವಾಗಿಸಿ ಬಿಡುವುದು. ಈ ರೀತಿ ಅಂತಿಮವಾಗಿ 'ಸಂಪೂರ್ಣ ಅರಬ್ ಮುಕ್ತ ಇಸ್ರೇಲ್' ಅನ್ನು ಸ್ಥಾಪಿಸುವುದು ಮತ್ತು ಫೆಲೆಸ್ತೀನ್ ಎಂಬ ಹೆಸರನ್ನೇ ಭೂಪಟ ಮತ್ತು ಇತಿಹಾಸದಿಂದ ಅಳಿಸಿಬಿಡುವುದು.

ಇವೆಲ್ಲ ಕೇವಲ ಯಾರದಾದರೂ ಊಹೆಗಳಲ್ಲ. ವಿಶ್ವಸಂಸ್ಥೆ, ಎಮ್ನೆಸ್ಟಿ ಇಂಟರ್‌ನ್ಯಾಶನಲ್, ಹ್ಯೂಮನ್ ರೈಟ್ಸ್ ವಾಚ್ ಮುಂತಾದ ಜಾಗತಿಕ ಸಂಸ್ಥೆಗಳು ತಮ್ಮ ನೇರ ತನಿಖೆ, ಅಧ್ಯಯನ ಮತ್ತು ಸಂಶೋಧನೆಗಳ ಆಧಾರದಲ್ಲಿ ಸ್ಪಷ್ಟವಾಗಿ ಗುರುತಿಸಿರುವ, ದಾಖಲಿಸಿರುವ ಮತ್ತು ಅಧಿಕೃತವಾಗಿ ಖಂಡಿಸಿರುವ ಅಂಶಗಳು. ಜನಾಂಗವಾದ ಮತ್ತು ಸಾಮೂಹಿಕ ಹತ್ಯಾಕಾಂಡ ಎಂಬ ಎರಡು ವಿಷಯಗಳಲ್ಲಿ ಜಗತ್ತಿನ ಬೇರಾವುದೇ ದೇಶದ ಮೇಲಿರುವುದಕ್ಕಿಂತ ಹೆಚ್ಚಿನ ಗಂಭೀರ ಮತ್ತು ದಾಖಲೆ ಸಹಿತ ಆರೋಪಗಳು ಇಸ್ರೇಲ್ ಮೇಲಿವೆ. ಈ ವಿಷಯಗಳಲ್ಲಿ ಅಂತರ್‌ರಾಷ್ಟ್ರೀಯ ವೇದಿಕೆಗಳಲ್ಲಿ ಅತ್ಯಧಿಕ ಬಾರಿ ಛೀಮಾರಿ ಹಾಕಿಸಿಕೊಂಡ ಅನುಭವವೂ ಇಸ್ರೇಲ್‌ಗೆ ಇದೆ.

**ಜನಾಂಗವಾದದ ಅಂತಿಮ ಗತಿಯೇನು?**

ಇಸ್ರೇಲ್ ಸರಕಾರ ಮತ್ತು ಅದರ ಹಿಂದಿರುವ ಝಿಯೋನಿಸ್ಟ್ ಗುಂಪುಗಳು, ಈ ಹಿಂದೆ ಯಹೂದಿ ಜನಾಂಗದ ವಿರುದ್ಧ ಯೂರೋಪಿನ ಫ್ಯಾಶಿಸ್ಟ್ ಮತ್ತು ನಾಝಿ ಜನಾಂಗವಾದಿಗಳು ನಡೆಸಿದ ಘೋರ ದೌರ್ಜನ್ಯಗಳನ್ನು ಪದೇ ಪದೇ ನೆನಪಿಸಿ ಶೋಕಾಚರಿಸುತ್ತಿರುತ್ತಾರೆ. ನಿಜವಾಗಿ ಅವರು ಆ ತಮ್ಮ ಅನುಭವಗಳಿಂದ ಪಾಠ ಕಲಿಯಬೇಕಿತ್ತು. ಎಲ್ಲ ಬಗೆಯ ಜನಾಂಗವಾದಗಳನ್ನು ಈ ಭೂಮುಖದಿಂದಲೇ ಇಲ್ಲವಾಗಿಸಿ ಬಿಡುವ ಪಣತೊಟ್ಟು ಮಾನವ ಸಮಾನತೆ, ಮಾನವ ಏಕತೆ ಮತ್ತು ಸಾರ್ವತ್ರಿಕ ನ್ಯಾಯದ ಮೌಲ್ಯಗಳನ್ನು ಜಗತ್ತಿನೆಲ್ಲೆಡೆ ಜನಪ್ರಿಯಗೊಳಿಸಿ ಅವುಗಳಿಗೆ ವ್ಯಾಪಕ ಮಾನ್ಯತೆ ಗಳಿಸಿಕೊಡಲು ಹೋರಾಟ ನಿರತರಾಗಬೇಕಿತ್ತು. ಆದರೆ ದುರಂತ ನೋಡಿ. ಒಂದು ಜನಾಂಗವಾದದಿಂದ ಕೊರಳು ಬಿಡಿಸಿಕೊಂಡು ಬಂದವರು ಇದೀಗ ತಮ್ಮದೇ ಆದ ಇನ್ನೊಂದು ಭೀಕರ ಜನಾಂಗವಾದವನ್ನು ಅನುಷ್ಠಾನಿಸಲು ಹೊರಟಿದ್ದಾರೆ. ತಮ್ಮ ವಿರುದ್ಧ ಮಾಡಲಾದ ಎಲ್ಲ ಅಪರಾಧಗಳನ್ನು, ಮಾತ್ರವಲ್ಲ, ಅದಕ್ಕಿಂತಲೂ ಹೆಚ್ಚಿನದನ್ನು ಅವರು ಇನ್ನೊಬ್ಬರ ವಿರುದ್ಧ ಮಾಡುತ್ತಿದ್ದಾರೆ. ಸದ್ಯ ಶಕ್ತಿಶಾಲಿಗಳಾಗಿರುವ ಇಸ್ರೇಲಿ ಆಡಳಿತಗಾರರು ಒಂದು ಅಸಹಾಯಕ ಜನಾಂಗದ ವಿರುದ್ಧ ಈ ರೀತಿ ಕ್ರೌರ್ಯ ಮೆರೆಯುತ್ತಿರುವಾಗ ಒಂದು ವಿಷಯವನ್ನು ಮರೆಯಬಾರದು: ಒಂದು ಹಂತದಲ್ಲಿ ಮುಸ್ಸೋಲಿನಿ ಮತ್ತು ಹಿಟ್ಲರ್‌ಗಳೂ ತುಂಬಾ ಬಲಿಷ್ಠರಾಗಿದ್ದರು. ಅವರು ಕಟ್ಟಿದ ಸೇನೆ ಅಜೇಯವಾಗಿತ್ತು. ಅವರಿಗೆ ಸಾಟಿಯಾದವರು ಯಾರೂ ಈ ಭೂಮುಖದ ಮೇಲಿರಲಿಲ್ಲ. ಅವರು ವ್ಯಾಪಕ ರಕ್ತಪಾತ ನಡೆಸಿ ಅಪಾರ ನಾಶನಷ್ಟಗಳನ್ನು ಮೆರೆದಿದ್ದರು. ಆ ಮೂಲಕ ಭೂಮಿಯ ಶಾಶ್ವತ ಒಡೆಯರಾಗುವ ಕನಸು ಕಂಡಿದ್ದರು. ಆದರೆ ಕೊನೆಗೆ ಸತ್ಯ, ನ್ಯಾಯ ಮತ್ತು ಮಾನವೀಯ ಮೌಲ್ಯಗಳ ಮುಂದೆ ಆ ಖಳನಾಯಕರ ಗತಿ ಏನಾಯಿತು? ಹಿಟ್ಲರ್ ಬಗ್ಗೆ ಸ್ವತಃ ಯೂರೋಪಿನ ಜನರಿಗೆ ಇಂದು ಎಷ್ಟು ತಾತ್ಸಾರವಿದೆಯೆಂದರೆ ಅವರು, ಹಿಟ್ಲರ್‌ನನ್ನು ಅನುಕರಿಸುವ ಮೂಲಕ ಅವನನ್ನು ಅಣಕಿಸಿದ ಹಾಸ್ಯ ಕಲಾವಿದ ಚಾರ್ಲಿ ಚಾಪ್ಲಿನ್ ಅನ್ನು ಮನಸಾರೆ ಗೌರವಿಸುತ್ತಾರೆ. ಹಿಟ್ಲರ್‌ನ ಹೆಸರೆತ್ತಿದರೆ ಉಗುಳುತ್ತಾರೆ.

## ಜಗತ್ತಿನ ಅತಿ ದೊಡ್ಡ ಬಯಲು ಬಂದೀಖಾನೆ!

ಕೆಲವರು ಇಸ್ರೇಲ್ ಮತ್ತು ಗಾಝಾದವರ ಮಧ್ಯೆ ನಡೆಯುವ ಘರ್ಷಣೆಯನ್ನು ಎರಡು ಶಕ್ತಿಶಾಲಿ ದೇಶಗಳ ನಡುವಣ ಯುದ್ಧ ಎಂಬಂತೆ ಬಿಂಬಿಸಲು ಶ್ರಮಿಸುತ್ತಾರೆ. ನಿಜವಾಗಿ ಇಸ್ರೇಲ್, ಗಾತ್ರದಲ್ಲಿ

ಸಣ್ಣದಿದ್ದರೂ ಆರ್ಥಿಕತೆ, ಉದ್ಯಮ, ಮಿಲಿಟರಿ ಶಕ್ತಿ, ವಿಜ್ಞಾನ, ತಂತ್ರಜ್ಞಾನ, ಪ್ರಚಾರ ಶಕ್ತಿ ಇತ್ಯಾದಿ ಎಲ್ಲ ವಿಷಯಗಳಲ್ಲಿ ಕೊಲ್ಲಿ ಪ್ರದೇಶದ ಬೇರೆಲ್ಲ ದೇಶಗಳಿಗಿಂತ ಮುಂದಿದೆ. ಮಾತ್ರವಲ್ಲ, ಅದನ್ನು ಜಗತ್ತಿನ ಅತ್ಯಂತ ಶಕ್ತಿಶಾಲಿ ರಾಷ್ಟ್ರಗಳ ಸಾಲಲ್ಲಿ ಗಣಿಸಲಾಗುತ್ತದೆ. ಇದಕ್ಕೆ ಹೋಲಿಸಿದರೆ ಗಾಝಾ ಎಂಬುದು ಫೆಲೆಸ್ತೀನಿಗಳಿಗೆ ಸೇರಿದ, ಆದರೆ ಇಸ್ರೇಲ್‌ನ ಅಕ್ರಮ ವಶದಲ್ಲಿರುವ, ಹೆಚ್ಚೆಂದರೆ 365 ಚದರ ಕಿ.ಮೀ.ವಿಸ್ತೀರ್ಣದ ಒಂದು ಪುಟ್ಟ ಪ್ರದೇಶ. 20 ಲಕ್ಷಕ್ಕೂ ಹೆಚ್ಚಿನ ಫೆಲೆಸ್ತೀನ್ ನಾಗರಿಕರು ಈ ಪುಟ್ಟ ಪ್ರದೇಶದಲ್ಲಿ ಉಸಿರು ಬಿಗಿಹಿಡಿದು ಬದುಕುತ್ತಿದ್ದಾರೆ. ಆಗಲೇ ಅಷ್ಟೊಂದು ಇಕ್ಕಟ್ಟಿನಲ್ಲಿರುವ ಈ ಪ್ರದೇಶದ ಮೇಲೆ 2007 ರಿಂದ ಇಸ್ರೇಲ್ ಸರಕಾರವು (ಈಜಿಪ್ಟ್ ಸರಕಾರದ ಸಹಯೋಗದೊಂದಿಗೆ) ಕಠಿಣ ದಿಗ್ಬಂಧನವನ್ನೂ ಹೇರಿದೆ. ಮೊದಲೇ ಪ್ರಾಥಮಿಕ ಪೌರ ಸವಲತ್ತುಗಳಿಂದ ವಂಚಿತವಾಗಿರುವ, ದಟ್ಟ ದಾರಿದ್ರ್ಯ ಪೀಡಿತವಾಗಿರುವ ಮತ್ತು ಪ್ರತಿ ಚದರ ಕಿ.ಮೀ. ನಲ್ಲಿ 5 ಸಾವಿರಕ್ಕೂ ಹೆಚ್ಚಿನ ಜನರು ವಾಸಿಸುವಷ್ಟು ತೀವ್ರ ಸಾಂದ್ರತೆ ಇರುವ ಒಂದು ಪ್ರದೇಶದ ನೆಲ, ಜಲ ಮತ್ತು ವಾಯು ಮಾರ್ಗಗಳ ಮೇಲೆ ದಿಗ್ಬಂಧನವನ್ನೂ ಹೇರಲಾದರೆ ಅಲ್ಲಿನ ಪರಿಸ್ಥಿತಿ ಹೇಗಿದ್ದೀತು? ಆದ್ದರಿಂದಲೇ ಹಲವರು ಗಾಝಾವನ್ನು ಒಂದು ದೊಡ್ಡ ಕೊಳಚೆ ಪ್ರದೇಶವೆಂದೂ ಗುರುತಿಸುತ್ತಾರೆ. ಇದನ್ನು 'ಜಗತ್ತಿನ ಅತಿದೊಡ್ಡ ಬಯಲು ಬಂದಿಖಾನೆ' ಎಂದೂ ಕರೆಯಲಾಗುತ್ತದೆ. ವರ್ಲ್ಡ್ ಬ್ಯಾಂಕ್ ವರದಿಯನುಸಾರ ಗಾಝಾದ ನಿವಾಸಿಗಳ ಪೈಕಿ ಇಬ್ಬರಲ್ಲೊಬ್ಬರು ಕಡು ದಾರಿದ್ರ್ಯದಲ್ಲಿ ನರಳುತ್ತಿದ್ದಾರೆ. ಈ ಪ್ರದೇಶದಲ್ಲಿ ಸಾಮಾನ್ಯ ನಿರುದ್ಯೋಗ ದರವು ಶೇ.50ರಷ್ಟಿದ್ದರೆ, ಯುವಜನರಲ್ಲಿನ ನಿರುದ್ಯೋಗ ದರವು ಶೇ.70ರಷ್ಟಿದೆ. ಯೂನಿಸೆಫ್ (UNICEF) ವರದಿಯನುಸಾರ ಆಕ್ರಮಿತ ಫೆಲೆಸ್ತೀನ್‌ನಲ್ಲಿ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ದಾಖಲಾತಿಯ ಪ್ರಮಾಣ ಶೇ.95.4ರಷ್ಟಿದೆ. ಆದರೆ ಸಾಮಾಜಿಕ ಸ್ಥಿತಿ ಹೇಗಿದೆಯೆಂದರೆ 15 ವರ್ಷ ಪ್ರಾಯವಾಗುವ ಮುನ್ನವೇ ಸುಮಾರು ಶೇ.7ರಷ್ಟು ಹುಡುಗಿಯರು ಮತ್ತು ಶೇ.25ರಷ್ಟು ಹುಡುಗರು ಶಾಲೆಯನ್ನು ಶಾಶ್ವತವಾಗಿ ತೊರೆದಿರುತ್ತಾರೆ. ಈ ಪ್ರದೇಶದಲ್ಲಿ ವಿವಿಧ ಕಾರಣಗಳಿಂದ ಅಂಗವಿಕಲರು ದೊಡ್ಡ ಸಂಖ್ಯೆಯಲ್ಲಿದ್ದು, ಅವರಲ್ಲಿ 6 ರಿಂದ 15 ವರ್ಷ ಪ್ರಾಯದ ಶೇ.22.5 ಹುಡುಗರು ಮತ್ತು ಶೇ.30 ಹುಡುಗಿಯರು ಜೀವನದಲ್ಲೊಮ್ಮೆಯೂ ಶಾಲೆಯ ಮೆಟ್ಟಿಲನ್ನೇ ಏರಿರುವುದಿಲ್ಲ.

❖ ❖ ❖

# 6

# ಇಸ್ರೇಲ್ ಯುದ್ಧಾಪರಾಧಗಳು : ಅಂತರ್‌ರಾಷ್ಟ್ರೀಯ ಕ್ರಿಮಿನಲ್ ಕೋರ್ಟ್‌ನಿಂದ ತನಿಖೆ

ಇಸ್ರೇಲ್ ಸರಕಾರವು ಫೆಲೆಸ್ತೀನ್ ಜನತೆಯ ವಿರುದ್ಧ ಎಸಗುತ್ತಿರುವ ದೌರ್ಜನ್ಯಗಳು ಮತ್ತು ತನ್ನ ಜನಾಂಗವಾದಿ ಅಜೆಂಡಾದ ಅನುಷ್ಠಾನಕ್ಕಾಗಿ ಅದು ಸತತ ಹಲವು ಬಾರಿ ನಡೆಸಿರುವ ಯುದ್ಧಾಪರಾಧಗಳ ವಿಷಯದಲ್ಲಿ ವಿಶ್ವಸಂಸ್ಥೆಯು ಅಂತರ್‌ರಾಷ್ಟ್ರೀಯ ಕ್ರಿಮಿನಲ್ ಕೋರ್ಟ್ (ICC) ಮೂಲಕ ಅಧಿಕೃತ ತನಿಖೆ ನಡೆಸಬೇಕೆಂಬ ಬೇಡಿಕೆ ಬಹುಕಾಲದಿಂದ ಕೇಳಿ ಬರುತ್ತಿತ್ತು. ಜಗತ್ತಿನ ಹಲವು ಸರಕಾರಗಳು, ಅನೇಕ ಅಂತರ್‌ರಾಷ್ಟ್ರೀಯ ಸಂಸ್ಥೆಗಳು ಮತ್ತು ಮಾನವಹಕ್ಕು ಸಂಘಟನೆಗಳು ಈ ವಿಷಯದಲ್ಲಿ ವಿಶ್ವಸಂಸ್ಥೆಯ ಮೇಲೆ ಸತತ ಒತ್ತಡ ಹೇರುತ್ತಾ ಬಂದಿದ್ದವು. ಆದರೆ ಅದೇ ವೇಳೆ ಈ ಬೇಡಿಕೆಯನ್ನು ಸ್ವೀಕರಿಸಬಾರದು ಎಂದು ಇಸ್ರೇಲ್ ಮತ್ತು ಅಮೆರಿಕ ಪಟ್ಟು ಹಿಡಿದಿದ್ದವು. ನಿಜವಾಗಿ ಇಸ್ರೇಲ್‌ನ ಯುದ್ಧಾಪರಾಧಗಳ ಕುರಿತು ತನಿಖೆಯ ಅಗತ್ಯವಿದೆ ಎಂಬುದನ್ನು ಇಂಟರ್‌ನ್ಯಾಶನಲ್ ಕ್ರಿಮಿನಲ್ ಕೋರ್ಟ್ ಮುಖ್ಯಸ್ಥೆ ಫಾತೂ ಬೆನ್ಸೋದಾ 2019 ಡಿಸೆಂಬರ್‌ನಲ್ಲೇ ತಾತ್ವಿಕವಾಗಿ ಒಪ್ಪಿದ್ದರು. ಆದರೆ ಹಲವು ತಾಂತ್ರಿಕ ಅಡೆತಡೆಗಳ ಹಾಗೂ ಕೆಲವು ದೇಶಗಳ ಪ್ರತಿಕೂಲ ಒತ್ತಡದಿಂದಾಗಿ ಆ ಪ್ರಕ್ರಿಯೆ ಆರಂಭವಾಗಿರಲಿಲ್ಲ. ಕೊನೆಗೂ ಈ ವರ್ಷ (2021) ಮಾರ್ಚ್ ತಿಂಗಳ ಆರಂಭದಲ್ಲಿ

ಐಸಿಸಿ, ತನಿಖೆಯ ಪ್ರಕ್ರಿಯೆಯನ್ನು ಆರಂಭಿಸಿತು. ಆ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ ಇಸ್ರೇಲ್ ಮತ್ತು ಫೆಲೆಸ್ತೀನ್ ಸರಕಾರಗಳಿಗೆ ನೋಟಿಸ್ ಜಾರಿಗೊಳಿಸಿತು. ಫೆಲೆಸ್ತೀನ್‌ನ ಸಂಘಟನೆಗಳ ಮೇಲಿರುವ ಯುದ್ಧಾಪರಾಧದ ಆರೋಪಗಳೂ ತನಿಖೆಯ ವ್ಯಾಪ್ತಿಯಲ್ಲಿ ಬರಲಿವೆ. ಈ ರೀತಿ, ಪ್ರಭಾವಿ ಶಕ್ತಿಗಳ ವಿರೋಧವನ್ನು ಪ್ರತಿರೋಧಿಸಿ ಈ ಪ್ರಕ್ರಿಯೆಯನ್ನು ಆರಂಭಿಸುವಂತೆ ಐಸಿಸಿಯ ಮೇಲೆ ಒತ್ತಡ ಹೇರುವ ಕೆಲಸವನ್ನು ಯಾವುದೇ ಸರಕಾರಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿ ಜಾಗತಿಕ ಮಟ್ಟದಲ್ಲಿ ಸಕ್ರಿಯವಾಗಿರುವ ಕೆಲವು ಫೆಲೆಸ್ತೀನ್ ಪರ ಸ್ವಯಂ ಸೇವಕ ಸಂಸ್ಥೆಗಳು ಮಾಡಿದ್ದವು. ಆ ಪೈಕಿ ಮುಂಚೂಣಿಯಲ್ಲಿದ್ದ ಸಂಘಟನೆ ಸಾಕ್ಷಾತ್ ಇಸ್ರೇಲ್ ಮೂಲದ ಬಿ.ಡಿ.ಎಸ್. (Boycott, Divestment and Sanctions). ಈ ಸಂಘಟನೆಯಲ್ಲಿ ಇಸ್ರೇಲ್‌ನ ಯಹೂದಿ ನಾಗರಿಕರು ಮತ್ತವರ ಸಂಘಟನೆಗಳಿಗೂ ಗಣ್ಯ ಪ್ರಾತಿನಿಧ್ಯವಿದೆ.

BDS

FREEDOM
JUSTICE
EQUALITY

2020 ಸೆಪ್ಟಂಬರ್ 22 ರಿಂದ 28ರ ತನಕ ನ್ಯೂಯಾರ್ಕ್‌ನಲ್ಲಿ ವಿಶ್ವಸಂಸ್ಥೆಯ (UN) ಜನರಲ್ ಎಸ್ಸೆಂಬ್ಲಿಯ (UNGA) ಮಹಾ ಅಧಿವೇಶನವನ್ನು ಆಯೋಜಿಸಲಾಗಿತ್ತು. ಈ ಸಂದರ್ಭವನ್ನು ಇಸ್ರೇಲ್‌ನ ದೌರ್ಜನ್ಯಗಳ ಹಾಗೂ ಯುದ್ಧಾಪರಾಧಗಳ ವಿರುದ್ಧ ಜಾಗತಿಕ ಜನಾಭಿಪ್ರಾಯ ರೂಪಿಸುವುದಕ್ಕಾಗಿ ಬಳಸಿಕೊಂಡ ಬಿ.ಡಿ.ಎಸ್., ಪ್ರಸ್ತುತ 7 ದಿನಗಳ ಅವಧಿಯನ್ನು 'ಇಸ್ರೇಲ್ ವಿರೋಧಿ ಜಾಗೃತಿ ಸಪ್ತಾಹ'ವಾಗಿ ಆಚರಿಸಿತು. ಇಸ್ರೇಲ್, ಫೆಲೆಸ್ತೀನ್ ಮಾತ್ರವಲ್ಲದೆ ಜಗತ್ತಿನ ಹಲವೆಡೆಯ ಸಾಮಾಜಿಕ ಮತ್ತು ಮಾನವ ಹಕ್ಕು ಸಂಘಟನೆಗಳು ಈ ಅಭಿಯಾನದಲ್ಲಿ ಸಕ್ರಿಯವಾಗಿ ಪಾಲುಗೊಂಡವು. ಪ್ರಸ್ತುತ ಅಭಿಯಾನದ ಭಾಗವಾಗಿ, ವಿಶ್ವಸಂಸ್ಥೆಯ ಜನರಲ್ ಎಸ್ಸೆಂಬ್ಲಿಯ ಅಧಿವೇಶನ ಆರಂಭವಾಗುವ ದಿನವೇ ಎಸ್ಸೆಂಬ್ಲಿ ಮತ್ತದರ ಎಲ್ಲ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳನ್ನುದ್ದೇಶಿಸಿ ಒಂದು ಮನವಿ ಪತ್ರವನ್ನು ಸಲ್ಲಿಸಲಾಯಿತು. ಅದು ಜಗತ್ತಿನ ಹೆಚ್ಚಿನೆಲ್ಲ ದೇಶ ಮತ್ತು ಜನವಿಭಾಗಗಳನ್ನು ಪ್ರತಿನಿಧಿಸುವ 452 ಪ್ರಮುಖ ಸಂಘಟನೆಗಳ ಕಡೆಯಿಂದ ಸಲ್ಲಿಸಲಾದ ಮನವಿಯಾಗಿತ್ತು. ಈ ಪೈಕಿ ಒಂದೊಂದು ಸಂಘಟನೆಯೂ ಹಲವು ಎನ್.ಜಿ.ಒ., ಒಕ್ಕೂಟ ಇತ್ಯಾದಿಗಳನ್ನು

ಪ್ರತಿನಿಧಿಸುತ್ತಿತ್ತು. ವಿಶೇಷವೇನೆಂದರೆ ಮನವಿಗೆ ಸಹಿ ಮಾಡಿದವರಲ್ಲಿ ಅಮೆರಿಕದ 'ಜೀವಿಶ್ ವಾಯ್ಸ್ ಫಾರ್ ಪೀಸ್'ನಂತಹ ಹಲವು ಜನಪ್ರಿಯ ಯಹೂದಿ ಸಂಘಟನೆಗಳೂ ಸೇರಿದ್ದವು!

ಮನವಿಯಲ್ಲಿ ಇಸ್ರೇಲ್ ಸರಕಾರದ ನೀತಿಯನ್ನು ನೇರವಾಗಿ, ಹಿಂದೆ ದಕ್ಷಿಣ ಆಫ್ರಿಕಾದಲ್ಲಿ ಅನುಸರಿಸಲಾಗಿದ್ದ ವರ್ಣಭೇದದ ನೀತಿಗೆ ಹೋಲಿಸಲಾಗಿತ್ತು. ಈ ಹಿಂದೆ ದಕ್ಷಿಣ ಆಫ್ರಿಕಾದ ಸರಕಾರವು ವರ್ಣಭೇದ ಅಥವಾ ಜನಾಂಗವಾದದ ನೀತಿಯನ್ನು ಅನುಸರಿಸುತ್ತಿದೆಯೇ ಎಂಬ ಕುರಿತು ವಿಶ್ವಸಂಸ್ಥೆಯು ತನಿಖೆ ನಡೆಸಿತ್ತು. ಅದು ಅಂತಹ ನೀತಿಯನ್ನು ಅನುಸರಿಸುತ್ತಿರುವುದು ಖಚಿತವಾದಾಗ ಅದರ ವಿರುದ್ಧ ನಿರ್ಬಂಧಗಳನ್ನು ಹೇರಿತ್ತು. ಇದೀಗ ಇಸ್ರೇಲ್ ಸರಕಾರವು ಅನುಸರಿಸುತ್ತಿರುವ ಜನಾಂಗವಾದಿ ಧೋರಣೆಯ ವಿಷಯದಲ್ಲೂ ವಿಶ್ವಸಂಸ್ಥೆಯು ಅಧಿಕೃತ ತನಿಖೆ ನಡೆಸಿ, ಮುಂದಿನ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದು ಮನವಿಯ ಸಾರಾಂಶವಾಗಿತ್ತು. ಈ ಬಗೆಯ ಜಾಗತಿಕ ಒತ್ತಡಗಳ ಫಲವಾಗಿ ತನಿಖೆ ಆರಂಭವಾಗಿದ್ದರೂ ಅದನ್ನು ಈಗಲೂ ಪ್ರತಿರೋಧಿಸುತ್ತಿರುವ ಇಸ್ರೇಲ್ ಸರಕಾರವು, ಐಸಿಸಿ ತನಿಖೆಯ ಪ್ರಕ್ರಿಯೆಯಲ್ಲಿ ತಾನು ಯಾವುದೇ ಸಹಕಾರ ನೀಡುವುದಿಲ್ಲ ಎಂದು ಘೋಷಿಸಿದೆ!

## ಇಸ್ರೇಲ್ ಸರಕಾರವನ್ನು ಭಯೋತ್ಪಾದಕ ಎಂದು ಕರೆದ ಮಾಜಿ ಪೈಲಟ್

ಇಸ್ರೇಲ್ ಸರಕಾರದ ಜನಾಂಗವಾದಿ ದಮನ ನೀತಿಯ ಬಗ್ಗೆ ಸ್ವತಃ ಇಸ್ರೇಲ್‌ನ ಭದ್ರತಾ ಪಡೆಗಳ ಕೆಲವು ವಲಯಗಳಲ್ಲಿ ಅಸಮಾಧಾನವಿದೆ. ಒಂದು ಕಾಲದಲ್ಲಿ ಇಸ್ರೇಲ್ ವಾಯುಸೇನೆಯಲ್ಲಿ ಪೈಲಟ್ ಆಗಿದ್ದ ಯೊನಾಥನ್ ಶಾಪಿರ ಅವರ ಹೇಳಿಕೆ ಗಮನಿಸಿ: "ಇಸ್ರೇಲ್‌ನ ವಾಯುಪಡೆ ಮತ್ತು ಮಿಲಿಟರಿಯವರು ಫೆಲೆಸ್ತೀನ್‌ನ ಲಕ್ಷಾಂತರ ನಾಗರಿಕರನ್ನು ಭಯಗ್ರಸ್ತರಾಗಿಸುವ ಮೂಲಕ ಯುದ್ಧಾಪರಾಧ ಮಾಡುತ್ತಿದ್ದಾರೆ ಎಂಬುದು ಎರಡನೆಯ 'ಇಂತಿಫಾದ' (ಫೆಲೆಸ್ತೀನಿಗಳ 'ಬಂಡಾಯ' – 2000ದಿಂದ 2005)ದ ವೇಳೆ ನನಗೆ ಮನವರಿಕೆಯಾಯಿತು. ಆಗ ನಾನು ವಾಯು ಪಡೆಯನ್ನು ತೊರೆಯಲು ನಿರ್ಧರಿಸಿದೆ. ಜೊತೆಗೆ ಈ ಅಪರಾಧದಲ್ಲಿ ಭಾಗವಹಿಸಲು ನಿರಾಕರಿಸುವಂತೆ ಇತರ ಪೈಲಟ್‌ಗಳ ಮನವೊಲಿಸುವ ಒಂದು ಬಹಿರಂಗ ಅಭಿಯಾನವನ್ನೂ ಆರಂಭಿಸಿದೆ." ಕಳೆದ ವಾರ ವಾರ್ತಾ ಏಜನ್ಸಿ 'ಅನದೊಲು'ಗೆ ನೀಡಿದ ಸಂದರ್ಶನದಲ್ಲಿ ಅವರು ಈ ಮಾತುಗಳನ್ನು ಹೇಳಿದರು. ಅವರು ತಮ್ಮ ನಿರ್ಧಾರ ಪ್ರಕಟಿಸಿದೊಡನೆ ಅವರನ್ನು ಅವರ ಹುದ್ದೆಯಿಂದ ಪದಚ್ಯುತಗೊಳಿಸಲಾಗಿತ್ತು. ಆ ಬಳಿಕ ಅನೇಕ ಪೈಲಟ್‌ಗಳು ಅವರ ಅಭಿಯಾನಕ್ಕೆ ಬೆಂಬಲ ಘೋಷಿಸಿದ್ದು

ಅದರ ಪರಿಣಾಮವಾಗಿ 2003ರಿಂದೀಚೆಗೆ ಇಸ್ರೇಲ್ ವಾಯುಸೇನೆಯು ಅಂತಹ 27 ಪೈಲಟ್‌ಗಳನ್ನು ಪದಚ್ಯುತಗೊಳಿಸಿದೆ. ಮುಂದಿನ ದಿನಗಳಲ್ಲಿ ಶಾಪಿರ, ಫೆಲೆಸ್ತೀನ್ ನಾಗರಿಕರ ಮಾನವೀಯ ಹಕ್ಕುಗಳ ರಕ್ಷಣೆಗಾಗಿ ಮತ್ತು ಇಸ್ರೇಲ್ ಸರಕಾರದ ಯುದ್ಧಾಪರಾಧಗಳನ್ನು ಬಯಲಿಗೆಳೆಯುವುದಕ್ಕಾಗಿ ನಡೆದ ಹಲವು ಅಂತರ್‌ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಪಾಲುಗೊಂಡರು. ಇದರ ಫಲಶ್ರುತಿಯಾಗಿ ಅವರು ಇಸ್ರೇಲ್ ಸರಕಾರದ ಕಡೆಯಿಂದ ತೀವ್ರ ಮಟ್ಟದ ಬೇಹುಗಾರಿಕೆ ಮತ್ತು ಕಿರುಕುಳಗಳನ್ನು ಎದುರಿಸಬೇಕಾಯಿತು. ಅವರು ನೌಕರಿಗೆಂದು ಸೇರಿದ ಎಲ್ಲ ಸಂಸ್ಥೆಗಳಲ್ಲಿ ಅಲ್ಪಕಾಲದಲ್ಲೇ ನೌಕರಿ ಕಳೆದುಕೊಳ್ಳಬೇಕಾಯಿತು. ಕೊನೆಗೆ ಕಿರುಕುಳ ತಾಳಲಾಗದೆ ಅವರು ಇಸ್ರೇಲ್ ತೊರೆದು ನಾರ್ವೆಗೆ ವಲಸೆಹೋಗಬೇಕಾಯಿತು. ಈಗ ಅವರು ಅಲ್ಲಿ ಸಕ್ರಿಯರಾಗಿದ್ದಾರೆ.

"ನಾನು ದೇಶಸೇವೆಯ ಉತ್ಸಾಹದೊಂದಿಗೆ ವಾಯುಪಡೆಯನ್ನು ಸೇರಿದ್ದೆ. ಆದರೆ ಕ್ರಮೇಣ ನನಗೆ ನಾನೊಂದು ಭಯೋತ್ಪಾದಕ ಸಂಘಟನೆಗೆ ಸೇರಿದ್ದೇನೆ ಎಂದು ಅನಿಸತೊಡಗಿತು. ಭಯೋತ್ಪಾದಕ ಸಂಘಟನೆಯೊಳಗೆ ನಿಮಗೆ ನಿಮ್ಮದಾದ ಧ್ವನಿಯೇ ಇರುವುದಿಲ್ಲ. ಇಸ್ರೇಲ್ ಸರಕಾರ ಮತ್ತು ಅದರ ಪಡೆಗಳ ಕಮಾಂಡರ್‌ಗಳನ್ನೂ ನಾನು ಭಯೋತ್ಪಾದಕರೆಂದೇ ಪರಿಗಣಿಸುತ್ತೇನೆ" ಎಂದು ಶಾಪಿರ ತಮ್ಮ ಸಂದರ್ಶನದಲ್ಲಿ ಹೇಳಿದರು.

**ಯಾರು ಈ ಯಹೂದಿಗಳು?**

ಕಟ್ಟುನಿಟ್ಟಿನ ಏಕದೇವತ್ವವನ್ನು ಪ್ರತಿಪಾದಿಸಿದ್ದ ಪ್ರವಾದಿ ಇಬ್ರಾಹೀಮ್ (ಅಬ್ರಹಾಮ್) ಕ್ರಿ.ಪೂ. 2150 ರಿಂದ 1975 ವರೆಗೆ ಬದುಕಿದ್ದವರು. ಅವರ ವಿಶೇಷತೆ ಏನೆಂದರೆ ಯಹೂದಿ, ಕ್ರೈಸ್ತ ಮತ್ತು ಇಸ್ಲಾಮ್ ಎಂಬ ಜಗತ್ತಿನ ಮೂರು ಪ್ರಮುಖ ಧರ್ಮಗಳ ಅನುಯಾಯಿಗಳು ಅವರನ್ನು ತಮ್ಮ ಸಮುದಾಯಗಳ ಪಿತಾಮಹನೆಂದು ಅಂಗೀಕರಿಸುತ್ತಾರೆ. ಇಬ್ರಾಹೀಮ್ ಅವರ ಕಿರಿಯ ಪುತ್ರ ಇಸ್‌ಹಾಕ್ ಮತ್ತು ಇಸ್‌ಹಾಕ್‌ರ ಪುತ್ರ ಯಾಕೂಬ್. ಯಾಕೂಬರ ಇನ್ನೊಂದು ಹೆಸರು ಇಸ್ರಾಈಲ್. ಯಾಕೂಬ್ ಅಥವಾ ಇಸ್ರಾಈಲರ 12 ಮಂದಿ ಪುತ್ರರ ವಂಶಸ್ಥರೇ ಯಹೂದಿಗಳು. ಅವರನ್ನು ಕುರ್‌ಆನ್‌ನಲ್ಲಿ 'ಬನೀ ಇಸ್ರಾಈಲ್' ಅಥವಾ ಇಸ್ರಾಈಲರ ಸಂತತಿಗಳೆಂದೂ ಕರೆಯಲಾಗಿದೆ. ಕುರ್‌ಆನ್‌ನಲ್ಲಿ 40ಕ್ಕೂ ಹೆಚ್ಚು ಬಾರಿ ಯಹೂದಿಗಳ ಪ್ರಸ್ತಾಪವಿದೆ. 'ಬನೀ ಇಸ್ರಾಈಲ್' ಎಂಬೊಂದು ಪ್ರತ್ಯೇಕ ಅಧ್ಯಾಯವೇ (ಅಧ್ಯಾಯ 17) ಕುರ್‌ಆನ್‌ನಲ್ಲಿದೆ. ಅವರ ಇತಿಹಾಸದ ಉಜ್ವಲ ಮತ್ತು ಕರಾಳ ಭಾಗಗಳ ದಾಖಲೆ ಇದೆ. ಈಜಿಪ್ಟ್‌ನ ಬಲಿಷ್ಠ ಫ್ಯಾರೋಗಳ ಸಾಮ್ರಾಜ್ಯದ ವಿರುದ್ಧ ಹೋರಾಡಿ, ಅವರ ದಾಸ್ಯದಲ್ಲಿದ್ದ

ಯಹೂದಿಗಳನ್ನು ದಾಸ್ಯದಿಂದ ವಿಮೋಚಿಸಿದ ಪ್ರವಾದಿ ಮೂಸಾ (Moses)ರ ವಿವರವಾದ ವೃತ್ತಾಂತ ಕುರ್‌ಆನ್‌ನಲ್ಲಿದೆ.

"ಇಸ್ರಾಈಲರ ಸಂತತಿಗಳೇ, ನಾನು ನಿಮಗೆ ನೀಡಿದ ಅನುಗ್ರಹವನ್ನು ಮತ್ತು ಜಗತ್ತಿನ ಎಲ್ಲರೆದುರು ನಿಮಗೆ ಶ್ರೇಷ್ಠತೆ ನೀಡಿದ್ದನ್ನು ಸ್ಮರಿಸಿರಿ" (2:122) ಎಂದು ಕುರ್‌ಆನ್‌ನಲ್ಲಿ ಅವರಿಗೆ ನೆನಪಿಸಲಾಗಿದೆ. ಯಹೂದಿಗಳು ನಂಬುವ ತೌರಾತ್ (Torah) ಅಥವಾ ಹಳೆಯ ಒಡಂಬಡಿಕೆ ಗ್ರಂಥವು ಮೂಲತಃ ದೇವರ ಕಡೆಯಿಂದ ಬಂದ ಮಾರ್ಗದರ್ಶಿ ಗ್ರಂಥವಾಗಿತ್ತು ಎಂದು ಕುರ್‌ಆನ್ ಪ್ರತಿಪಾದಿಸುತ್ತದೆ. ಮುಸ್ಲಿಮರ ದೃಷ್ಟಿಯಲ್ಲಿ ಜುಡಾಯಿಸಮ್ (ಯಹೂದಿ ಧರ್ಮ), ಕ್ರೈಸ್ತ ಧರ್ಮ ಮತ್ತು ಇಸ್ಲಾಮ್ ಧರ್ಮ ಇವೆಲ್ಲವೂ ಮೂಲತಃ ಏಕದೇವತ್ವದ ಪ್ರತಿಪಾದಕರಾಗಿದ್ದ ಪ್ರವಾದಿ ಇಬ್ರಾಹೀಮ್ (ಅಬ್ರಹಾಮ್)ರ ಪರಂಪರೆಯ ಶಾಖೆಗಳಾಗಿವೆ.

**ಯಹೂದಿಗಳು ಎಲ್ಲಿದ್ದಾರೆ? ಎಷ್ಟಿದ್ದಾರೆ?**

ಇಸ್ರೇಲ್‌ನ ಸೆಂಟ್ರಲ್ ಬ್ಯುರೋ ಆಫ್ ಸ್ಟಾಟಿಸ್ಟಿಕ್ಸ್ ಪ್ರಕಾರ ಜಗತ್ತಿನಲ್ಲಿಂದು ಒಟ್ಟು ಸುಮಾರು 1.47 ಕೋಟಿ ಯಹೂದಿಗಳಿದ್ದಾರೆ. ಅವರಲ್ಲಿ 67 ಲಕ್ಷ ಮಂದಿ ಇಸ್ರೇಲ್‌ನಲ್ಲಿದ್ದಾರೆ. ಇಸ್ರೇಲ್ ಬಿಟ್ಟರೆ ಅತ್ಯಧಿಕ ಸಂಖ್ಯೆಯಲ್ಲಿ ಯಹೂದಿಗಳು ಇರುವ ದೇಶ ಅಮೆರಿಕ. ಅಲ್ಲಿ 57 ಲಕ್ಷ ಯಹೂದಿಗಳಿದ್ದಾರೆ. 4.5ಲಕ್ಷ ಯಹೂದಿಗಳು ಫ್ರಾನ್ಸ್‌ನಲ್ಲಿದ್ದಾರೆ. ಹಾಗೆಯೇ, ಕೆನಡಾದಲ್ಲಿ 3.29 ಲಕ್ಷ, ಬ್ರಿಟನ್‌ನಲ್ಲಿ 2.92ಲಕ್ಷ, ಅರ್ಜೆಂಟೈನಾಲ್ಲಿ 1.8 ಲಕ್ಷ ಮತ್ತು ರಶ್ಯದಲ್ಲಿ 1.65 ಲಕ್ಷ ಯಹೂದಿಗಳು ವಾಸಿಸುತ್ತಿದ್ದಾರೆ.

**ಫೆಲೆಸ್ತೀನಿಗಳು ಎಲ್ಲಿದ್ದಾರೆ? ಎಷ್ಟಿದ್ದಾರೆ?**

ಫೆಲೆಸ್ತೀನ್‌ನ ಸೆಂಟ್ರಲ್ ಬ್ಯುರೋ ಆಫ್ ಸ್ಟಾಟಿಸ್ಟಿಕ್ಸ್ ಪ್ರಕಾರ, ಜಗತ್ತಿನಲ್ಲಿ ಒಟ್ಟು 1.3 ಕೋಟಿ ಫೆಲೆಸ್ತೀನಿಗಳಿದ್ದಾರೆ. ಅವರಲ್ಲಿನ ಅರ್ಧದಷ್ಟು ಮಂದಿ ಐತಿಹಾಸಿಕ ಫೆಲೆಸ್ತೀನ್‌ನಲ್ಲಿದ್ದಾರೆ. ಅಂದರೆ 30 ಲಕ್ಷ ಮಂದಿ ಪಶ್ಚಿಮ ದಂಡೆ ಮತ್ತು ಪೂರ್ವ ಜೆರುಸಲೇಮ್‌ನಲ್ಲಿ, ಹಾಗೂ 20 ಲಕ್ಷ ಮಂದಿ ಗಾಝಾದಲ್ಲಿದ್ದಾರೆ. 19 ಲಕ್ಷ ಫೆಲೆಸ್ತೀನಿಗಳು ಇಸ್ರೇಲ್‌ನ ಪ್ರಜೆಗಳಾಗಿದ್ದಾರೆ. 56 ಲಕ್ಷ ಮಂದಿ ವಿವಿಧ ಅರಬ್ ದೇಶಗಳಲ್ಲಿ ನಿರಾಶ್ರಿತರಾಗಿ ಬದುಕುತ್ತಿದ್ದಾರೆ. 7 ಲಕ್ಷ ಫೆಲೆಸ್ತೀನಿಗಳು ನಿರಾಶ್ರಿತರಾಗಿ ಜಗತ್ತಿನ ಇತರ ಭಾಗಗಳಲ್ಲಿ ಚದುರಿ ಹೋಗಿದ್ದಾರೆ.

## ಫೆಲೆಸ್ತೀನಿಗಳನ್ನು ಬೆಂಬಲಿಸಲು ಗೂಗ್ಲ್‌ನ ಯಹೂದಿ ಉದ್ಯೋಗಿಗಳ ಆಗ್ರಹ

ಗೂಗ್ಲ್ ಕಂಪೆನಿಯು ಫೆಲೆಸ್ತೀನ್‌ನ ನಾಗರಿಕರಿಗೆ ಬೆಂಬಲ ನೀಡಬೇಕು ಎಂದು ಕಂಪೆನಿಯ ಯಹೂದಿ ಉದ್ಯೋಗಿಗಳ ಸಂಘಟನೆಯೊಂದು ಆಗ್ರಹಿಸಿದೆ. ಕಳೆದ ವಾರ ಫೆಲೆಸ್ತೀನ್‌ನ ವಸತಿ ಪ್ರದೇಶಗಳ ಮೇಲೆ ಇಸ್ರೇಲ್ ಸರಕಾರವು ಸೇನಾ ದಾಳಿ ಆರಂಭಿಸಿದ ಹಿನ್ನೆಲೆಯಲ್ಲಿ ಗೂಗ್ಲ್ ಉದ್ಯೋಗಿಗಳು ಕಂಪೆನಿಯ ಸಿ.ಈ.ಒ. ಸುಂದರ್ ಪಿಚೈ ಅವರಿಗೆ ಬರೆದ ಖಾಸಗಿ ಪತ್ರದಲ್ಲಿ ಇಸ್ರೇಲ್ ಸರಕಾರವು ತನ್ನ ಭದ್ರತಾ ಪಡೆಗಳನ್ನು ಬಳಸಿ ಮತ್ತು ಗುಂಪು ಹಿಂಸೆಯ ಮೂಲಕ ಫೆಲೆಸ್ತೀನ್ ನಾಗರಿಕರ ಮೇಲೆ ನಡೆಸುತ್ತಿರುವ ದೌರ್ಜನ್ಯವನ್ನು ಕಂಪೆನಿಯು ಸ್ಪಷ್ಟವಾಗಿ ಖಂಡಿಸಬೇಕು ಎಂದು ಒತ್ತಾಯಿಸಿದ್ದಾರೆ. 250 ಮಂದಿ ಪ್ರಸ್ತುತ ಪತ್ರಕ್ಕೆ ಸಹಿ ಮಾಡಿದ್ದು, ನಾವು ಯಹೂದಿಗಳು. ಆದರೆ ಇಸ್ರೇಲ್ ಪರ ಹಾಗೂ ಝಿಯೋನಿಸ್ಟರ ಪರ ಚಟುವಟಿಕೆಗಳಿಗೆ ಕಂಪೆನಿಯು ಬೆಂಬಲ ನೀಡಬೇಕು ಎಂದು ಆಗ್ರಹಿಸುವವರ ವಿಚಾರವನ್ನು ನಾವು ಒಪ್ಪುವುದಿಲ್ಲ. ಇಸ್ರೇಲ್ ಸರಕಾರ ಮತ್ತು ಯಹೂದಿ ಸಮುದಾಯ ಇವೆರಡೂ ಒಂದೇ ಎಂದು ಬಿಂಬಿಸುವುದನ್ನು ನಾವು ವಿರೋಧಿಸುತ್ತೇವೆ. ಝಿಯೋನಿಝಮ್ ಅನ್ನು ವಿರೋಧಿಸುವುದೆಂದರೆ ಯಹೂದಿಗಳನ್ನು ವಿರೋಧಿಸುವುದೆಂದು ಅರ್ಥವಲ್ಲ ಎಂದು ನಾವು ಒತ್ತಿ ಹೇಳ ಬಯಸುತ್ತೇವೆ ಎಂದು ಪತ್ರದಲ್ಲಿ ಹೇಳಲಾಗಿದೆ. ‘‘ಶಕ್ತಿಶಾಲಿ ವಸಾಹತು ಶಾಹಿ ಪಡೆಗಳು ನಡೆಸುತ್ತಿರುವ ಹಿಂಸಾಚಾರಗಳಿಂದಾಗಿ ಫೆಲೆಸ್ತೀನ್ ಜನತೆ ತೀವ್ರ ಸಂಕಟ ಅನುಭವಿಸುತ್ತಿದ್ದಾರೆ. ಈ ವಿಷಯದಲ್ಲಿ ಫೆಲೆಸ್ತೀನ್‌ನಲ್ಲಿರುವ ಗೂಗ್ಲ್ ಬಳಕೆದಾರರ ಮನವಿಗಳಿಗೆ ಮತ್ತು ಅವರ ಧ್ವನಿಗೆ ಕಂಪೆನಿಯು ಪ್ರಚಾರ ಕೊಡಬೇಕು. ಸಂತ್ರಸ್ತರಿಗೆ ಪರಿಹಾರ ಒದಗಿಸುವ ವಿಷಯದಲ್ಲಿ ಇಸ್ರೇಲ್ ಸರಕಾರಕ್ಕೆ ನೀಡುವಷ್ಟೇ ಧನ ಸಹಾಯವನ್ನು ಫೆಲೆಸ್ತೀನ್‌ನವರ ನೇತೃತ್ವದ ಮಾನವ ಹಕ್ಕು ಮತ್ತು ಪರಿಹಾರ ಸಂಸ್ಥೆಗಳಿಗೆ ಒದಗಿಸಬೇಕು. ಮಾನವ ಹಕ್ಕುಗಳ ವಿಷಯದಲ್ಲಿ ವಿಶ್ವಸಂಸ್ಥೆಯು ಮಾನ್ಯ ಮಾಡಿರುವ ನಿಯಮಗಳನ್ನು ಇಸ್ರೇಲ್ ಸರಕಾರವು ಸತತವಾಗಿ

ಉಲ್ಲಂಘಿಸುತ್ತಾ ಬಂದಿದೆ. ಈ ಹಿನ್ನೆಲೆಯಲ್ಲಿ ಗೂಗ್ಲ್ ಕಂಪೆನಿಯು ಇಸ್ರೇಲ್ ಸರಕಾರದ ಜೊತೆ ಶಾಮೀಲಾಗಿರುವ ಇಸ್ರೇಲ್ ಸೇನೆ ಸಹಿತ ಎಲ್ಲ ಕಂಪೆನಿಗಳ ಜೊತೆಗಿನ ತನ್ನ ಸಂಬಂಧ ಮತ್ತು ಒಪ್ಪಂದಗಳನ್ನು ಮರು ಪರಿಶೀಲಿಸಬೇಕು" ಎಂದು ಪತ್ರದಲ್ಲಿ ಒತ್ತಾಯಿಸಲಾಗಿದೆ.

❖ ❖ ❖

# 7

## ಆಕ್ರಮಣದಿಂದ ಲಾಭ ಇಲ್ಲವೆಂದವರಾರು?

ದೊಡ್ಡ ಪ್ರಮಾಣದ ಆಕ್ರಮಣದಿಂದ ಲಾಭವಿದೆ. 1948ರಲ್ಲಿ ಆಕ್ರಮಣದ ಮೂಲಕವೇ ಫೆಲೆಸ್ತೀನ್ ನೆಲದಲ್ಲಿ ಇಸ್ರೇಲ್ ದೇಶದ ಸ್ಥಾಪನೆಯಾಯಿತು. ಆದ್ದರಿಂದ ಜಗತ್ತಿನ ಹೆಚ್ಚಿನ ದೇಶಗಳು ಇಸ್ರೇಲ್‌ಗೆ ಮಾನ್ಯತೆ ನೀಡಲು ಸಿದ್ಧರಿರಲಿಲ್ಲ. 1967ರಲ್ಲಿ ಮತ್ತೆ ಇಸ್ರೇಲ್ ಒಂದು ದೊಡ್ಡ ಪ್ರಮಾಣದ ಆಕ್ರಮಣ ಮಾಡಿತು. ಹಿಂದೆ ಆಕ್ರಮಿಸಿದ್ದಕ್ಕಿಂತ ಹಲವು ಪಟ್ಟು ಅಧಿಕ ಭೂಮಿಯನ್ನು ಆಕ್ರಮಿಸಿತು. ಆ ಬಳಿಕವೂ ಅದು ಹಲವು ಬಾರಿ ಮಿಲಿಟರಿ ಕಾರ್ಯಾಚರಣೆಗಳ ಮೂಲಕ ತನ್ನದಲ್ಲದ ನೆಲಗಳನ್ನು ಆಕ್ರಮಿಸಿಕೊಂಡು ತನ್ನ ಗಡಿಗಳನ್ನು ವಿಸ್ತರಿಸಿಕೊಂಡಿತು. ಈ ಪ್ರಕ್ರಿಯೆಯಲ್ಲಿ ಎಷ್ಟು ರಕ್ತ ಹರಿದರೂ ಎಷ್ಟು ಜೀವಗಳು ಆಹುತಿಯಾದರೂ ಇಸ್ರೇಲ್ ಪಾಲಿಗೆ ಇದೊಂದು ಲಾಭದಾಯಕ ವ್ಯವಹಾರವಾಯಿತು. ಏಕೆಂದರೆ 1967ರ ತನಕ ಇಸ್ರೇಲ್‌ನ ಅಸ್ತಿತ್ವವನ್ನೇ ಒಪ್ಪಲು ನಿರಾಕರಿಸುತ್ತಿದ್ದವರು, ವಿಶೇಷವಾಗಿ ಹೆಚ್ಚಿನ ಅರಬ್ ದೇಶಗಳು ಈಗ 1967ಕ್ಕೆ ಮುಂಚಿನ ಇಸ್ರೇಲ್ ಗಡಿಗಳ ವಿರುದ್ಧ ಮಾತನಾಡುತ್ತಿಲ್ಲ. ಇಸ್ರೇಲ್ 1967ರ ತನ್ನ ಗಡಿಗೆ ಮರಳಬೇಕು ಎಂದು ಅವು ಆಗ್ರಹಿಸುತ್ತಿವೆ. ಚೌಕಾಶಿಯೆಲ್ಲವೂ 1967ರ ನಂತರ ಆಕ್ರಮಿಸಿಕೊಳ್ಳಲಾದ ಭೂಭಾಗಗಳಿಗೆ ಸೀಮಿತವಾಗಿ ಬಿಟ್ಟಿದೆ. ಒಂದು ಕಾಲದಲ್ಲಿ "ಅವರ ಕೊರಳನ್ನೇಕೆ

ಹಿಡಿದಿರುವಿರಿ?" ಎಂದು ರೇಗಾಡುತ್ತಿದ್ದವರೆಲ್ಲ ಇದೀಗ ಕೊರಳನ್ನು ಮರೆತಿದ್ದಾರೆ. ಜುಟ್ಟು ಬಿಟ್ಟು ಬಿಡಿ, ಸಾಕು ಎನ್ನುತ್ತಿದ್ದಾರೆ. ಸಂಪೂರ್ಣ ಅರಮನೆಯನ್ನು ಆಕ್ರಮಿಸಿಕೊಂಡವನ ಜೊತೆ ಇದೀಗ ಅರಮನೆಯ ಮಾಲಕರು ಕೇವಲ ಒಂದು ಕೋಣೆಗಾಗಿ ಚೌಕಾಶಿ ನಡೆಸುತ್ತಿದ್ದಾರೆ. ಕೋಣೆ ಸಿಕ್ಕಿ ಬಿಟ್ಟರೆ ಅದು ಕೊಟ್ಟವನ ಔದಾರ್ಯ, ಪಡೆದವರ ಸೌಭಾಗ್ಯ.

**ಅಮೆರಿಕದ ಬಿಷಪರ ಒಕ್ಕೂಟಕ್ಕೆ ಫೆಲೆಸ್ತೀನ್‌ನ ಕ್ರೈಸ್ತರ ಮನವಿ**



**ಬಿಷಪ್ ಡೇವಿಡ್ ಜೆ. ಮೆಲ್ಲೊಯ್**

ಕಳೆದ ವರ್ಷ ಇಸ್ರೇಲ್ ಮತ್ತು ಸಂಯುಕ್ತ ಅರಬ್ ಎಮಿರೇಟ್ಸ್ (ಯುಎಇ) ನಡುವೆ ಒಂದು ಶಾಂತಿ ಒಪ್ಪಂದ ನಡೆಯಿತು. ಇಸ್ರೇಲ್ ಸರಕಾರ ಅಸ್ತಿತ್ವಕ್ಕೆ ಬಂದ ಬಳಿಕ ಅದರ ಜೊತೆ ಅಧಿಕೃತವಾಗಿ ಪೂರ್ಣ ಪ್ರಮಾಣದ ರಾಜತಾಂತ್ರಿಕ ಸಂಬಂಧ ಸ್ಥಾಪಿಸಿಕೊಂಡ ಮೊದಲ ಅರಬ್ ದೇಶ ಈಜಿಪ್ಟ್ ಆಗಿತ್ತು. ಈ ಬೆಳವಣಿಗೆ 1979ರಲ್ಲಿ ನಡೆದಿತ್ತು. ಆ ಬಳಿಕ 1994ರಲ್ಲಿ ಜೋರ್ಡನ್ ಈ ಸಾಲಿಗೆ ಸೇರಿತು. 2020ರಲ್ಲಿ ಯುಎಇ ಅಂತಹ ಮೂರನೆಯ ಅರಬ್ ದೇಶವಾಯಿತು. ಇದನ್ನು ಇಸ್ರೇಲ್ ದೇಶ ಸಾಧಿಸಿದ ಒಂದು ದೊಡ್ಡ ಮುನ್ನಡೆಯೆಂದು ಪರಿಗಣಿಸಲಾಯಿತು. ಜಗತ್ತಿನ ಹಲವು ಸರಕಾರಗಳು ಮತ್ತು ಖಾಸಗಿ ವಲಯಗಳು ಇದಕ್ಕಾಗಿ ಇಸ್ರೇಲ್ ಸರಕಾರವನ್ನು ಅಭಿನಂದಿಸಿದವು ಮತ್ತು ಎರಡೂ ಸರಕಾರಗಳನ್ನು ಶ್ಲಾಘಿಸುವ ಹೇಳಿಕೆಗಳನ್ನು ನೀಡಿದವು. ಅಮೆರಿಕದ ಕೆಥೊಲಿಕ್ ಬಿಷಪ್ ಕಮಿಟಿಯ ಪರವಾಗಿ ಅದರ ಮುಖ್ಯಸ್ಥ ರಾಕ್ ಫರ್ಡ್‌ನ ಬಿಷಪ್ ಡೇವಿಡ್ ಜೆ. ಮೆಲ್ಲೊಯ್ ಕೂಡಾ ಅಂತಹ ಒಂದು ಹೇಳಿಕೆಯನ್ನು ನೀಡಿದರು. ಕ್ರೈಸ್ತ ಸಮುದಾಯವು ಇಸ್ರೇಲ್ ಜೊತೆಗಿದೆ ಎಂಬ ಅಭಿಪ್ರಾಯ ಮೂಡಿಸುವ ಅವರ ಹೇಳಿಕೆ ಮಾಧ್ಯಮಗಳಲ್ಲೆಲ್ಲ ಸಾಕಷ್ಟು ಪ್ರಚಾರ ಪಡೆಯಿತು. ಆಗಸ್ಟ್ 13ರ ಈ ಹೇಳಿಕೆ ಕುರಿತಂತೆ, ಜೆರುಸಲೇಮ್‌ನ ಕೆಲವು ಪ್ರಮುಖ ಕ್ರೈಸ್ತರು ತಮ್ಮ ಪ್ರತಿಕ್ರಿಯೆಯನ್ನು ಬರೆದರು. ಬಿಷಪ್ ಡೇವಿಡ್ ಜೆ. ಮೆಲ್ಲೊಯ್‌ರನ್ನುದ್ದೇಶಿಸಿ ಬರೆದ ಪತ್ರದ ರೂಪದಲ್ಲಿರುವ ಈ ಪ್ರತಿಕ್ರಿಯೆ ಗಮನಾರ್ಹವಾಗಿದೆ. ಅದರ ಕೆಲವು ಭಾಗಗಳು ಇಲ್ಲಿವೆ: "ರಾಕ್ ಫರ್ಡ್‌ನ ಬಿಷಪ್, ಮೋಸ್ಟ್ ರೆವರೆಂಡ್ ಡೇವಿಡ್ ಮೆಲ್ಲೊಯ್ ಅವರಿಗೆ, ಯುವರ್ ಎಕ್ಸಲೆನ್ಸಿ, ಇಸ್ರೇಲ್ ಮತ್ತು ಯುಎಇ

ನಡುವೆ ಏರ್ಪಟ್ಟಿರುವ ಒಪ್ಪಂದದ ಕುರಿತಂತೆ ಸಮಾಧಾನವನ್ನು ಪ್ರಕಟಿಸುವ ತಮ್ಮ ಆಗಸ್ಟ್ 13ರ ಹೇಳಿಕೆಯನ್ನು ನಾವು ಓದಿದೆವು. ನ್ಯಾಯ ಮತ್ತು ಶಾಂತಿಗಾಗಿರುವ ಫೆಲೆಸ್ತೀನ್‌ನ ಕ್ರೈಸ್ತ ಸಂಘಟನೆಗಳವರೆಂಬ ನೆಲೆಯಲ್ಲಿ ಆ ಕುರಿತು ನಮ್ಮ ಕೆಲವು ಅನಿಸಿಕೆಗಳನ್ನೂ ತಮಗೆ ಕಳಿಸುತ್ತಿದ್ದೇವೆ. ಯಾವುದೇ ಅರಬ್ ದೇಶ ಮತ್ತು ಇಸ್ರೇಲ್ ಸರಕಾರ ಪರಸ್ಪರ ಮನ್ನಣೆ ಕೊಟ್ಟುಕೊಂಡರೆ ಅದನ್ನು ಶಾಂತಿಯ ಹಾದಿಯಲ್ಲಿ ಸಾಧಿಸಲಾದ ಮುನ್ನಡೆ ಎಂದು ಪರಿಗಣಿಸುವವರು ತಪ್ಪು ತಿಳುವಳಿಕೆಯಲ್ಲಿದ್ದಾರೆ. ನಿಜವಾಗಿ, ಫೆಲೆಸ್ತೀನ್ ನೆಲದ ಮೇಲೆ ಇಸ್ರೇಲ್‌ನ ಮಿಲಿಟರಿ ಆಕ್ರಮಣ ಎಂಬ ಮೂಲ ಸಮಸ್ಯೆಯನ್ನು ಬಗೆಹರಿಸುವ ಸಂಕಲ್ಪದೊಂದಿಗೆ ಇಡಲಾದ ಹೆಜ್ಜೆಯನ್ನು ಮಾತ್ರ ಶಾಂತಿಯ ಕಡೆಗೆ ಮುನ್ನಡೆ ಎಂದು ಪರಿಗಣಿಸಲು ಸಾಧ್ಯ. ಇಸ್ರೇಲ್ ಮತ್ತು ಅರಬ್ ದೇಶಗಳ ನಡುವೆ ಶಾಂತಿ ಸ್ಥಾಪನೆಯಾಗಬೇಕಿದ್ದರೆ, ಆ ಪ್ರಕ್ರಿಯೆಯು, ಫೆಲೆಸ್ತೀನ್ ಮೇಲಿನ ಇಸ್ರೇಲ್‌ನ ಆಕ್ರಮಣವನ್ನು ಕೊನೆಗೊಳಿಸಿ, ಫೆಲೆಸ್ತೀನ್ ಜನತೆಗೆ ಸ್ವ ನಿರ್ಧಾರದ ಹಕ್ಕಿನ ಸಹಿತ ಅವರ ಎಲ್ಲ ಹಕ್ಕುಗಳನ್ನು ಅವರಿಗೆ ನೀಡುವ ಮೂಲಕ ಆರಂಭವಾಗಬೇಕು. ಬೇರೆ ಯಾವುದೇ ಮಾರ್ಗವು ಶಾಂತಿಯ ಕಡೆಗೆ ಹುಸಿ ಹೆಜ್ಜೆ ಎನಿಸುತ್ತದೆ. ಬಡವರನ್ನು ಮೊದಲು ಮೂಲೆಗುಂಪಾಗಿಸಿ ಆ ಬಳಿಕ ಶಕ್ತಿಶಾಲಿಗಳ ಮುಂದೆ ಮಂಡಿಯೂರುವಂತೆ ನಿರ್ಬಂಧಿಸಿದರೆ ಅದನ್ನು ಶರಣಾಗತಿ ಎನ್ನಬಹುದೇ ಹೊರತು ಶಾಂತಿ ಎನ್ನಲಾಗುವುದಿಲ್ಲ. ಒಂದು ವೇಳೆ ಅರಬ್ ಸರಕಾರಗಳು ಇಸ್ರೇಲ್‌ಗೆ ಮನ್ನಣೆ ನೀಡಿದರೂ, ಫೆಲೆಸ್ತೀನಿಗಳು ದಬ್ಬಾಳಿಕೆಯಡಿಯಲ್ಲಿ ಬದುಕುತ್ತಿರುವ ತನಕ ಅರಬ್ ಜನತೆ ಇಸ್ರೇಲ್ ಜೊತೆ ಸಂಬಂಧ ಸುಧಾರಣೆಗೆ ಸಮ್ಮತಿಸಲಾರರು. ನಿಜವಾದ ಶಾಂತಿ ಪ್ರಕ್ರಿಯೆಯು ಫೆಲೆಸ್ತೀನ್ ಜನತೆಯೊಂದಿಗೆ ಶಾಂತಿ ಸ್ಥಾಪನೆಯೊಂದಿಗೆ ಆರಂಭವಾಗಬೇಕೇ ಹೊರತು ಅರಬ್ ದೇಶಗಳೊಂದಿಗೆ ಒಪ್ಪಂದಗಳನ್ನು ಮಾಡುವ ಮೂಲಕ ಅಲ್ಲ. ನಿಜವಾದ ಶಾಂತಿಯು ಫೆಲೆಸ್ತೀನ್ ಜನತೆಯ ಹೃದಯಗಳಿಂದ ಆರಂಭವಾಗಬೇಕು. ಆ ಆಯ್ಕೆ ಇಸ್ರೇಲ್‌ನ ಕೈಯಲ್ಲಿದೆ. ಐತಿಹಾಸಿಕ ಫೆಲೆಸ್ತೀನ್ ಭೂಮಿಯ ಉಳಿದ 22ಶೇ. ಭಾಗವನ್ನು ಇಸ್ರೇಲ್ ಸರಕಾರವು ಫೆಲೆಸ್ತೀನ್ ದೇಶವೆಂದು ಮಾನ್ಯ ಮಾಡಬೇಕು. ಜನರ ಮಧ್ಯೆ ಸಮಾನತೆ ಇರಬೇಕಾದುದು ಮುಖ್ಯ. ದೇವರಂತೂ ಎಲ್ಲ ಜನರನ್ನು ಸಮಾನರಾಗಿಯೇ ಸೃಷ್ಟಿಸಿದ್ದಾನೆ. ಕೆಲವರು ಈ ಒಪ್ಪಂದವನ್ನು 'ಅಬ್ರಹಾಮ್ ಎಕ್ಕಾರ್ಡ್' ಎಂದು ಕರೆಯುತ್ತಿದ್ದಾರೆ. ಈ ಕುರಿತು ನಾವು ಹೇಳುವುದಿಷ್ಟೇ: ದೇವರನ್ನು ಮತ್ತು ದೇವರ ದೂತರುಗಳನ್ನು ಶಕ್ತಿಶಾಲಿಗಳ ಪಾಳಯದಲ್ಲಿ ನಿಲ್ಲಿಸಿ ಶೋಷಿಸಿದ್ದು ಸಾಕು. ಈ ವಿಷಯದಲ್ಲಿ ನಾವು ದೇವರನ್ನು ಮತ್ತು ದೇವರ ದೂತರನ್ನು ಎಳೆದು ತರುವುದಿದ್ದರೆ ಮತ್ತೆ ನಾವು ದೇವರ ಆದೇಶಗಳನ್ನು ಮತ್ತು ಇಸ್ರೇಲಿಗಳು ಮತ್ತು ಫೆಲೆಸ್ತೀನಿಗಳ

ಸಹಿತ–ಎಲ್ಲ ಮಾನವರಿಗೆ ದೇವರು ದಯಪಾಲಿಸಿರುವ ಸಮಾನತೆಯನ್ನು ಪಾಲಿಸಬೇಕು. ಎಲ್ಲರ ವಿಷಯದಲ್ಲಿ ನ್ಯಾಯವನ್ನು ಪಾಲಿಸಬೇಕು. ಆದರೆ ಇಂದು ವಾಸ್ತವದಲ್ಲಿ ಶಕ್ತಿಶಾಲಿಗಳು ತಮ್ಮದನ್ನೂ ಇತರರಿಗೆ ಸೇರಿದ್ದನ್ನೂ ಕಿತ್ತುಕೊಂಡು ತಮ್ಮದಾಗಿಸಿಕೊಳ್ಳುತ್ತಿದ್ದಾರೆ. ಅವರಿಗೆ ಕೆಲವು ಚರ್ಚುಗಳ ಬೆಂಬಲವೂ ಸಿಗುತ್ತಿದೆ. ದುರ್ಬಲರಿಂದ ಅವರ ಅಧಿಕಾರಗಳನ್ನು ಕಿತ್ತುಕೊಳ್ಳಲಾಗುತ್ತಿದೆ. ಇದಕ್ಕೆ ಪ್ರತಿಕ್ರಿಯೆಯಾಗಿ ಶಕ್ತಿಶಾಲಿಗಳ ಕಡೆಯಿಂದ ಒಂದಷ್ಟು ಪದಗಳು ಮಾತ್ರ ಹರಿದು ಬರುತ್ತಿವೆ, ಯಾವುದೇ ಕ್ರಮ ಮುಂದೆ ಬರುತ್ತಿಲ್ಲ. ಶಾಂತಿಗಿರುವುದು ಒಂದೇ ದಾರಿ. ದುರ್ಬಲರಿಗೆ ಬೆಂಬಲ ನೀಡಬೇಕು ಮತ್ತು ಅವರ ವಿರುದ್ಧ ಶಕ್ತಿಶಾಲಿಗಳು ನಡೆಸುವ ಅನ್ಯಾಯಗಳನ್ನು ವಿರೋಧಿಸಬೇಕು. ಇದಕ್ಕಾಗಿ ಚರ್ಚುಗಳು, ಪವಿತ್ರ ಭೂಮಿಯ ಜನತೆ ಬಹುಕಾಲದಿಂದ ಅನುಭವಿಸುತ್ತಿರುವ ದುರಂತ ಸ್ಥಿತಿಯನ್ನು ಕೊನೆಗೊಳಿಸುವಂತೆ ತಮ್ಮ ಸರಕಾರಗಳ ಮೇಲೆ ಒತ್ತಡ ಹೇರಬೇಕು.”
ಫೆಲೆಸ್ತೀನ್‌ನ ಹಲವು ಪ್ರಮುಖ ಕ್ರೈಸ್ತ ಸಂಸ್ಥೆಗಳ ಮುಖ್ಯಸ್ಥರು ಈ ಪತ್ರಕ್ಕೆ ಸಹಿ ಮಾಡಿದ್ದರು. ಉದಾ:

H.B. Michel Sabbah, Patriarch Emeritus

Mr. Rifat Kassis, Coordinator of Kairos Palestine

Mr. Fuad Giacaman, Coordinator of NCCOP & Director of Arab Educational Institute

Rev. Dr. Mitri Raheb, President, DIYAR

Mr. Omar Harami, Sabeel Ecumenical Liberation Theology Center

Mr. Nader Abu Amsha, The East Jerusalem Rehab. Program & Beit Sahour YMCA

Professor Mazin Qumsiyeh, Director, Palestine Institute for Biodiversity and Sustainability, Bethlehem University

Rev. Dr. Munther Isaac, Director of Christ at the Checkpoint conference

Mr. Nidal Abu Zuluf, Joint Advocacy Initiative (JAI)

**ನೊಬೆಲ್ ಪ್ರಶಸ್ತಿ ವಿಜೇತ ಆರ್ಚ್ ಬಿಷಪ್ ದೆಸ್ಮಂಡ್ ಟೂಟು ಗುರುತಿಸಿದ ಜನಾಂಗವಾದ**

ನೊಬೆಲ್ ಪ್ರಶಸ್ತಿ ವಿಜೇತ ದೆಸ್ಮಂಡ್ ಟೂಟು (Desmond Tutu) ತಮ್ಮ ಹಲವಾರು ವಿಶೇಷತೆಗಳಿಗಾಗಿ ಪ್ರಖ್ಯಾತರು. ಕೇಪ್ ಟೌನ್‌ನ ಪ್ರಥಮ ಕರಿಯ

ಆರ್ಚ್ ಬಿಷಪ್ ಆಗಿದ್ದವರು. ದಕ್ಷಿಣ ಆಫ್ರಿಕಾದಲ್ಲಿ ಕರಿಯರ ವಿರುದ್ಧ ಅತ್ಯುಗ್ರ ದಮನ ನೀತಿಯನ್ನು ಅನುಸರಿಸುತ್ತಿದ್ದ ಬಿಳಿಯರ ಸರಕಾರದ ವರ್ಣಭೇದ ಮತ್ತು ಜನಾಂಗವಾದಗಳ ವಿರುದ್ಧ ಹಲವು ದಶಕಗಳ ದೀರ್ಘ ಹೋರಾಟ ನಡೆಸಿದವರು. ಅಲ್ಲಿ ಪೌರ ಹಕ್ಕುಗಳಿಗಾಗಿ ನಡೆದ ಅಹಿಂಸಾತ್ಮಕ ಹೋರಾಟದ ಪ್ರಮುಖ ನಾಯಕರಲ್ಲೊಬ್ಬರು. ಸಾಮಾನ್ಯ ಪಕ್ಷಪಾತ, ಪೂರ್ವಗ್ರಹ ಇತ್ಯಾದಿಗಳಿಗೂ ಜನಾಂಗವಾದಕ್ಕೂ ಇರುವ ವ್ಯತ್ಯಾಸವನ್ನು ದೆಸ್ಮಂಡ್ ಟೂಟು ಚೆನ್ನಾಗಿ ಬಲ್ಲರು. ಅವರು ಜನಾಂಗವಾದ ಎಲ್ಲಿ ಯಾವ ಸ್ವರೂಪದಲ್ಲಿ ಇದ್ದರೂ ಗುರುತಿಸಬಲ್ಲಷ್ಟು ಪ್ರಬುದ್ಧರು. ಇಸ್ರೇಲ್‌ನ ಆಕ್ರಮಿತ ಪ್ರದೇಶಗಳಿಗೆ ಭೇಟಿ ನೀಡಿದ ಬಳಿಕ ಅವರ ಅನಿಸಿಕೆ ಹೀಗಿತ್ತು: "ಇಸ್ರೇಲ್ ಸಮಾಜದ ಸದಸ್ಯರು ಮತ್ತು ಅಲ್ಲಿಯ ಭದ್ರತಾ ಪಡೆಗಳು ಯಾವ ರೀತಿ ಯೋಜನಾಬದ್ಧವಾಗಿ ಫೆಲೆಸ್ತೀನ್‌ನ ಪುರುಷರು, ಮಹಿಳೆಯರು ಮತ್ತು ಮಕ್ಕಳನ್ನು ಅಪಮಾನಿಸುತ್ತಾರೆ ಎಂಬುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಅಲ್ಲಿ ಅವರು ಅನುಭವಿಸುತ್ತಿರುವ ಅಪಮಾನವು, ದಕ್ಷಿಣ ಆಫ್ರಿಕಾದ ಕರಿಯರಿಗೆ ಸಾಕಷ್ಟು ಪರಿಚಿತವಾಗಿದೆ. ಏಕೆಂದರೆ ಅವರು ಜನಾಂಗವಾದಿ ಸರಕಾರದ ಕೈಯಲ್ಲಿ ಅಗಾಧ ಅಪಮಾನ, ಕಿರುಕುಳ ಮತ್ತು ಹಲ್ಲೆಗಳನ್ನು ಅನುಭವಿಸಿದ್ದಾರೆ".

ತನ್ನ ಧೋರಣೆಗಳನ್ನು ಬದಲಿಸುವಂತೆ ಇಸ್ರೇಲ್ ಅನ್ನು ನಿರ್ಬಂಧಿಸ ಬೇಕಿದ್ದರೆ, ಇಸ್ರೇಲ್ ಅನ್ನು ಬಹಿಷ್ಕರಿಸಬೇಕು ಮತ್ತು ಅದರ ಮೇಲೆ ಆರ್ಥಿಕ ನಿರ್ಬಂಧಗಳನ್ನು ಹೇರಬೇಕು ಎಂಬ ಬೇಡಿಕೆಯನ್ನು ಅವರು ಬೆಂಬಲಿಸಿದರು. "ಅನ್ಯಾಯವನ್ನು ಕಂಡು ಕಣ್ಣು ಮುಚ್ಚಿಕೊಳ್ಳುವವರು ನಿಜವಾಗಿ ಅನ್ಯಾಯವನ್ನು ಹೆಚ್ಚಿಸುತ್ತಾರೆ. ಅನ್ಯಾಯದ ಸನ್ನಿವೇಶದಲ್ಲಿ ನೀವು ತಟಸ್ಥರಾಗಿದ್ದರೆ, ನೀವು ಅನ್ಯಾಯ ಮಾಡುವವರ ಪಕ್ಷದಲ್ಲಿದ್ದೀರಿ ಎಂದೇ ಅರ್ಥ. ನಾವು ಪೂಜಿಸುವುದೆಲ್ಲಿ ಅಥವಾ ಬದುಕುವುದೆಲ್ಲಿ ಎಂಬುದು ಮುಖ್ಯವಲ್ಲ. ನಾವೆಲ್ಲಾ ಒಂದು ಕುಟುಂಬದವರು. ಅದುವೇ ಮಾನವ ಕುಟುಂಬ. ದೇವರ ಕುಟುಂಬ" ಎಂದು ಟೂಟು ಹೇಳಿದರು.

## ಕೆನಡಾದಲ್ಲಿ ಇಸ್ರೇಲ್ ಜೊತೆ ವಾಣಿಜ್ಯ ಒಪ್ಪಂದಕ್ಕೆ ವಿರೋಧ

ಈ ವರ್ಷ ಜನವರಿ ತಿಂಗಳಲ್ಲಿ ಕೆನಡಾದ 150ಕ್ಕೂ ಹೆಚ್ಚಿನ ಕಲಾವಿದರು, ಬುದ್ಧಿಜೀವಿಗಳು, 20ಕ್ಕೂ ಹೆಚ್ಚಿನ ಕಾರ್ಮಿಕ ಸಂಘಟನೆಗಳು, ವಿದ್ಯಾರ್ಥಿ ಒಕ್ಕೂಟಗಳು ಮತ್ತು ಸ್ಥಳೀಯ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಮಾಂಟ್ರಿಯಲ್ ನಗರದಲ್ಲಿ ಸೇರಿ

ಇಸ್ರೇಲ್ ಸರಕಾರದ ವಸಾಹತು ಶಾಹಿತ್ವದಿಂದ ಫೆಲೆಸ್ತೀನ್ ಅನ್ನು ಮುಕ್ತಗೊಳಸಬೇಕೆಂದು ಕರೆ ನೀಡಿದರು. ಕೆನಡಾ ಸರಕಾರವು ಇಸ್ರೇಲ್ ಸರಕಾರದ ಜೊತೆ ಮಾಡ ಹೊರಟ ವಾಣಿಜ್ಯ ಒಪ್ಪಂದವನ್ನು ಪ್ರದರ್ಶನಕಾರರು ಕಟುವಾಗಿ ವಿರೋಧಿಸಿದ್ದು, ಅದನ್ನು ತಕ್ಷಣ ಕೈಬಿಡಬೇಕೆಂದು ಆಗ್ರಹಿಸಿದ್ದಾರೆ.

## ಫೆಲೆಸ್ತೀನಿಗಳಗೆ ಬೆಂಬಲವಾಗಿ ಇಟಲಿ ಕಾರ್ಮಿಕರ ಮುಷ್ಕರ

ಕಳೆದ ವಾರ ಇಟಲಿಯ ಅವೋನೋ ಬಂದರಿನಲ್ಲಿ ಹಡಗುದಾಣಗಳ ಕಾರ್ಮಿಕರ ಸಂಘಟನೆಗಳ ಒಕ್ಕೂಟವು, ಫೆಲೆಸ್ತೀನ್ ಜನತೆಯ ಪರವಾಗಿ ತಮ್ಮ ಭಾವೈಕ್ಯದ ಪ್ರತೀಕವಾಗಿ ಒಂದು ಮುಷ್ಕರ ನಡೆಸಿತು. ಇಸ್ರೇಲ್ ಮೂಲದ ಖಾಸಗಿ ಕಂಪೆನಿಯೊಂದರ ಮಾಲಕತ್ವದ 'ಏಷಿಯಾಟಿಕ್ ಐಲ್ಯಾಂಡ್' ಎಂಬ ಹಡಗು ಶಸ್ತ್ರಾಸ್ತ್ರಗಳು ತುಂಬಿದ ಹಲವು ಕಂಟೈನರ್‌ಗಳನ್ನು ಇಸ್ರೇಲಿನ ಹೈಫಾ ಬಂದರಿಗೆ ಒಯ್ಯಲು ಸಜ್ಜಾಗಿತ್ತು. ಆದರೆ ಫೆಲೆಸ್ತೀನ್ ನಾಗರಿಕರ ವಿರುದ್ಧ ಇಸ್ರೇಲ್ ಸರಕಾರವು ನಡೆಸುತ್ತಿರುವ ಹಿಂಸೆ ಮತ್ತು ರಕ್ತಪಾತವನ್ನು ತಾವು ಖಂಡಿಸುವುದಾಗಿ ಹೇಳದ ಕಾರ್ಮಿಕ ಒಕ್ಕೂಟದ ಸದಸ್ಯರು ಶಸ್ತ್ರಾಸ್ತ್ರಗಳ ಕಂಟೈನರ್‌ಗಳನ್ನು ಹಡಗಿಗೆ ಹತ್ತಿಸಲು ನಿರಾಕರಿಸಿದರು.

❖ ❖ ❖

## 8

# ಇಸ್ರೇಲ್ ಮತ್ತು ಝಿಯೋನಿಝಮ್ ಬಗ್ಗೆ ಕ್ರೈಸ್ತರ ನಿಲುವೇನು?

ಕೆಥೊಲಿಕ್ ಜಗತ್ತಿನ ಸರ್ವೋಚ್ಚ ನಾಯಕರಾದ ರೋಮ್‌ನ ಪೋಪ್ ಅವರು, ಇಸ್ರೇಲ್ ದೇಶ ಸ್ಥಾಪನೆಯಾಗಿ ಸುಮಾರು ಐದು ದಶಕಗಳ ಕಾಲ ಅಂದರೆ 1993ರ ಕೊನೆಯ ತನಕವೂ ಇಸ್ರೇಲ್‌ಗೆ ಮಾನ್ಯತೆ ನೀಡಿರಲಿಲ್ಲ ಎಂಬುದು ಒಂದು ಸ್ವಾರಸ್ಯಕರ ಮಾಹಿತಿಯಲ್ಲವೇ?.

ಇತ್ತೀಚೆಗೆ ಕೆಥೊಲಿಕ್ ಕ್ರೈಸ್ತ ಸಮುದಾಯ ಮತ್ತು ಇಸ್ರೇಲ್ ಸರಕಾರದ ನಡುವೆ ಭಾರೀ ಸ್ನೇಹ ಮತ್ತು ಅಭೇದ್ಯ ಬಾಂಧವ್ಯ ಇದೆ ಎಂದು ನಂಬಿಸುವ ಹಲವು ನಾಟಕಗಳು ನಡೆದಿವೆ. ನಿಜವಾಗಿ ಇಂದು ಪ್ರದರ್ಶಿಸಲಾಗುತ್ತಿರುವ ಈ ಸ್ನೇಹ ವಾಸ್ತವಿಕವೂ ಅಲ್ಲ, ಸ್ವಾಭಾವಿಕವೂ ಅಲ್ಲ. "ನಾವು ನಿಮ್ಮ ಜೊತೆ ನಿಂತಿದ್ದೇವೆ" ಎಂಬ ಚಂದದ ಬ್ಯಾನರ್‌ಗಳ ಹಿಂದೆ, ಹತ್ತಾರು ಶತಮಾನಗಳಷ್ಟು ದೀರ್ಘವಾದ ಒಂದು ರಕ್ತ ರಂಜಿತ ಇತಿಹಾಸ ಅಡಗಿದೆ. ಪೂರ್ವಗ್ರಹಗಳು, ವಿದ್ವೇಷ, ತೀವ್ರ ಉದ್ವಿಗ್ನತೆ, ಬಹಿಷ್ಕಾರ, ದಿಗ್ಬಂಧನ, ಯುದ್ಧ ಮತ್ತು ಸಮೂಹ ಹತ್ಯೆಯ ಸಹಿತ ಹಲವು ಕರಾಳ ಮುಖ್ಯಾಂಶಗಳನ್ನೊಳಗೊಂಡ ಇತಿಹಾಸ ಅದು. ಆದ್ದರಿಂದಲೇ ಯಹೂದಿಗಳ ಮತ್ತು ಕ್ರೈಸ್ತರ ನಡುವೆ ಸ್ನೇಹ ಸ್ಥಾಪನೆ ಎಷ್ಟೇ ಅಪೇಕ್ಷಣೀಯವಾಗಿದ್ದರೂ, ಎರಡೂ ಕಡೆ ಅದನ್ನು ಬಯಸುವ ಸಜ್ಜನರು ಧಾರಾಳ



ಯಾಸಿರ್ ಅರಫಾತ್


ಸಂಖ್ಯೆಯಲ್ಲಿದ್ದರೂ, ಉಭಯ ಪಾಳಯ ಗಳಲ್ಲಿ ಅದರ ವಿರುದ್ಧ ಪ್ರಬಲ ಪ್ರತಿರೋಧವಿದೆ.

'ಹೋಲೀ ಸೀ' ಎಂದು ಕರೆಯಲಾಗುವ, ಪೋಪರ ಕೇಂದ್ರವಾದ ವ್ಯಾಟಿಕನ್ ಸರಕಾರ ಮತ್ತು ಇಸ್ರೇಲ್ ಸರಕಾರದ ಮಧ್ಯೆ ಸ್ನೇಹ ಸ್ಥಾಪನೆಯ ಹಾದಿಯಲ್ಲೂ ಅಂತಹ ಅನೇಕ ಅಡೆತಡೆಗಳಿದ್ದವು. ಈ ಹಿನ್ನೆಲೆಯಲ್ಲಿ, ಇಸ್ರೇಲ್ ಸರಕಾರ ಅಸ್ತಿತ್ವಕ್ಕೆ ಬಂದು ಕನಿಷ್ಠ 50 ವರ್ಷಗಳ ತನಕ ಕೆಥೊಲಿಕ್ ಕ್ರೈಸ್ತರ ಜಾಗತಿಕ ಕೇಂದ್ರವಾದ ವ್ಯಾಟಿಕನ್, ಇಸ್ರೇಲ್‌ಗೆ ಅಧಿಕೃತ ಮನ್ನಣೆಯನ್ನೇ ನೀಡಿರಲಿಲ್ಲ ಎಂಬುದು ಅಚ್ಚರಿಯ ವಿಷಯವೇ ಅಲ್ಲ! ಯಾಸಿರ್ ಅರಫಾತ್ ಅವರ ನೇತೃತ್ವದ ಫೆಲೆಸ್ತೀನ್ ಲಿಬರೇಶನ್ ಆರ್ಗನೈಸೇಶನ್ (ಪಿಎಲ್‌ಒ) ತನ್ನ ಬದ್ಧ ವೈರಿ ಎಂದು ಇಸ್ರೇಲ್ ಸರಕಾರವು ಘೋಷಿಸಿತ್ತು. ಒಂದು ಹಂತದಲ್ಲಿ ಪ್ರಸ್ತುತ ಪಿಎಲ್‌ಒ, ಇಸ್ರೇಲ್ ವಿರುದ್ಧ ಸಶಸ್ತ್ರ ಸಂಗ್ರಾಮದಲ್ಲೂ ನಿರತವಾಗಿತ್ತು. ಅಂತಹ ಪಿಎಲ್‌ಒ 1993 ಸೆಪ್ಟಂಬರ್‌ನಲ್ಲಿ ಅಧಿಕೃತವಾಗಿ ಇಸ್ರೇಲ್ ಅನ್ನು ಒಂದು ಸರಕಾರವೆಂದು ಅಂಗೀಕರಿಸಿತ್ತು. ಆದರೆ ವ್ಯಾಟಿಕನ್ ಮಾತ್ರ ಈ ಕೆಲಸವನ್ನು ಮಾಡಿದ್ದು ಇದಾಗಿ ಮೂರು ತಿಂಗಳ ಬಳಿಕ, ಅಂದರೆ 1993 ಡಿಸೆಂಬರ್ ಅಂತ್ಯದಲ್ಲಿ!

### ಯಹೂದ್ಯರ ಬಳಿ ಕ್ಷಮೆ ಯಾಚಿಸಿದ ವ್ಯಾಟಿಕನ್

ಇಸ್ರೇಲ್ ಮತ್ತು ವ್ಯಾಟಿಕನ್ ನಡುವಣ ಸಂಬಂಧಗಳನ್ನು ಸುಧಾರಿಸುವ ಪ್ರಕ್ರಿಯೆ ಸುಲಭದ್ದಾಗಿರಲಿಲ್ಲ. "ಯುರೋಪಿನಲ್ಲಿ ಕ್ರೈಸ್ತರೇ ಬಹುಸಂಖ್ಯಾತರಾಗಿದ್ದ ನಾಡುಗಳಲ್ಲಿ ನಾಝಿಗಳು 60 ಲಕ್ಷದಷ್ಟು ಯಹೂದಿಗಳ ಸಾಮೂಹಿಕ ಹತ್ಯಾಕಾಂಡ ನಡೆಸುತ್ತಿದ್ದಾಗ, ಕೆಥೊಲಿಕ್ ಕ್ರೈಸ್ತರ ಕೇಂದ್ರವಾದ ವ್ಯಾಟಿಕನ್ ಆಗಲಿ ಕೆಥೊಲಿಕರ ಪರಮೋಚ್ಚ ಧಾರ್ಮಿಕ ಮುಖ್ಯಸ್ಥರಾದ ಪೋಪ್ ಅವರಾಗಲಿ ಅದನ್ನು ತಡೆಯಲು ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಮಾತ್ರವಲ್ಲ, ಅವರ ಸಹಾನುಭೂತಿ ಕೂಡಾ ಕಟುಕರ ಪರವಾಗಿತ್ತು." ಎಂದು ಯಹೂದಿಗಳ ಒಂದು ಗುಂಪು ಬಹುಕಾಲದಿಂದ ದೂಷಿಸುತ್ತಾ ಬಂದಿದೆ. ಹಾಗೆಯೇ, ಈ ವಿಷಯದಲ್ಲಿ ವ್ಯಾಟಿಕನ್ ಕೇಂದ್ರವು ಯಹೂದಿ ಸಮಾಜದ ಬಳಿ ಕ್ಷಮೆಯಾಚಿಸಬೇಕು ಎಂದು ಅವರು ಆಗ್ರಹಿಸುತ್ತಲೂ ಇದ್ದರು. ವಿಶೇಷವಾಗಿ 1939 ರಿಂದ 1958 ತನಕ ಪೋಪ್ ಹುದ್ದೆಯಲ್ಲಿದ್ದ ಪೋಪ್

ಪಯಸ್ – 12 ಅವರು ತಾಳಿದ್ದ ನಿಲುವಿನ ಬಗ್ಗೆ ಯಹೂದಿಗಳಿಗೆ ತೀವ್ರ ಆಕ್ಷೇಪವಿತ್ತು. ಈ ಕುರಿತು ಯಹೂದಿಗಳು ಮತ್ತು ಕೆಥೊಲಿಕರ ನಡುವೆ ವಿವಿಧ ವೇದಿಕೆಗಳಲ್ಲಿ ಮತ್ತು ಪರಸ್ಪರ ಅಧಿಕೃತ ಮಾತುಕತೆಗಳ ವೇಳೆ ಹಲವು ಬಾರಿ ಬಹಳ ಬಿಸಿ ಬಿಸಿಯಾದ ವಿನಿಮಯಗಳೂ ನಡೆದಿದ್ದವು. ಕೆಥೊಲಿಕ್ ಚರ್ಚು ಹೋಲೋಕಾಸ್ಟ್ ಸಂದರ್ಭದಲ್ಲಿ ತಾನು ತಳೆದ ನಿಲುವಿಗೆ ವಿವಿಧ ಬಗೆಯ ಸಮರ್ಥನೆಗಳನ್ನು ಮುಂದಿಡುತ್ತಲೂ ಬಂದಿತ್ತು.



**ಪೋಪ್ ಜಾನ್ ಪಾಲ್(ದ್ವಿತೀಯ)**

1978 ರಿಂದ 2005ರ ತನಕ ಪೋಪ್ ಆಗಿದ್ದ ಜಾನ್ ಪಾಲ್ (ದ್ವಿತೀಯ) ಅವರ ನೇತೃತ್ವದ ಅವಧಿಯಲ್ಲಿ, ಅವರ ಪ್ರಾಮಾಣಿಕ ಶ್ರಮದಿಂದಾಗಿ, ಹಲವು ನಿರ್ಣಾಯಕ ಬದಲಾವಣೆಗಳು ಕಂಡು ಬಂದವು. ಯಹೂದಿಗಳನ್ನು 'ನಮ್ಮ ಅಣ್ಣಂದಿರು' ಎಂದು ಕರೆದ ಅವರು 1986ರಲ್ಲಿ ರೋಮ್‌ನಲ್ಲಿರುವ ಗ್ರೇಟ್ ಸಿನೆಗಾಗ್ ಅನ್ನು ಸಂದರ್ಶಿಸುವ ಮೂಲಕ ಆಧುನಿಕ ಕಾಲದಲ್ಲಿ ಯಹೂದಿಗಳ ಸಿನೆಗಾಗ್‌ಗೆ ಭೇಟಿ ನೀಡಿದ ಮೊದಲ ಪೋಪ್ ಎನಿಸಿದರು. 1979ರಲ್ಲಿ ಅವರು ಪೋಲೆಂಡ್‌ನಲ್ಲಿರುವ ಜರ್ಮನಿಯ ಪರಿತ್ಯಕ್ತ ಆಸ್ಟ್ ವಿಟ್ಸ್ (Auschwitz) ನಾಝಿ ಕ್ಯಾಂಪ್‌ಗೆ ನೀಡಿದ ಭೇಟಿಯೂ ಒಂದು ಐತಿಹಾಸಿಕ ದಾಖಲೆ ಎನಿಸಿತು. ಅವರು 1990 ರಲ್ಲಿ, 'ಯಹೂದಿ ದ್ವೇಷ' ಎಂಬುದು ದೇವರ ವಿರುದ್ಧ ಮತ್ತು ಮನುಕುಲದ ವಿರುದ್ಧ ಎಸಗುವ ಪಾಪ ಕೃತ್ಯ ಎಂದು ಘೋಷಿಸಿದರು. 1998 ಮಾರ್ಚ್ 16 ರಂದು ವ್ಯಾಟಿಕನ್‌ನಲ್ಲಿ ಜಗತ್ತಿನ ಸುಮಾರು ಶತಕೋಟಿ ಕೆಥೊಲಿಕ್ ಕ್ರೈಸ್ತರ ಧಾರ್ಮಿಕ ನಾಯಕ ಪೋಪ್ ಜಾನ್ ಪಾಲ್ (ದ್ವಿತೀಯ) ಅವರ ಪುಸ್ತಕವೊಂದು ಬಿಡುಗಡೆಗೊಂಡಿತು. ಅದರ ಮುನ್ನುಡಿಯಲ್ಲಿ ಪೋಪ್ ಅವರು, ಎರಡನೆಯ ಮಹಾಯುದ್ಧದ ವೇಳೆ ನಡೆದ ಯಹೂದಿಗಳ ನರಮೇಧವನ್ನು ತಡೆಯುವ ನಿಟ್ಟಿನಲ್ಲಿ ಕ್ರೈಸ್ತ ಚರ್ಚು ಯಾವುದೇ ನಿರ್ಣಾಯಕ ಕ್ರಮ ಕೈಗೊಳ್ಳದೇ ಇದ್ದ ಬಗ್ಗೆ ಖೇದ ಪ್ರಕಟಿಸಿದರು. ಕೆಥೊಲಿಕ್ ಸಮಾಜದ ವೈಫಲ್ಯಗಳ ಕುರಿತಂತೆ ವ್ಯಾಟಿಕನ್ ಕಡೆಯಿಂದ ಈ ವಿಷಾದ ಪ್ರಕಟನೆಯು ಗತಕಾಲದ ಅಪಗ್ರಹಿಕೆ ಮತ್ತು ಅನ್ಯಾಯಗಳಿಂದ ಉಂಟಾದ ಗಾಯಗಳನ್ನು ಗುಣಪಡಿಸಬಹುದು ಎಂಬ ಆಶಾವಾದವನ್ನು ಅವರು ವ್ಯಕ್ತಪಡಿಸಿದರು.

2000 ಮಾರ್ಚ್‌ನಲ್ಲಿ, ರೋಮ್‌ನ ಸೈಂಟ್ ಪೀಟರ್ಸ್ ಬಾಸಿಲಿಕಾದಲ್ಲಿ

ಭಾಷಣ ಮಾಡಿದ ಪೋಪರು ಮತ್ತೆ ಪರಮ ವಿನಯವನ್ನು ಪ್ರದರ್ಶಿಸಿದರು. ಕಳೆದ ಶತಮಾನಗಳಲ್ಲಿ ಮೆರೆದ ಪೈಪೋಟಿ ಮತ್ತು ವೈಷಮ್ಯವು ಮೂರನೇ ಸಹಸ್ರಮಾನದಲ್ಲಿ ತಲೆ ಎತ್ತದಂತೆ ನೋಡಿಕೊಳ್ಳುತ್ತೇವೆಂದು ನಾವು ಸಂಕಲ್ಪ ಮಾಡೋಣ ಎಂದು ಅವರು ಕರೆ ನೀಡಿದರು. ಪಾರ್ಕಿನ್ಸನ್ ವ್ಯಾಧಿಯಿಂದ ಬಳಲುತ್ತಿದ್ದರೂ, ಮಾತನಾಡಲು ಪ್ರಯಾಸ ವಾಗುತ್ತಿದ್ದರೂ ಉತ್ಸಾಹದಿಂದ ಮಾತನಾಡಿದ ಅವರು "ನಾವು ಕ್ಷಮಿಸುತ್ತೇವೆ ಮತ್ತು ಕ್ಷಮೆಯಾಚಿಸುತ್ತೇವೆ. ಕ್ರೈಸ್ತರೊಳಗೆ ಉಂಟಾದ ಒಡಕುಗಳಿಗಾಗಿ, ಸತ್ಯಪ್ರಸಾರದ ಮಾರ್ಗದಲ್ಲಿ ಕೆಲವರು ನಡೆಸಿದ ಹಿಂಸೆಗಳಿಗಾಗಿ ಮತ್ತು ಇತರ ಧರ್ಮಗಳ ಅನುಯಾಯಿಗಳ ವಿಷಯದಲ್ಲಿ ಅನುಸರಿಸಲಾದ ಅಪನಂಬಿಕೆ ಮತ್ತು ವಿದ್ವೇಷದ ಧೋರಣೆಗಾಗಿ ನಾವು ಕ್ಷಮೆ ಬೇಡುತ್ತೇವೆ" ಎಂದರು.

ಅವರ ಈ ಧೋರಣೆಯ ಬಗ್ಗೆ ಸ್ವತಃ ವ್ಯಾಟಿಕನ್‌ನ ಕೆಲವು ವಲಯಗಳಿಗೆ ಆಕ್ಷೇಪವಿತ್ತು. ಯಹೂದಿ ಸಮುದಾಯದಲ್ಲಿ ಹೆಚ್ಚಿನವರು ಅವರ ಮಾತುಗಳನ್ನು ಸ್ವಾಗತಿಸಿದರು. ಎಲ್ಲರನ್ನು ಸಮಾಧಾನಪಡಿಸಲು ಅವರಿಗೆ ಸಾಧ್ಯವಾಗಲಿಲ್ಲ. ಆದರೆ ಅವರ ಮನೋವೈಶಾಲ್ಯವನ್ನು ಜಗತ್ತು ಹತ್ತಿರದಿಂದ ಕಂಡಿತು.

## ಇಸ್ರೇಲ್‌ನಲ್ಲಿ ಕ್ರೈಸ್ತರೆಷ್ಟು ಸ್ವತಂತ್ರರು?

ಸಾಮಾನ್ಯವಾಗಿ ಯಹೂದಿಗಳು ಇತರರನ್ನು ತಮ್ಮ ಧರ್ಮ ಸ್ವೀಕರಿಸಲು ಆಮಂತ್ರಿಸುವುದಿಲ್ಲ. ಹಾಗೆಯೇ ಇತರ ಯಾವುದಾದರೂ ಧರ್ಮದವರು ಯಹೂದಿಗಳನ್ನು ತಮ್ಮ ಧರ್ಮದೆಡೆಗೆ ಆಮಂತ್ರಿಸುವುದನ್ನು ಯಹೂದಿಗಳ ಒಂದು ದೊಡ್ಡ ಪಂಗಡವು ಸಹಿಸುವುದಿಲ್ಲ. ಇಸ್ರೇಲ್‌ನಲ್ಲಿ ಯಹೂದಿ ಯುವಜನತೆಯ ನಡುವೆ ಧರ್ಮ ಪ್ರಚಾರ ಮಾಡಲು ಹೊರಟ ಕ್ರೈಸ್ತ ಸಂಸ್ಥೆಯೊಂದರ ಅನುಭವ ಇಲ್ಲಿದೆ: ಜಗತ್ತಿನೆಲ್ಲೆಡೆ ಜನರಿಗೆ ಕ್ರೈಸ್ತ ಧರ್ಮವನ್ನು ಪರಿಚಯಿಸುವುದಕ್ಕೆ ಮತ್ತು ಕ್ರೈಸ್ತ ಧರ್ಮದೆಡೆಗೆ ಜನರನ್ನು ಆಕರ್ಷಿಸುವುದಕ್ಕೆಂದೇ ಮೀಸಲಾಗಿರುವ 'ಗಾಡ್ ಟಿವಿ' ಎಂಬೊಂದು ಟಿವಿ ಜಾಲವಿದೆ. ಇಸ್ರೇಲ್‌ನ ಕಾನೂನು ಪ್ರಕಾರ ಅಲ್ಲಿ ಎಲ್ಲ ಧರ್ಮದವರಿಗೆ ಧರ್ಮಪ್ರಚಾರದ ಅಧಿಕಾರವಿದೆ. ಈ ಅಧಿಕಾರವನ್ನು ಬಳಸಿ 'ಗಾಡ್ ಟಿವಿ'ಯವರು ಇಸ್ರೇಲ್‌ನಲ್ಲಿ ತಮ್ಮ ಕಾರ್ಯಕ್ರಮಗಳ ಪ್ರಸಾರ ಆರಂಭಿಸಿದರು. ಆರಂಭದಲ್ಲಿ ಅದಕ್ಕೆ ದೊಡ್ಡ ವಿರೋಧವೇನೂ ಪ್ರಕಟವಾಗಲಿಲ್ಲ. ಆದರೆ ಕಳೆದ ವರ್ಷ ಅವರು 'ಶಲಾನು ಟಿವಿ' ಎಂಬ ಹೆಸರಲ್ಲಿ ಹದಿಹರೆಯದವರಿಗಾಗಿ ಹಿಬ್ರೂ ಭಾಷೆಯಲ್ಲಿ ಒಂದು ಹೊಸ ಚಾನೆಲ್ ಆರಂಭಿಸಿದಾಗ ಸಮಸ್ಯೆಗಳು ತಲೆದೋರತೊಡಗಿದವು. ಹಲವು ವಲಯಗಳಿಂದ ವಿರೋಧ ಆರಂಭವಾಯಿತು. 'ಗಾಡ್ ಟಿವಿ' ಯವರು ದೇಶದ ಕೇಬಲ್ ಮತ್ತು ಸ್ಯಾಟಲೈಟ್ ಪ್ರಸಾರ ಸಮಿತಿಗೆ

ದೂರು ಸಲ್ಲಿಸಿದಾಗ ನೀವು ಪ್ರಸಾರ ಮಾಡುವ ಸಂದೇಶವು ಜನರ ಮೇಲೆ ಅನುಚಿತ ರೀತಿಯಲ್ಲಿ ಪ್ರಭಾವ ಬೀರುವ ಸಾಧ್ಯತೆ ಕಂಡರೆ ನಾವು ನಿಮ್ಮ ಚಾನೆಲ್ ಅನ್ನು ಮುಚ್ಚಬೇಕಾಗುತ್ತದೆ ಎಂಬ ಉತ್ತರ ಸಿಕ್ಕಿತು. ನಾವು ಅಧಿಕೃತ ಅನುಮತಿ ಪಡೆದು ಕಾನೂನು ಪ್ರಕಾರ ಈ ಚಾನೆಲ್ ಆರಂಭಿಸಿದ್ದೇವೆ ಎಂದು ಟಿವಿಯವರು ವಾದಿಸಿದಾಗ, ಈಗ ಕಾನೂನು ಬದಲಾಗಿದೆ ಎಂದು ಅವರ ಬಾಯಿ ಮುಚ್ಚಿಸಲಾಯಿತು. ಕೊನೆಗೆ ದೇಶದ ಸಂವಹನ ಸಚಿವ ಡೇವಿಡ್ ಆಮ್ ಸಾಲೆಮ್ ಅವರ ಬಳಿಗೆ ದೂರು ಸಲ್ಲಿಸಿದಾಗ ಅವರು "ನೀವು ನಿಯಮ ಉಲ್ಲಂಘಿಸಿದ್ದು ಖಚಿತವಾದರೆ ನಿಮ್ಮ ಚಾನೆಲ್ ಅನ್ನು ಮುಚ್ಚಲೇ ಬೇಕಾಗುತ್ತದೆ" ಎಂದರು. ನೆತನ್ಯಾಹು ಸಚಿವ ಸಂಪುಟದ ಸದಸ್ಯರಾಗಿರುವ ಆಮ್ ಸಾಲೆಮ್‌ರೊಡನೆ ಮಾಧ್ಯಮದವರು ಈ ಕುರಿತು ಪ್ರಶ್ನಿಸಿದಾಗ ಅವರ ಪ್ರತಿಕ್ರಿಯೆ ಹೀಗಿತ್ತು: "ಧರ್ಮ ಪ್ರಚಾರ ಮಾಡುವ ಯಾವುದೇ ಚಾನೆಲ್ ಅನ್ನು ಯಾವುದೇ ಸನ್ನಿವೇಶದಲ್ಲಿ ಇಸ್ರೇಲ್ ನೊಳಗೆ ಕಾರ್ಯ ನಿರ್ವಹಿಸಲು ನಾವು ಅನುಮತಿಸುವಂತಿಲ್ಲ".

## ಜಾಗತಿಕ ಜನಾಭಿಪ್ರಾಯ ರೂಪಿಸಲು ಫೆಲೆಸ್ತೀನ್ ಕ್ರೈಸ್ತರ ಶ್ರಮ

2017ರಲ್ಲಿ ವರ್ಲ್ಡ್ ಕಮ್ಯುನಿಯನ್ ಆಫ್ ರಿಫಾರ್ಮ್ಡ್ ಚರ್ಚಸ್ (WCRC) ಎಂಬ ಕ್ರೈಸ್ತರ ಜಾಗತಿಕ ಸಂಘಟನೆಯು ಪ್ರಕಟಿಸಿದ ಒಂದು ಹೇಳಿಕೆಯು ಬಹಳಷ್ಟು ಚರ್ಚಿತವಾಗಿತ್ತು. ಆ ಹೇಳಿಕೆ ಹೀಗಿತ್ತು: ಇಂದು ಫೆಲೆಸ್ತೀನ್‌ನಲ್ಲಿ ಮೆರೆಯುತ್ತಿರುವ ಅನ್ಯಾಯ, ಫೆಲೆಸ್ತೀನ್ ಜನತೆಯ ನರಳಿಕೆ ಮತ್ತು ಫೆಲೆಸ್ತೀನ್ ಕ್ರೈಸ್ತರ ಆಕ್ರಂದನ – ಇವುಗಳನ್ನೆಲ್ಲಾ ನಾವು ಕಡೆಗಣಿಸಿದರೆ, ಕ್ರೈಸ್ತ ಧರ್ಮದ ವಿಶ್ವಾಸಾರ್ಹತೆಯೇ ಪ್ರಶ್ನಾರ್ಹವಾಗಿ ಬಿಟ್ಟೀತು.

2017ರಲ್ಲಿ ಫೆಲೆಸ್ತೀನ್‌ನ ಕ್ರೈಸ್ತ ಸಂಘಟನೆಗಳ ಒಕ್ಕೂಟ (CCOP)ವು ವರ್ಲ್ಡ್ ಕೌನ್ಸಿಲ್ ಆಫ್ ಚರ್ಚಸ್ (WCC)ಗೆ ಕಳಿಸಿದ ಒಂದು ತುರ್ತು ಸಂದೇಶ ಹೀಗಿತ್ತು: ''ಕ್ರೈಸ್ತರೇ, ಇಲ್ಲಿನ ಸನ್ನಿವೇಶವು ವಿಷಮ ಸ್ಥಿತಿಗಿಂತಲೂ ಕೆಟ್ಟದಾಗಿದೆ. ನಾವು ದುರಂತಮಯ ಅಳಿವಿನ ಅಂಚಿನಲ್ಲಿದ್ದೇವೆ. ಇದು ಟೊಳ್ಳು ರಾಜತಾಂತ್ರಿಕ ಚಟುವಟಿಕೆಗಳ ಸಮಯ ಖಂಡಿತ ಅಲ್ಲ''.

❖ ❖ ❖

# 9

# ಜೆರುಸಲೇಮ್‌ನ ನಿವೃತ್ತ ಆರ್ಚ್ ಬಿಷಪ್‌ರ ಮನವಿ

ಮೆಖೇಲ್ ಸಬ್ಬಾಹ್ 1987ರಿಂದ 2008ರ ತನಕ ಜೆರುಸಲೇಮ್‌ನಲ್ಲಿ ಆರ್ಚ್ ಬಿಷಪ್ ಆಗಿದ್ದವರು. ಅವರು ಮೂಲತಃ ಫೆಲೆಸ್ತೀನ್‌ನವರು. ಕಳೆದ ವರ್ಷ ಡಿಸೆಂಬರ್‌ನಲ್ಲಿ 'ಅಮೆರಿಕ ಮ್ಯಾಗಝಿನ್'ನಲ್ಲಿ ಪ್ರಕಟವಾದ ತಮ್ಮ ಒಂದು ಲೇಖನದಲ್ಲಿ ಅವರು ಹೀಗೆ ಬರೆದಿದ್ದಾರೆ: ಫೆಲೆಸ್ತೀನ್ ನೆಲದ ಮೇಲೆ ಇಸ್ರೇಲ್‌ನ ಆಕ್ರಮಣ ಈಗ 53ನೇ ವರ್ಷದಲ್ಲಿದೆ. ವಿಶೇಷವಾಗಿ ಗಾಝಾದಲ್ಲಿರುವ ಫೆಲೆಸ್ತೀನ್ ಜನತೆ ಭಾರೀ ಕಠಿಣ ಸ್ವರೂಪದ ದಿಗ್ಬಂಧನದಡಿಯಲ್ಲಿ ನರಳುತ್ತಿದ್ದಾರೆ. ಅಮೆರಿಕನ್ ಸರಕಾರವು ಪೂರ್ವ ಜೆರುಸಲೇಮ್‌ನಲ್ಲಿರುವ ಫೆಲೆಸ್ತೀನಿ ಆಸ್ಪತ್ರೆಗಳಿಗೆ ತನ್ನ ಧನಸಹಾಯವನ್ನು ನಿಲ್ಲಿಸಿದೆ.

ಜೊತೆಗೆ ಆಕ್ರಮಿತ ಪ್ರದೇಶಗಳಲ್ಲಿ ಮಾನವೀಯ ಸೇವೆಗಳಲ್ಲಿ ತೊಡಗಿದ್ದ ವಿಶ್ವಸಂಸ್ಥೆಯವರಿಗೂ ಧನಸಹಾಯ ನಿಲ್ಲಿಸಿದೆ. ಅಧ್ಯಕ್ಷ ಟ್ರಂಪ್ ಅವರ ಶಾಂತಿ ಪ್ರಸ್ತಾವವು ಇಸ್ರೇಲ್‌ನ ಆಕ್ರಮಣಕ್ಕೆ ನೀಡುವ ಮಾನ್ಯತೆಯಾಗಿದೆ. ಅವರು ಫೆಲೆಸ್ತೀನಿಗಳಿಗೆ ವಾಗ್ದಾನ ಮಾಡಿರುವ ಸಂಪನ್ನತೆಯನ್ನು ಪಡೆಯಲು ಫೆಲೆಸ್ತೀನಿಗಳು ತಮ್ಮ ಸ್ವಾತಂತ್ರ್ಯವನ್ನು ಬಿಟ್ಟುಕೊಡಬೇಕಾಗುತ್ತದೆ. ಇಸ್ರೇಲ್ ಸರಕಾರವು ಯುಎಇ ಮತ್ತು ಬಹರೈನ್ ಜೊತೆ ಒಪ್ಪಂದಗಳನ್ನು ಮಾಡುವಾಗ ತಾನು ನೀಡಿದ ವಾಗ್ದಾನಗಳನ್ನು ಮುರಿದು,

ಪಶ್ಚಿಮ ದಂಡೆಯಲ್ಲಿ ವಲಸಿಗರಿಗಾಗಿ 3,000 ಮನೆಗಳನ್ನು ಕಟ್ಟುವ ಯೋಜನೆಯನ್ನು ಘೋಷಿಸುವ ಮೂಲಕ ಫೆಲೆಸ್ತೀನ್‌ನ ನೆಲ ಮತ್ತು ಸಂಪನ್ಮೂಲಗಳನ್ನು ಆಕ್ರಮಿಸುವ ಪ್ರಕ್ರಿಯೆಯನ್ನು ಮುಂದುವರಿಸಿದೆ. ಪಶ್ಚಿಮದಲ್ಲಿ ಅನೇಕರು, ಇಲ್ಲಿ ನಡೆಯುತ್ತಿರುವುದು, ಯಹೂದಿ ಮತ್ತು ಮುಸ್ಲಿಮರ ನಡುವಣ ಧಾರ್ಮಿಕ ಸಂಘರ್ಷ ಎಂಬ ಅಪಗ್ರಹಿಕೆಗೆ ತುತ್ತಾಗಿದ್ದಾರೆ. ನಿಜವಾಗಿ ಮಾನವ ಹಕ್ಕುಗಳನ್ನು ಉಲ್ಲಂಘಿಸುವ ಮತ್ತು ಅಂತರ್‌ರಾಷ್ಟ್ರೀಯ ಕಾನೂನುಗಳಿಗೆ ವಿರುದ್ಧವಾದ, ಬಹಳ ದೀರ್ಘ ಕಾಲದ ಮಿಲಿಟರಿ ಆಡಳಿತವೇ ಇಲ್ಲಿನ ಮೂಲ ಸಮಸ್ಯೆಯಾಗಿದೆ. ಪಶ್ಚಿಮ ಯುರೋಪ್ ಮತ್ತು ಉತ್ತರ ಅಮೆರಿಕದ ಚರ್ಚುಗಳು, ತಮ್ಮನ್ನೆಲ್ಲಿ ಯಹೂದಿ ವಿರೋಧಿಗಳೆಂದು ದೂಷಿಸಲಾಗುವುದೋ ಎಂಬ ಅಂಜಿಕೆಯಿಂದ ಮೌನವಾಗಿವೆ. ಅವರಿಗೆ ನಾವು ಹೇಳುವುದಿಷ್ಟೇ: ನಮ್ಮನ್ನೆಲ್ಲ ರಕ್ಷಿಸಬೇಕಿದ್ದರೆ ಮಾತ್ರವಲ್ಲ ಸ್ವತಃ ನಿಮಗೆ ರಕ್ಷಣೆ ಬೇಕಿದ್ದರೆ, ನೀವು ಕ್ರೈಸ್ತ ಧರ್ಮದವರಂತೆ ಮಾತನಾಡಿ, ಕ್ರೈಸ್ತರಂತೆ ವರ್ತಿಸಿ, ನಿಮ್ಮ ಪವಿತ್ರ ನೆಲದಲ್ಲಿ ಏನು ನಡೆಯುತ್ತಿದೆ ಎಂಬ ಕುರಿತು ಕಾಳಜಿ ವಹಿಸಿ. ಇತರ ಕೆಲವು ಚರ್ಚ್‌ಗಳ ಪ್ರಮುಖರು, 'ಸಮತೋಲನ' ಪಾಲಿಸುವ ಹೆಸರಲ್ಲಿ ಅಪರಾಧಿಗಳನ್ನು ಮತ್ತವರ ಬಲಿಗಳನ್ನು ಒಂದೇ ಸಾಲಲ್ಲಿ ನಿಲ್ಲಿಸಿ ಬಿಡುತ್ತಾರೆ. ಅವರಿಗೆ ನಮ್ಮ ಮನವಿ ಹೀಗಿದೆ: ನಮ್ಮಿಬ್ಬರನ್ನೂ ನಾವು ಹೇಗಿದ್ದೇವೋ ಹಾಗೆಯೇ ನೋಡಿ. ಇಲ್ಲಿ ಒಬ್ಬರು ದಮನಿಸುವವರು ಇನ್ನೊಬ್ಬರು ದಮನಿತರು. ಈ ನಮ್ಮ ನೆಲದಲ್ಲಿ ಅಂದರೆ ದೇವರ ನೆಲದಲ್ಲಿ ಶಾಂತಿ ಮತ್ತು ನ್ಯಾಯವನ್ನು ಗಳಿಸಲು ನೀವು ನಮ್ಮಿಬ್ಬರಿಗೂ ನೆರವಾಗಿ.

ಜಾಗತಿಕ ಮಟ್ಟದಲ್ಲಿ ಮತ್ತು ವಿಶೇಷವಾಗಿ ಕ್ರೈಸ್ತ ಜಗತ್ತಿನಲ್ಲಿ ಫೆಲೆಸ್ತೀನ್ ಸಮಸ್ಯೆಯ ಬಗ್ಗೆ ಜಾಗೃತಿ ಬೆಳೆಸುವ ನಿಟ್ಟಿನಲ್ಲಿ 'ಕೈರೋಸ್ ಫೆಲೆಸ್ತೀನ್' ಎಂಬ ಫೆಲೆಸ್ತೀನ್ ಮೂಲದ ಕ್ರೈಸ್ತರ ಸಂಘಟನೆ ಬಹಳ ನಿರ್ಣಾಯಕ ಪಾತ್ರ ವಹಿಸಿದೆ. ಅದರ ಜಾಗತಿಕ ಶಾಖೆಯ ಹೆಸರು 'ಗ್ಲೋಬಲ್ ಕೈರೋಸ್ ಫಾರ್ ಜಸ್ಟಿಸ್'.

ಕಳೆದ ವರ್ಷ ಜುಲೈ ತಿಂಗಳಲ್ಲಿ ಈ ಸಂಘಟನೆಯು ಜಗತ್ತಿನ ಎಲ್ಲ ಕ್ರೈಸ್ತ ಸಂಘಟನೆಗಳನ್ನುದ್ದೇಶಿಸಿ ಒಂದು ಗೊತ್ತುವಳಿಯನ್ನು ಹೊರಡಿಸಿತ್ತು. 20 ದೇಶಗಳ 350 ಪ್ರಮುಖ ಸಂಘಟನೆಗಳು ಆ ಗೊತ್ತುವಳಿಯನ್ನು ಅನುಮೋದಿಸಿದ್ದವು ಮತ್ತು 12,400ಕ್ಕೂ ಹೆಚ್ಚಿನ ಪ್ರಮುಖ ವ್ಯಕ್ತಿಗಳು ಆ ಗೊತ್ತುವಳಿಗೆ ಸಹಿ ಮಾಡಿದ್ದರು. CRY FOR HOPE: A CALL TO DECISIVE ACTION ಎಂಬ ಹೆಸರಿನ ಈ ಗೊತ್ತುವಳಿಯಲ್ಲಿ ಫೆಲೆಸ್ತೀನ್‌ನಲ್ಲಿ ನಡೆಯುತ್ತಿರುವ ಮಾನವಹಕ್ಕುಗಳ ಮತ್ತು ಅಂತರ್‌ರಾಷ್ಟ್ರೀಯ ನಿಯಮಗಳ ಉಲ್ಲಂಘನೆಯನ್ನು ಮತ್ತು ಅಲ್ಲಿನ ನಾಗರಿಕರು ಅನುಭವಿಸುತ್ತಿರುವ ಬವಣೆಗಳನ್ನು ಪ್ರಸ್ತಾಪಿಸಿ

ಕೆಲವು ಮನವಿಗಳನ್ನು ಜಾಗತಿಕ ಕ್ರೈಸ್ತ ಸಂಸ್ಥೆಗಳ ಮುಂದೆ ಇಡಲಾಗಿತ್ತು. ಆ ಪೈಕಿ ಒಂದು ಮನವಿ ಹೀಗಿತ್ತು: "ಆಕ್ರಮಣ, ಸ್ವಂತ ನೆಲದಿಂದ ಪದಚ್ಯುತಿ ಮತ್ತು ಮೂಲಭೂತ ಹಕ್ಕುಗಳ ರದ್ದತಿಯ ವಿರುದ್ಧ ಪ್ರತಿರೋಧಿಸುವುದಕ್ಕೆ ಫೆಲೆಸ್ತೀನ್ ಜನತೆಗೆ ಇರುವ ಅಧಿಕಾರಕ್ಕೆ ಮನ್ನಣೆ ನೀಡಿರಿ. ಅವರ ಸೃಜನಶೀಲ ಮತ್ತು ಶಾಂತಿಯುತ ಹೋರಾಟದಲ್ಲಿ ಭಾಗಿಯಾಗಿರಿ". ಈ ಗೊತ್ತುವಳಿಗೆ ಕ್ರೈಸ್ತ ಜಗತ್ತಿನ ಹಲವು ಪ್ರಮುಖ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಘಟನೆಗಳಿಂದ ಹಾಗೂ ಅನೇಕ ಪ್ರಮುಖ ವ್ಯಕ್ತಿಗಳಿಂದ ಬಹಳ ಗುಣಾತ್ಮಕ ಪ್ರಕ್ರಿಯೆ ಪ್ರಕಟವಾಗಿತ್ತು.

**35 ಮಂದಿ ಖ್ಯಾತ ನಾಮ ಇಸ್ರೇಲಿಗಳ ಬಹಿರಂಗ ಪತ್ರ**

2018ರ ನವೆಂಬರ್‌ನಲ್ಲಿ ವಿಯೆನ್ನಾದಲ್ಲೊಂದು ಸಮ್ಮೇಳನ ನಡೆಯಿತು. ಯುರೋಪಿನಲ್ಲಿ ಸಾಕಷ್ಟು ಪೂರ್ವಾಗ್ರಹಗಳಿಗೆ ತುತ್ತಾಗಿರುವ ಯಹೂದಿ ಸಮಾಜದ ಬಗ್ಗೆ ಸದ್ಭಾವನೆ ಮೂಡಿಸುವುದು ಈ ಸಮ್ಮೇಳನದ ಉದ್ದೇಶವಾಗಿತ್ತು. ಆಸ್ಟ್ರಿಯಾದ ಚಾನ್ಸೆಲರ್ ಸೆಬಾಷ್ಟಿಯನ್ ಕುರ್ಜ್ ಸಮ್ಮೇಳನದ ಪ್ರಧಾನ ಪ್ರಾಯೋಜಕರಾಗಿದ್ದರು. ಸಮ್ಮೇಳನ ಆರಂಭವಾಗುವಷ್ಟರಲ್ಲಿ ಯುರೋಪಿನೆಲ್ಲೆಡೆ ಒಂದು ಪತ್ರವು ವ್ಯಾಪಕವಾಗಿ ಜನರ ಗಮನ ಸೆಳೆದು ಸಮ್ಮೇಳನಕ್ಕಿಂತಲೂ ಹೆಚ್ಚು ಚರ್ಚೆಯ ವಿಷಯವಾಯಿತು.

ಇಸ್ರೇಲ್ ದೇಶದ ಹಲವು ಪ್ರಶಸ್ತಿ ವಿಜೇತ ಸಾಹಿತಿಗಳು, ಕಲಾವಿದರು, ಇತಿಹಾಸ ತಜ್ಞರು, ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳ ಪ್ರೊಫೆಸರ್‌ಗಳು ಮುಂತಾದವರನ್ನು ಒಳಗೊಂಡ 35 ಮಂದಿ ಪ್ರಖ್ಯಾತ ವ್ಯಕ್ತಿಗಳು ಬರೆದ ಆ ಜಂಟಿ ಬಹಿರಂಗ ಪತ್ರದ ಕೆಲವು ಮುಖ್ಯ ಅಂಶಗಳು ಇಲ್ಲಿವೆ: "ಆಂಟಿ ಸೆಮಿಟಿಸಮ್ (Anti Semitism - ಯಹೂದಿ ದ್ವೇಷ) ವಿರುದ್ಧ ನಡೆಯುತ್ತಿರುವ ಹೋರಾಟವನ್ನು ನಾವು ಸಂಪೂರ್ಣವಾಗಿ ಅಂಗೀಕರಿಸುತ್ತೇವೆ ಮತ್ತು ಬೆಂಬಲಿಸುತ್ತೇವೆ. ಯಹೂದಿಗಳ ವಿರುದ್ಧ ಹೆಚ್ಚುತ್ತಿರುವ ದ್ವೇಷದ ಬಗ್ಗೆ ನಾವು ಚಿಂತಿತರಾಗಿದ್ದೇವೆ. ಇತಿಹಾಸದಿಂದ ನಾವು ಕಲಿತಿರುವಂತೆ, ಹೆಚ್ಚಿನ ವೇಳೆ ಅದು (ಯಹೂದಿ ದ್ವೇಷ) ಸಂಪೂರ್ಣ ಮಾನವ ಸಮಾಜವು ಎದುರಿಸಬೇಕಾಗುವ ದುರಂತದ ಮುನ್ಸೂಚನೆಯಾಗಿರುತ್ತದೆ."

ಅದೇ ವೇಳೆ, ಯುರೋಪಿಯನ್ ಒಕ್ಕೂಟವು (EU) ಮಾನವೀಯ ಹಕ್ಕುಗಳನ್ನು ಪ್ರತಿಪಾದಿಸುವ ವೇದಿಕೆಯಾಗಿರುವುದರಿಂದ ಯಹೂದಿ ದ್ವೇಷದ ವಿರುದ್ಧ ಹೋರಾಡುವಷ್ಟೇ ಗಟ್ಟಿಯಾಗಿ ಮಾನವ ಹಕ್ಕುಗಳ ಸಂರಕ್ಷಣೆಗಾಗಿ ಹೋರಾಡಬೇಕಾದುದು ಒಕ್ಕೂಟದ ಕರ್ತವ್ಯವಾಗಿದೆ. ಯಹೂದಿ ದ್ವೇಷದ

ವಿರುದ್ಧ ತಾನು ಆರಂಭಿಸಿರುವ ಹೋರಾಟವು, ಇಸ್ರೇಲ್ ಸರಕಾರವು ಅಕ್ರಮವಾಗಿ ವಶಪಡಿಸಿಕೊಂಡಿರುವ ಪ್ರದೇಶಗಳು ಮತ್ತು ಅದು ವ್ಯಾಪಕವಾಗಿ ನಡೆಸುತ್ತಿರುವ, ಫೆಲೆಸ್ತೀನ್ ನಾಗರಿಕರ ಮಾನವೀಯ ಹಕ್ಕುಗಳ ಉಲ್ಲಂಘನೆಯ ಕುರಿತಾದ ಟೀಕೆ ಮತ್ತು ವಿಮರ್ಶೆಗಳನ್ನು ಹತ್ತಿಕ್ಕಿ ಬಿಡುವ ಅಸ್ತ್ರವಾಗದಂತೆ ಒಕ್ಕೂಟವು ನೋಡಿಕೊಳ್ಳಬೇಕಾಗಿದೆ. "ಇಸ್ರೇಲ್ ಸರಕಾರದ ವಿರುದ್ಧ ವಿಮರ್ಶೆ ಮತ್ತು ಯಹೂದಿ ದ್ವೇಷ ಇವೆರಡೂ ಒಂದೇ ಎಂದು ಬಿಂಬಿಸಿದರೆ, ಆ ಮೂಲಕ ಇಸ್ರೇಲ್ ಸರಕಾರಕ್ಕೆ, ತಾನು ನಡೆಸುವ ಮಾನವ ಹಕ್ಕುಗಳ ಮತ್ತು ಅಂತರ್‌ರಾಷ್ಟ್ರೀಯ ನಿಯಮಗಳ ವ್ಯಾಪಕ ಉಲ್ಲಂಘನೆಯ ವಿರುದ್ಧ ಪ್ರಕಟವಾಗುವ ವಿಮರ್ಶೆಗಳನ್ನು ತಡೆಯುವುದಕ್ಕೆ ಒಂದು ಗುರಾಣಿಯನ್ನು ಒದಗಿಸಿದಂತಾಗುತ್ತದೆ". "20ನೇ ಶತಮಾನದ ಇತರೆಲ್ಲ ಹೊಸ ಯಹೂದಿ ಸಂಘಟನೆಗಳಂತೆ ಝಿಯೋನಿಝಮ್ ಅನ್ನು ಕೂಡಾ ಅಂದಿನ ಯಹೂದಿ ದ್ವೇಷಿಗಳಲ್ಲದ ಅನೇಕ ಯಹೂದಿಗಳು ಮತ್ತು ಯಹೂದಿಗಳಲ್ಲದ ಅನೇಕ ಜನರು ಅತ್ಯುಗ್ರವಾಗಿ ವಿರೋಧಿಸಿದ್ದರು. ಹಾಲೋಕಾಸ್ಟ್ (ಹತ್ಯಾಕಾಂಡ) ನಿಂದ ಸಂತ್ರಸ್ತರಾದ ಅನೇಕರು ಕೂಡಾ ಝಿಯೋನಿಝಮ್ ಅನ್ನು ವಿರೋಧಿಸಿದ್ದಾರೆ. ಝಿಯೋನಿಝಮ್ ವಿರುದ್ಧ ಹೋರಾಟವು ಯಹೂದಿ ದ್ವೇಷಕ್ಕೆ ಸಮಾನ ಎನ್ನುವುದು ಅಸಮರ್ಕ ಮಾತ್ರವಲ್ಲ, ಅವಿವೇಕವಾಗಿದೆ"

❖ ❖ ❖

# 10

# ಫೆಲೆಸ್ತೀನಿಗಳಿಗೆ ಏಕಪಕ್ಷೀಯ ಮಾಧ್ಯಮಗಳ ಸವಾಲು

ಪ್ರಚಾರ ತಂತ್ರಗಳ ಮತ್ತು ಪ್ರಚಾರ ಸಾಧನಗಳ ಮೇಲೆ ಹತೋಟಿ ಉಳ್ಳವರು ಎಂತೆಂತಹ ಅಸಾಧ್ಯಗಳನ್ನು ಸಾಧಿಸಬಲ್ಲರು? ಇದಕ್ಕುತ್ತರವಾಗಿ, ತಲೆಕೆಡಿಸುವ ಒಂದು ಉದಾಹರಣೆ ಇಲ್ಲಿದೆ: 2021 ಮೇ ತಿಂಗಳಲ್ಲಿ 11 ದಿನಗಳ ಯುದ್ಧವೊಂದು ನಡೆಯಿತು. ಒಂದು ಕಡೆ ಇಸ್ರೇಲ್ ಸೇನೆ ಮತ್ತು ಇನ್ನೊಂದು ಕಡೆ ಯಾವ ಸೇನೆಯೂ ಇಲ್ಲದ ಫೆಲೆಸ್ತೀನ್ ನಾಗರಿಕರ ನಡುವೆ ನಡೆದ ಈ 'ಯುದ್ಧ'ದ ನಡುವೆ ಜಗತ್ತಿಗೆ ಆಧುನಿಕ ತಂತ್ರಜ್ಞಾನದ ಒಂದು ಹೊಸ ಯುಗದ ಪರಿಚಯವಾಯಿತು. ಮಾಹಿತಿಯುಗದಲ್ಲಿನ ಮಾನವರು, ಮಾಹಿತಿ ರಂಗದಲ್ಲಿ ಎದುರಿಸುವ ಇತಿಮಿತಿಗಳನ್ನು ತಿಳಿಸುವ ಹೊಸ ಬೆಳವಣಿಗೆಯೊಂದು ಕಂಡು ಬಂತು.

ತಾಂತ್ರಿಕ ಸಾಮರ್ಥ್ಯ, ಪ್ರಚಾರ ತಂತ್ರದ ಒಂದು ಹೊಸ ಉಪಾಯ ಮತ್ತು ಮಾಹಿತಿ ಕ್ಷೇತ್ರದಲ್ಲಿ ಮೆರೆಯುತ್ತಿರುವ ಆಘಾತಕಾರಿ ಮಟ್ಟದ ಏಕಸ್ವಾಮ್ಯ ಮತ್ತು ಅಪಾಯಕಾರಿ 'ಮೀಸಲಾತಿ'ಗಳು ಇದರಿಂದ ಅನಾವರಣಗೊಂಡವು. ಆ ನಿರ್ದಿಷ್ಟ ಬೆಳವಣಿಗೆಯನ್ನು ಪ್ರಸ್ತಾಪಿಸುವ ಮುನ್ನ ಅದರ ಹಿನ್ನೆಲೆಯನ್ನೊಮ್ಮೆ ನೋಡೋಣ:

'ಯುದ್ಧ' ಆರಂಭವಾದೊಡನೆ ಇಸ್ರೇಲ್ ಸರಕಾರವು ಫೆಲೆಸ್ತೀನ್‌ನ ಭಯೋತ್ಪಾದಕರು ನಮ್ಮ ಮೇಲೆ ರಾಕೆಟ್‌ಗಳ

ಮಳೆ ಸುರಿಸುತ್ತಿದ್ದಾರೆ. ಇದರಿಂದಾಗಿ ನಮ್ಮ ದೇಶದ ಎಲ್ಲ ನಾಗರಿಕರ ಜೀವಗಳು ಅಪಾಯದಲ್ಲಿವೆ ಎಂದು ಜಗತ್ತಿನ ಮುಂದೆ ಎದೆ ಬಡಿದುಕೊಂಡು ರೋದಿಸತೊಡಗಿತು. ಹಿಂದಿನಿಂದಲೇ ಇಸ್ರೇಲ್ ಪರ ವಿಪರೀತ ವಾತ್ಸಲ್ಯದಿಂದ ನರಳುತ್ತಿದ್ದ ಮಾಧ್ಯಮಗಳು ಆ ರೋದನಕ್ಕೆ ತಮ್ಮ ಕಣ್ಣೀರನ್ನೂ ಬೆರೆಸಿ ಜಗತ್ತಿಗೆ ಉಣಬಡಿಸಿದವು. ಅದರ ಪರಿಣಾಮವಾಗಿ, ಇಸ್ರೇಲ್ ಸರಕಾರ ಮತ್ತು ಅದರ ನಾಗರಿಕರ ಪರವಾಗಿ ಜಗತ್ತಿನೆಲ್ಲೆಡೆ ಅನುಕಂಪ ಮತ್ತು ಸಹತಾಪದ ಪ್ರವಾಹವೇ ಹರಿಯಿತು. ನಮ್ಮಲ್ಲೇ, ಕೋವಿಡ್ ಸಾಂಕ್ರಾಮಿಕದಿಂದ ಸುತ್ತಮುತ್ತಲ ಜನ ಸಾಯುತ್ತಿದ್ದಾಗ ಗಾಢನಿದ್ದೆಯಲ್ಲಿದ್ದ ಕೆಲವರು ಕಣ್ಣುಜ್ಜುತ್ತಾ ಎದ್ದು ನಿಂತು ನಾವು ನಿಮ್ಮ ಜೊತೆ ನಿಂತಿದ್ದೇವೆ ಎಂದು ಇಸ್ರೇಲಿಗೆ ಸಂದೇಶ ಕಳಿಸತೊಡಗಿದರು. ಗೋಮಲ ಮತ್ತು ಗೋಮೂತ್ರವನ್ನು ವೈಭವೀಕರಿಸುವವರೆಂದು ಭಾರತೀಯರನ್ನು ಲೇವಡಿ ಮಾಡುವುದರಲ್ಲಿ ನಿರತರಾಗಿದ್ದ ಇಸ್ರೇಲಿನ ನೆಟ್ಟಿಗರು ಇವರ ನಿದ್ದೆಗಣ್ಣಿನ ಸಂದೇಶಗಳನ್ನು, ಮೂಗುಮುಚ್ಚಿ ಕೊಂಡು ಓದಿದರೂ, ಗಣನೆಗೇನೂ ತೆಗೆದುಕೊಳ್ಳಲಿಲ್ಲ ಎಂಬುದು ಬೇರೆ ವಿಚಾರ.

ಘರ್ಷಣೆಯ ಅವಧಿಯುದ್ದಕ್ಕೂ ಜಗತ್ತಿನ ಬಲಿಷ್ಠ ಪ್ರಚಾರ ಜಾಲಗಳು, ಇಸ್ರೇಲ್ ಅಂದರೆ ಮಧ್ಯ ಪ್ರಾಚ್ಯದಲ್ಲಿರುವ ಏಕಮಾತ್ರ ಪ್ರಜಾಸತ್ತಾತ್ಮಕ ದೇಶ, ಹಮಾಸ್ ಅಂದರೆ ಗಾಝಾದಲ್ಲಿ ಅವಿತಿರುವ ಭಯೋತ್ಪಾದಕರು ಮತ್ತು ಉಗ್ರವಾದಿಗಳು. ಆ ಉಗ್ರವಾದಿಗಳ ಕಡೆಯಿಂದ ಇಸ್ರೇಲ್ ನಾಗರಿಕರ ವಿರುದ್ಧ 4 ಸಾವಿರಕ್ಕೂ ಹೆಚ್ಚು ರಾಕೆಟ್‌ಗಳ ಪ್ರಯೋಗ – ಇವೇ ಮುಂತಾದ ಮಂತ್ರಗಳನ್ನು ಸಹಸ್ರನಾಮವೋ ಎಂಬಂತೆ ಕಣ್ಣು ಮುಚ್ಚಿ ಪದೇ ಪದೇ ಜಪಿಸುತ್ತಲೇ ಇದ್ದವು. ಜೊತೆ ಜೊತೆಗೇ, "ಐರನ್ ಡೋಮ್" ಎಂಬುದು ತಂತ್ರ ಜ್ಞಾನ ಲೋಕದ ಅದ್ಭುತ. ಇಸ್ರೇಲ್ ತನ್ನ ತಂತ್ರಜ್ಞಾನ ಬಲದಿಂದ ರೂಪಿಸಿಕೊಂಡಿರುವ, ಈ "ಐರನ್ ಡೋಮ್" ಮೂಲಕ ಶತ್ರುಗಳ ಎಲ್ಲ ಮಿಸೈಲ್ ಮತ್ತು ರಾಕೆಟ್‌ಗಳನ್ನು ದೂರದಿಂದಲೇ ಗುರುತಿಸಿ, ಬಾನಿನಲ್ಲೇ ಅವುಗಳನ್ನು ನಾಶ ಮಾಡಿ ಬಿಡುವ ಜಗತ್ತಿಗೆಲ್ಲಾ ಆದರ್ಶಪ್ರಾಯವಾದ ರಕ್ಷಣಾ ವ್ಯವಸ್ಥೆ ಯನ್ನು ಇಸ್ರೇಲ್ ಬೆಳೆಸಿಕೊಂಡಿದೆ." ಎಂಬ ವೈಭವೀಕರಣವೂ ಚಾಲನೆಯಲ್ಲಿತ್ತು.

ಕರೆನ್ಸಿ ನೋಟಿನೊಳಗೆ ನ್ಯಾನೋ ಚಿಪ್ ತುರುಕುವ ತಂತ್ರ ತಜ್ಞರು ನಡೆಸುವ ಮಾಧ್ಯಮಗಳು ತಮ್ಮ ಸುಳ್ಳುಗಳನ್ನು ಎಷ್ಟು ಪರಿಣಾಮಕಾರಿಯಾಗಿ ಪುನರಾವರ್ತಿಸಿದರೆಂದರೆ, ಅವರ ಓದುಗರು ಮತ್ತು ವೀಕ್ಷಕರಿಗೆಲ್ಲಾ ಈ ಸುಳ್ಳುಗಳೆಲ್ಲಾ ಕಂಠಪಾಠವಾಗಿ ಬಿಟ್ಟವು. "ಐರನ್ ಡೋಮ್" ಹಮಾಸ್‌ನ ರಾಕೆಟ್‌ಗಳ ವಿಧ್ವಂಸದಿಂದ ಇಸ್ರೇಲ್ ನಾಗರಿಕರನ್ನು ರಕ್ಷಿಸಿದ್ದು ಮಾತ್ರವಲ್ಲ, ಹಮಾಸ್‌ನವರ ತಾಂತ್ರಿಕ ಅಜ್ಞಾನದಿಂದಾಗಿ ಅವರು ಎಸೆದ ಮಿಸೈಲ್‌ಗಳು ದಿಕ್ಕು ತಪ್ಪಿ ಸ್ವತಃ

ಫೆಲೆಸ್ತೀನ್ ಜನರ ಮೇಲೆ ಬೀಳಲಿದ್ದಾಗ ಅವುಗಳನ್ನು ಕೂಡಾ ಗಾಳಿಯಲ್ಲೇ ತಡೆದು ನಿಷ್ಕ್ರಿಯಗೊಳಿಸುವ ಮೂಲಕ ಇಸ್ರೇಲ್ ತಂತ್ರಜ್ಞಾನವು ಸಾವಿರಾರು ಫೆಲೆಸ್ತೀನಿಗಳ ಜೀವವನ್ನೂ ಉಳಿಸಿತು" – ಇದು ಪ್ರಸ್ತುತ ಯುದ್ಧಕಾಲದಲ್ಲಿ ಜನರಿಗೆ ಕಂಠಪಾಠವಾದ ಹಲವು ಘೋರ ಮಿಥ್ಯಗಳ ಪೈಕಿ ಒಂದಾಗಿತ್ತು. ಆದರೆ ವಾಸ್ತವ ಏನು? ಅದನ್ನು ಜಗತ್ತಿಗೆ ತಿಳಿಸುವುದಕ್ಕೆ ಆಕ್ರಮಿತ ಪ್ರದೇಶಗಳಲ್ಲಿನ ಬಲಿಪಶುಗಳ ಬಳಿಯಾಗಲಿ ಅವರ ಬಗ್ಗೆ ಸಹಾನುಭೂತಿ ಉಳ್ಳವರ ಬಳಿಯಾಗಲಿ ಯಾವುದೇ ಉಪಾಯವಾಗಲಿ, ಉಪಕರಣವಾಗಲಿ ಸಂಪರ್ಕಜಾಲವಾಗಲಿ ಇರಲಿಲ್ಲ.

**ಭೂಮಿಯ ಚಿತ್ರದಲ್ಲಿ ಫೆಲೆಸ್ತೀನ್ ಪ್ರದೇಶವನ್ನು ಅದೃಶ್ಯಗೊಳಿಸಿದ 'ಗೂಗ್ಲ್ ಅರ್ಥ್'**

ಇಸ್ರೇಲ್ ಆಕ್ರಮಿತ ಪ್ರದೇಶಗಳಿಗೆ ಪ್ರವೇಶಿಸ ಬಯಸುವ ಮಾನವಹಕ್ಕು ಸಂಘಟನೆಗಳ, ಪರಿಹಾರ ಸಂಸ್ಥೆಗಳ ಮತ್ತು ಮಾಧ್ಯಮ ಜಾಲಗಳ ಮೇಲೆ ಮಾತ್ರವಲ್ಲ  ವ್ಯಕ್ತಿಗತ ವರದಿಗಾರರ ಮೇಲೂ ಕಟ್ಟು ನಿಟ್ಟಿನ ನಿರ್ಬಂಧಗಳಿವೆ. ಪ್ರಸ್ತುತ ಕೆಟಗರಿಗಳಿಗೆ ಸೇರಿದವರು ಯಾರಾದರೂ ಪ್ರಯಾಸ ಪಟ್ಟು ಅಲ್ಲಿಗೆ ತಲುಪಿದರೂ, ಸಾಮಾನ್ಯ ದಿನಗಳಲ್ಲೇ ಅವರು ಕಟ್ಟುನಿಟ್ಟಿನ ಬೇಹುಗಾರಿಕೆಗೆ ತುತ್ತಾಗಿರುತ್ತಾರೆ. ಅವರ ಚಲನವಲನದ ಮೇಲೆ ನಿಗಾ ಇಡಲಾಗುತ್ತದೆ. ಆಕ್ರಮಿತ ಪ್ರದೇಶಗಳ ನಾಗರಿಕರು ನಿತ್ಯ ಎದುರಿಸುವಂತಹ ಅರಕ್ಷಿತ,ಅಶುದ್ಧ ಮತ್ತು ಅನಾರೋಗ್ಯಕರ ವಾತಾವರಣದಲ್ಲಿ ಅವರು ಬದುಕಬೇಕಾಗುತ್ತದೆ. ಅವರಿಗೆ ವಿದ್ಯುತ್ ಮತ್ತು ಇಂಟರ್‌ನೆಟ್ ಸವಲತ್ತುಗಳನ್ನು ನಿರಾಕರಿಸುವ ಮೂಲಕ ಅವರ ಕಾರ್ಯಕ್ಷಮತೆಯನ್ನು ತೀವ್ರವಾಗಿ ಬಾಧಿಸಲಾಗುತ್ತದೆ.

ಇನ್ನು, ಯಾವುದೇ ಸ್ವರೂಪದ ಉದ್ವಿಗ್ನತೆ ತಲೆದೋರಿದೊಡನೆ ಅವರನ್ನೆಲ್ಲ ಗುಡಿಸಿ ಅಲ್ಲಿಂದ ಹೊರಗೆಸೆಯಲಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಸಂಪೂರ್ಣವಾಗಿ ಇಸ್ರೇಲ್ ಪಕ್ಷಪಾತಿ ಮೂಲಗಳನ್ನು ಅವಲಂಬಿಸುವುದನ್ನು ಬಿಟ್ಟರೆ, ಆಕ್ರಮಿತ ಪ್ರದೇಶಗಳ ಸ್ಥಿತಿಗತಿಗಳನ್ನು ಅರಿಯ ಬಯಸುವವರ ಬಳಿ ಬೇರಾವ ಆಯ್ಕೆ ತಾನೇ ಉಳಿದಿರುತ್ತದೆ? ಇಸ್ರೇಲ್‌ನ ಹತ್ತಾರು ಫೈಟರ್ ಜೆಟ್‌ಗಳು ಎಸೆದ ಮಾರಕ ಬಾಂಬುಗಳು ಯಾವೆಲ್ಲಾ ಸ್ಥಳಗಳ ಮೇಲೆ ಬಿದ್ದಿವೆ? ಅಲ್ಲಿ ಯಾವ ಪ್ರಮಾಣದ ವಿಧ್ವಂಸ ನಡೆದಿದೆ? ಎಷ್ಟು ಮಂದಿ ಮಕ್ಕಳು, ಮಹಿಳೆಯರು ಮತ್ತು ನಾಗರಿಕರು ಹತರಾಗಿದ್ದಾರೆ? ಇದನ್ನೆಲ್ಲಾ ತಿಳಿಯಲು ಮತ್ತು ಅಲ್ಲಿಯ ನಾಶನಷ್ಟಗಳ ಚಿತ್ರಗಳನ್ನು ಪಡೆಯಲು ಪ್ರಾಮಾಣಿಕ ಪತ್ರಕರ್ತರು ಮತ್ತು ಮಾಧ್ಯಮಗಳ ಬಳಿ ಉಳಿಯುವುದು ಎರಡೇ ದಾರಿಗಳು:

1. ಆಕ್ರಮಿತ ಪ್ರದೇಶಗಳಲ್ಲಿ ಉಳಿದಿರುವ ವರದಿಗಾರರು, ಸಾಮಾಜಿಕ ಕಾರ್ಯಕರ್ತರು ಅಥವಾ ನಿವಾಸಿಗಳು ತಮ್ಮ ಸೀಮಿತ ಸಂಪನ್ಮೂಲಗಳನ್ನು

ಬಳಸಿ ಕಳಿಸುವ ಮಾಹಿತಿ ಮತ್ತು ಚಿತ್ರಗಳನ್ನು ಅವಲಂಬಿಸಬೇಕು.

2. ವಿವಿಧ ಇಂಟರ್‌ನೆಟ್ ಜಾಲಗಳು ಉಪಗ್ರಹಗಳ ಮೂಲಕ ಪಡೆದು ಒದಗಿಸುವ, ಭೂಮಿಯ ವಿವಿಧ ಭಾಗಗಳ ಸಾಟ್‌ಲೈಟ್ ಇಮೇಜ್‌ಗಳನ್ನು ನೋಡಿ ನೆಲ ಮಟ್ಟದ ಸ್ಥಿತಿಗತಿಗಳನ್ನು ಅರಿಯಬೇಕು. ಈ ಪೈಕಿ ಮೊದಲ ಮೂಲದ ಇತಿಮಿತಿಗಳು ಮೊದಲೇ ಎಲ್ಲರಿಗೆ ತಿಳಿದಿವೆ. ಇದೀಗ, ಈವರೆಗೆ ಸ್ವತಂತ್ರ ಎಂದು ನಂಬಲಾಗಿದ್ದ ಎರಡನೆಯ ಮೂಲದ ಇತಿಮಿತಿಗಳು ಕೂಡಾ ಈ ಬಾರಿಯ 11 ದಿನಗಳ 'ಯುದ್ಧ'ದ ವೇಳೆ ಜಗತ್ತಿನ ಮುಂದೆ ಪ್ರಕಟವಾಗಿವೆ. ಮೇ 17ರಂದು ಬಿಬಿಸಿಯವರು ಈ ಕುರಿತು ಮೊದಲ ಬಾರಿಗೆ ದೊಡ್ಡ ಚರ್ಚೆಯೊಂದಕ್ಕೆ ಚಾಲನೆ ಕೊಟ್ಟರು. "ಸಾಟ್‌ಲೈಟ್ ಇಮೇಜುಗಳಿಗಾಗಿ ಇಂದು ಜಗತ್ತು ಅತ್ಯಧಿಕವಾಗಿ ಅವಲಂಬಿಸುವ ವೇದಿಕೆ ಗೂಗ್ಲ್ ಅರ್ಥ್. ಇತ್ತೀಚೆಗೆ, ಜಗತ್ತಿನಲ್ಲೇ ಅತ್ಯಧಿಕ ಜನಸಂದಣಿ ಇರುವ ಗಾಝಾದ ಚಿತ್ರಗಳು ಗೂಗ್ಲ್ ಅರ್ಥ್‌ನಲ್ಲಿ ಅಷ್ಟೊಂದು ಅಸ್ಪಷ್ಟವಾಗಿರುವುದೇಕೆ?" ಎಂದು ಬಿಬಿಸಿಯಲ್ಲಿ ಪ್ರಶ್ನಿಸಲಾಯಿತು. ಬಿಬಿಸಿಯವರ ಪ್ರಕಾರ ಸಾಟ್‌ಲೈಟ್ ಕಂಪೆನಿಗಳು ಒದಗಿಸುವ ಚಿತ್ರಗಳಲ್ಲಿ ಪ್ರಸ್ತುತ ಪ್ರದೇಶ ಬಹಳ ಸ್ಪಷ್ಟವಾಗಿ ಕಾಣುತ್ತದೆ ಮತ್ತು ಆ ಚಿತ್ರಗಳ ರೆಸೊಲ್ಯೂಶನ್ ಮಟ್ಟ ಕೂಡಾ ಬಹಳ ಉತ್ಕೃಷ್ಟವಾಗಿದೆ. ಗೂಗ್ಲ್ ಅರ್ಥ್‌ನವರು ಒದಗಿಸುವ ಮ್ಯಾಪ್‌ನಲ್ಲಿ ಭೂಮಿಯೆಲ್ಲವೂ ಅಸ್ಪಷ್ಟವಾಗಿಲ್ಲ. ಕೇವಲ ಇಸ್ರೇಲ್ ಮತ್ತು ಫೆಲೆಸ್ತೀನ್‌ನ ಭಾಗಗಳ ಸ್ಪಷ್ಟತೆಯ ಮಟ್ಟವನ್ನು ತೀವ್ರವಾಗಿ ಕಡಿತಗೊಳಿಸಲಾಗಿದೆ. ಅವರ ಚಿತ್ರಗಳ ಮಟ್ಟ ಎಷ್ಟು ಕಳಪೆಯಾಗಿದೆಯೆಂದರೆ ಅಲ್ಲಿನ ವ್ಯಕ್ತಿಗಳನ್ನು ಗುರುತಿಸುವುದಂತಿರಲಿ, ಕಾರುಗಳನ್ನು ಕಾರುಗಳೆಂದು ಗುರುತಿಸುವುದಕ್ಕೂ ಸಾಧ್ಯವಿರಲಿಲ್ಲ. ಈ ಮೂಲಕ ಗೂಗ್ಲ್‌ನವರು, ಗಾಝಾ ಮತ್ತಿತರ ಇಸ್ರೇಲ್ ಆಕ್ರಮಿತ ಪ್ರದೇಶಗಳಲ್ಲಿ ಬಾಂಬುಗಳ ಮಳೆ ಸುರಿಸಿದ ಪರಿಣಾಮವಾಗಿ ಉಂಟಾಗಿರುವ ನಾಶ ನಷ್ಟದ ದೃಶ್ಯಗಳನ್ನು ಹತ್ತಿರದಿಂದ ಕಾಣುವುದನ್ನು ಅಥವಾ ಅವುಗಳ ಫೋಟೊ ತೆಗೆಯುವುದನ್ನು ಅಸಾಧ್ಯವಾಗಿಸಿ ಬಿಟ್ಟರು. ಈ ರೀತಿ ಇಸ್ರೇಲ್ ಮತ್ತು ಫೆಲೆಸ್ತೀನ್ ನಡುವಣ ಘರ್ಷಣೆಯ ಕುರಿತು ಇಸ್ರೇಲ್ ಸರಕಾರವು ಜಗತ್ತಿನ ಮುಂದಿಟ್ಟ ಏಕಪಕ್ಷೀಯ ಚಿತ್ರಣ ಮಾತ್ರ ಜಗತ್ತಿಗೆ ಲಭ್ಯವಾಯಿತು. ಇಸ್ರೇಲ್‌ನೊಳಗೆ ಆಗಿರುವ ಹಾನಿಗಳ ಚಿತ್ರ ಮಾತ್ರ ಜಾಗತಿಕ ಮಟ್ಟದಲ್ಲಿ ಚಲಾವಣೆಗೆ ಬಂತು. ಮೇ 15ರ ತನಕ ಅಲ್ ಜಝೀರಾ ಮತ್ತು ಎಸೋಸಿಯೇಟೆಡ್ ಪ್ರೆಸ್ ಮತ್ತು ಇತರ ಅನೇಕ ವಾರ್ತಾ ಸಂಸ್ಥೆಗಳು ಗಾಝಾ ಪ್ರದೇಶದಲ್ಲಿ ಸಕ್ರಿಯವಾಗಿದ್ದುದರಿಂದ ಆ ಸಂಸ್ಥೆಗಳ ಮೂಲಕ, ಗಾಝಾದಲ್ಲಿ ಧ್ವಂಸವಾಗಿರುವ ಮನೆ, ಶಾಲೆ, ಆಸ್ಪತ್ರೆಗಳ, ಸತ್ತು ಬಿದ್ದಿರುವ ಮಾನವರ, ಅನಾಥರಾಗಿರುವ ಮುಗ್ಧ ಮಕ್ಕಳ ಮತ್ತು ನಿರಾಶ್ರಿತರಾಗಿ ಬೀದಿಗೆ ಬಿದ್ದಿರುವ ಸಹಸ್ರಾರು ಮಂದಿಯ ಮನಕಲಕುವ ಚಿತ್ರಗಳು ಜಗತ್ತಿಗೆ ದೊರೆಯುತ್ತಿದ್ದವು. ಮೇ 15ರಂದು ಇಸ್ರೇಲ್ ಯುದ್ಧ ವಿಮಾನಗಳು ಗಾಝಾದಲ್ಲಿ ಪ್ರಸ್ತುತ ಮಾಧ್ಯಮಗಳ

ಕಚೇರಿಗಳು ಮತ್ತು ಸ್ಟುಡಿಯೋಗಳಿದ್ದ ಕಟ್ಟಡ ಸಂಕೀರ್ಣದ ಮೇಲೆ ಬಾಂಬ್ ಸುರಿಸಿ ಅವುಗಳನ್ನು ನೆಲಸಮ ಮಾಡಿ ಬಿಟ್ಟವು. ಇದರೊಂದಿಗೆ, ಗಾಝಾ ಕುರಿತು ಜಗತ್ತಿಗೆ ಲಭ್ಯವಿದ್ದ ಅಧಿಕೃತ ಮಾಹಿತಿಯ ಹಲವು ದೊಡ್ಡ ಮೂಲಗಳು ನಿರ್ನಾಮವಾದವು. ಆ ಬಳಿಕ ಉಳಿದದ್ದು ಸಾಟ್‌ಲೈಟ್ ಚಿತ್ರಗಳ ದಾರಿ ಮಾತ್ರ. ಗೂಗ್ಲ್‌ನವರು ಅದನ್ನು ಕೂಡಾ ಅಸ್ಪಷ್ಟಗೊಳಿಸುವ ಮೂಲಕ ಅಲಭ್ಯಗೊಳಿಸಿಬಿಟ್ಟರು.

## ನಾಜೂಕಿನ ಆ 'ಆತ್ಮರಕ್ಷಣೆ'

ಇಸ್ರೇಲ್ ಸರಕಾರ ಹೇಳುವಂತೆ 'ಯುದ್ಧ'ದಲ್ಲಿ ಫೆಲೆಸ್ತೀನಿ ಉಗ್ರವಾದಿಗಳು ಇಸ್ರೇಲ್ ಕಡೆಗೆ 4,300 ರಾಕೆಟ್‌ಗಳನ್ನು ಎಸೆದಿದ್ದು, ಒಬ್ಬ ಯೋಧ ಮತ್ತು ಇಬ್ಬರು ಮಕ್ಕಳ ಸಹಿತ 12 ಮಂದಿ ಸತ್ತಿದ್ದಾರೆ. ಸತ್ತ ಇಬ್ಬರು ಮಕ್ಕಳಲ್ಲಿ ಒಬ್ಬ 5 ವರ್ಷದ ಹುಡುಗ, ಇನ್ನೊಬ್ಬಳು 16 ವರ್ಷದ ಹುಡುಗಿ. (ಒಂದು ಕಡೆಯ ಮಾಹಿತಿ ಎಷ್ಟೊಂದು ಕರಾರುವಾಕ್ಕಾಗಿ ಜಗತ್ತಿಗೆ ತಲುಪಿದೆ!) ಎಷ್ಟು ಬಲಿಷ್ಠವಿರಬಹುದು, ಆ ರಾಕೆಟ್‌ಗಳು! ಅತ್ತ ಇಸ್ರೇಲ್ ಪಡೆಗಳು ಕೇವಲ 'ಆತ್ಮರಕ್ಷಣೆ'ಗಾಗಿ ಫೆಲೆಸ್ತೀನ್ ಮೇಲೆ ನಡೆಸಿದ ದಾಳಿಯಲ್ಲಿ 70 ಮಕ್ಕಳು ಮತ್ತು 40 ಮಹಿಳೆಯರ ಸಹಿತ ಸುಮಾರು 250 ಮಂದಿ ಸತ್ತಿದ್ದು 1,900 ಮಂದಿ ಗಾಯಗೊಂಡಿದ್ದಾರೆ. 16,800 ಮನೆಗಳು ಧ್ವಂಸಗೊಂಡಿವೆ ಮತ್ತು 58,000 ಮಂದಿ ನಿರಾಶ್ರಿತರಾಗಿದ್ದಾರೆ. ಗಾಝಾದಲ್ಲಿ ಜಲಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಸಂಪೂರ್ಣ ನಾಶವಾಗಿದೆ. ಎಷ್ಟು ನಾಜೂಕಿನದ್ದಿರಬಹುದು ಆ 'ಆತ್ಮರಕ್ಷಣೆ'! ಇನ್ನು ಫೆಲೆಸ್ತೀನ್‌ನಲ್ಲಿ ಸತ್ತವರ ಪೈಕಿ 160 ಮಂದಿ ಹಮಾಸ್‌ನ ಶಸ್ತ್ರಸಜ್ಜಿತ ಯೋಧರೆಂದು ಇಸ್ರೇಲ್ ಹೇಳಿದ್ದು ಜಗತ್ತಿಗೆ ತಲುಪಿದೆ. ದಿಗ್ಬಂಧಿತ ಪ್ರದೇಶದಲ್ಲಿ ಸತ್ತವರ ಪೈಕಿ ಯಾರು ಎಂಥವರೆಂದು ಅಷ್ಟೊಂದು ನಿಖರವಾಗಿ ಗುರುತು ಪತ್ತೆ ಹಚ್ಚಲು ಇಸ್ರೇಲ್ ತನ್ನ ಪ್ರಚಾರ ತಂತ್ರದ ಹೊರತಾಗಿ ಬೇರಾವ ತಂತ್ರಜ್ಞಾನ ಬಳಸಿತ್ತು? ಈ ಕೆಲಸವೂ "ಐರನ್ ಡೋಮ್" ಮೂಲಕ ನಡೆದಿತ್ತೇ? ಎಂದು ಜಾಗತಿಕ ವಿದ್ಯಮಾನಗಳ ವೀಕ್ಷಕರು ಪ್ರಶ್ನಿಸುತ್ತಿದ್ದಾರೆ. ಮಾಧ್ಯಮ ಮತ್ತು ಪ್ರಚಾರ ಜಾಲಗಳ ಪಾತ್ರ ಗಂಭೀರ ಚರ್ಚೆಗೆ ಯೋಗ್ಯವೆನಿಸುವುದು ಇದೇ ಹಿನ್ನೆಲೆಯಲ್ಲಿ.

❖ ❖ ❖

# 11

# ಸತ್ಯದ ಮೇಲೆ ಕತ್ತಲೆ ಹೇರಿದ ತಂತ್ರಜ್ಞಾನ

'ಗೂಗ್ಲ್ ಮ್ಯಾಪ್' ಫೆಲೆಸ್ತೀನ್‌ನ ಅಸ್ತಿತ್ವವನ್ನೇ ಒಪ್ಪುವುದಿಲ್ಲ. ಜಗತ್ತಿನ 439 ಕೋಟಿ ಇಂಟರ್‌ನೆಟ್ ಬಳಕೆದಾರರ ಪೈಕಿ ಸುಮಾರು 400 ಕೋಟಿ ಮಂದಿ ಗೂಗ್ಲ್ ಬಳಕೆದಾರರು. ಇಷ್ಟೊಂದು ಬಲಿಷ್ಠವಾಗಿರುವ ಗೂಗ್ಲ್ ಈ ರೀತಿ ಇಸ್ರೇಲ್‌ನ ಭಟ್ಟಂಗಿಯಾಗಿ ವರ್ತಿಸುತ್ತಿರುವುದು ಇದೇ ಮೊದಲೇನಲ್ಲ. 2016ರಲ್ಲಿ, ಗೂಗ್ಲ್ ಮ್ಯಾಪ್‌ನಲ್ಲಿ ಫೆಲೆಸ್ತೀನ್‌ನ ಜಾಗವನ್ನು ಕೇವಲ ಕೆಲವು ಚುಕ್ಕಿಗಳ ಮೂಲಕ ಸೂಚಿಸಲಾಗಿದ್ದು, ಅಲ್ಲಿ ಫೆಲೆಸ್ತೀನ್ ಎಂಬ ಹೆಸರಿನ ಪ್ರಸ್ತಾಪವೇ ಇಲ್ಲ ಎಂಬುದನ್ನು ಕೆಲವರು ಗಮನಿಸಿದರು. ಈ ರೀತಿ ನಿಮ್ಮ ಮ್ಯಾಪ್‌ನಿಂದ ಫೆಲೆಸ್ತೀನ್‌ನ ಹೆಸರನ್ನು ಅಳಿಸಿ ಹಾಕಲು ಕಾರಣವೇನು? ಎಂದು ಅವರು ಗೂಗ್ಲ್ ಕಂಪೆನಿಯವರೊಡನೆ ವಿಚಾರಿಸತೊಡಗಿದರು. ಈ ರೀತಿ ವಿಚಾರಿಸುವವರ ಸಂಖ್ಯೆ ಹೆಚ್ಚಾದಾಗ ಗೂಗ್ಲ್ ಕಂಪೆನಿಯವರು ನೀಡಿದ ಉತ್ತರ ಹೀಗಿತ್ತು. "ನಾವು ಫೆಲೆಸ್ತೀನ್‌ನ ಹೆಸರನ್ನು ಅಳಿಸಿಹಾಕಿಲ್ಲ. ನಿಜವಾಗಿ ಹಿಂದೆಂದೂ ನಾವು ನಮ್ಮ ಮ್ಯಾಪ್‌ನಲ್ಲಿ ಫೆಲೆಸ್ತೀನ್‌ನ ಹೆಸರನ್ನು ಬಳಸಿದ್ದೇ ಇಲ್ಲ."

ವಿಶ್ವಸಂಸ್ಥೆಯ 193 ಸದಸ್ಯ ರಾಷ್ಟ್ರಗಳ ಪೈಕಿ ಇಸ್ರೇಲ್ ಸಹಿತ 138 ರಾಷ್ಟ್ರಗಳು ಫೆಲೆಸ್ತೀನ್‌ಗೆ ಮಾನ್ಯತೆ ನೀಡಿದ ಬಳಿಕವೂ ಗೂಗ್ಲ್ ಮಾತ್ರ ಫೆಲೆಸ್ತೀನ್‌ಗೆ ಮಾನ್ಯತೆ ನೀಡಲು ತಯಾರಿಲ್ಲ.

ಅಂದರೆ ಇಸ್ರೇಲ್ ಅನ್ನು ಮೆಚ್ಚಿಸುವ ಆವೇಶದಲ್ಲಿ ಗೂಗ್ಲ್ ಸಾಕ್ಷಾತ್ ಇಸ್ರೇಲ್‌ನ ಧೋರಣೆಯನ್ನೂ ಮೀರಿ ಒಂದು ಹೆಜ್ಜೆ ಮುಂದಕ್ಕಿಟ್ಟಿದೆ. ಗೂಗ್ಲ್‌ನ ಈ ಪಕ್ಷಪಾತಿ ಧೋರಣೆಯ ಬಗ್ಗೆ ನೆಟ್ಟಿಗರ ಒಂದು ದೊಡ್ಡ ವರ್ಗದಲ್ಲಿ ತೀವ್ರ ಆಕ್ರೋಶವಿದೆ. 2016ರಲ್ಲಿ ಪ್ರಖ್ಯಾತ change.org ಸಂಘಟನೆಯವರು "Google! Put Palestine On Your Maps!" (ಗೂಗ್ಲ್‌ನವರೇ! ಫೆಲೆಸ್ತೀನ್ ಅನ್ನು ನಿಮ್ಮ ಮ್ಯಾಪ್‌ನಲ್ಲಿ ಸೇರಿಸಿ) ಎಂದು ಆಗ್ರಹಿಸುವ ಒಂದು ಅಭಿಯಾನವನ್ನು ಆರಂಭಿಸಿದಾಗ 22 ಲಕ್ಷಕ್ಕೂ ಹೆಚ್ಚಿನ ಜನ ಈ ಅಭಿಯಾನದ ಪರ ಸಹಿ ಮಾಡಿ ಇದಕ್ಕೆ ತಮ್ಮ ಬೆಂಬಲವನ್ನು ಸೂಚಿಸಿದ್ದರು.

**ಫೇಸ್‌ಬುಕ್, ಟ್ವಿಟರ್(ಎಕ್ಸ್) ಮತ್ತು ಇನ್‌ಸ್ಟಾಗ್ರಾಮ್‌ಗಳ ಪ್ರಶ್ನಾರ್ಹ ಸೆನ್ಸರ್ ನೀತಿ**

ಇಸ್ರೇಲ್‌ನ ಆಕ್ರಮಿತ ಪ್ರದೇಶಗಳ ಸಂತ್ರಸ್ತ ನಾಗರಿಕರ ವಿವಿಧ ಹಕ್ಕುಗಳಿಗಾಗಿ ಇಸ್ರೇಲ್‌ನ ಒಳಗೂ ಹೊರಗೂ ಹೋರಾಡುತ್ತಿರುವ ವಿವಿಧ ಸಂಸ್ಥೆಗಳು ಗೂಗ್ಲ್ ಮಾತ್ರವಲ್ಲದೆ ಫೇಸ್‌ಬುಕ್, ಟ್ವಿಟರ್ ಮತ್ತು ಇನ್‌ಸ್ಟಾಗ್ರಾಮ್ ನಂತಹ ಸಾಮಾಜಿಕ ಜಾಲ ತಾಣಗಳ ಪಕ್ಷಪಾತಿ ಸೆನ್ಸರ್ ನೀತಿಯನ್ನು ಬಹುಕಾಲದಿಂದ ಖಂಡಿಸುತ್ತಾ ಬಂದಿವೆ. ಇತ್ತೀಚೆಗೆ ಈ ಆನ್‌ಲೈನ್ ವೇದಿಕೆಗಳ ಪಕ್ಷಪಾತ ನೀತಿ ಹೆಚ್ಚುತ್ತಾ ಹೋದಂತೆ, ವಿರೋಧವೂ ಹೆಚ್ಚು ತೀವ್ರವಾಗುತ್ತಿದೆ. ಪ್ರಸ್ತುತ ವೇದಿಕೆಗಳು ತಮ್ಮ ಗ್ರಾಹಕರ ಕಡೆಯಿಂದ ದೂರು ಅಥವಾ ಬೇಡಿಕೆಗಳು ಬರುವುದಕ್ಕೆ ಕಾಯದೆ, ಸ್ವಪ್ರೇರಣೆಯಿಂದ ತಮ್ಮ ತಂತ್ರಜ್ಞಾನವನ್ನು ಬಳಸಿ ಇಸ್ರೇಲ್‌ಗೆ ಪ್ರತಿಕೂಲವಾದ ಹಾಗೂ ಫೆಲೆಸ್ತೀನ್ ಜನತೆಯ ಆಕ್ರಂದನವನ್ನು ಜಗತ್ತಿಗೆ ತಲುಪಿಸಿ ಅವರ ಪರವಾಗಿ ಜಾಗತಿಕ ಜನಾಭಿಪ್ರಾಯ ರೂಪಿಸಬಹುದಾದ ವರದಿ, ಸಂದರ್ಶನ, ಲೇಖನ, ಚಿತ್ರ ಇತ್ಯಾದಿಗಳನ್ನು ಗುರುತಿಸಿ ಅವುಗಳನ್ನು ಕಿತ್ತು ಹಾಕುವ ಕಾರ್ಯಾಚರಣೆಯಲ್ಲಿ ತೊಡಗಿವೆ. ಇದೇ ವೇಳೆ, ಇಸ್ರೇಲ್ ಪರ ಗುಂಪುಗಳು, ತಮ್ಮ ಬೃಹತ್ ಟ್ರೋಲ್ ಪಡೆಗಳ ಮೂಲಕ, ಇಸ್ರೇಲ್‌ಗೆ ಅಪಥ್ಯವಾದ ಪೋಸ್ಟ್‌ಗಳನ್ನು ಮತ್ತು ಅವುಗಳ ಹಿಂದಿರುವ ವ್ಯಕ್ತಿಗಳನ್ನು ಗುರುತಿಸಿ ದೊಡ್ಡ ಸಂಖ್ಯೆಯಲ್ಲಿ ಅವರ ವಿರುದ್ಧ 'ರಿಪೋರ್ಟ್' ಮಾಡಿಸುವ ಸಂಘಟಿತ ಅಭಿಯಾನವನ್ನು ನಡೆಸುತ್ತಿವೆ. ಮೊದಲೇ ಫೆಲೆಸ್ತೀನಿಗಳ ಕೈಯಲ್ಲಿ ಜಾಗತಿಕ ಮಟ್ಟದ ಯಾವುದೇ ಬಲಿಷ್ಠ ಮಾಧ್ಯಮ ಇಲ್ಲ. ಸಾಲದ್ದಕ್ಕೆ ಪಕ್ಷಪಾತಿ ಮಾಧ್ಯಮಗಳು ಅವರನ್ನು ಸಂಪೂರ್ಣ ವಿಕೃತ ರೂಪದಲ್ಲಿ ಚಿತ್ರಿಸುವ ವ್ಯಾಪಕ ಅಭಿಯಾನಗಳನ್ನು ನಡೆಸುತ್ತಿವೆ. ಇದೀಗ ಸಾಮಾಜಿಕ ಮಾಧ್ಯಮಗಳು ಕೂಡಾ ತಮ್ಮ ಪಾಲಿಗೆ ಬಾಗಿಲು ಮುಚ್ಚುತ್ತಿರುವುದನ್ನು ಕಂಡು ಅವರು ಮತ್ತಷ್ಟು ನಿರಾಶರಾಗುತ್ತಿದ್ದಾರೆ.

## ಮಾಧ್ಯಮ ಸಂಕೀರ್ಣಕ್ಕೆ ಪ್ರಜಾಸತ್ತಾತ್ಮಕ ಬಾಂಬ್

ಮಧ್ಯ ಪ್ರಾಚ್ಯದ 'ಏಕಮಾತ್ರ ಪ್ರಜಾಸತ್ತಾತ್ಮಕ ಸರಕಾರ' ಎಂದು ವೈಭವೀಕರಿಸಲಾಗುವ ಇಸ್ರೇಲ್ ಸರಕಾರವು ಮಾಧ್ಯಮಗಳ ಬಗ್ಗೆ ತನಗಿರುವ ಅಪಾರ ಪ್ರೀತ್ಯಾದರಗಳನ್ನು ಈ ಬಾರಿ ಮೇ 15ರಂದು ಮತ್ತೆ ಪ್ರದರ್ಶಿಸಿತು. ಗಾಝಾದಲ್ಲಿ ಎಸೋಸಿಯೇಟೆಡ್ ಪ್ರೆಸ್, ಅಲ್ ಜಝೀರಾ ಮುಂತಾದ ಹಲವು ಖ್ಯಾತ ಅಂತರ್‌ರಾಷ್ಟ್ರೀಯ ಸುದ್ದಿ ಸಂಸ್ಥೆಗಳ ಕಚೇರಿಗಳಿದ್ದ ಕಟ್ಟಡದ ಮೇಲೆ ಭೀಕರ ಬಾಂಬ್ ದಾಳಿ ನಡೆಸಿದ ಇಸ್ರೇಲಿ ವಾಯು ಪಡೆ, ಆ ಕಟ್ಟಡವನ್ನು ಸಂಪೂರ್ಣ ಧ್ವಂಸಗೊಳಿಸಿ ಧೂಳಾಗಿ ಪರಿವರ್ತಿಸಿತು. ಇದು ಒಂದು ಯುದ್ಧದ ಮಧ್ಯೆ ಆಕಸ್ಮಿಕವಾಗಿ ಸಂಭವಿಸಿದ ದುರಂತವಾಗಿರಲಿಲ್ಲ. ಮುಂದಿನ ಒಂದು ಗಂಟೆಯ ಅವಧಿಯಲ್ಲಿ ನಿಮ್ಮ ಕಟ್ಟಡವನ್ನು ಗುರಿ ಮಾಡಿ ಬಾಂಬ್ ದಾಳಿ ನಡೆಸಲಾಗುವುದು ಎಂದು ಮುನ್ನೆಚ್ಚರಿಕೆ ನೀಡಿ, ಒಂದು ಗಂಟೆಯ ಬಳಿಕ ಈ ದಾಳಿ ನಡೆಸಲಾಗಿತ್ತು. 'ಅಲ್ ಜಲಾ ಟವರ್' ಎಂಬ 11 ಅಂತಸ್ತುಗಳ ಈ ಬೃಹತ್ ಕಟ್ಟಡದಲ್ಲಿ 20ಕ್ಕಿಂತಲೂ ಹೆಚ್ಚಿನ ಮಾಧ್ಯಮ ಸಂಸ್ಥೆಗಳ ಕಚೇರಿಗಳು ಮಾತ್ರವಲ್ಲದೆ ಅವುಗಳಲ್ಲಿ ಕೆಲಸ ಮಾಡುವವರ ಕುಟುಂಬಗಳು ವಾಸವಿದ್ದ 60 ನಿವಾಸಗಳೂ ಇದ್ದವು. ಎಸೋಸಿಯೇಟೆಡ್ ಪ್ರೆಸ್‌ನ ಅಮೆರಿಕನ್ ಸಿಬ್ಬಂದಿ ಅಲ್ಲಿ ಇಲ್ಲದೆ ಇದ್ದಿದ್ದರೆ ಖಂಡಿತವಾಗಿಯೂ ಪ್ರಸ್ತುತ ಒಂದು ಗಂಟೆಯ ಮುನ್ನೆಚ್ಚರಿಕೆ ಸಿಗುವ ಸಾಧ್ಯತೆಯೂ ಇರಲಿಲ್ಲ. ಅಮೆರಿಕ ಸರಕಾರ ತನ್ನ ಒಬ್ಬ ಪ್ರಜೆಯ ಜೀವವು ಏಶ್ಯ ಅಥವಾ ಆಫ್ರಿಕಾದ ಸಾವಿರಾರು ಜೀವಗಳಿಗಿಂತ ಅಮೂಲ್ಯ ಎಂದು ಪರಿಗಣಿಸುವುದರಿಂದ, ಇಸ್ರೇಲ್ ಸರಕಾರವು ತನ್ನ ತಲೆಯ ಮೇಲೆ ಅಮೆರಿಕನ್ ಪ್ರಜೆಗಳ ಹತ್ಯೆಯ ಪಾಪಭಾರ ಬೇಡವೆಂದು ಆ ರೀತಿ ಮುನ್ನೆಚ್ಚರಿಕೆ ನೀಡಿರಬೇಕು.

ಇನ್ನು ಇದು, ಇಸ್ರೇಲ್ ಸರಕಾರವು ಮಾಧ್ಯಮ ಕಚೇರಿಗಳನ್ನೇ ಗುರಿಯಿಟ್ಟು ನಡೆಸಿದ ಮೊದಲ ದಾಳಿಯೂ ಆಗಿರಲಿಲ್ಲ. ಮಾಧ್ಯಮದವರನ್ನೇ ಗುರಿಯಾಗಿಸಿ ಬಾಂಬ್ ದಾಳಿ ನಡೆಸುವ ಒಂದು ದೀರ್ಘ ಇತಿಹಾಸವೇ ಇಸ್ರೇಲ್‌ನ ಹಿಂದಿದೆ. ಈ ಬಾರಿ ಮೇ 11 ಮತ್ತು 12ರಂದು ಇಸ್ರೇಲ್ ಯುದ್ಧ ವಿಮಾನಗಳು ಗಾಝಾದಲ್ಲಿ ಹತ್ತಾರು ಮಾಧ್ಯಮ ಕಚೇರಿಗಳಿರುವ ಅಲ್

ಜೊಹರ ಮತ್ತು ಅಲ್ ಶುರೂಕ್ ಕಟ್ಟಡಗಳ ಮೇಲೆ ಬಾಂಬ್ ದಾಳಿ ನಡೆಸಿದ್ದವು. 2012 ನವೆಂಬರ್ ತಿಂಗಳಲ್ಲಿ ಇದೇ ಇಸ್ರೇಲ್ ಸರಕಾರವು, ವಿವಿಧ ಮಾಧ್ಯಮ ಸಂಸ್ಥೆಗಳ ಕಚೇರಿಗಳಿದ್ದ ಗಾಝಾದ ಎರಡು ಕಟ್ಟಡಗಳ ಮೇಲೆ ಬಾಂಬ್ ಸುರಿದು ಅವುಗಳನ್ನು ನಾಶ ಮಾಡಿತ್ತು.

❖ ❖ ❖

## 12

# ಫೆಲೆಸ್ತೀನ್: ಮಿತ್ರರಿಂದಲೇ ಪದೇ ಪದೇ ಬೆನ್ನಿಗೆ ಇರಿಸಿಕೊಂಡ ಅನುಭವ

### ಇಸ್ರೇಲ್‌ನ ಜೈಲುಗಳಲ್ಲಿರುವ ಫೆಲೆಸ್ತೀನ್ ಕೈದಿಗಳು

ಇಸ್ರೇಲ್ ಸರಕಾರವು ಬಂಧಿಸಿಟ್ಟಿರುವ ಫೆಲೆಸ್ತೀನ್ ಮೂಲದ ಬಂದಿಗಳ ಸಮಸ್ಯೆ ಮಾನವ ಹಕ್ಕು ಹೋರಾಟಗಾರ ವಲಯಗಳಲ್ಲಿ ಬಹುಕಾಲದಿಂದ ಚರ್ಚೆಯಲ್ಲಿದೆ. ಇಸ್ರೇಲ್ ಸರಕಾರವು ತನ್ನ ಬಂಧನದಲ್ಲಿರುವ ಫೆಲೆಸ್ತೀನ್ ಕೈದಿಗಳ ಸ್ಥಿತಿಗತಿಗಳ ಕುರಿತು ಅಂತರ್‌ರಾಷ್ಟ್ರೀಯ ಮಾನವ ಹಕ್ಕು ಸಂಸ್ಥೆಗಳ ಮನವಿಗಳನ್ನು ಕಡೆಗಣಿಸುತ್ತಾ ಬಂದಿರುವುದು ಮಾತ್ರವಲ್ಲ, ಇತ್ತೀಚೆಗೆ ಅವರ ಕುರಿತು ಮಾಹಿತಿ ನೀಡುವುದನ್ನೂ ನಿಲ್ಲಿಸಿ ಬಿಟ್ಟಿದೆ. ಲಭ್ಯ ಮಾಹಿತಿಗಳ ಪ್ರಕಾರ ಸದ್ಯ ಸುಮಾರು 4,500 ಮಂದಿ ಫೆಲೆಸ್ತೀನಿಗಳು ಇಸ್ರೇಲ್‌ನ ಜೈಲುಗಳಲ್ಲಿದ್ದಾರೆ. ಇವರಲ್ಲಿ ಒಂದು ದೊಡ್ಡ ಸಂಖ್ಯೆ ರಾಜಕೀಯ ಪ್ರತಿಭಟನೆಗಳ ವೇಳೆ ಬಂಧಿಸಲ್ಪಟ್ಟವರದ್ದು. ಆದರೆ ಸರಕಾರ ಅವರನ್ನು ರಾಜಕೀಯ ಕೈದಿಗಳೆಂದು ಪರಿಗಣಿಸುವ ಬದಲು ಅವರ ಮೇಲೆ ಗಂಭೀರ ಕ್ರಿಮಿನಲ್ ಆರೋಪಗಳನ್ನು ಹೊರಿಸಿದೆ. ಇಸ್ರೇಲ್‌ನಲ್ಲಿ ಕೇವಲ ಈ ವರ್ಷವೇ ಏಪ್ರಿಲ್ ತನಕ 1,400 ಮಂದಿಯನ್ನು ಜೈಲಿಗೆ ತಳ್ಳಲಾಗಿದೆ. ಅವರಲ್ಲಿ 41 ಮಹಿಳೆಯರು ಮತ್ತು 18 ವರ್ಷಕ್ಕಿಂತ ಕೆಳಗಿನ 140 ಮಕ್ಕಳೂ ಸೇರಿದ್ದಾರೆ. 543 ಮಂದಿಗೆ ಕಠಿಣ ಜೀವಾವಧಿ ಕಾರಾವಾಸವನ್ನು ವಿಧಿಸಲಾಗಿದೆ. ಆ ಪೈಕಿ ಕೆಲವರು

40ಕ್ಕೂ ಹೆಚ್ಚು ವರ್ಷಗಳಿಂದ ಜೈಲುಗಳಲ್ಲಿದ್ದಾರೆ. ಜೈಲುಗಳಲ್ಲಿ ಫೆಲೆಸ್ತೀನಿ ಕೈದಿಗಳನ್ನು ವಿವಿಧ ತರದಲ್ಲಿ ಹಿಂಸಿಸಲಾಗುತ್ತದೆ. 550 ಕೈದಿಗಳು ಯಾವುದಾದರೂ ಬಗೆಯ ಗಂಭೀರ ರೋಗಗಳಿಂದ ಬಳಲುತ್ತಿದ್ದಾರೆ. ಕನಿಷ್ಠ 10 ಮಂದಿ ವಿವಿಧ ಮಟ್ಟದ ಕಾನ್ಸರ್ ರೋಗದಿಂದ ಬಾಧಿತರಾಗಿದ್ದಾರೆ. ದೀರ್ಘ ಕಾಲ ಕತ್ತಲಕೋಣೆಯಲ್ಲಿ ಒಂಟಿಯಾಗಿದ್ದ ಕಾರಣ ಎಷ್ಟೋ ಮಂದಿ ಜೈಲಿನಿಂದ ಬಿಡುಗಡೆಯಾಗುವಾಗ ತಮ್ಮ ನೆನಪಿನ ಶಕ್ತಿಯನ್ನು ಸಂಪೂರ್ಣವಾಗಿ ಕಳೆದುಕೊಂಡಿರುತ್ತಾರೆ ಅಥವಾ ತೀವ್ರ ಸ್ವರೂಪದ ಇತರ ಮಾನಸಿಕ ವ್ಯಾಧಿಗಳಿಗೆ ತುತ್ತಾಗಿರುತ್ತಾರೆ.

### ಜನರಿಲ್ಲದ ಭೂಮಿ ಮತ್ತು ಭೂಮಿಯಿಲ್ಲದ ಜನ ಎಂಬ ಐತಿಹಾಸಿಕ ಸುಳ್ಳು

ಇಸ್ರೇಲ್ ಸ್ಥಾಪನೆಗೆ ಮುನ್ನ ಯುರೋಪ್ ಮತ್ತು ಅಮೆರಿಕದಲ್ಲಿ ಝಿಯೋನಿಸ್ಟರು, ಫೆಲೆಸ್ತೀನ್‌ನಲ್ಲಿ ಯಹೂದಿ ರಾಷ್ಟ್ರ ಸ್ಥಾಪನೆಯ ಪರವಾಗಿ ಜನಾಭಿಪ್ರಾಯ ರೂಪಿಸಲು ಭಾರೀ ಪ್ರಚಾರ ಅಭಿಯಾನ ನಡೆಸಿದ್ದರು. ಈ ಅವಧಿಯಲ್ಲಿ ಅವರು ಪದೇ ಪದೇ ಬಳಸಿದ ಒಂದು ತಂತ್ರ ಈ ಹೇಳಿಕೆಯ ರೂಪದಲ್ಲಿತ್ತು : ಫೆಲೆಸ್ತೀನ್‌ನಲ್ಲಿ ಜನರೇ ಇಲ್ಲದ ಒಂದು ದೊಡ್ಡ ಭೂಭಾಗ ಇದೆ ಮತ್ತು ಇಲ್ಲಿ (ಪಶ್ಚಿಮ ದೇಶಗಳಲ್ಲಿ) ಭೂಮಿಯೇ ಇಲ್ಲದ ಒಂದು ಜನವಿಭಾಗವಿದೆ. ಭೂಮಿ ಇಲ್ಲದ ಜನರನ್ನು ಜನರಿಲ್ಲದ ಭೂಮಿಯಲ್ಲಿ ನೆಲೆಸಿದರೆ ಹೇಗೆ?

ನಿಜವಾಗಿ, ಬಾಲ್ ಫೋರ್ ಪ್ರಕಟನೆಗೆ ಮುನ್ನ ಅಂದರೆ 1914ರಲ್ಲಿ ಫೆಲೆಸ್ತೀನ್‌ನಲ್ಲಿ 94 ಸಾವಿರ ಯಹೂದಿಗಳು, 70 ಸಾವಿರ ಕ್ರೈಸ್ತರು ಮತ್ತು 5.25 ಲಕ್ಷ ಮುಸ್ಲಿಮರು ಸೇರಿದಂತೆ ಒಟ್ಟು ಸುಮಾರು 7 ಲಕ್ಷ ಜನ ವಾಸವಾಗಿದ್ದರು. ಆದರೆ ಪ್ರಚಾರಕ್ಕಿರುವ ಶಕ್ತಿ ಸತ್ಯಕ್ಕೆಲ್ಲಿದೆ? ಕೊನೆಗೂ ಪಶ್ಚಿಮದ ಜನರು ಪ್ರಚಾರವನ್ನೇ ನಂಬಿ ಬಿಟ್ಟರು.

### ಹಾಶಿಮೀ ದೊರೆಗಳ ಮೊದಲ ಮಹಾದ್ರೋಹ

ಫೆಲೆಸ್ತೀನ್ ಜನತೆಯ ಇತಿಹಾಸ ನೋಡಿದರೆ, ಅವರು ಝಿಯೋನಿಸ್ಟ್ ಕೂಟ, ಇಸ್ರೇಲ್ ಸರಕಾರ, ಅಮೆರಿಕ, ಬ್ರಿಟನ್ ಮತ್ತು ಫ್ರಾನ್ಸ್‌ಗಳಂತಹ ದೇಶಗಳ ಕೈಯಲ್ಲಿ ಅನುಭವಿಸಿದ ಮೋಸ, ದ್ರೋಹ, ಹಿಂಸೆ ಮತ್ತು ಕ್ರೌರ್ಯಗಳಿಗೆ ಇತಿಮಿತಿ ಇಲ್ಲ. ಅದೇ ವೇಳೆ ಸ್ವತಃ ತಮ್ಮದೇ ಅರಬ್ ಬಂಧುಗಳಿಂದ ಬೆನ್ನಿಗೆ ಇರಿಸಿಕೊಂಡ ಅನುಭವವೂ ಫೆಲೆಸ್ತೀನಿಗಳಿಗೆ ಸಾಕಷ್ಟಿದೆ.

ಬಾಲ್ ಫೋರ್ ಪ್ರಕಟನೆಯ ಬಳಿಕ 1919ರಲ್ಲಿ, ಆಗ ಎಮಿರೇಟ್ ಆಫ್ ನಜ್ದ್ ಎಂದು ಗುರಿತಿಸಲಾಗುತ್ತಿದ್ದ ರಿಯಾದ್ ಕೇಂದ್ರಿತ ಸರಕಾರವು (ಇಂದಿನ



ಹುಸೈನ್ ಬಿನ್ ಅಲಿ

ಸೌದಿ ಅರೇಬಿಯಾ) ಇಂಗ್ಲೆಂಡ್ ಸರಕಾರದ ಜೊತೆ ಒಂದು ಗುಪ್ತ ಒಪ್ಪಂದ ಮಾಡಿಕೊಂಡು ಬಾಲ್ ಫೋರ್ ಪ್ರಕಟನೆಗೆ ತನ್ನ ಅಧಿಕೃತ ಮನ್ನಣೆ ನೀಡಿತು ಎಂಬೊಂದು ಆರೋಪ ಈಗಲೂ ಹಲವೆಡೆ ಚಲಾವಣೆಯಲ್ಲಿದೆ. ನಿಜವಾಗಿ, ಅಂತಹ ಅಕ್ರಮ ಒಪ್ಪಂದವೊಂದು ಆ ವರ್ಷ ನಡೆದಿತ್ತು ಮತ್ತು ಅದು ಅರಬ್ ಸರಕಾರವೊಂದು ಫೆಲೆಸ್ತೀನ್‌ಗೆ ಮಾಡಿದ ಮೊದಲ ದೊಡ್ಡ ದ್ರೋಹವಾಗಿತ್ತು ಎಂಬುದು ನಿಜ. ಆದರೆ ಸೌದಿ ರಾಜಮನೆತನಕ್ಕೆ ಅಥವಾ ಇಂದಿನ ಸೌದಿ ದೊರೆಗಳ ಪೂರ್ವಜರಿಗೆ ಅದರಲ್ಲಿ ಯಾವುದೇ ಪಾತ್ರವಿರಲಿಲ್ಲ. ಯಾಕೆಂದರೆ, ಆ ಹಂತದಲ್ಲಿ ಮಕ್ಕಾ ಪಟ್ಟಣವನ್ನೊಳಗೊಂಡ ಹಿಜಾಝ್ ಪ್ರಾಂತವು ಸೌದಿ ರಾಜಮನೆತನದ ವಶದಲ್ಲಿರಲಿಲ್ಲ. ಉಸ್ಮಾನಿಯಾ ಸಾಮ್ರಾಟರು 1908ರಲ್ಲಿ ಹಾಶಿಮೀ ವಂಶಸ್ಥ ಹುಸೈನ್ ಬಿನ್ ಅಲಿ ಅವರನ್ನು ಮಕ್ಕಾದ 'ಗ್ರಾಂಡ್ ಶರೀಫ್' (ಮುಖ್ಯ ಅಧಿಕಾರಿ) ಆಗಿ ನೇಮಕ ಮಾಡಿದ್ದರು. 1916ರ ಅಸ್ಥಿರ ಸನ್ನಿವೇಶದಲ್ಲಿ ಅವರು ಬ್ರಿಟಿಷರ ಆಶೀರ್ವಾದದೊಂದಿಗೆ ಉಸ್ಮಾನಿಯಾ ಸಾಮ್ರಾಜ್ಯದ ವಿರುದ್ಧ ಬಂಡಾಯವೆದ್ದು, ಮಕ್ಕಾದ ಸುತ್ತ ಮುತ್ತಲಿನ ಪ್ರದೇಶಗಳ ಸ್ಥಳೀಯ ಅಧಿಕಾರಿಗಳನ್ನು ಮತ್ತು ಬುಡಕಟ್ಟು ನಾಯಕರನ್ನು ಸೇರಿಸಿ ಒಂದು ಸಂಯುಕ್ತ ಅರಬ್ ಒಕ್ಕೂಟವನ್ನು ರಚಿಸಿದರು. ಆ ಬಳಿಕ ತನ್ನನ್ನು ಮಕ್ಕಾ ಸಹಿತ ಹಿಜಾಝ್ ಪ್ರದೇಶದ ದೊರೆ ಎಂದು ಘೋಷಿಸಿಕೊಂಡರು. 1924 ರ ತನಕವೂ ಅವರು ಅದೇ ಸ್ಥಾನದಲ್ಲಿದ್ದರು. 1918ರಲ್ಲಿ ಪ್ರಥಮ ಜಾಗತಿಕ ಯುದ್ಧ ಮುಗಿದಿತ್ತಾದರೂ ಅದರ ಕಾವು ಇನ್ನೂ ಆರಿರಲಿಲ್ಲ. ಯುದ್ಧದಲ್ಲಿ ಸೋಲುಂಡ ಉಸ್ಮಾನಿಯಾ ಸಾಮ್ರಾಜ್ಯದ ಅಧೀನವಿದ್ದ ಎಲ್ಲ ಪ್ರದೇಶಗಳಲ್ಲಿ ಗೊಂದಲ, ಅರಾಜಕತೆ ಮತ್ತು ಅಧಿಕಾರಕ್ಕಾಗಿ ಕಿತ್ತಾಟಗಳು ನಡೆಯುತ್ತಿದ್ದವು. ಹಿಜಾಝ್‌ನ ದೊರೆಗೆ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಬೇಕಿತ್ತು. ಅದಕ್ಕೆ ಬ್ರಿಟಿಷ್ ಸಾಮ್ರಾಜ್ಯದ ಬೆಂಬಲ ಬೇಕಿತ್ತು. 1919ರ ಜನವರಿಯಲ್ಲಿ ಅವರ ಪುತ್ರ ಅಮೀರ್ ಫೈಸಲ್ ಬಿನ್ ಹುಸೈನ್ ಲಂಡನ್‌ಗೆ ಹೋಗಿ ಅಲ್ಲಿನ ಝಿಯೋನಿಸ್ಟ್ ನಾಯಕ ಶಯೀಮ್ ವೀಝ್ ಮನ್ನ್ (Chaim Weizmann) ಮತ್ತು ಬ್ರಿಟಿಷ್ ಸರಕಾರದ ಪ್ರತಿನಿಧಿ ಕರ್ನಲ್ ಟಿ.ಇ.ಲಾರೆನ್ಸ್ ಜೊತೆ ಗುಪ್ತ ಸಭೆಯೊಂದನ್ನು ನಡೆಸಿದ್ದರು. ಆ ವೇಳೆ ಅವರು ಬಾಲ್ ಫೋರ್ ಪ್ರಕಟನೆಗೆ ಹಿಜಾಝ್ ಸರಕಾರದ

ಬೆಂಬಲವನ್ನು ಘೋಷಿಸುವ ಒಪ್ಪಂದವೊಂದಕ್ಕೆ ಸಹಿ ಮಾಡಿದ್ದರು. ಮಕ್ಕಾದ ಆಡಳಿತಗಾರರೆಂಬ ನೆಲೆಯಲ್ಲಿ ಹಿಜಾಝ್‌ನ ದೊರೆಗಳ ನಿರ್ಧಾರಕ್ಕೆ ಎಲ್ಲೆಡೆ ಗೌರವವಿತ್ತು. ಆದ್ದರಿಂದ ಇದು, ಫೆಲೆಸ್ತೀನ್‌ನಲ್ಲಿ ಯಹೂದಿ ರಾಷ್ಟ್ರವೊಂದನ್ನು ಕಟ್ಟಲು ಹೊರಟಿದ್ದ ಝಿಯೋನಿಸ್ಟರ ಪಾಲಿಗೆ ಒಂದು ಐತಿಹಾಸಿಕ ಮುನ್ನಡೆಯಾಗಿತ್ತು. ಇದಕ್ಕೆ ಪ್ರತಿಯಾಗಿ, ಫೆಲೆಸ್ತೀನ್ ಹೊರತು, ಉಸ್ಮಾನಿಯಾ ಸಾಮ್ರಾಜ್ಯದ ಅಧೀನವಿದ್ದ ಉಳಿದೆಲ್ಲ ಅರಬ್ ಪ್ರದೇಶಗಳನ್ನು ಸೇರಿಸಿ ಒಂದು ಅರಬ್ ರಾಷ್ಟ್ರವನ್ನು ಕಟ್ಟುವುದಕ್ಕೆ ಬ್ರಿಟನ್ ಮತ್ತು ಝಿಯೋನಿಸ್ಟ್ ಸಂಘಟನೆ ಸಂಪೂರ್ಣ ಸಹಕಾರ ನೀಡುವುದೆಂಬ ಆಶ್ವಾಸನೆಯನ್ನು ನೀಡಲಾಗಿತ್ತು. ಇಂದಿನ ಸೌದಿ ದೊರೆಗಳ ಪೂರ್ವಜರಾದ 'ಅಲ್ ಸವೂದ್' ಕುಟುಂಬದ (ಇಬ್ನು ಸೌದ್ ಎಂದೇ ಖ್ಯಾತರಾಗಿದ್ದ) ಸುಲ್ತಾನ್ ಅಬ್ದುಲ್ ಅಝೀಝ್ ಬಿನ್ ಅಬ್ದುರ್ರಹ್ಮಾನ್ ಆವರೆಗೆ ರಿಯಾದ್ ಮತ್ತು ಆಸುಪಾಸಿನ ಪ್ರದೇಶಗಳ ದೊರೆಯಾಗಿದ್ದರು. 1924–25ರ ಅವಧಿಯಲ್ಲಿ ಅವರು ಹಿಜಾಝ್ ಪ್ರದೇಶದ ಮೇಲೆ ದಾಳಿ ನಡೆಸಿ, ಅಲ್ಲಿನ ಹಾಶಿಮೀ ದೊರೆಯನ್ನು ಪದಚ್ಯುತಗೊಳಿಸಿ 1926 ರಲ್ಲಿ ತನ್ನನ್ನು 'ಹಿಜಾಝ್‌ನ ದೊರೆ' ಎಂದು ಘೋಷಿಸಿಕೊಂಡರು.

**ಹಾಶಿಮೀ ದೊರೆಗಳ ಎರಡನೆಯ ಮಹಾದ್ರೋಹ**

1919ರಲ್ಲಿ ಹಿಜಾಝ್‌ನ ಹಾಶಿಮೀ ದೊರೆಯ ಪರವಾಗಿ, ಅವರ ಒಬ್ಬ ಪುತ್ರ ಅಮೀರ್ ಫೈಸಲ್ ಬ್ರಿಟಿಷರ ಅಪೇಕ್ಷೆಯಂತೆ ಬಾಲ್ ಫೋರ್ ಪ್ರಕಟನೆಗೆ ಮನ್ನಣೆ ನೀಡಿದ ದುರ್ಘಟನೆ ನಡೆದಿತ್ತು. ಇದಾಗಿ ಮೂರು ದಶಕಗಳ ಬಳಿಕ ಫೆಲೆಸ್ತೀನಿಗಳು ತಮ್ಮ ಅರಬ್ ಬಂಧುಗಳ ಕೈಯಲ್ಲೇ ಇನ್ನೊಂದು ಆಘಾತವನ್ನು ಅನುಭವಿಸಬೇಕಾಯಿತು. ಈ ಬಾರಿ ಅಂತಹ ಮಹಾ ದ್ರೋಹ ಎಸಗಿದವರು ಅದೇ ಹಾಶಿಮೀ ದೊರೆಯ ಇನ್ನೊಬ್ಬ ಪುತ್ರ, ಅಂದರೆ ಅಮೀರ್ ಫೈಸಲ್ ಬಿನ್ ಹುಸೈನ್‌ರ ಸಹೋದರ ಅಬ್ದುಲ್ಲಾ (ಪ್ರಥಮ). 1909 ರಿಂದ 1914ರ ತನಕ ಅವರು ಉಸ್ಮಾನಿಯಾ ಶಾಸನ ಸಭೆಯಲ್ಲಿ ಮಕ್ಕಾ ಪ್ರಾಂತದ ಪ್ರತಿನಿಧಿಯಾಗಿದ್ದರು. 1916 ರಿಂದ 1918 ರ ಅವಧಿಯಲ್ಲಿ ಉಸ್ಮಾನಿಯಾ ಸಾಮ್ರಾಜ್ಯದ ವಿರುದ್ಧ ನಡೆದ ಅರಬ್ ಬಂಡಾಯದಲ್ಲಿ ಸಕ್ರಿಯ ಪಾತ್ರವಹಿಸಿದ್ದರು. ಬ್ರಿಟಿಷರ ಕೃಪೆಯಿಂದ 1921ರಲ್ಲಿ ಅವರು ಟ್ರಾನ್ಸ್ ಜೋರ್ಡನ್‌ನ ಉಸ್ತುವಾರಿ ಆಡಳಿತಗಾರರಾದರು ಮತ್ತು 1946ರ ಹೊತ್ತಿಗೆ ಜೋರ್ಡನ್‌ನ ಪೂರ್ಣ ಪ್ರಮಾಣದ ದೊರೆಯಾದರು. 1947ರಲ್ಲಿ, ಫೆಲೆಸ್ತೀನ್ ಅನ್ನು ವಿಭಜಿಸಿ ಅದರ ಒಂದು ಭಾಗವನ್ನು ಯಹೂದಿಗಳಿಗೆ ಮತ್ತು ಇನ್ನೊಂದು ಭಾಗವನ್ನು ಅರಬರಿಗೆ ನೀಡುವ ಯೋಜನೆ ಪ್ರಕಟವಾದಾಗ ಒಟ್ಟು ಅರಬ್ ಜನತೆ ಮತ್ತು ಬಹುತೇಕ ಎಲ್ಲ ಅರಬ್ ಆಡಳಿತಗಾರರು ಅದನ್ನು

ವಿರೋಧಿಸಿದ್ದರು. ಆ ಹಂತದಲ್ಲಿ ಪ್ರಸ್ತುತ ಯೋಜನೆಯ ಪರ ಒಲವು ತೋರಿದ ಮೊದಲ ಅರಬ್ ಆಡಳಿತಗಾರ ಇವರೇ ಆಗಿದ್ದರು. 1948ರಲ್ಲಿ ಇಸ್ರೇಲ್ ಸರಕಾರದ ಸ್ಥಾಪನೆಯನ್ನು ಘೋಷಿಸಲಾದಾಗ ಫೆಲೆಸ್ತೀನ್ ಮತ್ತದರ ಸುತ್ತಮುತ್ತ ಭಾರೀ ಪ್ರತಿಭಟನೆ ವ್ಯಕ್ತವಾಯಿತು. ಏಳು ದೇಶಗಳಿದ್ದ (ಈಜಿಪ್ಟ್, ಟ್ರಾನ್ಸ್ ಜೋರ್ಡನ್, ಸಿರಿಯಾ, ಲೆಬನಾನ್, ಇರಾಕ್, ಸೌದಿ ಅರೇಬಿಯಾ ಮತ್ತು ಯಮನ್) ಅರಬ್ ಲೀಗ್ ಪಡೆಗಳು ಇಸ್ರೇಲ್ ಮೇಲೆ ದಾಳಿ ಮಾಡಿದವು. ಈ ವೇಳೆ ತನ್ನ ಸೇನೆ ವಶಪಡಿಸಿಕೊಂಡ ಫೆಲೆಸ್ತೀನ್‌ನ ಭಾಗಗಳನ್ನು ಜೋರ್ಡನ್‌ನ ದೊರೆ ಅಬ್ದುಲ್ಲಾ (ಪ್ರಥಮ), ಫೆಲೆಸ್ತೀನಿಗಳಿಗೆ ಬಿಟ್ಟು ಕೊಡುವ ಬದಲು ಜೋರ್ಡನ್ ಜೊತೆ ವಿಲೀನಗೊಳಿಸಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡರು. ಅವರ ಈ ವಿದ್ರೋಹಿ ಕೃತ್ಯವನ್ನು ಫೆಲೆಸ್ತೀನಿಗಳು ಇಂದಿಗೂ ಮರೆತಿಲ್ಲ. ಅವರು 1951ರಲ್ಲಿ ಜೆರುಸಲೇಮ್‌ನಲ್ಲಿರುವ ಅಲ್ ಅಕ್ಸಾ ಮಸೀದಿಯಲ್ಲಿ ಒಬ್ಬ ಫೆಲೆಸ್ತೀನಿ ಹೋರಾಟಗಾರನ ಕೈಯಲ್ಲಿ ಹತರಾದರು.

**ಫೆಲೆಸ್ತೀನ್ ಕುರಿತು ಸೌದಿ ಸರಕಾರದ ಧೋರಣೆಯೇನು?**

ಸೌದಿ ಅರೇಬಿಯಾದ ಅತ್ಯಂತ ಆಪ್ತ ಮಿತ್ರರಾದ ಬಹರೈನ್ ಮತ್ತು ಯುಎಇ ಎಂಬೆರೆಡು ದೇಶಗಳು ಕಳೆದ ವರ್ಷ ಇಸ್ರೇಲ್ ಜೊತೆ ಔಪಚಾರಿಕ ಮೈತ್ರಿ ಘೋಷಿಸಿವೆ. ಸಹಜವಾಗಿಯೇ ಇದರಿಂದ ಆಕ್ರೋಶಿತರಾದ ಫೆಲೆಸ್ತೀನ್‌ನ ಜನತೆ ಇದೊಂದು ಅಕ್ಷಮ್ಯ ದ್ರೋಹವೆಂದು ಖಂಡಿಸಿದರು. ಸೌದಿ ಸರಕಾರದ ಆಶೀರ್ವಾದವಿಲ್ಲದೆ ಹೀಗಾಗಲು ಸಾಧ್ಯವೇ ಇಲ್ಲ. ಸದ್ಯ ಸೌದಿ ಸಾಮ್ರಾಜ್ಯವನ್ನು ನಿಯಂತ್ರಿಸುತ್ತಿರುವ ಅಲ್ಲಿನ ಘೋಷಿತ ಉತ್ತರಾಧಿಕಾರಿ (ಪತ್ರಕರ್ತ ಜಮಾಲ್ ಖಶೋಗಿ ಹತ್ಯೆಯ ಪ್ರಧಾನ ಆರೋಪಿ) ರಾಜಕುಮಾರ ಮುಹಮ್ಮದ್ ಬಿನ್ ಸಲ್ಮಾನ್ (ಎಂ.ಬಿ.ಎಸ್.) ಈಗಾಗಲೇ ಇಸ್ರೇಲ್ ಜೊತೆ ಹಲವು ಗುಪ್ತ ವ್ಯವಹಾರಗಳಲ್ಲಿ ನಿರತರಾಗಿದ್ದು, ಪೂರ್ಣ ಪ್ರಮಾಣದ ಅಧಿಕೃತ ಸೌದಿ – ಇಸ್ರೇಲ್ ಮೈತ್ರಿಯನ್ನು ಘೋಷಿಸುವ ಮುನ್ನ ಈ ರೀತಿ ತಮ್ಮ ಇಬ್ಬರು ಪೇದೆಗಳನ್ನು ಮುಂದೆ ಕಳಿಸಿದ್ದಾರೆ ಎಂಬ ಆರೋಪ ಫೆಲೆಸ್ತೀನ್ ಅನ್ನು ಪ್ರತಿನಿಧಿಸುವ ವಿವಿಧ ವಲಯಗಳಲ್ಲಿ ವ್ಯಾಪಕವಾಗಿ ಕೇಳಿ ಬಂತು. ಫೆಲೆಸ್ತೀನ್‌ನ ನಾಯಕರು ಕೂಡಾ ಬಹುತೇಕ ಇದೇ ಧಾಟಿಯಲ್ಲಿ ಮಾತನಾಡಿದರು. ಪ್ರಸ್ತುತ ಬೆಳವಣಿಗೆಗಳ ಹಿನ್ನೆಲೆಯಲ್ಲಿ, 2020ರ ಅಕ್ಟೋಬರ್‌ನಲ್ಲಿ ಸೌದಿ ರಾಜವಂಶದ ಹಿರಿಯ ಸದಸ್ಯ, ಅಲ್ಲಿಯ ಗುಪ್ತಚರ ಇಲಾಖೆಯ ಮಾಜಿ ಮುಖ್ಯಸ್ಥ ಮತ್ತು ಅಮೆರಿಕದಲ್ಲಿ ಸೌದಿಯ ರಾಯಭಾರಿಯಾಗಿದ್ದ ಪ್ರಿನ್ಸ್ ಬಂದರ್ ಬಿನ್ ಸುಲ್ತಾನ್ 'ಅಲ್ ಅರಬಿಯ್ಯ' ಟಿವಿ ಜಾಲಕ್ಕೆ ಒಂದು ಸಂದರ್ಶನ ನೀಡಿದರು. ಈ ವೇಳೆ ಅವರು

ಹೇಳಿದ ಕೆಲವು ಆಕ್ರೋಶದ ಮಾತುಗಳು ಸೌದಿ ವಿದೇಶ ನೀತಿಯ ಮುಂದಿನ ದಿಕ್ಕು ಏನೆಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಎಲ್ಲೆಡೆ ಪ್ರಸಾರವಾದ ಅವರ ಆ ಕೆಲವು ಮಾತುಗಳು ಇಲ್ಲಿವೆ: "ನಾವು ಇತ್ತೀಚೆಗೆ ಕಂಡಿರುವ ಫೆಲೆಸ್ತೀನ್‌ನ ನಾಯಕರ ಅವಿಧೇಯತೆ ಮತ್ತು ಅನಿಷ್ಠೆ, ಫೆಲೆಸ್ತೀನ್ ಜನತೆಯ ಧ್ಯೇಯದ ಬಗೆಗಿನ ನಮ್ಮ ಬದ್ಧತೆಯನ್ನು ಬಾಧಿಸಲಾರದು. ಆದರೆ ಇಂತಹ ಜನರನ್ನು ನಂಬುವುದು ಕಷ್ಟ. ಇಂತಹ ನಾಯಕರು ಇರುವ ತನಕ ನಮಗೆ ಫೆಲೆಸ್ತೀನ್‌ನ ಹಿತಕ್ಕಾಗಿ ಏನನ್ನೂ ಮಾಡಲು ಸಾಧ್ಯವಾಗದು. ಇಂದಿನ ಜಾಗತಿಕ ಸನ್ನಿವೇಶದಲ್ಲಿ ನಾವು ಫೆಲೆಸ್ತೀನ್‌ನ ಜನತೆಯ ಹಿತ ಕಾಪಾಡಲಿಕ್ಕಾಗಿ ಇಸ್ರೇಲ್ ನ ಸವಾಲನ್ನು ಹೇಗೆ ಎದುರಿಸಬೇಕೆಂಬ ಚಿಂತೆಯಲ್ಲಿ ಮಗ್ನರಾಗಿರುವ ಬದಲು ಸ್ವತಃ ನಮ್ಮದೇ ರಾಷ್ಟ್ರೀಯ ಹಿತಾಸಕ್ತಿಗಳ ರಕ್ಷಣೆಯ ಕುರಿತು ಚಿಂತಿಸಬೇಕಾಗಿದೆ... ಇರಾನ್ ಮತ್ತು ಟರ್ಕಿಯಂತಹ ದೇಶಗಳು ತಾವು ಫೆಲೆಸ್ತೀನ್‌ನ ಜನರ ಹಿತಾಸಕ್ತಿಗಳಿಗಾಗಿ ಶ್ರಮಿಸುತ್ತಿದ್ದೇವೆ ಮತ್ತು ಫೆಲೆಸ್ತೀನ್ ಹಾಗೂ ಜೆರುಸಲೇಮ್ ತಮ್ಮ ಪ್ರಾಶಸ್ತ್ಯದ ಪಟ್ಟಿಯಲ್ಲಿವೆ ಎಂದು ಹೇಳಿಕೊಳ್ಳುತ್ತಿವೆ. ಫೆಲೆಸ್ತೀನ್ ನಾಯಕರು ಅವರನ್ನು ನಂಬಿ ರಿಯಾದ್, ಕುವೈತ್, ಅಬುಧಾಬಿ, ಮನಾಮ, ಒಮಾನ್ ಮತ್ತು ಕೈರೋಗಳಿಗಿಂತ ಟೆಹ್ರಾನ್ ಮತ್ತು ಅಂಕಾರಾಗಳೇ ಹೆಚ್ಚು ಮುಖ್ಯ ಎಂಬಂತೆ ವರ್ತಿಸುತ್ತಿದ್ದಾರೆ. ಅದು ಸರಿಯಲ್ಲ".

"ನಮ್ಮ ನಾಯಕರು ಈಗ ನಮ್ಮ ರಾಷ್ಟ್ರೀಯ ಭದ್ರತೆ, ನಮ್ಮ ಜನರ ಹಿತ ಮತ್ತು ಅವರ ಆರ್ಥಿಕ ಹಾಗೂ ಸಾಮಾಜಿಕ ಹಿತಾಸಕ್ತಿಗಳನ್ನು ರಕ್ಷಿಸುವ ಕುರಿತು ಚಿಂತಿಸಬೇಕು. ಇಂದು ನಮ್ಮ ಕೊಲ್ಲಿ ದೇಶಗಳ ಸ್ಥಿತಿಯು, ಅಬ್ಬರಿಸುವ ಸಾಗರದ ನಡುವೆ ಇರುವ ದ್ವೀಪದಂತಿದೆ. ಈ ಸ್ಥಿತಿಯಲ್ಲಿ ನಮ್ಮ ಜನರ ಹಿತವನ್ನು ಕಾಪಾಡುವುದೇ ನಮ್ಮ ಆದ್ಯ ಕರ್ತವ್ಯ. ಕೆಲವು ಸುಳ್ಳುಗಾರ, ವಂಚಕ, ಮೋಸಗಾರ, ಅವಿಧೇಯ ಮತ್ತು ವಿದ್ರೋಹಿಗಳ ಒಂದು ಗುಂಪು ನಮ್ಮೊಂದಿಗೆ ನಡೆದುಕೊಂಡ ರೀತಿ ನಮಗೆ ಸಹ್ಯವಲ್ಲ. ನಮಗೆ ನಮ್ಮ ಇತಿಹಾಸ ಗೊತ್ತಿದೆ. ಹಾಗೆಯೇ, ಅವರ ಇತಿಹಾಸವೂ ಗೊತ್ತಿದೆ".

ಇತ್ತೀಚೆಗೆ ಬೆಳಕಿಗೆ ಬಂದಿರುವಂತೆ, ಇಸ್ರೇಲ್ ಮತ್ತು ಫೆಲೆಸ್ತೀನ್‌ನ ವಿಷಯದಲ್ಲಿ ಯಾವ ಧೋರಣೆ ಸೂಕ್ತ ಎಂಬ ವಿಷಯದಲ್ಲಿ ಸೌದಿ ರಾಜಮನೆತನದೊಳಗೆ ತೀವ್ರ ಸ್ವರೂಪದ ಅಂತಃಕಲಹ ನಡೆಯುತ್ತಿದೆ. ಸಂಪ್ರದಾಯವಾದಿ ವಯೋವೃದ್ಧ ದೊರೆ ಸಲ್ಮಾನ್, ಇಸ್ರೇಲ್ ಜೊತೆ ಬಹಿರಂಗ ಸ್ನೇಹದ ಪ್ರಕ್ರಿಯೆಯನ್ನು ಎಚ್ಚರಿಕೆಯಿಂದ, ನಿಧಾನವಾಗಿ ಮುಂದುವರಿಸಬೇಕು ಎನ್ನುತ್ತಾರೆ. ಆದರೆ ಅವರ ಸಾಹಸಪ್ರಿಯ ಯುವ ಪುತ್ರ ಯುವರಾಜ ಮುಹಮ್ಮದ್ ಬಿನ್ ಸಲ್ಮಾನ್ ಭಾರೀ ಆವೇಶದಿಂದ ಮುನ್ನುಗ್ಗುತ್ತಿದ್ದಾರೆ. ಯುಎಇ ಮತ್ತು

ಬಹರೈನ್‌ಗಳ ಮುನ್ನಡೆಯ ಬಗ್ಗೆ ತಿಳಿದಾಗ ದೊರೆಗೆ ಆಘಾತವಾಗಿದ್ದು ಅದನ್ನು ಅವರು ಗಂಭೀರವಾಗಿ ಆಕ್ಷೇಪಿಸಿದ್ದಾರೆ ಎಂಬ ಸುದ್ದಿಗಳಿವೆ. ಆದರೆ ಈ ಕಾಲದಲ್ಲಿ ಹಿರಿಯ ನಾಗರಿಕರ ಮಾತನ್ನು ಕೇಳುವವರಾರು? ಅಥವಾ ಇದು ಕೂಡ ಸ್ಕ್ರಿಪ್ಟ್‌ನ ಭಾಗವಾಗಿರಬಹುದೇ?

## ಒಂದು ಟ್ವೀಟ್ ಚಾಟಿ

ಕಳೆದ ವರ್ಷ (ಆಗಸ್ಟ್ 2020) ಯುಎಇ ನಾಯಕ ಮುಹಮ್ಮದ್ ಬಿನ್ ಝಾಯಿದ್ ಮತ್ತು ಪಿಎಲ್‌ಒ ನಾಯಕಿ ಹನಾನ್ ಅಶ್ರಾವಿ ನಡುವೆ ನಡೆದ ಒಂದು ಟ್ವೀಟ್ ಸಂಭಾಷಣೆ: "ಅಧ್ಯಕ್ಷ ಟ್ರಂಪ್ ಮತ್ತು ಪ್ರಧಾನಿ ನೆತನ್ಯಾಹು ಜೊತೆ ನಮ್ಮ ಮಾತುಕತೆ ನಡೆದಿದೆ. ಫೆಲೆಸ್ತೀನ್‌ನ ಮತ್ತಷ್ಟು ಪ್ರದೇಶಗಳ ಮೇಲೆ ಆಕ್ರಮಣ ನಡೆಸುವುದಿಲ್ಲ ಎಂದು ಇಸ್ರೇಲ್ ಸರಕಾರ ಒಪ್ಪಿಕೊಂಡಿದೆ. ಯುಎಇ ಮತ್ತು ಇಸ್ರೇಲ್ ಸರಕಾರಗಳು ಪರಸ್ಪರ ಸಹಕರಿಸಲು ಮತ್ತು ಪರಸ್ಪರ ಸಂಬಂಧಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಮುನ್ನಡೆಯಲು ತೀರ್ಮಾನಿಸಿವೆ".

**– ಮುಹಮ್ಮದ್ ಬಿನ್ ಝಾಯಿದ್**

ನಿಮಗೆಂದೂ ನಿಮ್ಮ ದೇಶ ನಿಮ್ಮಿಂದ ಕಳವಾದ ಸಂಕಟದ ಅನುಭವ ಆಗದಿರಲಿ. ಆಕ್ರಮಿತರಾಗಿ ಬಂಧಿತ ಸ್ಥಿತಿಯಲ್ಲಿ ಬದುಕುವ ಹಿಂಸೆ ನಿಮಗೆಂದೂ ಸಿಗದಿರಲಿ. ನಿಮ್ಮ ಮನೆಯನ್ನು ಕೆಡವಲಾಗುವ ಮತ್ತು ನಿಮ್ಮ ಪ್ರೀತಿಪಾತ್ರರನ್ನು ವಧಿಸಲಾಗುವ ದೃಶ್ಯಗಳನ್ನು ನೀವೆಂದೂ ಕಾಣದಂತಾಗಲಿ. ನಿಮ್ಮ ಮಿತ್ರರು ನಿಮ್ಮನ್ನೆಂದೂ ಮಾರದಿರಲಿ.

**– ಹನಾನ್ ಅಶ್ರಾವಿ**

❖ ❖ ❖

# 13

# ದ್ರೋಹವೆಸಗಿದ್ದು ಸಾಲದ್ದಕ್ಕೆ ಭಾವನೆಗಳನ್ನು ಅಣಕಿಸುವ ಕ್ರೌರ್ಯ!

ಕಳೆದ ವರ್ಷ ಯುಎಇ ಮತ್ತು ಬಹರೈನ್ ದೇಶಗಳು ಅಮೆರಿಕದ ಮಧ್ಯಸ್ಥಿಕೆಯಲ್ಲಿ, ಇಸ್ರೇಲ್‌ಗೆ ಅಧಿಕೃತ ಮಾನ್ಯತೆ ನೀಡುವ ಒಪ್ಪಂದಕ್ಕೆ ಸಹಿ ಹಾಕಿದವು. ಈ ಕೃತ್ಯವನ್ನು ತಮಗೆ ತಮ್ಮವರು ಮಾಡಿದ ಮಹಾದ್ರೋಹ ಎಂದು ಕರೆಯುವ ಫೆಲೆಸ್ತೀನ್ ಜನತೆ, ಪ್ರಸ್ತುತ ದೇಶಗಳು ಇಂತಹ ದ್ರೋಹಕ್ಕಾಗಿ ಸೆಪ್ಟಂಬರ್ 15ರ ದಿನವನ್ನು ಆರಿಸಿಕೊಂಡದ್ದನ್ನು ತಮ್ಮ ಭಾವನೆಗಳ ಜೊತೆ ನಡೆಸಲಾದ ಕ್ರೂರ ಚೆಲ್ಲಾಟ ಎಂದು ಪರಿಗಣಿಸುತ್ತಾರೆ. ಏಕೆಂದರೆ ಪ್ರತಿವರ್ಷ ಸೆಪ್ಟಂಬರ್ ಮೂರನೆಯ ವಾರವು ಫೆಲೆಸ್ತೀನ್ ಜನತೆಗೆ ಅವರ ವಿಮೋಚನಾ ಹೋರಾಟದ ಚರಿತ್ರೆಯ ಕೆಲವು ಅತ್ಯಂತ ಕರಾಳ ಅಧ್ಯಾಯಗಳನ್ನು ನೆನಪಿಸುತ್ತದೆ. 1982ರಲ್ಲಿ ಲೆಬನಾನ್ ಮೇಲೆ ದಾಳಿ ಮಾಡಿದ ಇಸ್ರೇಲ್ ಸೇನೆ ಅಲ್ಲಿನ ರಾಜಧಾನಿ ಬೈರೂತ್‌ನಲ್ಲಿದ್ದ ಶತೀಲಾ ಮತ್ತು ಸಾಬ್ರಾ ಎಂಬ ಫೆಲೆಸ್ತೀನ್ ನಿರಾಶ್ರಿತರ ಶಿಬಿರಗಳಿಗೆ ಮುತ್ತಿಗೆ ಹಾಕಿತು. ಸೆಪ್ಟಂಬರ್ 16 ರಂದು, ಈ ರೀತಿ ಇಸ್ರೇಲ್ ಪಡೆಗಳಿಂದ ಸುತ್ತುವರಿಯಲ್ಪಟ್ಟ ಶಿಬಿರಗಳಿಗೆ ನುಗ್ಗಿದ ಫೆಲಾಂಜಿ (Phalange) ಎಂಬ ಅಲ್ಲಿನ ಇಸ್ರೇಲ್ ಬೆಂಬಲಿತ ಕ್ರೈಸ್ತ ಉಗ್ರವಾದಿ ಗುಂಪೊಂದು ಶಿಬಿರಾರ್ಥಿಗಳ ಸಾಮೂಹಿಕ ಹತ್ಯೆ ಆರಂಭಿಸಿತ್ತು. ಇಸ್ರೇಲ್ ಪಡೆಗಳ ಮೇಲ್ನೋಟದಲ್ಲಿ ಸತತ

ಎರಡು ದಿನ ಮುಂದುವರಿದ ಈ ಹತ್ಯಾಕಾಂಡದಲ್ಲಿ ಮಕ್ಕಳು, ಮಹಿಳೆಯರ ಸಹಿತ ಸುಮಾರು 3,500 ನಿರಾಶ್ರಿತ ನಾಗರಿಕರು ಹತರಾಗಿದ್ದರು. 2020ರಲ್ಲಿ ಯುಎಇ ಮತ್ತು ಬಹರೈನ್‌ಗಳು ಇಸ್ರೇಲ್ ಜೊತೆ ಸ್ನೇಹದ ಒಪ್ಪಂದಕ್ಕೆ ಸಹಿ ಹಾಕುತ್ತಿದ್ದಾಗ ಫೆಲೆಸ್ತೀನ್ ಜನತೆ ಪ್ರಸ್ತುತ ದುರಂತದ 38ನೇ ವಾರ್ಷಿಕ ಶೋಕಾಚರಣೆ ನಡೆಸುತ್ತಿದ್ದರು. ಮಾತ್ರವಲ್ಲ, ಅವರು ಅದೇ ವಾರ ತಮ್ಮ ಚರಿತ್ರೆಯ ಇನ್ನೊಂದು ದೊಡ್ಡ ದುರಂತವನ್ನು ಸ್ಮರಿಸುತ್ತಾ ಅದರ 50ನೇ ವಾರ್ಷಿಕ ಶೋಕಾಚರಣೆಯಲ್ಲೂ ನಿರತರಾಗಿದ್ದರು. ಐದು ದಶಕಗಳ ಹಿಂದೆ, 1970ರಲ್ಲಿ ಸೆಪ್ಟಂಬರ್ 17ರಂದು ಜೋರ್ಡನ್ ರಾಜಧಾನಿ ಅಮ್ಮಾನ್‌ನಲ್ಲಿ ಫೆಲೆಸ್ತೀನ್ ಮೂಲದ ಸುಮಾರು 15,000 ನಾಗರಿಕರು ಮತ್ತು ಸಶಸ್ತ್ರ ಹೋರಾಟಗಾರರ ಸಾಮೂಹಿಕ ಹತ್ಯಾಕಾಂಡ ನಡೆದಿತ್ತು.

## ದ್ರೋಹಗಳ ಸರಮಾಲೆ

1967ರ 'ಆರು ದಿನಗಳ ಯುದ್ಧ' ಮುಗಿದಾಗ, ಮಧ್ಯ ಪ್ರಾಚ್ಯದ ಭೂಪಟ ಮಾತ್ರವಲ್ಲ ಅಲ್ಲಿಯ ಶಕ್ತಿ ಸಮತೋಲನವೆಲ್ಲಾ ಬದಲಾಗಿ ಬಿಟ್ಟಿತ್ತು. ಆ ಯುದ್ಧದಲ್ಲಿ, ಪುಟಾಣಿ ಇಸ್ರೇಲ್‌ಗೆ ಏಕಕಾಲದಲ್ಲಿ ಮತ್ತು ತೀರಾ ಸಣ್ಣ ಅವಧಿಯಲ್ಲಿ ತನ್ನ ಅಕ್ಕಪಕ್ಕದ ಹಲವು ರಾಷ್ಟ್ರಗಳನ್ನು ಅಷ್ಟೊಂದು ಹೀನಾಯವಾಗಿ ಸೋಲಿಸಲು ಹೇಗೆ ತಾನೇ ಸಾಧ್ಯವಾಯಿತು? ಎಂಬ ಪ್ರಶ್ನೆ ಲಕ್ಷಾಂತರ ವೀಕ್ಷಕರನ್ನು ಕಾಡಿತ್ತು. ಈ ಕುರಿತಂತೆ ಮುಂದಿನ ದಿನಗಳಲ್ಲಿ ಅನಾವರಣಗೊಂಡ ವಾಸ್ತವಗಳು ನಿಜಕ್ಕೂ ಆಘಾತಕಾರಿಯಾಗಿದ್ದವು. ಅದರ ಸಾರಾಂಶವನ್ನು ಮಾತ್ರ ಹೇಳಬೇಕೆಂದರೆ, ಆ ಯುದ್ಧದಲ್ಲಿ ಇಸ್ರೇಲ್‌ನ ವಿಜಯವನ್ನು ಖಚಿತಗೊಳಿಸಲು ಬೇಕಾದ ಎಲ್ಲ ಏರ್ಪಾಡುಗಳನ್ನು ಅದರ ವಿರುದ್ಧ ಯುದ್ಧಕ್ಕಿಳಿದ ಅರಬ್ ದೇಶಗಳೇ ಮಾಡಿದ್ದವು! ಕೆಲವು ಉದಾಹರಣೆಗಳು ಮಾತ್ರ ಇಲ್ಲಿವೆ:

## ಮೊರೊಕ್ಕೋ ಮಾಡಿದ ದ್ರೋಹ

1965ರ ಸೆಪ್ಟಂಬರ್‌ನಲ್ಲಿ ಅರಬ್ ದೇಶಗಳ ಒಕ್ಕೂಟ 'ಅರಬ್ ಲೀಗ್'ನ ನೇತೃತ್ವದಲ್ಲಿ ಮೊರೊಕ್ಕೋ ದೇಶದ ಹೊಟೇಲ್ ಕಾಸಾಬ್ಲಾಂಕದಲ್ಲಿ 12 ಅರಬ್ ದೇಶಗಳ ಮುಖ್ಯಸ್ಥರ ಒಂದು ಶೃಂಗ ಸಭೆ ನಡೆದಿತ್ತು. ಪಿಎಲ್‌ಓ ಪ್ರತಿನಿಧಿಯನ್ನೂ ಈ ಶೃಂಗ ಸಭೆಗೆ ಆಮಂತ್ರಿಸಲಾಗಿತ್ತು. ನಾಲ್ಕು ದಿನಗಳ ಈ ಸಭೆಯಲ್ಲಿ ಫೆಲೆಸ್ತೀನ್‌ನ ವಿಮೋಚನೆಗಾಗಿ ದೊಡ್ಡ ಮಟ್ಟದ ಒಂದು ಸಂಯುಕ್ತ ಸೈನಿಕ ಕಾರ್ಯಾಚರಣೆಯ ಅಗತ್ಯದ ಬಗ್ಗೆ ಚರ್ಚಿಸಲಾಗಿತ್ತು. ಭೂಸೇನೆ, ವಾಯುಸೇನೆ, ನೌಕಾಪಡೆ, ಬೇಹುಗಾರಿಕೆ ಇತ್ಯಾದಿ ಕ್ಷೇತ್ರಗಳಲ್ಲಿ ಪ್ರತಿಯೊಂದು

ಸದಸ್ಯ ದೇಶದ ಸಾಮರ್ಥ್ಯ ಎಷ್ಟು ಮತ್ತು ಯೋಜಿತ ಕಾರ್ಯಾಚರಣೆಯಲ್ಲಿ ಯಾರು ಯಾವ ಪಾತ್ರ ವಹಿಸಬೇಕು ಇತ್ಯಾದಿ ವಿಷಯಗಳ ಕುರಿತು ವಿಚಾರ ವಿನಿಮಯ ನಡೆದಿತ್ತು. ಆಯಾ ದೇಶದ ಮುಖ್ಯಸ್ಥರು ಮಾತ್ರ ಹಾಜರಿದ್ದರಿಂದ ಪರಸ್ಪರ ನಂಬಿಕೆಯ ವಾತಾವರಣದಲ್ಲಿ ಸಾಕಷ್ಟು ಮಹತ್ವದ ಸೂಕ್ಷ್ಮ ಹಾಗೂ ವ್ಯೂಹಾತ್ಮಕ ಮಾಹಿತಿಗಳ ವಿನಿಮಯ ನಡೆಯಿತು. ಕೆಲವು ವಿಷಯಗಳಲ್ಲಿ ಜಗಳಗಳೂ ನಡೆದವು. ಆದರೆ ಈ ಸಭೆ ಗುಪ್ತವಾಗಿದೆ ಎಂದು ನಂಬಿದ್ದವರು ಭ್ರಮೆಯಲ್ಲಿದ್ದರು. ಮುಂದೆ ಇಸ್ರೇಲ್‌ನ ಗುಪ್ತಚರ ವಿಭಾಗದ ಮುಖ್ಯಸ್ಥ ಮತ್ತು ಮೇಜರ್ ಜನರಲ್ ಸ್ಥಾನದಲ್ಲಿದ್ದ ಶ್ಲೋಮೋ ಗಾಝಿಟ್ ಅವರು ಬಹಿರಂಗ ಪಡಿಸಿದ ಪ್ರಕಾರ, ಈ ಶೃಂಗ ಸಭೆಯ ಪ್ರಾಯೋಜಕರಾಗಿದ್ದ ಮೊರೊಕ್ಕೋ ದೊರೆ ಕಿಂಗ್ ಹುಸೈನ್ (ದ್ವಿತೀಯ) ಅವರು ಇಸ್ರೇಲ್ ಜೊತೆ ಒಂದು ಗುಪ್ತ ಒಪ್ಪಂದ ನಡೆಸಿದ್ದರು. ಅದರ ಪ್ರಕಾರ ಪ್ರಸ್ತುತ ಸಭೆ ನಡೆಯಲಿದ್ದ ಕಾಸಾ ಬ್ಲಾಂಕ ಹೊಟೇಲ್‌ನ ನಿರ್ದಿಷ್ಟ ಅಂತಸ್ತನ್ನು ಇಸ್ರೇಲ್‌ನ ಬೇಹುಗಾರಿಕಾ ಸಂಸ್ಥೆಗಳಾದ ಶಿನ್ ಬೆಟ್ ಮತ್ತು ಮೊಸ್ಸಾದ್‌ನ ಅಧಿಕಾರಿಗಳಿಗೆ ಬಿಟ್ಟುಕೊಡಲಾಗಿತ್ತು. ಅವರು ಅಲ್ಲಿ ನಡೆಯುವ ಎಲ್ಲ ಸಂಭಾಷಣೆಗಳನ್ನು ರೆಕಾರ್ಡ್ ಮಾಡುವ ಗುಪ್ತ ಏರ್ಪಾಟನ್ನು ಮಾಡಿದ್ದರು. ಅಲ್ಲಿ ಪ್ರಕಟವಾದ ಎಲ್ಲ ಮಾಹಿತಿಗಳು ಇಸ್ರೇಲ್‌ಗೆ ಯಥಾವತ್ತಾಗಿ ತಲುಪಿದವು. 1967ರ ಯುದ್ಧದಲ್ಲಿ ಇಸ್ರೇಲ್‌ಗೆ ಅಷ್ಟೊಂದು ಪ್ರಾಬಲ್ಯ ಒದಗಿಸುವಲ್ಲಿ ಅತಿ ದೊಡ್ಡ ಪಾತ್ರ ಈ ವಿದ್ರೋಹದ್ದಾಗಿತ್ತು. ಈ ಗುಟ್ಟನ್ನು ಮುಂದೆ ಕಿಂಗ್ ಹುಸೈನ್‌ರ ಕೆಲವು ಮಾಜಿ ಆಪ್ತರು ಕೂಡಾ ಖಚಿತ ಪಡಿಸಿದರು. ಅದೇ ವರ್ಷ ಕಿಂಗ್ ಹುಸೈನ್‌ರ ವಿರೋಧಿ, ಎಡಪಂಥೀಯ ನಾಯಕ ಮೆಹದಿ ಬಿನ್ ಬರ್ಕಾ ನಿಗೂಢವಾಗಿ ಮತ್ತು ಶಾಶ್ವತವಾಗಿ ಕಾಣೆಯಾದದ್ದು, ಇಸ್ರೇಲ್ ಕಡೆಯಿಂದ ಕಿಂಗ್ ಹುಸೈನ್‌ರಿಗೆ ದಕ್ಕಿದ ಹಲವು ಪಾರಿತೋಷಕಗಳಲ್ಲಿ ಒಂದೆಂದು ನಂಬಲಾಗುತ್ತದೆ.

### ನಿರಾಶೆಗೊಳಿಸಿದ ಜಮಾಲ್ ಅಬ್ದುನ್ನಾಸಿರ್

1956ರಿಂದ 1970 ರತನಕ ಈಜಿಪ್ಟ್ ಅಧ್ಯಕ್ಷರಾಗಿದ್ದ ಜಮಾಲ್ ಅಬ್ದುನ್ನಾಸಿರ್ ಆಧುನಿಕ ಅರಬ್ ಜಗತ್ತು ಕಂಡ ಅತ್ಯಂತ ಜನಪ್ರಿಯ ನಾಯಕರಲ್ಲೊಬ್ಬರು. ಈಜಿಪ್ಟ್‌ನಲ್ಲಿದ್ದ ರಾಜಾಳ್ವಿಕೆಯನ್ನು ಕಿತ್ತೊಗೆಯುವಲ್ಲಿ ಅವರು ಸಕ್ರಿಯ ಪಾತ್ರ ವಹಿಸಿದ್ದರು. ಅವರ ವರ್ಚಸ್ಸು ಎಷ್ಟಿತ್ತೆಂದರೆ ಎರಡೆರಡು ಬಾರಿ ಯುದ್ಧದಲ್ಲಿ ಸೋಲನುಭವಿಸಿದ ಬಳಿಕವೂ ಅರೇಬಿಯಾದ ಎಲ್ಲ ಭಾಗಗಳಲ್ಲಿ ಅವರಿಗೆ ಉತ್ಸಾಹ ಭರಿತ ಸ್ವಾಗತ ಕಾದಿತ್ತು. ಆಕರ್ಷಕ ವ್ಯಕ್ತಿತ್ವದ ನಾಸಿರ್ ಹಲವು ವರ್ಷಗಳ ಕಾಲ ಫೆಲೆಸ್ತೀನ್ ಪರವಾಗಿ ಮತ್ತು ಇಸ್ರೇಲ್ ವಿರುದ್ಧ ನೀಡಿದ್ದ

ಭಾರೀ ಆವೇಶದ, ಕುದಿಯುವ ಹೇಳಿಕೆಗಳು, ಜನರನ್ನು ಭಾವುಕರಾಗಿಸಿ ಅವರಲ್ಲಿ ಭಾರೀ ನಿರೀಕ್ಷೆಗಳನ್ನು ಮೂಡಿಸಿದ್ದವು. ಅರಬ್ ಜಗತ್ತು ಅವರಲ್ಲೊಬ್ಬ ವಿಮೋಚಕನನ್ನು ಗುರುತಿಸಿತ್ತು. ಫೆಲೆಸ್ತೀನ್‌ನ ಜನರಂತೂ ಒಂದು ಹಂತದಲ್ಲಿ ನಾಸಿರ್‌ರ ಹೆಸರು ಕೇಳಿದರೆ ಉನ್ಮಾದಿತರಾಗುತ್ತಿದ್ದರು. ಅವರು ಅಧ್ಯಕ್ಷರಾಗುವ ಮುನ್ನ ಬರೆದ 'ಫಿಲಾಸಫಿ ಆಫ್ ರೆವೆಲ್ಯೂಶನ್' ಪುಸ್ತಕದಲ್ಲಿ ಸ್ವತಃ ತಿಳಿಸಿರುವಂತೆ ಮೊದಲು 5.5 ಕೋಟಿ ಈಜಿಪ್ಷಿಯನ್ನರ ನಾಯಕನಾಗುವುದು, ಮುಂದೆ 22.4 ಕೋಟಿ ಆಫ್ರಿಕನ್ನರ ಮತ್ತು ಆಬಳಿಕ ಜಗತ್ತಿನ ಉಳಿದೆಲ್ಲ 42 ಕೋಟಿ ಮುಸ್ಲಿಮರ ನಾಯಕನಾಗುವುದು ಅವರ ಗುರಿಯಾಗಿತ್ತು. ವ್ಯಕ್ತಿಗತ ಮಹತ್ವಾಕಾಂಕ್ಷೆಗಳ ಮುಂದೆ, ಭಾಷಣಗಳಲ್ಲಿ ಹೇಳಿದ್ದ ಸಮಾಜವಾದ, ಆಧುನೀಕರಣ, ಅರಬ್ ರಾಷ್ಟ್ರೀಯವಾದ ಮತ್ತಿತರ ತತ್ವಾದರ್ಶಗಳೆಲ್ಲಾ ಕೇವಲ ಚಪ್ಪಾಳೆಗಿಟ್ಟಿಸುವ ಮತ್ತು ಹೆಚ್ಚೆಚ್ಚು ಅಧಿಕಾರ ಗಳಿಸುವ, ಕಾಲಡಿಯ ಮೆಟ್ಟಲುಗಳು ಮಾತ್ರವಾಗಿದ್ದವು ಎಂಬುದು ನಿಧಾನವಾಗಿ ಬಯಲುಗೊಳ್ಳುತ್ತಾ ಬಂತು.


ಜನರಲ್ ಫೌಝಿ

67ರ ಯುದ್ಧದ ವೇಳೆ ಈಜಿಪ್ಟ್ ಸೇನೆಯ ಮಹಾ ದಂಡನಾಯಕರಾಗಿದ್ದ ಜನರಲ್ ಫೌಝಿ (Fawzi) ತಿಳಿಸಿದಂತೆ, ಯುದ್ಧದ ಮೊದಲೂ ಆನಂತರವೂ ನಾಸಿರ್ ಬೇರೆಲ್ಲಕ್ಕಿಂತ ಹೆಚ್ಚಾಗಿ ಅರಬ್ ಜಗತ್ತಿನಲ್ಲಿ ತನ್ನ ವರ್ಚಸ್ಸನ್ನು ಹೆಚ್ಚಿಸಿಕೊಳ್ಳುವ ಚಿಂತೆಯಲ್ಲಿದ್ದರು. ಅವರು ಪದೇ ಪದೇ ಪ್ರದರ್ಶಿಸುತ್ತಿದ್ದ ಈಜಿಪ್ಟ್‌ನ ಮಿಲಿಟರಿ ಸಾಮರ್ಥ್ಯದ ಉದ್ದೇಶ ಅರಬ್ ಆಡಳಿತಗಾರರು ಮತ್ತು ಜನತೆಯ ಮೇಲೆ ಪ್ರಭಾವ ಬೀರುವುದಷ್ಟೇ ಆಗಿತ್ತು. ಅದೇ ಅವಧಿಯಲ್ಲಿ ಈಜಿಪ್ಟ್ ವಾಯುಸೇನೆಯ ಮುಖ್ಯಸ್ಥರಾಗಿದ್ದ ಜನರಲ್ ಸುದ್ಕಿ ಮಹಮೂದ್ ಅವರು ಕೆಲವು ವರ್ಷಗಳ ಬಳಿಕ ಬಿಚ್ಚಿಟ್ಟ ಮಾಹಿತಿ ಅರಬ್ ಜಗತ್ತನ್ನು ನಡುಗಿಸಿ ಬಿಟ್ಟಿತು: ನಮ್ಮ ಮೇಲೆ ಆಕ್ರಮಣಕ್ಕೆ ಇಸ್ರೇಲ್ ಸಿದ್ಧವಾಗುತ್ತಿದೆ ಎಂಬ ಖಚಿತ ಮಾಹಿತಿ ನಮಗಿತ್ತು. ಅದಕ್ಕೆ ಮುನ್ನವೇ ಇಸ್ರೇಲ್ ಮೇಲೆ ಮುಗಿ ಬೀಳಲು ನಮ್ಮ ಯುದ್ಧ ವಿಮಾನಗಳು ಸಜ್ಜಾಗಿದ್ದವು. ಈ ವೇಳೆ, ಆ ಕಡೆಯಿಂದ ಆಕ್ರಮಣ ಆರಂಭವಾಗದೆ ನಮ್ಮ ಕಡೆಯಿಂದ ದಾಳಿ ಬೇಡ ಎಂಬ ಆದೇಶ ನಾಸಿರ್ ಅವರಿಂದ ಬಂತು. ನಾವು ಈ ರೀತಿ ಕಾದು ಕುಳಿತರೆ ನಮ್ಮ ವಾಯುಸೇನೆ ಮಾತ್ರವಲ್ಲ ನಮ್ಮ ಒಟ್ಟು ಸೈನಿಕ ಸಾಮರ್ಥ್ಯವೇ ಉಡುಗಿ ಹೋದೀತು ಎಂದು

ನಾನು ಎಷ್ಟು ಎಚ್ಚರಿಸಿದರೂ ಕೇಳುವವರಿರಲಿಲ್ಲ. ಮರುದಿನ ಇಸ್ರೇಲ್ ನಡೆಸಿದ ವ್ಯಾಪಕ ವಾಯುದಾಳಿಯಲ್ಲಿ ಕೆಲವೇ ಗಂಟೆಗಳ ಅವಧಿಯಲ್ಲಿ ನಮ್ಮ ವಾಯು ನೆಲೆಗಳಲ್ಲಿದ್ದ 298 ವಿಮಾನಗಳು ಧ್ವಂಸಗೊಂಡಿದ್ದವು.

ಇನ್ನಷ್ಟು ಕುತೂಹಲದ ಸಂಗತಿ ಏನೆಂದರೆ, ನಿಖರವಾಗಿ, ಇಸ್ರೇಲ್ ವಿಮಾನ ದಾಳಿ ಆರಂಭವಾಗುವ ಕೆಲವು ನಿಮಿಷಗಳ ಮುನ್ನ, ವಿಮಾನಗಳನ್ನು ದೂರದಿಂದ ಗುರುತಿಸಿ ಪ್ರತಿಕ್ರಮಗಳನ್ನು ಎಸಗುವುದಕ್ಕೆ ನೆರವಾಗುವ ಈಜಿಪ್ಟ್‌ನ ರಾಡಾರ್ ವ್ಯವಸ್ಥೆ ಸಂಪೂರ್ಣ ನಿಷ್ಕ್ರಿಯವಾಗಿತ್ತು. ಇದಕ್ಕೆ ನೀಡಲಾದ ಔಪಚಾರಿಕ ವಿವರಣೆ ಏನೆಂದರೆ, ಅದೇ ವೇಳೆ ಈಜಿಪ್ಟ್‌ನ ಯುದ್ಧ ಸಚಿವರು ಮತ್ತು ಕೆಲವು ಪ್ರಮುಖ ಸೇನಾಧಿಕಾರಿಗಳು, ಸಿನಾಯ್ ಪ್ರದೇಶದಲ್ಲಿ ನಿಯುಕ್ತ ಪಡೆಗಳ ವೈಮಾನಿಕ ಸಮೀಕ್ಷೆಗೆ ಹೋಗಿದ್ದರು. ತಮ್ಮ ರಾಡಾರ್‌ಗಳಲ್ಲಿ ಈ ವಿಮಾನಗಳನ್ನು ನೋಡಿ ಶತ್ರುಗಳ ವಿಮಾನಗಳೆಂಬ ತಪ್ಪು ತಿಳುವಳಿಕೆಯಿಂದ ಈಜಿಪ್ಟ್ ಪಡೆಗಳೇ ಅವುಗಳನ್ನು ಹೊಡೆದುರುಳಿಸುವ ಸಾಧ್ಯತೆ ಇತ್ತು. ಅದನ್ನು ತಪ್ಪಿಸಲು ರಾಡಾರ್‌ಗಳನ್ನು ನಿಷ್ಕ್ರಿಯಗೊಳಿಸಲಾಗಿತ್ತು. ಹೇಗಿದೆ, ಸಬೂಬು? ಇಂತಹ ಇನ್ನೂ ಅನೇಕ ನಿಗೂಢ ವೈಚಿತ್ರ್ಯಗಳು ಕ್ರಮೇಣ ಮುಂದೆ ಬಂದವು. ನಾಸಿರ್‌ರಂತಹ ಸಮರ್ಥ ನಾಯಕನ ಉಪಸ್ಥಿತಿಯಲ್ಲಿ ತಲೆದೋರಿದ ಈ ಬಗೆಯ ಆತ್ಮ ಘಾತಕ ನಿರ್ಧಾರ ಹಾಗೂ ಬೆಳವಣಿಗೆಗಳ ಹಿಂದೆ ಯಾವೆಲ್ಲ ಆಮಿಷ ಅಥವಾ ನಿರ್ಬಂಧಗಳಿದ್ದುವು ಎಂಬ ಬಗ್ಗೆ ಹಲವಾರು ವಾದಗಳು, ವಿವಾದಗಳು, ಊಹೆಗಳು ಇತ್ಯಾದಿಗಳೆಲ್ಲಾ ಇವೆ. ಅಮೆರಿಕ ಮತ್ತು ಸೋವಿಯತ್ ಒಕ್ಕೂಟದ ನಡುವೆ ಶೀತಲ ಸಮರ ಕಾವೇರಿದ್ದ ಆ ದಿನಗಳಲ್ಲಿ ಎಷ್ಟೋ ಮಹಾ ನಾಯಕರ ಮಹಾ ನಿರ್ಣಯಗಳೆಲ್ಲ ತತ್ವಾದರ್ಶಗಳು ಅಥವಾ ತಮ್ಮ ಜನರ ಹಿತಾಸಕ್ತಿಗಿಂತ ಹೆಚ್ಚಾಗಿ, ಸ್ವಾರ್ಥ, ಭ್ರಷ್ಟಾಚಾರ, ಬ್ಲ್ಯಾಕ್‌ಮೇಲ್ ಇತ್ಯಾದಿಗಳಿಂದ ಮತ್ತು ಶೀತಲ ಸಮರದ ಯಾವುದಾದರೊಂದು ಪಕ್ಷ ಅಥವಾ ಕೆಲವೊಮ್ಮೆ ಎರಡೂ ಪಕ್ಷಗಳಿಂದ ಪ್ರಭಾವಿತವಾಗಿರುತ್ತಿದ್ದವು ಎಂಬುದು ಮಾತ್ರ ಖಚಿತವಾಗಿತ್ತು.

ಮಧ್ಯಪ್ರಾಚ್ಯದ ವಿವಿಧ ಗಡಿಗೆರೆಗಳನ್ನು ಮಾತ್ರವಲ್ಲದೆ ಎಷ್ಟೋ ಪಕ್ಷ, ಸರಕಾರ, ಆಂದೋಲನ ಮತ್ತು ವ್ಯಕ್ತಿಗಳ ವರ್ಚಸ್ಸನ್ನು 67ರ ಯುದ್ಧವು ಧೂಳೀಪಟ ಗೊಳಿಸಿತ್ತು. ಆವರೆಗೆ ಇಸ್ರೇಲ್ ಕೈಯಿಂದ ಫೆಲೆಸ್ತೀನ್ ಅನ್ನು ಕಿತ್ತುಕೊಳ್ಳುವ ಮಾತುಗಳನ್ನಾಡುತ್ತಿದ್ದ ನಾಸಿರ್‌ರಂತಹ ನಾಯಕರೆಲ್ಲ, ತಮ್ಮಿಂದ ಇಸ್ರೇಲ್ ಕಬಳಿಸಿಕೊಂಡ ಸ್ವತಃ ತಮ್ಮ ಪ್ರದೇಶಗಳನ್ನು ಬಿಡಿಸಿಕೊಳ್ಳುವ ಚಿಂತೆಯಲ್ಲಿ ಮಗ್ನರಾಗಿ ಬಿಟ್ಟರು. ಆಕ್ರಮಿತ ಪ್ರದೇಶಗಳ ಸುತ್ತ ಮುತ್ತ ಇಸ್ರೇಲ್ ಮತ್ತು ಈಜಿಪ್ಟ್ ನಡುವೆ ಹಲವು ಘರ್ಷಣೆಗಳು ನಡೆದವು. ಈ ಉದ್ವಿಗ್ನತೆಯನ್ನು ಶಮನಗೊಳಿಸುವ ಹೆಸರಲ್ಲಿ 1970ರ ಜೂನ್ ತಿಂಗಳಲ್ಲಿ ಅಮೆರಿಕದ ಸೆಕ್ರೆಟರಿ

ಆಫ್ ಸ್ಟೇಟ್, ರೋಜರ್ ವಿಲಿಯಮ್ಸ್ ಅವರು ಮುಂದಿಟ್ಟ ಯುದ್ಧ ವಿರಾಮ ಪ್ರಸ್ತಾವಕ್ಕೆ ಆ ವರ್ಷ ಆಗಸ್ಟ್ ತಿಂಗಳಲ್ಲಿ ನಾಸಿರ್ ತಮ್ಮ ನಿಶ್ಶರ್ತ ಒಪ್ಪಿಗೆ ನೀಡಿದರು. ಆಗ **"**ಫೆಲೆಸ್ತೀನ್ ಜನತೆಯೇ ಅಂತಹದೇನಾದರೂ ಈ ಲೋಕದಲ್ಲಿ ಇದೆಯೇ?**"** ಎಂದು ಒಂದು ಹಂತದಲ್ಲಿ ಪ್ರಶ್ನಿಸಿದ್ದ ಗೋಲ್ಡಾ ಮೀರ್, ಇಸ್ರೇಲ್‌ನ ಪ್ರಧಾನಿಯಾಗಿದ್ದರು. ಈ ರೀತಿ, ರೋಜರ್ಸ್ ಯೋಜನೆಗೆ ಸಮ್ಮತಿ ಮತ್ತು ಆ ಮೂಲಕ ಇಸ್ರೇಲ್‌ಗೆ ಹಾಗೂ 67ರ ಪೂರ್ವದ ಇಸ್ರೇಲ್ ಗಡಿಗಳಿಗೆ ಪರೋಕ್ಷ ಮಾನ್ಯತೆ ನೀಡಿದ್ದು, ನಾಸಿರ್‌ರ ಬದುಕಿನ ಕೊನೆಯ ದೊಡ್ಡ ಎಡವಟ್ಟಾಗಿತ್ತು. ಮುಂದಿನ ವರ್ಷ ಅವರು ಈ ಲೋಕವನ್ನೇ ಬಿಟ್ಟು ಹೋದರು. ಅವರ ವ್ಯಕ್ತಿತ್ವ ಮತ್ತು ಅದ್ಭುತ ಸಾಮರ್ಥ್ಯಗಳು ಅರಬ್ ವಲಯಗಳಲ್ಲಿ ಮತ್ತು ಅವರನ್ನು ಬಲ್ಲ ಎಲ್ಲ ವಲಯಗಳಲ್ಲಿ ಇಂದು ಕೂಡಾ ಚರ್ಚೆಯಲ್ಲಿವೆ.

❖ ❖ ❖

# 14

# ಅನ್ವರ್ ಸಾದಾತ್ ತಂದಿತ್ತ ಕ್ಷಣಿಕ ಉನ್ಮಾದ ಮತ್ತು ಶಾಶ್ವತ ನಿರಾಶೆ

ಈಜಿಪ್ಟ್, ತುಂಬಾ ಪ್ರಾಚೀನ ಇತಿಹಾಸವಿರುವ ದೇಶ. ಅದು ಬಹುಕಾಲದಿಂದ, ಮಾತ್ರವಲ್ಲ, ಆಧುನಿಕ ಯುಗದಲ್ಲೂ ಸಾಹಿತ್ಯ, ಮಾಧ್ಯಮ, ರಾಜಕೀಯ, ವೈಚಾರಿಕತೆ, ಹೀಗೆ ವಿವಿಧ ರಂಗಗಳಲ್ಲಿ ಅರಬ್ ಜನತೆಗೆ ನಾಯಕತ್ವ ನೀಡುತ್ತಾ ಬಂದಿದೆ. ಆದರೆ 1967 ರ ನಂತರದ ಬೆಳವಣಿಗೆಗಳು, ಫೆಲೆಸ್ತೀನ್, ಈಜಿಪ್ಟ್ ಸಮೇತ ಸಮಸ್ತ ಅರಬ್ ಜನತೆಯನ್ನು ತೀವ್ರ ಹತಾಶ ಸ್ಥಿತಿಗೆ ತಳ್ಳಿದವು.

1970ರಲ್ಲಿ ಜಮಾಲ್ ಅಬ್ದುನ್ನಾಸಿರ್ ನಿಧನರಾದಾಗ ಅರಬ್ ನಾಡಿನ ಇತ್ತೀಚಿನ ಮಹಾನಷ್ಟಗಳೆಲ್ಲಾ ವ್ಯಾಪಕವಾಗಿ ಚರ್ಚಿತವಾದವು. ಜನರು ನಾಸಿರ್‌ರ ಬದುಕನ್ನು ಚರ್ಚಿಸುವಾಗಲೆಲ್ಲ, ಆ ಮಟ್ಟದ ಸಮರ್ಥ ನಾಯಕರೊಬ್ಬರು ತನ್ನ ಬದುಕಿನ ತೀರಾ ಕೊನೆಯ ದಿನಗಳಲ್ಲಿ ಆ ರೀತಿ ಸ್ವತಃ ತನ್ನನ್ನು ಕಳೆದುಕೊಂಡದ್ದೇಕೆ? ಎಂಬ ಮುಜುಗರದ ಪ್ರಶ್ನೆ ಅವರನ್ನು ಕಾಡುತ್ತಿತ್ತು. ಇಂತಹ ವೇಳೆ, ನಾಸಿರ್‌ಗೆ ಪರ್ಯಾಯ ಎಂಬಂತೆ ಉದಯಿಸಿ ಬಂದ ನಾಯಕ ಅನ್ವರ್ ಸಾದಾತ್. ಅವರು ಈಜಿಪ್ಟ್‌ನ ಅಧ್ಯಕ್ಷರಾದಾಗ ಮತ್ತೆ ಈಜಿಪ್ಟ್‌ನಲ್ಲಿ, ಮಾತ್ರವಲ್ಲ, ಫೆಲೆಸ್ತೀನ್ ಸಹಿತ ಒಟ್ಟು ಅರಬ್ ನಾಡಿನಲ್ಲಿ ಒಂದು ಹೊಸ ಆಶಾವಾದ ಚಿಗುರಿತ್ತು.

ತಮ್ಮಿಂದ ಜನರು ಬಹಳಷ್ಟನ್ನು ನಿರೀಕ್ಷಿಸುತ್ತಿದ್ದಾರೆ ಎಂಬ ಅರಿವು ಸಾದಾತ್‌ರಿಗಿತ್ತು. ಆದರೆ, ಫೆಲೆಸ್ತೀನ್, ಜೆರುಸಲೇಮ್ ಇತ್ಯಾದಿಗಳನ್ನು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ, 67ರ ಯುದ್ಧದಲ್ಲಿ ಇಸ್ರೇಲ್‌ನವರು ಈಜಿಪ್ಟ್ ಕೈಯಿಂದ ಕಿತ್ತುಕೊಂಡಿದ್ದ ಸುಮಾರು 61 ಸಾವಿರ ಚದರ ಕಿ.ಮೀ. ವಿಸ್ತಾರದ ನಾಡುಗಳನ್ನು ಇಸ್ರೇಲ್ ಕಪಿ ಮುಷ್ಟಿಯಿಂದ ಬಿಡಿಸಿಕೊಳ್ಳುವುದು ಹೇಗೆ? ಎಂಬುದು ಸಾದಾತ್ ಮುಂದಿನ ಪ್ರಥಮ ತುರ್ತು ಸವಾಲಾಗಿತ್ತು. ಸ್ವತಃ ಈಜಿಪ್ಟ್‌ನಲ್ಲಿ ಮತ್ತು ಅರಬ್ ವಲಯಗಳಲ್ಲಿ ತಕ್ಕ ಮಟ್ಟದ ಗೌರವವಾದರೂ ಸಿಗಬೇಕಿದ್ದರೆ ಆ ಗುರಿ ಸಾಧನೆ ಸಾದಾತ್‌ರಿಗೆ ಅನಿವಾರ್ಯವಾಗಿತ್ತು. ಸ್ವತಃ ತನ್ನ ಭವಿಷ್ಯದ ದೃಷ್ಟಿಯಿಂದ ಅಮೆರಿಕದ ಆಶೀರ್ವಾದ ತನಗೆ ಅನಿವಾರ್ಯ ಎಂದು ಅವರು ನಂಬಿದ್ದರು. ಅದೇ ವೇಳೆ, ಈಜಿಪ್ಟ್ ದೇಶದ ಅಸ್ಮಿತೆ, ಅರಬ್ ರಾಷ್ಟ್ರವಾದ ಇತ್ಯಾದಿ ವಿಷಯಗಳಲ್ಲಿ ನಾಸಿರ್‌ರ ಧಾಟಿಯಲ್ಲೇ ಮಾತನಾಡುವ ಮೂಲಕ ಸಾದಾತ್ ತನ್ನ ದೇಶದಲ್ಲಿ ಭಾಷಣ ಪ್ರಿಯ ಅಭಿಮಾನಿಗಳ ಸಂಖ್ಯೆಯನ್ನು ಹೆಚ್ಚಿಸಿಕೊಂಡರು. ತತ್ವ ಸಿದ್ಧಾಂತಗಳಿಗೆ ಸಂಬಂಧಿಸಿದ ಯಾವುದೇ ವಾದವನ್ನು ಸಾದಾತ್ ಹೆಚ್ಚು ಗಂಭೀರವಾಗಿ ತೆಗೆದುಕೊಳ್ಳುತ್ತಿರಲಿಲ್ಲ. ಆದರೆ ಅವರು ಅಧಿಕಾರಕ್ಕೆ ಬಂದೊಡನೆ, ಸಾಂಸ್ಕೃತಿಕವಾಗಿ ಪಶ್ಚಿಮದ ಕಡೆಗೆ ಮತ್ತು ಆರ್ಥಿಕ ನೀತಿಗಳಲ್ಲಿ ಸೋವಿಯತ್‌ನ ಸಮಾಜವಾದದ ಕಡೆಗೆ ವಾಲಿದ್ದ ನಾಸಿರ್ ಕಾಲದ ಧೋರಣೆ, ಯೋಜನೆಗಳನ್ನೆಲ್ಲ ತಿದ್ದಿ ಈಜಿಪ್ಟನ್ನು ಮತ್ತೆ ಬಂಡವಾಳಶಾಹಿ ಅಮೆರಿಕದ ಕಡೆಗೆ ದೂಡುವ ಶ್ರಮವನ್ನು ಆರಂಭಿಸಿದರು. ನಿಜವಾಗಿ, ಅಮೆರಿಕದ ಮಡಿಲು ಸೇರಲು ಅವರಿಟ್ಟ ಸದ್ದಿಲ್ಲದ ಹಜ್ಜೆಗಳು ಬಹಳ ಕ್ರಮಬದ್ಧವಾಗಿದ್ದವು. ನಾಸಿರ್ ಕಾಲದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಲಹೆಗಾರರಾಗಿ 20,000 ಸೋವಿಯತ್ ಅಧಿಕಾರಿಗಳು ಈಜಿಪ್ಟ್‌ನಲ್ಲಿ ನಿಯುಕ್ತರಾಗಿದ್ದರು. ಸಾದಾತ್, ಅವರೆಲ್ಲರನ್ನೂ 1972ರಲ್ಲಿ ಮರಳಿ ಮನೆಗೆ ಕಳಿಸಿ ಬಿಟ್ಟರು. ಅದರ ಬೆನ್ನಿಗೇ, ಅಮೆರಿಕ ಜೊತೆ ಬಾಂಧವ್ಯ ವೃದ್ಧಿಯ ಹಲವು ಪ್ರಮುಖ ಕ್ರಮಗಳನ್ನು ಕೈಗೊಂಡರು. ತಾನು ಇತ್ತೀಚೆಗೆ ಆಕ್ರಮಿಸಿಕೊಂಡಿರುವ ಈಜಿಪ್ಟ್‌ಗೆ ಸೇರಿದ ಪ್ರದೇಶಗಳಲ್ಲಿ ಇಸ್ರೇಲ್ ನಡೆಸುತ್ತಿರುವ ಕಿಡಿಗೇಡಿ ಕೃತ್ಯಗಳ ಬಗ್ಗೆ ಸಾದಾತ್ ನೇರವಾಗಿ ಶ್ವೇತ ಭವನಕ್ಕೆ ವರದಿಗಳನ್ನು ರವಾನಿಸ ತೊಡಗಿದರು. ಗುಪ್ತವಾಗಿ ಸಿರಿಯಾದ ಹಾಫಿಝ್ ಅಲ್ ಅಸದ್ ಜೊತೆಗೂ ಮಾತುಕತೆಗಳ ಸರಣಿಯನ್ನು ಆರಂಭಿಸಿದರು. ಅತ್ತ ಅಮೆರಿಕದಲ್ಲೂ ಇಸ್ರೇಲನ್ನು ಹದ್ದುಬಸ್ತಿನಲ್ಲಿಡಬೇಕೆಂಬ ಬೇಡಿಕೆ ಹೆಚ್ಚತೊಡಗಿತ್ತು. 67ರ ಯುದ್ಧದಲ್ಲಿ ಕೇವಲ ಆರೇ ದಿನದಲ್ಲಿ ಅಕ್ಕಪಕ್ಕದ ಎಲ್ಲ ನೆಲಗಳನ್ನೂ ಕಬಳಿಸಿ ತನ್ನ ಗಾತ್ರವನ್ನು ಸರ್ವತೋಮುಖವಾಗಿ ಬಹುತೇಕ ನಾಲ್ಕು ಪಟ್ಟು ಹೆಚ್ಚಿಸಿಕೊಂಡಿದ್ದ ಇಸ್ರೇಲ್, ಪ್ರಾದೇಶಿಕ ಶಾಂತಿಯ ಕುರಿತಂತೆ ಅಮೆರಿಕದ ಸಲಹೆಗಳನ್ನು ಕಡೆಗಣಿಸತೊಡಗಿತ್ತು.

1973 ಅಕ್ಟೋಬರ್ 6ರಂದು ಹಠಾತ್ತನೆ ಈಜಿಪ್ಟ್ ಮತ್ತು ಸಿರಿಯಾದ ಸೇನೆಗಳು ಎರಡು ಕಡೆಗಳಿಂದ ಇಸ್ರೇಲ್ ಮೇಲೆ ಯುದ್ಧ ಸಾರಿದವು. ಮೂರು ವಾರಗಳ ಕಾಲ ನಡೆದ ಈ ಯುದ್ಧದ ಮೊದಲ ಹಂತದಲ್ಲಿ ಈಜಿಪ್ಟ್ ಪಡೆಗಳು ಸುಯೆಜ್ ಕಾಲುವೆಯನ್ನು ದಾಟಿ ಹೋಗಿ ಸಾಧಿಸಿದ ಮುನ್ನಡೆಯನ್ನು ಕಂಡು ಹಲವು ಕಡೆ ಭಾರೀ ಸಂಭ್ರಮೋಲ್ಲಾಸದ ವಾತಾವರಣ ಮೂಡಿತ್ತು. ರಾತ್ರಿ ಬೆಳಗಾಗುವ ಹೊತ್ತಿಗೆ ಅನ್ವರ್ ಸಾದಾತ್ ಅರೇಬಿಯಾದ ದಂತಕತೆಯಾಗಿ ಬಿಟ್ಟರು. ಈ ಹಿಂದೆ ಪದೇ ಪದೇ ಇಸ್ರೇಲ್ ಮಾತ್ರ ಜಯಿಸುವುದನ್ನು ಕಂಡು ರೋಸಿ ಹೋಗಿದ್ದ ಹಲವು ಅರಬ್, ಮುಸ್ಲಿಮ್ ಮತ್ತು ಕಮ್ಯುನಿಸ್ಟ್ ಸಮಾಜಗಳಲ್ಲಿ ಇನ್ನೇನು ಇಸ್ರೇಲ್ ಕತೆ ಮುಗಿದೇ ಹೋಯಿತು ಎಂಬಂತಹ ವಿಜಯೋನ್ಮಾದ ಕಂಡು ಬಂತು. ಇಸ್ರೇಲ್‌ಗೆ ಅಮೆರಿಕದ ಸೈನಿಕ ನೆರವು ತಲುಪಲು ತಡವಾದಾಗಲಂತೂ ಈ ಉನ್ಮಾದ ತಾರಕಕ್ಕೇರಿ ಬಿಟ್ಟಿತು. ಇಸ್ರೇಲ್ ಅನ್ನು ಹಿಮ್ಮೆಟ್ಟಿಸಿ ಮುನ್ನಡೆಯ ತೊಡಗಿದ್ದ ಈಜಿಪ್ಟ್‌ನ 8 ಲಕ್ಷ ಮತ್ತು ಸಿರಿಯಾದ 1.5 ಲಕ್ಷ ಯೋಧರಿಗೆ ನೆರವಾಗಲು ಸೌದಿ ಸರಕಾರ ತನ್ನ 3 ಸಾವಿರ ಪಡೆಗಳ ತುಕಡಿಯೊಂದನ್ನು ಕಳಿಸಿಕೊಟ್ಟಿತು. ಇರಾಕ್, ಲಿಬಿಯಾ, ಜೋರ್ಡನ್, ಮೊರೊಕ್ಕೋ, ಕುವೈತ್ ಮುಂತಾದ ದೇಶಗಳು ಸೇನೆ, ಆಯುಧ ಮತ್ತಿತರ ನೆರವುಗಳನ್ನೂ ಕಳಿಸಿದವು. ಮಾತ್ರವಲ್ಲ, ಫಿಡೆಲ್ ಕಾಸ್ಟ್ರೋ ಪ್ರಧಾನಿಯಾಗಿದ್ದ ಕ್ಯೂಬಾದಿಂದಲೂ ಎರಡು ಯುದ್ಧ ಟ್ಯಾಂಕ್‌ಗಳು, ಪಡೆಗಳು ಹಾಗೂ ಸುಮಾರು 4 ಸಾವಿರ ಯೋಧರನ್ನು ಹೊತ್ತು ಹೊರಟವು.

ಕೆಲವೇ ದಿನಗಳಲ್ಲಿ ಚಿತ್ರ ಬದಲಾಯಿತು. ಇಸ್ರೇಲ್ ಸಾವರಿಸಿಕೊಂಡು ಪ್ರತಿದಾಳಿ ಆರಂಭಿಸಿತು. ಸೋವಿಯತ್ ಪಡೆಗಳು ಈಜಿಪ್ಟ್ ನೆರವಿಗೆ ಬರುತ್ತಿವೆ ಎಂಬ ಸುದ್ದಿ ಬಂದೊಡನೆ, ಆವರೆಗೆ ತುಸು ನಿಧಾನವಾಗಿದ್ದ ಅಮೆರಿಕ, ಚುರುಕಾಗಿ ಬಿಟ್ಟಿತು. ತೈಲ ದೊರೆಗಳ ಆರ್ಭಟ, ಬೆದರಿಕೆ ಇತ್ಯಾದಿಗಳನ್ನು ಮಾತ್ರವಲ್ಲ, ಸ್ವತಃ ತನ್ನ ದೇಶದ ಹಿತಾಸಕ್ತಿಗಳನ್ನೂ ಕಡೆಗಣಿಸಿ ತುರ್ತು ವಿಧಾನಗಳ ಮೂಲಕ ಇಸ್ರೇಲ್‌ಗೆ ಎಲ್ಲ ವಿಧದ ನೆರವನ್ನು ತಲುಪಿಸಿತು. ಕೇವಲ ಹತ್ತು ದಿನಗಳಲ್ಲಿ ಯುದ್ಧದ ದಿಕ್ಕು ಬದಲಾಯಿತು. ಮೂರು ವಾರಗಳಲ್ಲಿ ಮುಗಿದೂ ಹೋಯಿತು. ಸ್ಕೋರ್ ಬೋರ್ಡ್ ನೋಡಿದಾಗ, ಈಜಿಪ್ಟ್ ಸೇನೆ 6 ವರ್ಷಗಳ ಹಿಂದೆ ತಾನು ಕಳೆದುಕೊಂಡಿದ್ದ ಒಂದು ದೊಡ್ಡ ಭೂಭಾಗವನ್ನು ಇಸ್ರೇಲ್ ಕೈಯಿಂದ ಭಾಗಶಃ ಕಿತ್ತುಕೊಂಡಿತ್ತು. ಅತ್ತ ಇಸ್ರೇಲ್, ಈಜಿಪ್ಟ್‌ನ ಸುಮಾರು 1,600 ಚದರ ಕಿಲೋ ಮೀಟರ್ ಜಮೀನನ್ನು ಆಕ್ರಮಿಸಿಕೊಂಡು, ರಾಜಧಾನಿ ಕೈರೋದಿಂದ ಕೇವಲ 100 ಕಿ.ಮೀ. ಮಾತ್ರ ದೂರ ಇರುವಲ್ಲಿಗೆ ತಲುಪಿತ್ತು. ಮತ್ತೊಂದೆಡೆ ಇಸ್ರೇಲ್ ಪಡೆಗಳು ಸಿರಿಯಾದ 500 ಚದರ ಕಿ.ಮೀ. ಪ್ರದೇಶವನ್ನು ಆಕ್ರಮಿಸಿಕೊಂಡು, ರಾಜಧಾನಿ ಡೆಮಾಸ್ಕಸ್‌ನಿಂದ ಕೇವಲ 30 ಕಿ.ಮೀ. ದೂರದವರೆಗೂ ಬಂದು

ಬಿಟ್ಟಿದ್ದವು. ಹೀಗೆ ಈ ಯುದ್ಧದಲ್ಲಿ ಈಜಿಪ್ಟ್ ಜನತೆಗೆ ಸೀಮಿತ ವಿಜಯದ ಭ್ರಮೆಯೊಂದು ಸಿಕ್ಕಿತು. ಅನ್ವರ್ ಸಾದಾತ್‌ರಿಗೂ ದೊಡ್ಡ ನಷ್ಟವೇನೂ ಆಗಲಿಲ್ಲ. ಸಾಹಸಿ, ಪ್ರತಾಪಿ ಎಂದೆಲ್ಲಾ ಅವರನ್ನು ಹೊಗಳುವವರ ಸಂಖ್ಯೆ ಹೆಚ್ಚಿತು. ಅಮೆರಿಕದ ಷರತ್ತುಗಳ ಪ್ರಕಾರ ಯುದ್ಧ ವಿರಾಮಕ್ಕೆ ಸಮ್ಮತಿಸಿದ್ದರಿಂದ ಅಲ್ಲಿಯೂ ಸಾದಾತ್ ಆಪ್ತರ ಸಂಖ್ಯೆ ಹೆಚ್ಚಿತು. ನಿಜವಾಗಿ, ದೂರಗಾಮಿ ಪರಿಣಾಮಗಳ ದೃಷ್ಟಿಯಿಂದ ಇದು ಇಸ್ರೇಲ್ ಪಾಲಿಗೆ ವರದಾನವಾಯಿತು. ಅಮೆರಿಕ ಮತ್ತು ಯುರೋಪ್‌ಗಳಲ್ಲಿ ಎಲ್ಲೆಂದರಲ್ಲಿ ಇಸ್ರೇಲ್ ಪರವಾಗಿ ಭಾರೀ ಸಹತಾಪದ ಅಲೆಗಳು ಎದ್ದವು. 'ಸಭ್ಯರ ನಡುವೆ ಒಬ್ಬ ಕಿಡಿಗೇಡಿ' ಎಂಬ ಅದರ ಇಮೇಜು, 'ಕಿಡಿಗೇಡಿಗಳ ನಡುವೆ ಒಬ್ಬ ಸಭ್ಯ' ಎನ್ನುವಷ್ಟು ಬದಲಾಯಿತು. ಇಸ್ರೇಲ್‌ಗೆ ಬೇಕಿದ್ದುದೂ ಇದುವೇ. ಎಲ್ಲವನ್ನೂ ಕಳೆದುಕೊಂಡ ಸಿರಿಯಾದ ಹಾಫಿಝ್ ಅಸದ್‌ರಿಗೆ ಮಾತ್ರ, ತನ್ನನ್ನು ಎಲ್ಲರೂ ವಂಚಿಸಿದರೆಂದು ರೋದಿಸುವುದು ಬಿಟ್ಟರೆ ಬೇರಾವ ದಾರಿಯೂ ಉಳಿಯಲಿಲ್ಲ. ಫೆಲೆಸ್ತೀನಿಗಳು, ತಮ್ಮ ಹೆಸರಲ್ಲಿ ನಡೆಯುತ್ತಿದ್ದ ಈ ಎಲ್ಲ ಕಾರ್ಯಾಚರಣೆಗಳುದ್ದಕ್ಕೂ ತಮಗೆ ಯಾವುದೇ ಪಾತ್ರವಿಲ್ಲದೆ, ಎಲ್ಲದಕ್ಕೂ ಕೇವಲ ಮೂಕ ಸಾಕ್ಷಿಗಳಾಗಿದ್ದರು.

**ಸಾದಾತ್ ಇಸ್ರೇಲ್‌ನಲ್ಲಿ**

ಅರಬ್ ಜನತೆಗೆ ಬದುಕು ಬೋರಾಗುವುದಿಲ್ಲ. ಅಚ್ಚರಿಗಳ ಸರಮಾಲೆ ಅವರ ಮುಂದೆ ನಿತ್ಯವೂ ತೆರೆದುಕೊಳ್ಳುತ್ತಲೇ ಇರುತ್ತದೆ. 1977 ನವೆಂಬರ್ 19 ರಂದು ಹಠಾತ್ತನೆ ಈಜಿಪ್ಟ್ ಅಧ್ಯಕ್ಷ ಅನ್ವರ್ ಸಾದಾತ್ ಇಸ್ರೇಲ್ ರಾಜಧಾನಿ ಟೆಲ್ ಅವೀವ್‌ನಲ್ಲಿ ಪ್ರತ್ಯಕ್ಷರಾದರು. ಈ ರೀತಿ ಒಬ್ಬ ಅರಬ್ ಪ್ರಮುಖ ಇಸ್ರೇಲ್ ನೆಲಕ್ಕೆ ಆಗಮಿಸಿದ್ದು ಇಸ್ರೇಲ್‌ನ ಇತಿಹಾಸದ ಮೊದಲ ಘಟನೆಯಾಗಿತ್ತು. ನಾಲ್ಕು ವರ್ಷಗಳ ಹಿಂದಷ್ಟೇ ತಮ್ಮ ಮೇಲೆ ಮುಗಿ ಬೀಳುವುದಕ್ಕೆ ದೊಡ್ಡ ದಂಡೊಂದನ್ನು ತಂದಿದ್ದ ವ್ಯಕ್ತಿ ಇದೀಗ ಅತಿಥಿಯಾಗಿ ತಮ್ಮ ಮನೆಬಾಗಿಲಿಗೆ ಬಂದುದನ್ನು ಕಂಡು ಇಸ್ರೇಲಿಗಳಿಗೂ ರೋಮಾಂಚನವಾಯಿತು. ತಮ್ಮ ಅಸ್ತಿತ್ವಕ್ಕೆ ಅಧಿಕೃತ ಮಾನ್ಯತೆ ನೀಡಬೇಕೆಂಬ ಅವರ ಬಹುಕಾಲದ ಬೇಡಿಕೆಯು ಈ ಮೂಲಕ ಈಡೇರಿತ್ತು. ನಿಜವಾಗಿ ಈ ಭೇಟಿಯ ಮೂಲಕ ಅನ್ವರ್ ಸಾದಾತ್ ಹಲವು ದೊಡ್ಡ ಬೇಲಿಗಳನ್ನು ಹಾರಿದ್ದರು. ಮುಖ್ಯವಾಗಿ, ಎರಡು ವಿಷಯಗಳಲ್ಲಿ ಎಲ್ಲ ಅರಬ್ ದೇಶಗಳ ಮಧ್ಯೆ ಒಮ್ಮತವಿತ್ತು. 1. ಅರಬ್ ನೆಲದ ಯಾವುದೇ ಭಾಗ ಇಸ್ರೇಲ್ ವಶದಲ್ಲಿರುವ ತನಕ ಇಸ್ರೇಲ್‌ಗೆ ಮಾನ್ಯತೆ ನೀಡುವ ಅಥವಾ ಅದರ ಜೊತೆ ನೇರ ಮಾತುಕತೆ ನಡೆಸುವ ಪ್ರಶ್ನೆಯೇ ಇಲ್ಲ. 2. ಒಂದು ವೇಳೆ ಮಾತುಕತೆಯ ಅನಿವಾರ್ಯತೆ ತಲೆದೋರಿದರೂ ಅದನ್ನು ಎಲ್ಲ ಅರಬ್ ದೇಶಗಳು ಸಂಯುಕ್ತವಾಗಿ ನಡೆಸಬೇಕು,

ಯಾವುದೇ ಒಂದು ದೇಶ ಪ್ರತ್ಯೇಕ ಮಾತುಕತೆ ನಡೆಸಬಾರದು. ಸಾದಾತ್ ಈ ಎರಡೂ ನಿಯಮಗಳನ್ನು ಬಹಿರಂಗವಾಗಿ ಮುರಿದರು. ಅವರ ಈ ಉಲ್ಲಂಘನೆ ಇಸ್ರೇಲ್ ಮತ್ತು ಅದರ ಪೋಷಕರ ಪಾಲಿಗೆ ಹಲವು ದೊಡ್ಡ ವಿಜಯಗಳ ಭಂಡಾರವಾಗಿತ್ತು. ಅದು ಅರಬ್ ಐಕ್ಯ ಎಂಬ ಭ್ರಮೆಯನ್ನು ನೆಲಕಚ್ಚಿಸಿತ್ತು. ಅರಬ್ ಜಗತ್ತಿನ ಅತ್ಯಂತ ಶಕ್ತ ದೇಶವು ಅರಬ್ ಪಾಳಯವನ್ನು ಬಿಟ್ಟು ತೆರಳಿದರೆ ಇಸ್ರೇಲ್‌ಗೆ ಅದಕ್ಕಿಂತ ದೊಡ್ಡ ಹಬ್ಬ ಏನಿದೆ? ಇಸ್ರೇಲ್ ಸಂಸತ್ತು ಕನೆಸ್ಸೆಟ್‌ನಲ್ಲಿ ತುಂಬು ಸದನವನ್ನುದ್ದೇಶಿಸಿ ಮಾತನಾಡಿದ ಸಾದಾತ್ ಹೇಳಿದರು: "ಇಂದು, ನಾವೆಲ್ಲಾ ಒಂದು ಹೊಸ ಬದುಕನ್ನು ರೂಪಿಸೋಣ ಮತ್ತು ಶಾಂತಿಯನ್ನು ಸ್ಥಾಪಿಸೋಣ ಎಂಬ ಗಟ್ಟಿಯಾದ ಸಂಕಲ್ಪದೊಂದಿಗೆ ನಾನು ನಿಮ್ಮ ಬಳಿಗೆ ಬಂದಿದ್ದೇನೆ. ದೇವರದ್ದಾದ ಈ ಭೂಮಿಯಲ್ಲಿ ಇರುವ ಮುಸ್ಲಿಮರು, ಕ್ರೈಸ್ತರು ಯಹೂದಿಗಳೆಲ್ಲಾ, ಅಂದರೆ ನಾವೆಲ್ಲಾ, ಒಬ್ಬ ದೇವರನ್ನು ಪೂಜಿಸುವವರು, ಒಬ್ಬ ದೇವರ ಹೊರತು ಬೇರೆ ಯಾರನ್ನೂ ಪೂಜಿಸದವರು ನಾವು."

ಈ ರೀತಿ ಮೊನ್ನೆಮೊನ್ನೆ ತಾನೇ ತಮ್ಮ ವಿರುದ್ಧ ಯುದ್ಧನಿರತನಾಗಿದ್ದ ವ್ಯಕ್ತಿ ಇಂದು ಹಠಾತ್ತನೆ ತಮ್ಮ ಸಂಸತ್ತಿನಲ್ಲಿ ನಿಂತು ತಮಗೆ ಉಪದೇಶ ನೀಡುತ್ತಿರುವುದು ಇಸ್ರೇಲಿಗಳಿಗೂ ನಂಬಲಾಗದ ಅದ್ಭುತವಾಗಿತ್ತು. ಈ ನಾಟಕೀಯ ಬೆಳವಣಿಗೆಯಿಂದಾಗಿ ಪಶ್ಚಿಮದಲ್ಲಂತೂ ಸಾದಾತ್ ಎಲ್ಲೆಡೆ ಎಲ್ಲರ ಕಣ್ಮಣಿಯಾಗಿ ಬಿಟ್ಟರು. ಇಸ್ರೇಲ್ ಸಂಸತ್ತಿಗೆ ಭೇಟಿ ನೀಡುವ ಮುನ್ನ ಸಾದಾತ್ ಜೆರುಸಲೇಮ್‌ನು ಮಸ್ಜಿದ್ ಅಲ್ ಅಕ್ಸಾದಲ್ಲಿ ನಮಾಝ್ ಸಲ್ಲಿಸಿದ್ದು ಮುಸ್ಲಿಮರ ಪಾಲಿಗೆ ದೊಡ್ಡ ಸುದ್ದಿಯಾಯಿತು. ಅವರು ಹೋಲೀ ಸೆಫಲ್ಚರ್ ಚರ್ಚಿಗೆ ಮತ್ತು 'ಯದ್ ವಾಶೆಮ್' ಎಂಬ ಹೋಲೋಕಾಸ್ಟ್ ಸ್ಮಾರಕಕ್ಕೆ ಭೇಟಿ ನೀಡಿದ್ದು ಕ್ರಮವಾಗಿ ಕ್ರೈಸ್ತರಿಗೆ ಮತ್ತು ಯಹೂದಿಗಳಿಗೆ ನೆಮ್ಮದಿ ತಂದಿತು. ಇಸ್ರೇಲಿಗಳು ಎಷ್ಟು ಸಂಶಯಿಸಿದರೂ ಅಮೆರಿಕ ಅಧ್ಯಕ್ಷ ಜಿಮ್ಮಿ ಕಾರ್ಟರ್‌ರಿಗೆ, ಸಾದಾತ್ ನಮ್ಮ ನಂಬಿಕೆಗೆ ಅರ್ಹ ಎಂಬ ವಿಶ್ವಾಸ ಮೂಡಿತು. ಅರಬ್ ಮತ್ತು ಮುಸ್ಲಿಮ್ ಜಗತ್ತಿನಲ್ಲಿ ಒಂದು ವರ್ಗವು ಇದನ್ನು ಸ್ವಾಗತಿಸಿದರೆ ಇನ್ನೊಂದು ದೊಡ್ಡ ವರ್ಗವು ಇದನ್ನು ಒಂದು ಅಕ್ಷಮ್ಯ ದ್ರೋಹವೆಂದು ಕರೆಯಿತು.

ಅದೆಷ್ಟೋ ಮಂದಿ, ಸಾದಾತ್ ಅವರ 1970 ರಿಂದ 1977 ರವರೆಗಿನ ವಿವಿಧ ನಿಗೂಢ ನಡೆಗಳನ್ನು ವಿಸ್ಮಯದಿಂದ ನೋಡುತ್ತಾ ಆ ನಡೆಗಳ ಹಿಂದಿನ ಮರ್ಮವೇನು ಎಂಬುದನ್ನು ಅರಿಯಲು ಹೆಣಗಾಡುತ್ತಿದ್ದರು. ಅವರ ಎಲ್ಲ ಸಂಶಯಗಳನ್ನು ನಿವಾರಿಸುವ ಘಟನೆ ಮುಂದಿನ ವರ್ಷ ನಡೆಯಿತು.

1978 ಸೆಪ್ಟಂಬರ್ 17 ರಂದು ಜಿಮ್ಮಿ ಕಾರ್ಟರ್ ಸಮಕ್ಷಮ, ಅನ್ವರ್ ಸಾದಾತ್ ಮತ್ತು ಇಸ್ರೇಲ್ ಪ್ರಧಾನಿ ಮೆನಚೇಮ್ ಬೆಗಿನ್, ಕ್ಯಾಂಪ್ ಡೇವಿಡ್

ಒಂದು ಐತಿಹಾಸಿಕ ಒಪ್ಪಂದಕ್ಕೆ ಸಹಿ ಮಾಡಿದರು. ಇದರಿಂದ ಪಶ್ಚಿಮದಲ್ಲಿ, ಅನ್ವರ್ ಸಾದಾತ್ ಭಾರೀ ದೂರದೃಷ್ಟಿ ಉಳ್ಳ ಧೀರ ನಾಯಕ ಎನಿಸಿಕೊಂಡರು. ಮುಂದಿನ ವರ್ಷ 1979ರಲ್ಲಿ ಸಾದಾತ್ ಮತ್ತು ಬೆಗಿನ್ ಇವರಿಬ್ಬರಿಗೆ ಜಂಟಿ ನೊಬೆಲ್ ಶಾಂತಿ ಪ್ರಶಸ್ತಿ ಸಿಕ್ಕಿತು.

ಫೆಲೆಸ್ತೀನ್ ಜನತೆಯ ಎಲ್ಲ ಹಿತಾಸಕ್ತಿಯನ್ನೂ ಕಡೆಗಣಿಸಿ ಕೇವಲ ಇಸ್ರೇಲ್ ಮತ್ತು ಈಜಿಪ್ಟ್‌ಗಳ ಹಿತಾಸಕ್ತಿಗಳನ್ನು ಪರಿಗಣಿಸಿ ಮಾಡಿಕೊಳ್ಳಲಾದ ಪ್ರಸ್ತುತ ಕ್ಯಾಂಪ್ ಡೇವಿಡ್ ಒಪ್ಪಂದವು ಇಸ್ರೇಲ್‌ನಲ್ಲಿ ಭಾರೀ ಸಂಭ್ರಮಕ್ಕೆ ಮತ್ತು ಅರಬ್ ಜಗತ್ತಿನಲ್ಲಿ ಅಪೂರ್ವ ಮಟ್ಟದ ಘೋರ ಆಕ್ರೋಶಕ್ಕೆ ಕಾರಣವಾಯಿತು. ಸಾದಾತ್ ಮತ್ತವರ ಕುಟುಂಬ ಹಾಗೂ ಆಪ್ತರ ಮೇಲಿದ್ದ, ಅಪರಾಧಗಳ ಮತ್ತು ಭ್ರಷ್ಟಾಚಾರಗಳ ಆರೋಪಗಳನ್ನು ಮರೆತವರು ಕೂಡಾ ಸಾದಾತ್ ಅವರ ಈ ನಡೆಯನ್ನು ಕ್ಷಮಿಸಿಲ್ಲ. ಫೆಲೆಸ್ತೀನ್ ಸಹಿತ ಅರಬಿಗಳಿಗೆ ಸೇರಿದ್ದ ಒಂದು ದೊಡ್ಡ ಭೂಭಾಗವನ್ನು ಇಸ್ರೇಲ್‌ಗೆ ಬಿಟ್ಟುಕೊಟ್ಟು, ಇಸ್ರೇಲ್‌ನ ಅಕ್ರಮ ಅಸ್ತಿತ್ವ ಸಮೇತ ಎಲ್ಲ ಅಕ್ರಮಗಳಿಗೆ ಶಾಶ್ವತ ಮನ್ನಣೆ ನೀಡಿದ ಮತ್ತು ಫೆಲೆಸ್ತೀನಿಗಳ ಮಾನವ ಹಕ್ಕುಗಳನ್ನು ಸಂಪೂರ್ಣ ಬಲಿಕೊಟ್ಟ ಶ್ರೇಯ ಸಾದಾತ್‌ರಿಗೆ ಸಲ್ಲುತ್ತದೆ ಎಂದು ಅವರು ನಂಬಿದ್ದಾರೆ.

ಕ್ಯಾಂಪ್ ಡೇವಿಡ್ ಒಪ್ಪಂದದ ಎರಡು ವರ್ಷಗಳ ಬಳಿಕ 1981 ಅಕ್ಟೋಬರ್ 6 ರಂದು ಸಾದಾತ್ ತಮ್ಮ ದೇಶದ ಸೇನೆಯ ಮುಂದೆ, ತಮ್ಮ 1973ರ ವಿಜಯದ ವಾರ್ಷಿಕೋತ್ಸವ ಆಚರಿಸುತ್ತಿದ್ದಾಗ, ಅವರದೇ ಸೇನೆಯಲ್ಲಿದ್ದ ಕೆಲವು ಬಂಡುಕೋರ ಯೋಧರು ಅವರ ಹತ್ಯೆ ಮಾಡಿದರು. ಪೂರ್ವಯೋಜಿತ ಸಂಚಿನ ಪ್ರಕಾರ ಎಸಗಲಾದ ಈ ಅಮಾನುಷ ಹತ್ಯೆಯಲ್ಲಿ ಭಾಗವಹಿಸಿದ್ದವರು ಕೂಡ ಇದೇ ಕಾರಣಕ್ಕಾಗಿ ಸಾದಾತ್ ವಿರುದ್ಧ ಪ್ರತೀಕಾರಕ್ಕೆ ಇಳಿದಿದ್ದರು.

### ಅಣಕದ ಅಧ್ಯಕ್ಷಾವಧಿ!

ಇತಿಹಾಸದ ಪುಸ್ತಕಗಳಲ್ಲಿ ಅನ್ವರ್ ಸಾದಾತ್ 1970 ರಿಂದ 81ರ ತನಕ ಭರ್ತಿ 11 ವರ್ಷ ಈಜಿಪ್ಟ್ ದೇಶದ ಅಧ್ಯಕ್ಷರಾಗಿದ್ದರು. ಆದರೆ ಅವರ ಕುರಿತು, ಸಾದಾತ್‌ರ ಅಧ್ಯಕ್ಷಾವಧಿಯು ನಿಜವಾಗಿ ಅವರು 1973ರಲ್ಲಿ ಇಸ್ರೇಲ್ ವಿರುದ್ಧ ಯುದ್ಧ ಸಾರಿದ ದಿನ ಆರಂಭವಾಗಿ 1977ರಲ್ಲಿ ಅವರು ಇಸ್ರೇಲ್‌ಗೆ ಭೇಟಿ ನೀಡಿದ ದಿನ ಮುಗಿದು ಹೋಯಿತು ಎಂಬ ಭಾವುಕ ಅಣಕದ ಮಾತು ಅರಬ್ ವಲಯಗಳಲ್ಲಿ ಈಗಲೂ ಚಲಾವಣೆಯಲ್ಲಿದೆ.

# 15

# ಯಾಸಿರ್ ಅರಫಾತ್ : ಹೋರಾಟದಲ್ಲಿ ಮಿನುಗಿ ರಾಜಿಯಲ್ಲಿ ಮರೆಯಾದ ನಾಯಕ

1948ರಲ್ಲಿ ಹಲವು ಬಲಿಷ್ಠ ಸಂಚುಕೋರರು ಸೇರಿ, "ಫೆಲೆಸ್ತೀನ್ ಭೂಮಿಯ ಮೇಲೆ ಇಸ್ರೇಲ್ ಎಂಬ ದೇಶವನ್ನು ಸ್ಥಾಪಿಸಲಾಗಿದೆ" ಎಂದು ಘೋಷಿಸಿದಾಗ, ಯಾಸಿರ್ ಅರಫಾತ್ ಇನ್ನೂ ಕೇವಲ 19ರ ಹರೆಯದ ಸಿವಿಲ್ ಇಂಜಿನಿಯರಿಂಗ್ ವಿದ್ಯಾರ್ಥಿಯಾಗಿದ್ದರು. ಆದರೆ ಸಾಮಾಜಿಕ ಕಾರ್ಯಕರ್ತರಾಗಿ ಅವರಿಗೆ ಆಗಲೇ ಸುಮಾರು 10 ವರ್ಷಗಳ ಅನುಭವವಿತ್ತು!

"ಇಸ್ರೇಲ್ ಸ್ಥಾಪಿತವಾಯಿತು" ಎಂದು ಘೋಷಿಸುವ ಕ್ರಿಯೆ ಹಠಾತ್ತನೆ ನಡೆದಿರಲಿಲ್ಲ. ಬಹಳಷ್ಟು ವರ್ಷಗಳ ಮುನ್ನವೇ ಅದಕ್ಕೆ ದೊಡ್ಡ ಪ್ರಮಾಣದ ಸಿದ್ಧತೆಗಳು ನಡೆದಿದ್ದವು. ಮುಂದೇನು ನಡೆಯಲಿದೆ ಎಂಬುದರ ಮುನ್ಸೂಚನೆಗಳು ಕೂಡಾ ಕಾಣಿಸಲಾರಂಭಿಸಿದ್ದವು. ಹಾಗೆಯೇ, ಅರಬ್ ವಲಯಗಳಲ್ಲಿ ಅದರ ವಿರುದ್ಧ ಕಠಿಣ ಪ್ರತಿರೋಧ ಕೂಡ ಬೆಳೆಯತೊಡಗಿತ್ತು. ಈ ಹಿನ್ನೆಲೆಯಲ್ಲಿ ತನ್ನ 8ನೇ ವಯಸ್ಸಿನಲ್ಲಿ ಅರಫಾತ್, ತನ್ನ ಪ್ರದೇಶದ ಫೆಲೆಸ್ತೀನಿ ಹೋರಾಟಗಾರರ ಜೊತೆ ಬಾಲ ಸಂಗಾತಿಯಾಗಿ ಚಟುವಟಿಕೆಯಲ್ಲಿದ್ದರು. ಇಸ್ರೇಲ್ ಸರಕಾರದ ವಿರುದ್ಧ ಸಕ್ರಿಯರಾಗಿದ್ದ ಹೋರಾಟಗಾರರಿಗಾಗಿ ಶಸ್ತ್ರಾಸ್ತ್ರ ಸಾಗಿಸುತ್ತಿದ್ದ ಜಾಲದಲ್ಲಿ ಬಾಲಕ ಅರಫಾತ್ ಸಕ್ರಿಯರಾಗಿದ್ದರು. ಫೆಲೆಸ್ತೀನ್ ವಿಮೋಚನೆಗೆ ಒಂದು ಸಂಘಟಿತ ಹೋರಾಟದ

ಅಗತ್ಯವಿದೆ ಎಂಬುದನ್ನು ಮನಗಂಡು, ಕೈರೋ ವಿಶ್ವವಿದ್ಯಾನಿಲಯದಲ್ಲಿದ್ದಾಗಲೇ ಆ ನಿಟ್ಟಿನಲ್ಲಿ ಸಿದ್ಧತೆ ಆರಂಭಿಸಿದ್ದರು. 1952–1956ರ ನಡುವೆ ಅವರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಒಕ್ಕೂಟದ ನಾಯಕರಾಗಿದ್ದರು.

ಅರಫಾತ್ ತಮ್ಮ ತಾರುಣ್ಯದಲ್ಲೇ ಪೂರ್ಣಪ್ರಮಾಣದ ಹೋರಾಟದಲ್ಲಿ ತೊಡಗಿದ್ದರು. 1956ರಲ್ಲಿ ಅವರು 'ಅಲ್ ಫತಹ್' ಎಂಬ ಭೂಗತ ಸಂಘಟನೆಯನ್ನು ಆರಂಭಿಸಿದರು. ಆವೇಳೆ ಈಜಿಪ್ಟ್, ಸಿರಿಯಾ ಮತ್ತು ಜೋರ್ಡನ್‌ಗಳಲ್ಲಿ ಅರಬ್ ಲೀಗ್ ಪ್ರಾಯೋಜಿತ 'ಫೆಲೆಸ್ತೀನ್ ಲಿಬರೇಶನ್ ಆರ್ಗನೈಝೇಶನ್' (PLO) ಸಕ್ರಿಯವಾಗಿತ್ತು. ಆದರೆ 1960–67ರ ನಡುವೆ ಅರಫಾತ್ ನೇತೃತ್ವದ ಭೂಗತ ತಂಡಗಳು ಇಸ್ರೇಲ್ ವಿರುದ್ಧ ನಡೆಸಿದ ಕಾರ್ಯಾಚರಣೆಗಳು ಹೆಚ್ಚು ಸುಯೋಜಿತ, ನಿಖರ ಹಾಗೂ ಪರಿಣಾಮಕಾರಿಯಾಗಿದ್ದವು. ಈ ತರದ ಗೆರಿಲ್ಲಾ ದಾಳಿಗಳ ಸರಣಿಯಿಂದಾಗಿ ಇಸ್ರೇಲ್ ಚಿಂತಿತವಾಗಿತ್ತು. ಅರಬ್ ಸಮಾಜಗಳಲ್ಲಿ ಅರಫಾತ್ ಮತ್ತವರ 'ಅಲ್ ಫತಹ್' ಗುಂಪು ಜನಪ್ರಿಯವಾಗತೊಡಗಿತು.

1967ರಲ್ಲಿ ಅರಬ್ ದೇಶಗಳ ವಿರುದ್ಧ ಇಸ್ರೇಲ್‌ನ ಭರ್ಜರಿ ಪರಾಕ್ರಮ ಆರಂಭವಾಯಿತು. ಇಸ್ರೇಲ್ ಪಡೆಗಳು, ನೆಲ, ಜಲ, ವಾಯು ಎನ್ನದೆ ಎಲ್ಲೆಂದರಲ್ಲಿ ವ್ಯಾಪಕ ವಿಧ್ವಂಸ ಆರಂಭಿಸಿದವು. ಮೊದಲ ದಿನವೇ ಅರಬ್ ದೇಶಗಳ ವಾಯುಪಡೆ ನಾಶವಾಗಿದ್ದರಿಂದ, ಪ್ರತಿರೋಧವೆಂಬುದು ನಾಮಮಾತ್ರಕ್ಕೂ ಇಲ್ಲವೆಂಬಂತಾಯಿತು. ಜನರು ನಂಬಿ ಕೂತಿದ್ದ, ಈಜಿಪ್ಟ್–ಸಿರಿಯಾ ಸೇನೆಗಳ ಮತ್ತು ಪಿಎಲ್‌ಒ ಸಂಘಟನೆಯ ಇತಿಮಿತಿಗಳೆಲ್ಲ ಬಹಿರಂಗವಾದವು. ಆರು ದಿನಗಳಲ್ಲಿ ಸರ್ವನಾಶ ಮೆರೆದ ಇಸ್ರೇಲ್, ಅರಬ್ ದೇಶಗಳ ಕೈಯಿಂದ ಗಾಝಾ ಪಟ್ಟಿ, ಗೋಲಾನ್ ಬೆಟ್ಟ ಶ್ರೇಣಿ, ಪಶ್ಚಿಮ ಬ್ಯಾಂಕ್ ಮುಂತಾದ ಎಲ್ಲ ಆಯಕಟ್ಟಿನ ಪ್ರದೇಶಗಳನ್ನು ಕಿತ್ತುಕೊಂಡಿತ್ತು. ಈ ಮಧ್ಯೆ, ಅರಫಾತ್ ನೇತೃತ್ವದ 'ಅಲ್ ಫತಹ್' ಗೆರಿಲ್ಲಾ ಪಡೆಗಳ ಕೆಲವು ಸಾಹಸ ಕಾರ್ಯಾಚರಣೆಗಳು ಮಾತ್ರ ಜನರ ಗಮನ ಸೆಳೆದವು. ಈಜಿಪ್ಟ್ ಅಧ್ಯಕ್ಷ ಜಮಾಲ್ ಅಬ್ದುನ್ನಾಸಿರ್ ಈ ವೇಳೆ ಯಾಸಿರ್ ಅರಫಾತ್‌ರನ್ನು 'ಫೆಲೆಸ್ತೀನಿಗಳ ನಾಯಕ' ಎಂದು ಘೋಷಿಸಿದ್ದಾಗಿ ಸುದ್ದಿಯಾಯಿತು.

67ರ ಹೀನಾಯ ಸೋಲಿನ ಬಳಿಕ ನಡೆದ ಅರಬ್ ಲೀಗ್ ಪ್ರಮುಖರ ಸಭೆಯಲ್ಲಿ ಭಾಗವಹಿಸಲು, ಯಾಸಿರ್ ಅರಫಾತ್‌ರನ್ನು ಆಮಂತ್ರಿಸಲಾಯಿತು. ಅವರ ಸಾಧನೆಗಳನ್ನು ಗುರುತಿಸಲಾಯಿತು. 1968ರಲ್ಲಿ, ಅರಫಾತ್ ತಮ್ಮ ಫತಹ್ ಸಂಘಟನೆಯನ್ನು ಪಿಎಲ್‌ಒನಲ್ಲಿ ಲೀನಗೊಳಿಸಿದರು. ಪಿಎಲ್‌ಒನ ಕಾರ್ಯಕಾರಿ ಸಮಿತಿಯ 105 ಸ್ಥಾನಗಳ ಪೈಕಿ 33 ಸ್ಥಾನಗಳನ್ನು ಫತಹ್ ಸಂಘಟನೆಗೆ ನೀಡಿ ಉಳಿದ 57 ಸೀಟುಗಳನ್ನು ಇತರೆಲ್ಲ ಗೆರಿಲ್ಲಾ ಗುಂಪುಗಳ

ನಡುವೆ ಹಂಚುವುದಾಗಿ ನಿರ್ಧರಿಸಲಾಯಿತು. ಹೀಗೆ ಏಕೈಕ ದೊಡ್ಡ ಪಕ್ಷದ ನಾಯಕರಾಗಿ ಬಿಟ್ಟ ಅರಫಾತ್ ಅವರೇ ಒಟ್ಟು ಪಿಎಲ್‌ಒನ ನೇತೃತ್ವ ವಹಿಸಬೇಕೆಂಬ ಬೇಡಿಕೆಯೂ ಬೆಳೆಯ ತೊಡಗಿತು. ಈಗಾಗಲೇ, ಜನರ ಮಧ್ಯೆ ಸಾಹಸಿ, ಪರಾಕ್ರಮಿ ಇಮೇಜ್‌ನೊಂದಿಗೆ ಸಾಕಷ್ಟು ಜನಪ್ರಿಯರಾಗಿದ್ದ ಅರಫಾತ್, ಅರಬ್ ಲೀಗ್‌ನಲ್ಲಿದ್ದ ಹಲವು ದೇಶಗಳ ಉನ್ನತ ಮಟ್ಟದ ಸಚಿವರು ಮತ್ತು ಆಡಳಿತಗಾರರ ಜೊತೆ ನಿಕಟ ಮೈತ್ರಿ ಬೆಳೆಸಿಕೊಂಡರು. ಬಹುಬೇಗನೆ ಅರಬ್ ಲೀಗ್ ಸಭೆಯಲ್ಲಿ, ಅರಫಾತ್‌ರನ್ನು ಪಿಎಲ್‌ಒ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾಗಿ ನೇಮಿಸಲಾಯಿತು. ಹೀಗೆ ಸಕಾಲದಲ್ಲಿ ನಡೆಸಿದ ಸಮರ್ಥ ಕಾರ್ಯ ನಿರ್ವಹಣೆ ಮತ್ತು ತೆರೆಮರೆಯ ಚದುರಂಗದಾಟಗಳ ಮೂಲಕ ಯಾಸಿರ್

ಅರಫಾತ್‌ರಿಗೆ ಹಠಾತ್ತನೆ ಒಂದು ಬಹು ದೊಡ್ಡ ಮುನ್ನಡೆ ಸಿಕ್ಕಿತು. ಅಜ್ಞಾತ ಗೆರಿಲ್ಲಾ ಸಂಘಟನೆಯೊಂದರ ನಾಯಕರಾಗಿದ್ದ ಅರಫಾತ್, ಅನೌಪಚಾರಿಕ ದೇಶವೊಂದರ ಔಪಚಾರಿಕ ಮುಖ್ಯಸ್ಥನೆನಿಸಲು ದಾರಿ ಸುಗಮವಾಯಿತು. ಫೆಲೆಸ್ತೀನ್‌ನ ಆಕ್ರಮಿತ ನಾಗರಿಕರಿಗೆಲ್ಲಾ, ಈ ಹಿಂದಿನ ಯಾವುದೇ ಫೆಲೆಸ್ತೀನ್ ಆಡಳಿತಕ್ಕಿಂತ ಹೆಚ್ಚು ಸ್ವಾಯತ್ತವಾಗಿದ್ದ, ಹೊಸ ಪಿಎಲ್‌ಒ ಮೂಲಕ ಒಂದು ಹೊಸ ಪ್ರಾತಿನಿಧ್ಯ ಮತ್ತು ಹೊಸ ಗುರುತು ಸಿಕ್ಕಂತಾಯಿತು.

ಇದರೊಂದಿಗೆ, ಯಾಸಿರ್ ಅರಫಾತ್ ಮಾರ್ಗದರ್ಶನದಲ್ಲಿ, ಪಿಎಲ್‌ಒ ಕಡೆಯಿಂದ ಇಸ್ರೇಲ್ ಮತ್ತದರ ಹಿತಾಸಕ್ತಿಗಳ ಮೇಲೆ, ವಿವಿಧ ಪ್ರಮಾಣ ಮತ್ತು ವಿವಿಧ ಸ್ವರೂಪದ ದಾಳಿಗಳ ಒಂದು ದೀರ್ಘ ಸರಣಿ ಆರಂಭವಾಯಿತು. ವಿಶೇಷವಾಗಿ 67ರ ದಾಳಿಯಲ್ಲಿ ತನ್ನ ದೊಡ್ಡ ಭೂಭಾಗವನ್ನು ಕಳೆದುಕೊಂಡಿದ್ದ ಜೋರ್ಡನ್, ಪಿಎಲ್‌ಒಗೆ ತನ್ನಲ್ಲಿ ಆಶ್ರಯ ನೀಡಿತು. ಪಿಎಲ್‌ಒ ಪಡೆಗಳು ಜೋರ್ಡನ್ ಸೇನೆಯ ನೆರವಿನೊಂದಿಗೆ, ಜೋರ್ಡನ್‌ನ ಕರಾಮಃ ನೆಲೆಯಿಂದ, ಇಸ್ರೇಲ್ ನೆಲೆಗಳ ಮೇಲೆ ದಾಳಿಗಳನ್ನು ನಡೆಸಲು ಆರಂಭಿಸಿದವು.

ಇದರಿಂದ ರೋಸಿ ಹೋದ ಇಸ್ರೇಲ್, 1968ರಲ್ಲಿ ಇದರ ವಿರುದ್ಧ ದೊಡ್ಡ ಪ್ರಮಾಣದ ಪ್ರತಿಕ್ರಮ ಆರಂಭಿಸಿತು. ಇಸ್ರೇಲ್ ಪಡೆಗಳು ಜೋರ್ಡನ್‌ನಲ್ಲಿದ್ದ ಸೇನಾ ನೆಲೆಗಳನ್ನು ಗುರಿ ಮಾಡಿ ನಾಶಮಾಡಿದವು. ಆದರೆ ಈ ಬಾರಿ ಇಸ್ರೇಲ್ ಪಾಲಿಗೆ ಕೆಲಸ ಅಷ್ಟೇನೂ ಸುಲಭವಾಗಿರಲಿಲ್ಲ. ಪ್ರಥಮ ಬಾರಿಗೆ ಫೆಲೆಸ್ತೀನ್ ಪಡೆಗಳ ಕಡೆಯಿಂದ ಆತ್ಮಾಹುತಿ ಬಾಂಬ್‌ಗಳ ಬಳಕೆಯಾಯಿತು. ಇಸ್ರೇಲ್‌ನ ಸುಸಜ್ಜಿತ ಪಡೆಗಳ ಮುಂದೆ ತಂದೊಡ್ಡಿದ ನಿರೀಕ್ಷೆಗೆ ಮೀರಿದ ಪ್ರತಿರೋಧ ಮತ್ತು ಶತ್ರು ಪಾಳಯಕ್ಕೆ ಮಾಡಿದ ಅಪಾರ ನಷ್ಟದಿಂದಾಗಿ ಅರಫಾತ್ ಮತ್ತವರ ಯುದ್ಧ ತಂತ್ರಗಳು ಜಗತ್ತಿನೆಲ್ಲೆಡೆ ಚರ್ಚಿತವಾದವು. ಅರಫಾತ್ ಈ ಯುದ್ಧದಲ್ಲಿ ಸ್ವತಃ ರಂಗದಲ್ಲಿದ್ದು ಹೋರಾಡಿದ್ದರೆಂಬ ವದಂತಿಗಳೂ ಇದ್ದವು. 1968

ಡಿಸೆಂಬರ್ 13ರ 'ಟೈಮ್' ಮ್ಯಾಗಝಿನ್ ಮುಖಪುಟದಲ್ಲಿ ಅರಫಾತ್ ಮುಖ ಕಂಗೊಳಿಸಿತು. ಅವರ ಸಾಹಸಗಾಥೆಗಳಿಗೆ ಭಾರೀ ಪ್ರಚಾರ ಸಿಕ್ಕಿತು. ಅರಫಾತ್ ಒಬ್ಬರೇ ಫೆಲೆಸ್ತೀನ್‌ನ ಮಹಾ ನಾಯಕ ಎಂದು ಜಗತ್ತು ನಂಬತೊಡಗಿತು. ಅರಬ್ ಜಗತ್ತಿನಲ್ಲಿ ಅವರಿಗೆ ಎಲ್ಲ ಬಗೆಯ ನೆರವು ಸಿಗತೊಡಗಿತು. ಅದೇ ವೇಳೆ ಜಗತ್ತಿನೆದುರು ಅವರನ್ನು ಭಾರೀ ಭಯೋತ್ಪಾದಕ ಎಂದು ಚಿತ್ರಿಸುವ ಶ್ರಮಗಳು ಕೂಡಾ ದೊಡ್ಡ ಪ್ರಮಾಣದಲ್ಲಿ ನಡೆದವು.

1970 ಸೆಪ್ಟಂಬರ್‌ನಲ್ಲಿ ಪಿಎಲ್‌ಒಗೆ ಸೇರಿದ ಕೆಲವು ಗುಂಪುಗಳು ಜೋರ್ಡನ್‌ನ ಅಮ್ಮಾನ್ ಸಮೀಪ ನಾಲ್ಕು ವಿಮಾನಗಳನ್ನು ಅಪಹರಿಸಿದವು. ಈ ಪೈಕಿ ಮೂರು ವಿಮಾನಗಳಿಂದ ಪ್ರಯಾಣಿಕರನ್ನು ಕೆಳಗಿಳಿಸಿ ಮಾಧ್ಯಮಗಳ ಮುಂದೆ ಅವುಗಳಿಗೆ ಕಿಚ್ಚು ಹಚ್ಚಲಾಯಿತು. ಪ್ರಸ್ತುತ ಘಟನೆಯ ವರದಿಗಳು ಮತ್ತು ಆ ಕುರಿತಾದ ಚಿತ್ರಗಳಿಗೆ ಪಶ್ಚಿಮದ ದೇಶಗಳಲ್ಲಿ ವಿಪರೀತ ಪ್ರಚಾರ ದೊರೆತು ಅರಫಾತ್‌ರ ಇಮೇಜು ಘಾಸಿಯಾಯಿತು. ಅರಬ್ ಸರಕಾರಗಳ ಕಡೆಯಿಂದಲೂ ಅರಫಾತ್ ಮೇಲೆ ಒತ್ತಡ ಬೀಳ ತೊಡಗಿತು. ಕೊನೆಗೆ ಅರಫಾತ್ ವಿಮಾನಾಪಹರಣವನ್ನು ಕುಕೃತ್ಯವೆಂದು ಖಂಡಿಸಿದರು. ಅತ್ತ ಅರಫಾತ್ ಸಹವಾಸ ಸಾಕೆಂದು ತೀರ್ಮಾನಿಸಿದ ಜೋರ್ಡನ್ ದೊರೆ ಕಿಂಗ್ ಹುಸೈನ್ ಜೋರ್ಡನ್‌ನಲ್ಲಿ ಮಾರ್ಷಲ್ ಲಾ ಘೋಷಿಸಿ, ತನ್ನ ನೆಲವನ್ನು ತೆರವುಗೊಳಿಸಲು ಅರಫಾತ್ ಪಡೆಗಳಿಗೆ ಆದೇಶಿಸಿದರು.

ಆ ಬಳಿಕ ಕಿಂಗ್ ಹುಸೈನ್ ಮತ್ತು ಅರಫಾತ್‌ರ ಪಡೆಗಳ ನಡುವೆ ಘರ್ಷಣೆ ಆರಂಭವಾಯಿತು. ಅವರ ಮಧ್ಯೆ ತೇಪೆಗೆ ಈಜಿಪ್ಟ್ ಅಧ್ಯಕ್ಷ ನಾಸಿರ್ ಕೂಡ ಶ್ರಮಿಸಿದರು. ನಾಸಿರ್‌ರ ಮರಣದೊಂದಿಗೆ ಮತ್ತೆ ಘರ್ಷಣೆ ಉಲ್ಬಣಿಸಿದಾಗ ಅರಫಾತ್, ಕಿಂಗ್ ಹುಸೈನ್‌ರ ಪದಚ್ಯುತಿಗೆ ಕರೆ ನೀಡಿದರು. ಇದಕ್ಕೆ ಪ್ರತೀಕಾರವಾಗಿ ಕಿಂಗ್ ಹುಸೈನ್, 1971 ಜುಲೈಯಲ್ಲಿ, ಜೋರ್ಡನ್‌ನ ಉತ್ತರಭಾಗದಲ್ಲಿರುವ ಎಲ್ಲ ಫೆಲೆಸ್ತೀನಿ ಯೋಧರನ್ನು ಹುಡುಕಿ ಹೊರದಬ್ಬಬೇಕೆಂಬ ಕಠೋರ ಆದೇಶ ಹೊರಡಿಸಿದರು. ಭೀಕರ ಹೋರಾಟದ ಬಳಿಕ ತನ್ನ ಸುಮಾರು 2,000 ನಿಷ್ಠಾವಂತ ಯೋಧರೊಂದಿಗೆ ಜೋರ್ಡನ್ ನಿಂದ ತಪ್ಪಿಸಿಕೊಂಡ ಅರಫಾತ್, ಅಲ್ಲಿಂದ ಸಿರಿಯಾ ಮಾರ್ಗವಾಗಿ ಲೆಬನಾನ್ ತಲುಪಿ ಹಿಂದಿನಿಂದಲೇ ಅಲ್ಲಿ ನೆಲೆಯೂರಿದ್ದ ತನ್ನ ಪಡೆಗಳನ್ನು ಸೇರಿಕೊಂಡರು. ಹೀಗೆ ಇಸ್ರೇಲ್ ವಿರೋಧಿ ಸರಕಾರಗಳು ಮತ್ತು ಭೂಗತ ಪಡೆಗಳು ಒಂದು ದೀರ್ಘ ಕಾಲವನ್ನು ಕೇವಲ ಪರಸ್ಪರರ ಸೊಂಟ ಮುರಿಯುವುದರಲ್ಲೇ ಕಳೆದವು. ಈ ಕಾರ್ಯವನ್ನು ಅವು ಸಾಕಷ್ಟು ಸಮರ್ಥವಾಗಿಯೇ ನಡೆಸಿದವು!!

1971ರ ಹೊತ್ತಿಗೆ, ಆಗಲೇ ವಿವಿಧೆಡೆಯ ಹಲವು ಇಸ್ರೇಲ್ ವಿರೋಧಿ

ಎಡಪಂಥೀಯ ಗುಂಪುಗಳು ಮತ್ತು ಪಿಎಲ್‌ಒನ ಹಲವು ಒಳಗುಂಪುಗಳು ಲೆಬನಾನ್‌ನಲ್ಲಿ ನೆಲೆ ಊರಿದ್ದವು. ಅಲ್ಲಿನ ಸ್ಥಳೀಯ ಸರಕಾರ ತುಂಬಾ ಅಸ್ಥಿರವಾಗಿದ್ದರಿಂದ, ಕ್ರಮೇಣ ಬಲಗೊಂಡ ಅರಫಾತ್ ಗುಂಪು ಅಲ್ಲಿ ತನ್ನ ಪ್ರಾಬಲ್ಯ ಮೆರೆಯತೊಡಗಿತು. ಲೆಬನಾನ್ ನೆಲದಿಂದ ಇಸ್ರೇಲ್ ನೆಲೆಗಳ ಮೇಲೆ ದಾಳಿಗಳ ಸರಣಿ ಆರಂಭವಾಯಿತು. ಮುಂದಿನ ಎರಡು ದಶಕಗಳ ಅವಧಿಯು ಇಸ್ರೇಲ್ ಪಾಲಿಗೆ ನಿತ್ಯ ಕಿರುಕುಳದ ಅವಧಿಯಾಗಿತ್ತು. ಸಾವಿರ ಬಗೆಯ ಇತರ ಏರುಪೇರುಗಳಾದರೂ, ನೂರಾರು ಬೃಹತ್ ಕಾರ್ಯಾಚರಣೆಗಳನ್ನು ನಡೆಸಿದರೂ ಯಾಸಿರ್ ಅರಫಾತ್ ಪ್ರಾಯೋಜಿತ ದಾಳಿಗಳಿಂದ ಸಂಪೂರ್ಣ ಮುಕ್ತಿ ಪಡೆಯಲು ಇಸ್ರೇಲ್‌ಗೆ ಸಾಧ್ಯವಾಗಲಿಲ್ಲ. ಹಾಗೆಯೇ, ಕನಿಷ್ಠಪಕ್ಷ 90ರ ದಶಕದ ಆರಂಭದ ತನಕ, ಇಸ್ರೇಲ್‌ಗೆದುರಾಗಿ ಅರಫಾತ್ ಎಂಬ ಒಬ್ಬ ವ್ಯಕ್ತಿ ಮತ್ತು ಆತನ ತಂಡವು ಕಟ್ಟಿ ಬೆಳೆಸಿದಷ್ಟು ಮಟ್ಟದ ಬಲಿಷ್ಠ ಪ್ರತಿರೋಧವನ್ನು ಕಟ್ಟಿ ಬೆಳೆಸಲು ಆ ಪ್ರಾಂತದ ದೊಡ್ಡ ದೊಡ್ಡ ದೇಶ ಅಥವಾ ಸರಕಾರಗಳಿಗೂ ಸಾಧ್ಯವಾಗಲಿಲ್ಲ.

## ಅರಫಾತ್ ಹೇಳಿದ್ದರು!

ನಮ್ಮ ಮುಂದಿನ ಪೀಳಿಗೆಯವರು ಈ ಸೂರ್ಯನಡಿಯಲ್ಲಿ, ಶಾಂತಿಯಿಂದ ಬದುಕಬೇಕು. ಅವರಿಗೆ ಈ ಸ್ವತಂತ್ರ ಲೋಕದಲ್ಲಿ, ದಬ್ಬಾಳಿಕೆಯಿಂದ ದೂರ ಮತ್ತು ಭಯೋತ್ಪಾದನೆಯಿಂದ ಬಹಳ ದೂರ, ಮನುಷ್ಯರಾಗಿ, ಸ್ವತಂತ್ರರಾಗಿ ಬದುಕಲು ಸಾಧ್ಯವಾಗಬೇಕು. ನಾನು ನಿಮ್ಮಿಂದ ಅಪೇಕ್ಷಿಸುವುದು ಇಷ್ಟನ್ನು ಮಾತ್ರ. ನಾನು ನಿಮ್ಮಿಂದ ಚಂದ್ರನನ್ನೇನೂ ಅಪೇಕ್ಷಿಸುತ್ತಿಲ್ಲ.

**–ಯಾಸಿರ್ ಅರಫಾತ್**

ಫೆಲೆಸ್ತೀನಿಗಳ ಬಳಿ ಮಾತುಕತೆಯ ಹೊರತು ಬೇರೆ ದಾರಿಯೇ ಇಲ್ಲ ಎಂದು ಇಸ್ರೇಲಿಗಳು ತಿಳಿದಿದ್ದರೆ, ಅಲ್ಲಾಹನಾಣೆ, ಅದು ಅವರ ಘೋರ ತಪ್ಪು. ಜೆರುಸಲೇಮ್‌ನ ಎಲ್ಲ ಗೋಡೆಗಳು, ಮಸೀದಿಗಳು ಮತ್ತು ಚರ್ಚುಗಳ ಮೇಲೆ ತಮ್ಮ ಧ್ವಜ ಹಾರಿಸಲಿಕ್ಕಾಗಿ ಫೆಲೆಸ್ತೀನ್ ಜನತೆ ತಮ್ಮ ಕೊನೆಯ ಪುತ್ರ ಮತ್ತು ಪುತ್ರಿಯನ್ನು ಬಲಿ ಕೊಡಲು ಸಿದ್ಧರಾಗಿದ್ದಾರೆ.

**–ಯಾಸಿರ್ ಅರಫಾತ್**

ಧರ್ಮದ ದೃಷ್ಟಿಯಿಂದ ಹೇಳುವುದಾದರೆ, ಅರಫಾತ್ ಬಹಳ ಸೀಮಿತ ಮಟ್ಟದಲ್ಲಿ ಧರ್ಮವನ್ನು ಆಚರಿಸಿದವರು, ತುಂಬಾ ಸೀಮಿತವಾಗಿ ಧರ್ಮವನ್ನು ಬಳಸಿದವರು ಮತ್ತು ತೀರಾ ಅಪರೂಪಕ್ಕೆ ಮಾತ್ರ ಧಾರ್ಮಿಕತೆ ನಟಿಸಿದವರು. ಆದ್ದರಿಂದ, ಅನುಕೂಲಕ್ಕೆ ತಕ್ಕಂತೆ ಧರ್ಮವನ್ನು ಧಾರಾಳ ಬಳಸಿ, ಆಬಳಿಕ ಅದನ್ನು ಬೀಸಿ ಒಗೆದು ಬಿಡುವ ಪಾಖಂಡಿಗಳಿಗೆ ಹೋಲಿಸಿದರೆ ಅರಫಾತ್ ಎಷ್ಟೋ ವಾಸಿ ಎಂದು ಮಧ್ಯಪ್ರಾಚ್ಯದ ವೀಕ್ಷಕರಲ್ಲಿ ಹೆಚ್ಚಿನವರು ನಂಬುತ್ತಾರೆ.

❖ ❖ ❖

## 16

# ಪಿಎಲ್‌ಒ : ಅರಫಾತ್ ಮುಂದೆ ಎರಡು ಕಠಿಣ ಸವಾಲು

ಪಿಎಲ್‌ಒ ಎಂಬುದು ಮೂಲತಃ 1964ರಲ್ಲಿ, 22 ಸದಸ್ಯ ದೇಶಗಳಿರುವ ಅರಬ್ ಲೀಗ್ ಒಕ್ಕೂಟವು ಇಸ್ರೇಲ್ ವಿರುದ್ಧ ಸಶಸ್ತ್ರ ಹೋರಾಟಕ್ಕಾಗಿ ಜನ್ಮಕೊಟ್ಟ ಸಂಘಟನೆಯಾಗಿತ್ತು. 1969 ರಲ್ಲಿ ಅರಬ್ ಲೀಗ್‌ನವರು ಅರಫಾತ್‌ರನ್ನು ಆ ಸಂಘಟನೆಯ ಮುಖ್ಯಸ್ಥರಾಗಿಸಿದರು. ಆದರೆ ಆ ಬಳಿಕವೂ, ಅರಫಾತ್ ಮುಂದೆ ಎರಡು ಪ್ರಮುಖ ಸವಾಲುಗಳಿದ್ದವು:

1. ಅವರಿಗೆ ಪಿಎಲ್‌ಒನ ಎಲ್ಲ ಘಟಕಗಳ ಮೇಲೆ ಸಂಪೂರ್ಣ ಹತೋಟಿ ಪ್ರಾಪ್ತವಾಗಿರಲಿಲ್ಲ. ಕೆಲವು ಬಂಡುಕೋರ ಘಟಕಗಳು ಅರಫಾತ್‌ರ ನಿಯಂತ್ರಣ ಮೀರಿ ಹಲವು ಕಾರ್ಯಾಚರಣೆಗಳನ್ನು ನಡೆಸುತ್ತಿದ್ದವು. ಆ ಪೈಕಿ ಕೆಲವು ಅಪರಾಧ ಸ್ವರೂಪದ ಭೂಗತ, ಹಿಂಸಾತ್ಮಕ ಚಟುವಟಿಕೆಗಳು ಅರಫಾತ್‌ರನ್ನು ಪೇಚಿಗೆ ಸಿಲುಕಿಸಿದ್ದಲ್ಲದೆ ಜಾಗತಿಕ ವೇದಿಕೆಗಳಲ್ಲಿ ಅವರ ವಿರುದ್ಧ ಅಪಪ್ರಚಾರ ನಡೆಸುವುದಕ್ಕೆ ಇಸ್ರೇಲ್ ಮತ್ತು ಅಮೆರಿಕಕ್ಕೆ ಧಾರಾಳ ಸಬೂಬುಗಳನ್ನು ಒದಗಿಸಿದವು.

2. ಪಿಎಲ್‌ಒ, 'ಅರಬ್ ಲೀಗ್' ಎಂಬ ಒಕ್ಕೂಟದ ಅಧೀನದಲ್ಲಿತ್ತು. ಒಕ್ಕೂಟದಲ್ಲಿದ್ದ ಹಲವು ದೇಶ ಹಾಗೂ ಸರಕಾರಗಳ ಮಧ್ಯೆ ಯಾವುದೇ ಸಮಾನ ವಿಚಾರಧಾರೆಯಾಗಲಿ, ಎಜಂಡಾ ಆಗಲಿ, ಸಮನ್ವಯವಾಗಲಿ ಇರಲಿಲ್ಲ. ಒಂದೊಂದು

ದೇಶದವರಿಗೂ ಪಿಎಲ್‌ಒನಿಂದ ತಮ್ಮದೇ ಆದ ನಿರೀಕ್ಷೆಗಳಿದ್ದವು. ಈ ಬಗೆಯ ತದ್ವಿರುದ್ಧ ನಿರೀಕ್ಷೆಗಳನ್ನು ಈಡೇರಿಸುವುದು ಸುಲಭದ ಕೆಲಸವಾಗಿರಲಿಲ್ಲ.

ಈ ಪೈಕಿ ಎರಡನೆಯ ಸವಾಲನ್ನು ಅರಫಾತ್ ಬಹಳ ಚೆನ್ನಾಗಿ ನಿಭಾಯಿಸಿದರು. ತನ್ನ ವರ್ಚಸ್ಸು, ಪ್ರಭಾವಗಳನ್ನು ಬಳಸಿ, ಅವರು ಪಿಎಲ್‌ಒವನ್ನು ಸಾಕಷ್ಟು ಮಟ್ಟಿಗೆ ಅರಬ್ ಲೀಗ್ ಸದಸ್ಯರ ಮುಷ್ಟಿಯಿಂದ ಮುಕ್ತಗೊಳಿಸಿದರು. ಪಿಎಲ್‌ಒಗೆ ನಾಡಿಲ್ಲದ ಒಂದು ಸರಕಾರ ಎಂಬ ಸ್ಥಾನ ಮಾನವನ್ನು ಗಟ್ಟಿಗೊಳಿಸಿದರು. ತಾನು ಎಲ್ಲೇ ಇದ್ದರೂ ಫೆಲೆಸ್ತೀನ್ ಎಂಬ ದೇಶ ಮತ್ತು ಸರಕಾರದ ಮುಖ್ಯಸ್ಥ ತಾನೇ ಆಗಿರುತ್ತೇನೆ ಎಂಬುದು ಅರಫಾತ್ ಅವರ ಸಂಕಲ್ಪವಾಗಿತ್ತು. ಅದನ್ನವರು ತಕ್ಕ ಮಟ್ಟಿಗೆ ಸಾಧಿಸಿದರು. ಆದರೆ ಮೊದಲ ಸವಾಲು ಬಹುಕಾಲ ಹಾಗೆಯೇ ಉಳಿದಿತ್ತು. ಪಿಎಲ್‌ಒ ಒಳಗಿನ ಕೆಲವು ಬಂಡುಕೋರ ಗುಂಪುಗಳು ಮುಂದೆಯೂ ಹಲವು ವರ್ಷಗಳ ಕಾಲ ಅರಫಾತ್‌ರನ್ನು ಲೆಕ್ಕಿಸದೆ ತಮ್ಮ ಇಚ್ಛಾನುಸಾರ ಸಕ್ರಿಯವಾಗಿದ್ದವು.

### 3 ದಶಕಗಳ ಅಲೆದಾಟ–ಎಲ್ಲೂ ಸಲ್ಲದಾದ ಪಿಎಲ್‌ಒ

ಸೋತವರಿಗೆ ಮಿತ್ರರೆಲ್ಲಿರುತ್ತಾರೆ? ಇಸ್ರೇಲ್‌ನ ಕೆಂಗಣ್ಣಿಗೆ ತುತ್ತಾಗಿ 1970ರಲ್ಲಿ ಜೋರ್ಡನ್‌ನಲ್ಲಿ ಆಶ್ರಯ ಪಡೆದಿದ್ದ ಪಿಎಲ್‌ಒ, ಇಸ್ರೇಲ್ ಕಾರ್ಯಾಚರಣೆಯಲ್ಲಿ ಭಾರೀ ನಾಶ ನಷ್ಟ ಅನುಭವಿಸಿ ಸೋಲುಂಡಿತು. ಅದರ ಬೆನ್ನಿಗೆ ಜೋರ್ಡನ್ ದೊರೆ ಮತ್ತು ಪಿಎಲ್‌ಒ ನಡುವೆ ಜಗಳವಾಯಿತು. ಪಿಎಲ್‌ಒ ಅನ್ನು ಜೋರ್ಡನ್‌ನಿಂದ ಹೊರದಬ್ಬಲಾಯಿತು. ಕೊನೆಗೆ ಲೆಬನಾನ್ ನಲ್ಲಿ ಆಶ್ರಯ ಪಡೆದ ಅರಫಾತ್ ಪಡೆಗಳು ಅಲ್ಲಿಂದ ಇಸ್ರೇಲ್ ಗಡಿಗಳ ಮೇಲೆ ದಾಳಿಗಳ ಸರಮಾಲೆಯನ್ನು ಆರಂಭಿಸಿದವು. ಜೊತೆಗೆ ಲೆಬನಾನ್‌ನಲ್ಲಿ ನಡೆಯುತ್ತಿದ್ದ ವಿವಿಧ ಬಗೆಯ ಅಂತಃಕಲಹಗಳಲ್ಲೂ, ಭಾಗವಹಿಸಲು ಆರಂಭಿಸಿದವು.

1970ರಿಂದ 82ರ ಮಧ್ಯೆ ಇಸ್ರೇಲ್ ಮತ್ತು ಪಿಎಲ್‌ಒ ನಡುವೆ ಲೆಬನಾನ್ ಮತ್ತು ಇತರ ಕಡೆಗಳಲ್ಲಿ ಹಲವು ದಾಳಿ, ಪ್ರತಿ ದಾಳಿಗಳು ನಡೆದವು. ಆದರೆ 1982 ರಲ್ಲಿ ಇಸ್ರೇಲ್ ನಡೆಸಿದ ದಾಳಿಗಳು ತುಂಬಾ ವ್ಯಾಪಕ ಹಾಗೂ ತೀವ್ರ ಪ್ರಮಾಣದ್ದಾಗಿದ್ದವು. ಆ ವರ್ಷವಂತೂ ಇಸ್ರೇಲ್ ಪಡೆಗಳು ಲೆಬನಾನ್ ಗಡಿಗಳ ಒಳನುಗ್ಗಿ ಪಿಎಲ್‌ಒ ನೆಲೆಗಳನ್ನೆಲ್ಲಾ ಸಂಪೂರ್ಣ ಧ್ವಂಸಗೊಳಿಸಿ ಬಿಟ್ಟವು. ಅದು ಅರಫಾತ್ ಮತ್ತವರ ಪಡೆಗಳ ಪಾಲಿಗೆ ತೀರಾ ಅಸಹಾಯಕತೆಯ ಸನ್ನಿವೇಶವಾಗಿತ್ತು. ಆ ಸನ್ನಿವೇಶದಲ್ಲಿ ಯಾವ ಒಂದು ಅರಬ್ ದೇಶ ಕೂಡ ಪಿಎಲ್‌ಒಗೆ ಆಶ್ರಯ ನೀಡಲು ಮುಂದೆ ಬರಲಿಲ್ಲ. ಕೊನೆಗೆ ಬಹಳಷ್ಟು ವಾದ, ಒತ್ತಡಗಳ ಬಳಿಕ ಸಿರಿಯಾದಲ್ಲಿ ಪಿಎಲ್‌ಒಗೆ ಆಶ್ರಯ ದಕ್ಕಿತು.

ಯಾಸಿರ್ ಅರಫಾತ್, ತಾನೆಲ್ಲೇ ಇರಲಿ, ಅಲ್ಲಿನ ಆಂತರಿಕ ರಾಜಕೀಯದಲ್ಲಿ ಆಸಕ್ತಿ ವಹಿಸುತ್ತಿದ್ದರು. ಜೋರ್ಡನ್‌ನಂತೆ ಸಿರಿಯಾದಲ್ಲೂ ಈ ಅಭ್ಯಾಸ ಅರಫಾತ್‌ಗೆ ದುಬಾರಿಯಾಯಿತು. 1983ರಲ್ಲಿ ಸಿರಿಯಾದ ಹಾಫಿಝ್ ಅಲ್ ಅಸದ್ ಬಹಳ ಹೀನಾಯವಾಗಿ ಅರಫಾತ್‌ರನ್ನು ತನ್ನ ನಾಡಿನಿಂದ ಹೊರಗೆಸೆದರು. ಆಗ ಅರಫಾತ್ ಲೆಬನಾನ್‌ಗೆ ಮರಳಲು ಪ್ರಯತ್ನಿಸಿದರು. ಆದರೆ ಲೆಬನಾನ್‌ನಲ್ಲಿದ್ದ ಅವರದೇ ಫತಹ್ ಬಣದ ಗುಂಪೊಂದು ಸಿರಿಯಾದ ಅಸದ್ ಜೊತೆ ಸೇರಿ ಅರಫಾತ್ ಪಡೆಗಳ ವಿರುದ್ಧ ಯುದ್ಧ ಸಾರಿದವು. ಬೇರೆ ದಾರಿ ಕಾಣದೆ ಅರಫಾತ್ ತಮ್ಮ ಅಳಿದುಳಿದ ಪಡೆಯ ಒಂದು ಭಾಗದೊಂದಿಗೆ, ಟ್ಯುನೀಶಿಯಾದಲ್ಲಿ ಆಶ್ರಯ ಪಡೆಯಬೇಕಾಯಿತು. ಅವರ ಇತರ ಕೆಲವು ತುಕಡಿಗಳು ಯಮನ್, ಅಲ್‌ಜೀರಿಯ, ಇರಾಕ್ ಮುಂತಾದ ಕಡೆಗಳಲ್ಲಿ ಆಶ್ರಯ ಪಡೆದವು.

ಇದರಿಂದ ಇಸ್ರೇಲ್‌ಗೆ ಆದ ನಷ್ಟವೇನೆಂದರೆ, 1982ರ ತನಕ ಕೇವಲ ಲೆಬನಾನ್‌ಗೆ ಸೀಮಿತವಾಗಿದ್ದು ಅಲ್ಲಿಂದ ಮಾತ್ರ ಇಸ್ರೇಲ್ ಮೇಲೆ ಧಾಳಿ ಮಾಡುತ್ತಿದ್ದ ಪಿಎಲ್‌ಒ ಪಡೆಗಳು ಇದೀಗ ಹಲವು ನೆರೆದೇಶಗಳಲ್ಲಿ ನೆಲೆಯೂರಿ, ಸ್ಥಳೀಯ ಸಂಪನ್ಮೂಲಗಳನ್ನು ಸಂಘಟಿಸಿ, ಇಸ್ರೇಲ್ ವಿರುದ್ಧ ವ್ಯವಸ್ಥಿತ ದಾಳಿಗಳನ್ನು ಮಾಡಲಾರಂಭಿಸಿದ್ದವು.

ಯಾಸಿರ್ ಅರಫಾತ್‌ರ ಪಾಲಿಗೆ ಅಲೆಮಾರಿತನದ ಯುಗ ಮುಗಿಯಲಿಲ್ಲವಾದರೂ, ಈ ಮಧ್ಯೆ ಅನೇಕ ಅಂತರ್‌ರಾಷ್ಟ್ರೀಯ ವೇದಿಕೆಗಳಲ್ಲಿ ಅವರು, ಫೆಲೆಸ್ತೀನ್‌ನ ರಾಷ್ಟ್ರೀಯ ಪ್ರತಿನಿಧಿಯಾಗಿ ಮನ್ನಣೆ ಗಳಿಸಲಾರಂಭಿದರು. ಆದರೆ ಕೊನೆಗೂ ಅವರಿಗೆ ತನ್ನ ತಾಯಿನಾಡಿಗೆ ಮರಳಲು ಸಾಧ್ಯವಾದದ್ದು 1994ರಲ್ಲಿ, ಅಂದರೆ ಇಸ್ರೇಲ್‌ಗೆ ಮನ್ನಣೆ ನೀಡುವ 1993ರ ಓಸ್ಲೋ ಒಪ್ಪಂದಕ್ಕೆ ಅವರು, ಹೆಬ್ಬೆಟ್ಟೊತ್ತಿದ ಬಳಿಕ ಮಾತ್ರ!

### ಆಲಿವ್ ಗೆಲ್ಲು ಮತ್ತು ಸ್ವಾತಂತ್ರ್ಯ ಹೋರಾಟಗಾರನ ಗನ್ನು

1974 ನವೆಂಬರ್ 13ರ ಆ ಘಟನೆ, ವಿಶ್ವಸಂಸ್ಥೆಯ ಇತಿಹಾಸದ ಒಂದು ಅನನ್ಯ ಘಟನೆಯಾಗಿತ್ತು. ಯಾವುದೇ ನಿರ್ದಿಷ್ಟ, ಅಧಿಕೃತ ದೇಶದ ಪ್ರಮುಖನಲ್ಲದ, ಪಿಎಲ್‌ಒ ಅಧ್ಯಕ್ಷ ಯಾಸಿರ್ ಅರಫಾತ್ ಅಂದು ವಿಶ್ವಸಂಸ್ಥೆಯ ಮಹಾಸಭೆಯನ್ನುದ್ದೇಶಿಸಿ ಮಾತನಾಡಿದರು. ಅಂದು ವಿಶ್ವಸಂಸ್ಥೆಯು ಪಿಎಲ್‌ಒ ಸಂಸ್ಥೆಗೆ, ತಮ್ಮದೇ ದೇಶದಲ್ಲಿ ಆಕ್ರಮಿತರೂ ನಿರಾಶ್ರಿತರೂ ಆಗಿದ್ದ ಫೆಲೆಸ್ತೀನ್ ಜನತೆಯ ಅಧಿಕೃತ ಪ್ರತಿನಿಧಿ ಎಂಬ ಸ್ಥಾನ ಮಾನ ನೀಡಿತ್ತು. ಇದು ಫೆಲೆಸ್ತೀನ್ ಜನತೆಯ ಪಾಲಿಗೆ, ಅವರ ಹಲವು ದಶಕಗಳ ವಿಮೋಚನಾ ಹೋರಾಟದಲ್ಲಿ ಒಂದು ಪ್ರಮುಖ ಮುನ್ನಡೆಯಾಗಿತ್ತು. ಅರಫಾತ್ ಆ ದಿನ ಅಧಿವೇಶನಕ್ಕೆ ಬಂದ ಶೈಲಿ, ಅವರು ಧರಿಸಿದ್ದ ಉಡುಗೆ, ಅವರ

ಆವೇಶಭರಿತ ಧ್ವನಿ ಮತ್ತು ಅರ್ಥಪೂರ್ಣ ಹಾವ ಭಾವ ಇವೆಲ್ಲವನ್ನೂ ಜಗತ್ತಿನ ವಿವಿಧೆಡೆಯ ವೀಕ್ಷಕರು ವಿಶೇಷವಾಗಿ ಗುರುತಿಸಿ ಪ್ರಶಂಸಿಸಿದರು. ಅಂದು ಅವರು ಅರಬಿ ಭಾಷೆಯಲ್ಲಿ ಮಾಡಿದ 90 ನಿಮಿಷಗಳ ಆ ಭಾಷಣದಲ್ಲಿ ಹೇಳಿದ ಹೆಚ್ಚಿನೆಲ್ಲ ಮಾತುಗಳು ಐತಿಹಾಸಿಕವಾಗಿದ್ದವು.

"ನಾನು ಒಂದು ಕೈಯಲ್ಲಿ (ಶಾಂತಿಯ ಸೂಚಕ) ಆಲಿವ್ ಗೆಲ್ಲು ಮತ್ತು ಇನ್ನೊಂದು ಕೈಯಲ್ಲಿ ಸ್ವಾತಂತ್ರ್ಯ ಹೋರಾಟಗಾರನ ಗನ್ನು ಹಿಡಿದುಕೊಂಡು ನಿಮ್ಮ ಬಳಿಗೆ ಬಂದಿದ್ದೇನೆ. ದಯವಿಟ್ಟು ಆಲಿವ್ ಗೆಲ್ಲನ್ನು ನನ್ನ ಕೈಯಿಂದ ಬೀಳಲು ಬಿಡಬೇಡಿ" – ಎಂಬ ಅರಫಾತ್ ಅವರ ಅಂದಿನ ಮಾತುಗಳು, ಮುಂದಿನ ದಿನಗಳಲ್ಲಿ, ಫೆಲೆಸ್ತೀನ್ ಭೂಪಟವನ್ನು ಹೋಲುವ ಅರಫಾತ್‌ರ ವಿಶಿಷ್ಟ ಶಿರವಸ್ತ್ರದಂತೆ, ಫೆಲೆಸ್ತೀನ್ ವಿಮೋಚನಾ ಹೋರಾಟದ ಹೆಗ್ಗುರುತುಗಳಾದವು.

### ಭ್ರಷ್ಟಾಚಾರದ ಪರ್ವ

ಒಂದು ಹಂತದಲ್ಲಿ ಅರಫಾತ್ ಮತ್ತು ಪಿಎಲ್‌ಒ ಬಳಿ ಬೇರೇನಿಲ್ಲದಿದ್ದರೂ ದುಡ್ಡು ಮಾತ್ರ ಧಾರಾಳವಾಗಿತ್ತು. ಫೆಲೆಸ್ತೀನ್ ಜನತೆಯ ಪರವಾಗಿ ಯಾವುದೇ ಅರಬ್ ಸರಕಾರ ಏನೂ ಮಾಡುತ್ತಿಲ್ಲ, ಅರಫಾತ್ ಮತ್ತವರ ಪಿಎಲ್‌ಒ ಮಾತ್ರ ಅಪಾರ ತ್ಯಾಗ ಬಲಿದಾನಗಳನ್ನು ನೀಡುತ್ತಿದೆ ಎಂದು ಅರಬ್ ದೇಶಗಳಲ್ಲಿ ಜನರು ನಂಬಿದ್ದರು. ಅವರಲ್ಲಿನ ಈ ವ್ಯಾಪಕ ಸಹಾನುಭೂತಿಯ ಫಲವಾಗಿ ಭಾರೀ ಆರ್ಥಿಕ ಸಹಾಯ ಅರಫಾತ್ ಕಡೆಗೆ ಹರಿದು ಬಂತು. 1991ರ ತನಕ ಕೊಲ್ಲಿಯ ಹೆಚ್ಚಿನೆಲ್ಲ ಸರಕಾರಗಳು, ವಿಶೇಷವಾಗಿ ಕುವೈತ್ ಮತ್ತು ಸೌದಿ ಅರೇಬಿಯಾ ಪಿಎಲ್‌ಒಗೆ ಬೃಹತ್ ವಾರ್ಷಿಕ ದೇಣಿಗೆಗಳನ್ನು ನೀಡುತ್ತಿದ್ದವು. ಈ ಮೂಲಕ ತಮ್ಮ ಸಮಾಜಗಳಲ್ಲಿ ಫೆಲೆಸ್ತೀನ್ ಪರ ಮತ್ತು ಇಸ್ರೇಲ್ ವಿರುದ್ಧ ಇದ್ದ ಆವೇಶದ ಭಾವನೆಗಳನ್ನು ತಣ್ಣಗಿಡುವುದು ಪ್ರಸ್ತುತ ಸರಕಾರಗಳ ಉದ್ದೇಶವಾಗಿತ್ತು. ಕೊಲ್ಲಿ ಪ್ರದೇಶದ ಹಲವು ದೊಡ್ಡ ಉದ್ಯಮಿಗಳು ಮತ್ತು ಕಂಪೆನಿಗಳು ಕೂಡಾ ಪಿಎಲ್‌ಒ ಪಾಲಿಗೆ ತುಂಬಾ ಉದಾರವಾಗಿದ್ದವು.

ಕುವೈತ್ ಮೇಲಿನ ಇರಾಕ್ ಆಕ್ರಮಣದ ಬಳಿಕ, ಅರಫಾತ್ ಪಾಳಯಕ್ಕೆ ಅರಬ್ ದೇಶಗಳ ನೆರವಿನ ಹರಿವು ನಿಂತು ಬಿಟ್ಟಿತ್ತು. ಆದರೆ 1993ರಲ್ಲಿ ಓಸ್ಲೋ ಒಪ್ಪಂದಕ್ಕೆ ತೆರೆ ಮರೆಯ ತಯಾರಿ ಆರಂಭವಾದ ಬೆನ್ನಿಗೆ, ಅಮೆರಿಕ ಮತ್ತು ಇಸ್ರೇಲ್‌ನ ಮಿತ್ರರಾಷ್ಟ್ರಗಳ ಕಡೆಯಿಂದ ನೆರವಿನ ಒಂದು ಹೊಸ ನೆರೆ ಹರಿದು ಬರತೊಡಗಿತು. ಈ ರೀತಿ ಅರಫಾತ್‌ರಿಗೆ ವಿವಿಧೆಡೆಯ ಲಕ್ಷಾಂತರ ಫೆಲೆಸ್ತೀನ್ ನಿರಾಶ್ರಿತರ ಯೋಗಕ್ಷೇಮ ನೋಡಿಕೊಳ್ಳುವುದಕ್ಕೆ, ತನ್ನ ಯೋಧರನ್ನು ಪೋಷಿಸುವುದಕ್ಕೆ ಮತ್ತು ಅವರಿಗೆ ಶಸ್ತ್ರಾಸ್ತ್ರ ಹಾಗೂ ಸವಲತ್ತುಗಳನ್ನು

ಒದಗಿಸುವುದಕ್ಕೆ ಎಂದೂ ಯಾವುದೇ ಆರ್ಥಿಕ ಕೊರತೆ ಉಂಟಾಗಲಿಲ್ಲ. ಮುಂದೆ ಕೂಡಾ, ಬಿಕ್ಕಟ್ಟು ತಲೆದೋರಿದ್ದು ಪ್ರಸ್ತುತ ಸಂಪತ್ತಿನ ಆಧಿಕ್ಯದಿಂದಲೇ ಹೊರತು ಅದರ ಕೊರತೆಯಿಂದಲ್ಲ!

ಅರಫಾತ್ ಎಂದೂ ಒಂಟಿಯಾಗಿರಲಿಲ್ಲ. ಅವರ ಸುತ್ತ ಮುತ್ತ ಭಟ್ಟಂಗಿಗಳು ಮತ್ತು ಆಸ್ಥಾನಿಗರ ಒಂದು ದೊಡ್ಡ ಪಟಾಲಮ್ ಸದಾ ಇರುತ್ತಿತ್ತು. ಅವರಲ್ಲಿ ಹೆಚ್ಚಿನವರು ತಮ್ಮ ಯವ್ವನದಲ್ಲಿ ಕ್ರಾಂತಿಕಾರಿಗಳಾಗಿದ್ದು ಕ್ರಮೇಣ ಎಲ್ಲ ಬಗೆಯ ದುಶ್ಚಟಗಳನ್ನು ಬೆಳೆಸಿಕೊಂಡು, ಪರಮ ಭ್ರಷ್ಟರಾಗಿ ಬದಲಾಗಿದ್ದವರು. ಅವರು ಎಲ್ಲ ಬಗೆಯ ಸುಖ ಭೋಗ, ಅಪರಾಧ, ಅವ್ಯವಹಾರ ಮತ್ತು ಹಗರಣಗಳಲ್ಲಿ ಶಾಮೀಲಾಗಿದ್ದರು. ವೈಯಕ್ತಿಕವಾಗಿ ಅರಫಾತ್‌ರ ಜೀವನ ಶೈಲಿ ಸರಳವಾಗಿತ್ತು. ಅವರನ್ನು ಯಾರೂ ಭ್ರಷ್ಟನೆಂದು ಕರೆದಿರಲಿಕ್ಕಿಲ್ಲ. ಆದರೆ ತಮ್ಮ ನಿಕಟವರ್ತಿಗಳನ್ನು ಲಗಾಮಿಲ್ಲದೆ ಮೇಯಲು ಬಿಟ್ಟ ಅರಫಾತ್, ಆ ಮಂದಿಯ ಕುಕೃತ್ಯಗಳ ಪರಿಣಾಮಗಳನ್ನೆಲ್ಲ ನೇರವಾಗಿ ತಾನೇ ಎದುರಿಸಬೇಕಾಯಿತು. ಶಿಷ್ಯರ ತಪ್ಪಿಗೆ ಗುರುವೇ ಬೆಲೆ ತೆರಬೇಕಾಯಿತು. ಅರಫಾತ್ ಸಕ್ರಿಯರಾಗಿದ್ದ ದಿನಗಳಲ್ಲೇ ಅವರ ಪಕ್ಷ, ಪ್ರಾಧಿಕಾರ ಮತ್ತು ಆಪ್ತವಲಯದಲ್ಲಿ ದೊಡ್ಡ ಪ್ರಮಾಣದ ಆರ್ಥಿಕ ಅವ್ಯವಹಾರಗಳು ಹೊರಬರಲು ಆರಂಭಿಸಿದ್ದವು. ಅರಫಾತ್‌ರ ಇಮೇಜು ಕಳಂಕಿತವಾಗಿತ್ತು. ಅವರ ಪತ್ನಿಯ ವಿಲಾಸಿ ಜೀವನ ಶೈಲಿಯಿಂದಾಗಿ ಗಾಸಿಪ್ ಕೋರರು ಹಬ್ಬ ಆಚರಿಸಿದರು. ಒಟ್ಟು ಸನ್ನಿವೇಶವು ಅರಫಾತ್‌ರ ನಿಯಂತ್ರಣ ತಪ್ಪಿತ್ತು. ಅವರ ಆಪ್ತ ವಲಯದ ಬಳಿ ಇದ್ದ ಅಕ್ರಮ ಸಂಪತ್ತಿನ ಪ್ರಮಾಣ ನಾಲ್ಕರಿಂದ ಎಂಟು ಬಿಲಿಯನ್ ಡಾಲರ್‌ಗಳಷ್ಟಿರಬಹುದೆಂಬ ಅಂದಾಜುಗಳು ಪ್ರಚಾರ ಪಡೆದವು.

ಅರಫಾತ್ ಅವರ ಮರಣದ ವೇಳೆ ಅವರು ಬಿಟ್ಟು ಹೋದ, ಅನಧಿಕೃತ ಸಂಪತ್ತಿನ ಒಟ್ಟು ಪ್ರಮಾಣ ಎಷ್ಟು? ಅದೆಲ್ಲಾ ಎಲ್ಲಿದೆ? ಇತ್ಯಾದಿ ಹಲವು ಪ್ರಶ್ನೆಗಳು ವ್ಯಾಪಕವಾಗಿ ತಲೆ ಎತ್ತಿದವು. ಅವುಗಳ ಉತ್ತರಕ್ಕಾಗಿ ಇಂದು ಕೂಡಾ ಹುಡುಕಾಟ ಮುಂದುವರಿದಿದೆ. ಅರಫಾತ್‌ರ ವರ್ಚಸ್ಸು, ಅವರ ಪಿಎಲ್‌ಒ ಸಂಘಟನೆಯ ಪ್ರತಿಷ್ಠೆ, ಅವರ ಪ್ರಾಧಿಕಾರದ ವಿಶ್ವಾಸಾರ್ಹತೆ ಮತ್ತು ಅವರ ಪಾಳಯದ ಏಕತೆ ಇವೆಲ್ಲವನ್ನೂ ನಾಶ ಮಾಡುವುದರಲ್ಲಿ ಬೇರಾವುದೇ ಶತ್ರುವಿಗಿಂತ, ಪ್ರಸ್ತುತ ಆರ್ಥಿಕ ಅವ್ಯವಹಾರದ ಪಾತ್ರವೇ ಅತಿದೊಡ್ಡದಾಗಿತ್ತು.

### ಸದ್ದಾಮ್ ಬಾವಿಗೆ ಧುಮುಕಿದಾಗ ಬಾಲ ಹಿಡಿದಿದ್ದ ಅರಫಾತ್

1990ರಲ್ಲಿ ಸದ್ದಾಮ್ ಹುಸೈನ್ ಕುವೈತ್ ಮೇಲೆ ಆಕ್ರಮಣ ಮಾಡಿದಾಗ ಅರಫಾತ್, ಆಗ ತಾನೇ ವಿವಾಹವಾದ ಸಂಭ್ರಮದಲ್ಲಿದ್ದರು. ಆಕ್ರಮಣಕ್ಕಿಂತ

ಮೂರು ವಾರ ಹಿಂದಷ್ಟೇ ಅವರ ವಿವಾಹ ನಡೆದಿತ್ತು. ಯಾಸಿರ್ ಅರಫಾತ್ ಎಷ್ಟೋ ವರ್ಷಗಳಿಂದ ಸದ್ದಾಮ್ ಹುಸೈನ್‌ರ ಮಿತ್ರರು. ಆದರೆ ಆ ಮೈತ್ರಿಯನ್ನು ಬಳಸಿ ಇಸ್ರೇಲ್ ವಿರುದ್ಧ ಏನಾದರೂ ಕಾರ್ಯಾಚರಣೆ ನಡೆಸುವಂತೆ ಸದ್ದಾಮ್‌ರ ಮನ ಒಲಿಸಲು ಅರಫಾತ್‌ರಿಗೆ ಸಾಧ್ಯವಾಗಲಿಲ್ಲ. ಆದರೆ ತಾನು ಕುವೈತ್ ಮೇಲೆ ಕುರುಡು ಆಕ್ರಮಣ ನಡೆಸಿದಾಗ, ಅದಕ್ಕೆ ಅರಫಾತ್ ಬೆಂಬಲ ಪಡೆಯಲು ಸದ್ದಾಮ್‌ಗೆ ಮಾತ್ರ ಸಾಧ್ಯವಾಯಿತು! ಇಸ್ರೇಲ್ ಮತ್ತು ಆಕ್ರಮಿತ ಫೆಲೆಸ್ತೀನ್‌ನ ಹಲವೆಡೆ, ಕೆಲವು ಜನಸಾಮಾನ್ಯರು ಕೂಡ ಸದ್ದಾಮ್‌ರನ್ನು ಬೆಂಬಲಿಸಿ, ಕುವೈತ್ ಮೇಲಿನ ಆಕ್ರಮಣವನ್ನು ಸಂಭ್ರಮಿಸಿದರು. ಸದ್ದಾಮ್ ಆಕ್ರಮಣಕ್ಕೆ ಅರಫಾತ್ ಘೋಷಿಸಿದ ಬೆಂಬಲವು ಸದ್ದಾಮ್‌ರನ್ನೇನೂ ಉಳಿಸಲಿಲ್ಲ. ಆದರೆ ಅದು ಅರಫಾತ್ ಮತ್ತವರ ಪಿಎಲ್‌ಒಗೆ ಮಾತ್ರವಲ್ಲ, ಒಟ್ಟು ಫೆಲೆಸ್ತೀನ್ ಜನತೆ ಮತ್ತವರ ಆಂದೋಲನದ ಪಾಲಿಗೆ ಘೋರ ಹಿನ್ನಡೆಯನ್ನು ತಂದೊಡ್ಡಿತು. ಹೆಚ್ಚಿನೆಲ್ಲ ಕೊಲ್ಲಿ ರಾಷ್ಟ್ರಗಳು ಪಿಎಲ್‌ಒಗೆ ಮಾತ್ರವಲ್ಲ ಫೆಲೆಸ್ತೀನ್ ನಿರಾಶ್ರಿತರಿಗೂ ತಮ್ಮ ಬೆಂಬಲವನ್ನು ಹಿಂದೆಗೆದು ಕೊಂಡವು. ಎಷ್ಟೋ ಅರಬ್ ದೇಶಗಳಲ್ಲಿ ನೌಕರಿ ಮಾಡುತ್ತಿದ್ದ ಲಕ್ಷಾಂತರ ಫೆಲೆಸ್ತೀನ್ ಮೂಲದ ಮಂದಿಯನ್ನು ಅಲ್ಲಿಂದ ಹೊರದಬ್ಬಲಾಯಿತು.

### ರಾಜಿಸ್ಥಾನದಲ್ಲಿ ಆಶ್ರಯ ಪಡೆದ ಅರಫಾತ್

ಅರಫಾತ್ ಅವರ ಹೋರಾಟ ಜೀವನದಲ್ಲಿ ದೊಡ್ಡ ರಾಜಿಗಳ ಪರ್ವ ಬಹಳ ತಡವಾಗಿ ಆರಂಭವಾಯಿತು. ಅವರು ಹಠಾತ್ತನೆ ರಾಜಿಗೆ ಧುಮುಕಿದವರಲ್ಲ. ಕಾಲಕ್ರಮೇಣ, ಮೆಲ್ಲ ಮೆಲ್ಲನೆ ರಾಜಿಯ ಕಡೆಗೆ ಹೆಜ್ಜೆ ಇಟ್ಟವರು. ಈ ವಿಷಯದಲ್ಲಿ ಅವರ ಪ್ರಯಾಣದ ಮೈಲುಗಲ್ಲುಗಳನ್ನು ಗಮನಿಸಿ: "ನಮ್ಮ ಮಟ್ಟಿಗೆ ಶಾಂತಿ ಅಂದರೆ ಇಸ್ರೇಲ್ ಸರಕಾರದ ನಿರ್ಮೂಲನವಲ್ಲದೆ ಬೇರೇನಲ್ಲ. ನಾವು ಒಂದು ಸರ್ವಾಂಗೀಣ ಯುದ್ಧಕ್ಕೆ ಸಜ್ಜಾಗುತ್ತಿದ್ದೇವೆ. ಹಲವು ತಲೆಮಾರುಗಳ ಕಾಲ ಮುಂದುವರಿಯಲಿರುವ ಯುದ್ಧ ಅದು" – ಇದು ಯಾಸಿರ್ ಅರಫಾತ್ ತನ್ನ ಹೋರಾಟದ ಆರಂಭದಿಂದ ಹಲವು ವರ್ಷಗಳ ತನಕ ತಾಳಿದ್ದ ಗಟ್ಟಿ ನಿಲುವಾಗಿತ್ತು.

1970ರಲ್ಲಷ್ಟೇ ಅವರು ಹೀಗೆ ಹೇಳಿದ್ದರು: "ಮೆಡಿಟರೇನಿಯನ್ ಸಮುದ್ರದಿಂದ ಜೋರ್ಡನ್ ನದಿಯವರೆಗಿನ ಭೂಮಿಯನ್ನು ವಿಮೋಚಿಸುವುದೇ ನಮ್ಮ ಗುರಿ. 1967ರ ಯುದ್ಧದಲ್ಲಿ ಏನಾಯಿತು ಅಥವಾ ಅದರ ಪರಿಣಾಮ ಏನಾಯಿತು ಎಂಬುದು ನಮಗೆ ಮುಖ್ಯವಲ್ಲ. ಝಿಯೋನಿಸ್ಟ್ ಸರಕಾರವನ್ನು ಇಲ್ಲವಾಗಿಸಿ ನಮ್ಮ ನೆಲವನ್ನು ಮುಕ್ತಗೊಳಿಸಬೇಕೆಂಬುದೇ ಫೆಲೆಸ್ತೀನ್ ಕ್ರಾಂತಿಯ ಮೂಲ ಧ್ಯೇಯ."

ಆದರೆ ಅರಫಾತ್ ತಮ್ಮ ಆಂದೋಲನದ ಅಸ್ತಿತ್ವಕ್ಕಾಗಿ ಹಲವು ಅರಬ್ ಸರಕಾರಗಳನ್ನು ಅವಲಂಬಿಸಿದ್ದರಿಂದ, ಅವರು ಆ ಸರಕಾರಗಳ ಧೋರಣೆಗಳನ್ನು ಕಡೆಗಣಿಸುವಂತಿರಲಿಲ್ಲ. 1973ರ ಯುದ್ಧದ ಬಳಿಕ ಅವರ ನಿಲುವು ಸಡಿಲವಾಗತೊಡಗಿತು. 1973–74ರ ನಡುವೆ ನಡೆದ ಹಲವು ಅರಬ್ ಶೃಂಗ ಸಭೆಗಳಲ್ಲಿ ಅವರು ಸಂಪೂರ್ಣ ಫೆಲೆಸ್ತೀನ್ ಬೇಕೆಂದು ಆಗ್ರಹಿಸುವ ಬದಲು, ಇಸ್ರೇಲ್‌ನ ಅಸ್ತಿತ್ವವನ್ನು ಅಂಗೀಕರಿಸಿ, ಅದರ ಗಡಿಗಳ ಪೈಕಿ ಯಾವುದು ಅಕ್ರಮ ಮತ್ತು ಯಾವುದು ಸಕ್ರಮ ಎಂದು ಚರ್ಚಿಸುವ ಈಜಿಪ್ಟ್‌ನ ಧೋರಣೆಗೆ ನಿಕಟವಾಗತೊಡಗಿದರು.

ಈ ಬದಲಾವಣೆ ವ್ಯರ್ಥವಾಗಲಿಲ್ಲ. ಪಿಎಲ್‌ಒ ಬಳಿ ಸರಕಾರವಿಲ್ಲದಿದ್ದರೂ ಹೆಚ್ಚಿನ ಅರಬ್ ದೇಶಗಳಲ್ಲಿ, ಅದಕ್ಕೆ ಫೆಲೆಸ್ತೀನ್ ಜನತೆಯ ಪ್ರತಿನಿಧಿ ಎಂಬ ನೆಲೆಯಲ್ಲಿ ರಾಯಭಾರ ಕಚೇರಿಗಳನ್ನು ತೆರೆಯುವ ಅವಕಾಶ ಸಿಕ್ಕಿತು. ಅರಫಾತ್‌ರಿಗೆ ವಿಶ್ವಸಂಸ್ಥೆಯ ಮಹಾ ಅಧಿವೇಶನದಲ್ಲಿ ಮಾತನಾಡುವ ಗೌರವ ಪ್ರಾಪ್ತವಾಯಿತು. ಅನೇಕ ಯುರೋಪಿಯನ್ ದೇಶಗಳು ಕೂಡಾ ಪಿಎಲ್‌ಒಗೆ ಮಾನ್ಯತೆ ನೀಡಿ ಅದರ ಜೊತೆ ಮಾತುಕತೆ ಆರಂಭಿಸಿದವು. ಆದರೆ ಇಸ್ರೇಲ್ ವಿರುದ್ಧ ಸಶಸ್ತ್ರ ಹೋರಾಟ ನಡೆಸುವ ಪಡೆ ಎಂಬ ನೆಲೆಯಲ್ಲಿ ಪಿಎಲ್‌ಒ ಪಾತ್ರ ಮುಂದುವರಿಯಿತು.

1976ರಲ್ಲಿ ಅಮೆರಿಕದ ಪ್ರತಿನಿಧಿಯೊಬ್ಬರ ಜೊತೆ ಮಾತನಾಡಿದ ಅರಫಾತ್ "ಇಸ್ರೇಲ್ ಸರಕಾರ ಪಶ್ಚಿಮ ದಂಡೆ ಮತ್ತು ಗಾಝಾ ಪಟ್ಟಿಯಿಂದ ಕೆಲವು ಮೈಲುಗಳಷ್ಟಾದರೂ ಹಿಂದೆ ಸರಿದು ಆ ಪ್ರದೇಶಗಳನ್ನು ವಿಶ್ವಸಂಸ್ಥೆಯ ಉಸ್ತುವಾರಿಗೆ ಬಿಟ್ಟುಕೊಡಲಿ. ಇಸ್ರೇಲ್ ಅಷ್ಟನ್ನೂ ಮಾಡದಿದ್ದರೆ, ಅದರ ಅಸ್ತಿತ್ವಕ್ಕೆ ಮಾನ್ಯತೆ ಕೊಡುವ ನಮ್ಮ ನಿರ್ಧಾರವನ್ನು ನಾವು ನಮ್ಮ ಜನರ ಮುಂದೆ ಸಮರ್ಥಿಸುವುದು ಹೇಗೆ?" ಎಂದು ಕೇಳಿದ್ದರು. ಎಷ್ಟೊಂದು ಹತಾಶೆ ಇದೆ ಈ ಪ್ರಶ್ನೆಯಲ್ಲಿ!

1982ರಲ್ಲಿ ಇಸ್ರೇಲ್ ಸೇನೆ ಪಿಎಲ್‌ಒ ಪಡೆಗಳನ್ನು ಸದೆಬಡಿದು ಬಿಟ್ಟ ಬಳಿಕ, "ಇಸ್ರೇಲ್ ಸೇನೆ ಎಷ್ಟು ಬಲಿಷ್ಠವಾಗಿತ್ತು?" ಎಂದು ಯಾರೋ ಪ್ರಶ್ನಿಸಿದಾಗ ಅರಫಾತ್ ಹೇಳಿದರು: "ಅಲ್ಲಾಹನಾಣೆ, ಅದು ಸೋಲಿಸಲಿಕ್ಕಾಗದಷ್ಟು ಬಲಿಷ್ಠ ಸೇನೆಯೇನೂ ಆಗಿರಲಿಲ್ಲ. ನನ್ನ ಜನರೆಲ್ಲಾ ನನ್ನ ಜೊತೆ ನಿಂತಿರುತ್ತಿದ್ದರೆ, ಅದು ಎಷ್ಟು ಕ್ಷೀಣ ಸೇನೆಯಾಗಿತ್ತು ಎಂಬುದನ್ನು ನಾನು ಜಗತ್ತಿಗೆ ತೋರಿಸಿ ಕೊಡುತ್ತಿದ್ದೆ."

1988 ನವೆಂಬರ್ 15ರಂದು ಪಿಎಲ್‌ಒ, ಸ್ವತಂತ್ರ ಫೆಲೆಸ್ತೀನ್ ದೇಶದ ಸ್ಥಾಪನೆಯನ್ನು ಘೋಷಿಸಿತು. ಮುಂದಿನ ತಿಂಗಳ ತಮ್ಮ ಭಾಷಣಗಳಲ್ಲಿ

ಅರಫಾತ್ "ಸರಕಾರಿ ಭಯೋತ್ಪಾದನೆಯ ಸಹಿತ, ಭಯೋತ್ಪಾದನೆಯ ಎಲ್ಲ ಪ್ರಕಾರಗಳನ್ನು ನಾನು ಖಂಡಿಸುತ್ತೇನೆ" ಎಂದು ಹೇಳಿದರು. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ 242ನೇ ಗೊತ್ತುವಳಿಯನ್ನು ತಾನು ಒಪ್ಪುವುದಾಗಿ ಘೋಷಿಸಿದರು ಮತ್ತು ಶಾಂತಿ ಹಾಗೂ ಭದ್ರತೆಯೊಂದಿಗೆ ಅಸ್ತಿತ್ವದಲ್ಲಿರಲು ಇಸ್ರೇಲ್‌ಗೆ ಇರುವ ಹಕ್ಕನ್ನು ತಾನು ಅಂಗೀಕರಿಸುವುದಾಗಿ ಸ್ಪಷ್ಟಪಡಿಸಿದರು.

ಈ ರೀತಿ ಅರಫಾತ್ ನ್ಯಾಯದ ಬದಲು ಶಾಂತಿಯ ಕಡೆಗೆ ಹೆಜ್ಜೆ ಇಡಲಾರಂಭಿಸಿದರು. ಇದರೊಂದಿಗೆ ಅವರ ಹಾಗೂ ಪಿಎಲ್‌ಒ ಕುರಿತು ಅಮೆರಿಕದ ನಿಲುವು ಬದಲಾಗತೊಡಗಿತು. ಪಿಎಲ್‌ಒ ಅನ್ನು ಕೇವಲ ಒಂದು ಭಯೋತ್ಪಾದಕ ಸಂಘಟನೆ ಎಂದು ಮಾತ್ರ ಗುರುತಿಸುತ್ತಿದ್ದ ಅಮೆರಿಕ, ಅದರ ಜೊತೆ ಮಾತುಕತೆಗೆ ಒಲವು ತೋರಿತು. ಒಮ್ಮೆ ಭಯೋತ್ಪಾದಕರಾಗಿದ್ದವರು ಯಾವಾಗಲೂ ಭಯೋತ್ಪಾದಕರಾಗಿರಬೇಕಾಗಿಲ್ಲ ಎಂಬ ಫಿಲಾಸಫಿ ಚರ್ಚೆಗೆ ಬಂತು. ಕೆಲವೇ ತಿಂಗಳಲ್ಲಿ, ಅಂದರೆ 1989 ಎಪ್ರಿಲ್‌ನಲ್ಲಿ ಫೆಲೆಸ್ತೀನ್ ರಾಷ್ಟ್ರೀಯ ಸಮಿತಿ ಎಂಬ ಪಿಎಲ್‌ಒ ಆಡಳಿತ ಮಂಡಳಿಯು ಅರಫಾತ್‌ರನ್ನು ಘೋಷಿತ ಫೆಲೆಸ್ತೀನ್ ಸರಕಾರದ ಅಧ್ಯಕ್ಷರಾಗಿ ಆರಿಸಿತು.

1990–91ರಲ್ಲಿ ಸದ್ದಾಮ್ ಹುಸೈನ್‌ರನ್ನು ಬೆಂಬಲಿಸುವ ತನ್ನ ನಿಲುವಿನಿಂದಾಗಿ ಅರಫಾತ್ ಹಲವು ಮಿತ್ರರನ್ನು ಕಳೆದುಕೊಳ್ಳಬೇಕಾಯಿತು. ಈ ಹಿಂದೆ ಅವರನ್ನು ಬೆಂಬಲಿಸಿದ್ದ ಅನೇಕ ಕೊಲ್ಲಿ ದೇಶಗಳು ಅವರ ವಿರುದ್ಧ ತಿರುಗಿ ಬಿದ್ದವು. ಕೆಲವು ದೇಶಗಳು ಪಿಎಲ್‌ಒಗೆಂದು ನಿಗದಿಪಡಿಸಿದ್ದ ಅನುದಾನಗಳನ್ನು ಫೆಲೆಸ್ತೀನ್‌ನಲ್ಲಿರುವ ಅದರ ಪ್ರತಿಸ್ಪರ್ಧಿ ಹಮಾಸ್‌ಗೆ ಪಾವತಿಸಿದವು. ಸ್ವತಃ ಅರಫಾತ್‌ರ ಪಿಎಲ್‌ಒ ಮತ್ತು ಫತಹ್ ಸಂಘಟನೆಗಳ ಒಳಗೆ ಭಾರೀ ಅಸಮಾಧಾನ ಭುಗಿಲೆದ್ದಿತು. ಪಕ್ಷದೊಳಗೆ ಬಂಡುಕೋರ ಚಟುವಟಿಕೆಗಳು ಮಾತ್ರವಲ್ಲ, ಪದಾಧಿಕಾರಿಗಳ ಹತ್ಯೆಯ ಪ್ರಕರಣಗಳೂ ನಡೆದವು.

❖ ❖ ❖

## 17

# ಇನ್ತಿಫಾದಃವನ್ನು ಹತ್ತಿಕ್ಕಲು ಅರಫಾತ್ ಬೇಕಾದರೇ?

ಮೇಲ್ನೋಟಕ್ಕೆ ಇದು, ಅರಫಾತ್ ರನ್ನು ಮೂಲೆಗುಂಪಾಗಿಸಿ ಬಿಡುವುದಕ್ಕೆ ಇಸ್ರೇಲ್ ಮತ್ತು ಅಮೆರಿಕದವರ ಪಾಲಿಗೆ ಒಂದು ಅತ್ಯಮೂಲ್ಯ ಅವಕಾಶವಾಗಿತ್ತು. ಆಗ ಅವರು ಹಾಗೆ ಮಾಡಿದ್ದರೆ ಅದಕ್ಕೆ ಎಲ್ಲ ಅರಬ್ ದೇಶಗಳ ಸಹಕಾರವೂ ಸಿಕ್ಕಿ ಬಿಡುತ್ತಿತ್ತು. ಆದರೆ ಅತ್ತ ಫೆಲೆಸ್ತೀನ್‌ನಲ್ಲಿ ಒಂದು ದೊಡ್ಡ ಹೊಸ ಶಕ್ತಿ ತಲೆ ಎತ್ತಲು ಆರಂಭಿಸಿತ್ತು. 1987ರ ಕೊನೆಯಲ್ಲಿ 'ಪ್ರಥಮ ಇನ್ತಿಫಾದಃ'ದ ಹೆಸರಲ್ಲಿ ಕಾಣಿಸಿಕೊಂಡ ಆ ಶಕ್ತಿಯ ಅನನ್ಯ ವಿಶೇಷತೆಗಳನ್ನು ಮತ್ತು ಅದರ ಒಳಗೆ ಅವಿತಿದ್ದ ಅಪಾರ ಸಾಧ್ಯತೆಗಳ ಜಗತ್ತೊಂದನ್ನು ಇಸ್ರೇಲ್ ಮತ್ತು ಅಮೆರಿಕಗಳು ಸಕಾಲದಲ್ಲಿ ಗುರುತಿಸಿಕೊಂಡಿದ್ದವು. ಆ ಶಕ್ತಿಯನ್ನು ಹತ್ತಿಕ್ಕಲು ಅವರಿಗೆ ಅರಫಾತ್ ನೆರವು ಅನಿವಾರ್ಯವಾಗಿತ್ತು. ಆದ್ದರಿಂದಲೇ ಅವರು ಅರಫಾತ್‌ರನ್ನು ಮತ್ತೆ ತಮ್ಮ ಆಪ್ತರಾಗಿಸಿಕೊಂಡರು.

1988ರಲ್ಲಿ ಅಮೆರಿಕದ ಒಂದು ನಿಯೋಗದವರು ಅನೌಪಚಾರಿಕವಾಗಿ ಇನ್ತಿಫಾದಃ ಕುರಿತು ಪ್ರಸ್ತಾಪಿಸಿದಾಗ ಅರಫಾತ್ ಹೇಳಿದ್ದರು: "ಅದನ್ನು ತಡೆಯಲು ನನಗಾಗಲಿ ಬೇರೆ ಯಾರಿಗೇ ಆಗಲಿ ಸಾಧ್ಯವಿಲ್ಲ. ನಮ್ಮ ರಾಷ್ಟ್ರೀಯ ಗುರಿಯ ಸಾಧನೆಯ ನಿಟ್ಟಿನಲ್ಲಿ ನಿಜವಾದ ಮುನ್ನಡೆಯ ಕ್ರಮಗಳನ್ನು ಕೈಗೊಂಡಾಗ ಮಾತ್ರ ಅದು ಸ್ಥಗಿತಗೊಂಡೀತು".

ಅಮೆರಿಕ, 1993ರಲ್ಲಿ ಓಸ್ಲೋ ಒಪ್ಪಂದಕ್ಕಾಗಿ ಅರಫಾತ್ ಮತ್ತವರ ಬಳಗದ ಜೊತೆ ಗುಪ್ತ ಸಮಾಲೋಚನೆಗಳ ಹೊಸ ಸರಣಿಯೊಂದನ್ನು ಆರಂಭಿಸಿತು. ಹಲವು ಸುತ್ತುಗಳ ಈ ಪ್ರಕ್ರಿಯೆಯಲ್ಲಿ ನಾರ್ವೇ ಸರಕಾರ ಮತ್ತು ಅಮೆರಿಕದ ಕೆಲವು ಪರಮಾಪ್ತ ಅರಬ್ ದೇಶಗಳು ಸಕ್ರಿಯ ಪಾತ್ರ ವಹಿಸಿದವು. ಇದನ್ನು ಕೂಡಾ, ಶಾಂತಿ ಪ್ರಕ್ರಿಯೆ, ಫೆಲೆಸ್ತೀನ್ ಜನತೆಗೆ ಸ್ವನಿರ್ಧಾರದ ಅಧಿಕಾರ ನೀಡುವ ಪ್ರಕ್ರಿಯೆ, ಭದ್ರತಾ ಮಂಡಳಿಯ 242 ಮತ್ತು 338ನೇ ಗೊತ್ತುವಳಿಗಳ ಅನುಷ್ಠಾನದ ಪ್ರಕ್ರಿಯೆ ಎಂದೆಲ್ಲಾ ಕರೆಯಲಾಯಿತು. ಜೊತೆಗೆ, "ಈ ಪ್ರಾಂತದಲ್ಲಿ ಶಾಂತಿ ಸ್ಥಾಪನೆ ಕೇವಲ ಒಬ್ಬ ವ್ಯಕ್ತಿಗೆ ಮಾತ್ರವೇ ಸಾಧ್ಯ. ಅವರೇ ಯಾಸಿರ್ ಅರಫಾತ್" ಎಂಬ ಅಪಾರ ಪ್ರಶಂಸೆಯ ಮಾತುಗಳೂ ಕೇಳಿ ಬರಲಾರಂಭಿಸಿದವು.

ಹೀಗೆ ರಂಗ ಸಜ್ಜುಗೊಂಡ ಬೆನ್ನಿಗೆ, 1993 ಸೆಪ್ಟಂಬರ್13ರಂದು ವಾಶಿಂಗ್ಟನ್‌ನಲ್ಲಿ ಇಸ್ರೇಲ್ ಮತ್ತು ಪಿಎಲ್‌ಒ ಮಧ್ಯೆ ಪ್ರಥಮ ಅಧಿಕೃತ ಒಪ್ಪಂದವೊಂದು ಏರ್ಪಟ್ಟಿತು. ಪ್ರತಿಯೊಂದು ಒಪ್ಪಂದವೂ ಕೇವಲ ಇಸ್ರೇಲ್ ಅನ್ನು ಬಲಪಡಿಸಿ ಫೆಲೆಸ್ತೀನ್ ಜನತೆಯ ಅಸಹಾಯಕತೆಯನ್ನು ಹೆಚ್ಚಿಸುವುದು ಬಿಟ್ಟರೆ ಬೇರೇನನ್ನೂ ಸಾಧಿಸುವುದಿಲ್ಲ ಎಂಬ ನಂಬಿಕೆ ಅರಬ್ ನಾಡುಗಳಲ್ಲಿ ಅದಾಗಲೇ ಆಳವಾಗಿ ಬೇರೂರಿತ್ತು. ಇದನ್ನು ಮುರಿಯಲು, "ಪಿಎಲ್‌ಒ ಜೊತೆ ಯಾವುದೇ ಮಾತುಕತೆಗೆ ಇಸ್ರೇಲ್‌ನ ರಾಜಕೀಯ ಪಕ್ಷಗಳು ತಯಾರಿಲ್ಲ. ಆದರೂ ಅಧ್ಯಕ್ಷ ಬಿಲ್ ಕ್ಲಿಂಟನ್‌ರ ಆಗ್ರಹದ ಮೇರೆಗೆ ಇಸ್ರೇಲ್‌ನ ಇಟ್ಸ್ ಹಾಕ್ ರಾಬಿನ್ ಅವರು ಅರಫಾತ್ ಜೊತೆ ಕೈ ಮಿಲಾಯಿಸಲು ಒಲ್ಲದ ಮನಸ್ಸಿನಿಂದ ಸಮ್ಮತಿಸಿದರು" ಎಂದು ಪದೇ ಪದೇ ಜಗತ್ತಿಗೆ ಹೇಳಲಾಯಿತು. ಈ ಮೂಲಕ, ಇಸ್ರೇಲ್ ಸರಕಾರವು ಶಾಂತಿಗಾಗಿ, ಫೆಲೆಸ್ತೀನ್‌ನ ಸ್ವಾಧಿಕಾರದ ಹಕ್ಕನ್ನು ಸಮ್ಮತಿಸುವ ಔದಾರ್ಯ ತೋರಿದೆ ಎಂದು ಜಗತ್ತನ್ನು ನಂಬಿಸಲಾಯಿತು.

1978ರಲ್ಲಿ, ಪ್ರಥಮ ಕ್ಯಾಂಪ್ ಡೇವಿಡ್ ಒಪ್ಪಂದದ ಬೆನ್ನಿಗೆ, ಈಜಿಪ್ಟ್ ಅಧ್ಯಕ್ಷ ಅನ್ವರ್ ಸಾದಾತ್ ಮತ್ತು ಇಸ್ರೇಲ್ ನಾಯಕ ಬೆಗಿನ್‌ರಿಗೆ ನೊಬೆಲ್ ಶಾಂತಿ ಪ್ರಶಸ್ತಿ ನೀಡಿದಂತೆ, 1993ರ ಓಸ್ಲೋ ಒಪ್ಪಂದದ ಬೆನ್ನಿಗೆ, 1994ರ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಅರಫಾತ್‌ರಿಗೆ ಮತ್ತು ಇಸ್ರೇಲ್ ನಾಯಕದ್ವಯರಾದ ಶಿಮೊನ್ ಪೆರೆಜ್ ಮತ್ತು ಇಟ್ಸ್ ಹಾಕ್ ಸಮೀರ್‌ರಿಗೆ ನೀಡಲಾಯಿತು.

### ರಾಜಿಯಿಂದ ಸಿಕ್ಕಿದ್ದೇನು?

ಇಸ್ರೇಲ್ ಮಾಡುವ ಯಾವುದೇ ಒಪ್ಪಂದದಿಂದ ಇಸ್ರೇಲ್ ಹೊರತು ಬೇರೆ ಯಾರಿಗೂ ಚಿಕ್ಕಾಸಿನ ಲಾಭವಾದ ಇತಿಹಾಸ ಇಲ್ಲ ಎಂದು 1993ರ ಓಸ್ಲೋ

ಒಪ್ಪಂದಕ್ಕೆ ಮುನ್ನವೇ ಅನೇಕ ಮಂದಿ ಅರಫಾತ್ ಮತ್ತು ಅವರ ಬೆಂಬಲಿಗರನ್ನು ಸ್ಪಷ್ಟವಾಗಿ ಎಚ್ಚರಿಸಿದ್ದರು. ಆದರೆ ಅದಕ್ಕೆಲ್ಲಾ ಅರಫಾತ್ ಕಿವಿಕೊಟ್ಟಿರಲಿಲ್ಲ. ಅವರಂತೂ ಓಸ್ಲೋ ಒಪ್ಪಂದದಿಂದ ಇಸ್ರೇಲ್‌ಗೆ ಮನ್ನಣೆ ದೊರೆತರೂ, ಫೆಲೆಸ್ತೀನ್ ಜನತೆಗೆ ಅದರಿಂದ ದೂರಗಾಮಿ ಲಾಭಗಳಾಗಲಿವೆ, ಭವಿಷ್ಯದಲ್ಲಿ ಒಂದು ಸ್ವತಂತ್ರ ಮತ್ತು ಸುಭದ್ರ ಫೆಲೆಸ್ತೀನ್ ಸರಕಾರದ ನಿರ್ಮಾಣಕ್ಕೆ ಹಾದಿ ಸುಗಮವಾಗಲಿದೆ – ಎಂದೆಲ್ಲಾ ನಂಬಿದ್ದರು. ಇದೆಲ್ಲ ಭ್ರಮೆ ಮಾತ್ರವಾಗಿತ್ತು ಎಂದು ಸಾಬೀತಾಗಲು ಹೆಚ್ಚು ದಿನ ಬೇಕಾಗಲಿಲ್ಲ.

ಅಂದ ಹಾಗೆ, ಒಪ್ಪಂದಕ್ಕೆ ಸಹಿ ಹಾಕುವ ಕಾರ್ಯ ಅಮೆರಿಕದ ಶ್ವೇತಭವನದಲ್ಲಿ ನಡೆದಿರುವಾಗ ಅದಕ್ಕೆ 'ಓಸ್ಲೋ ಒಪ್ಪಂದ' ಎಂಬ ನಾರ್ವೇ ದೇಶದ ರಾಜಧಾನಿಯ ಹೆಸರು ಬರಲು ಕಾರಣವೇನು? ಎಂಬ ಕುತೂಹಲ ಕೆಲವರಿಗಿದೆ. ನಿಜವಾಗಿ, ಈ ಒಪ್ಪಂದದ ಆರಂಭದಿಂದ ಕೊನೆತನಕವೂ ಇದಕ್ಕೆ ಸಂಬಂಧಿಸಿದ ಎಲ್ಲ ಪೂರ್ವಭಾವಿ ಸಿದ್ಧತೆ, ಮಾತುಕತೆ ಇತ್ಯಾದಿಗಳನ್ನು ನಡೆಸಿದ್ದು ನಾರ್ವೇ ದೇಶದ 'ಫ್ರೆಂಡ್ಸ್ ಆಫ್ ಇಸ್ರೇಲ್' ಎಂಬ ಒಂದು ಶಕ್ತಿಶಾಲಿ ಝಿಯೋನಿಸ್ಟ್ ಗುಂಪು. ನಾರ್ವೇಯ ಕನಿಷ್ಠ 60ಶೇ. ಸಂಸದ್ ಸದಸ್ಯರು ಝಿಯೋನಿಸ್ಟ್ ಪಂಥದ ಬೆಂಬಲಿಗರಾಗಿದ್ದು ಎಲ್ಲ ವಿಷಯಗಳಲ್ಲಿ ಅಮೆರಿಕಕ್ಕಿಂತ ಹೆಚ್ಚಿನ ಉತ್ಸಾಹದೊಂದಿಗೆ ಇಸ್ರೇಲನ್ನು ಬೆಂಬಲಿಸುತ್ತಾ ಬಂದಿದ್ದಾರೆ. ಹಾಗೆಯೇ, ಎಲ್ಲ ಸಂದರ್ಭಗಳಲ್ಲಿ ಬಹಿರಂಗವಾಗಿ ಫೆಲೆಸ್ತೀನ್‌ಗೆ ಪ್ರತಿಕೂಲವಾದ ನಿಲುವು ತಾಳುತ್ತಾ ಬಂದಿದ್ದಾರೆ. ಅಂಥವರು ಅಷ್ಟೊಂದು ಮುತುವರ್ಜಿಯಿಂದ ಪ್ರಾಯೋಜಿಸಿದ ಒಪ್ಪಂದದಿಂದ ಫೆಲೆಸ್ತೀನ್‌ಗೆ ಲಾಭವಾಗದು ಎಂಬುದು ಅರ್ಥವಾಗದಷ್ಟು ಅರಫಾತ್ ಮುಗ್ಧರಾಗಿದ್ದರೇ? ಅರಫಾತ್ ಪರಿಚಯವಿರುವ ಯಾರೂ ಅದನ್ನೊಪ್ಪಲು ಸಿದ್ಧರಿಲ್ಲ.

ಮುಂದೆ 1995ರಲ್ಲಿ ಓಸ್ಲೋ ಒಪ್ಪಂದದ ಉಳಿದ ಭಾಗಗಳಿಗೆ ಸಹಿ ಮಾಡುವ ಪ್ರಕ್ರಿಯೆ ಕೂಡಾ ಪೂರ್ತಿಯಾಯಿತು. ಆದರೆ, ಒಪ್ಪಂದದಲ್ಲಿ ಒಪ್ಪಲಾದ ಕ್ರಮಗಳನ್ನು ಅನುಷ್ಠಾನಿಸುವ ಪ್ರಶ್ನೆ ಬಂದಾಗ ಇಸ್ರೇಲ್ ತನ್ನ ನಿಜಬಣ್ಣವನ್ನು ಪ್ರದರ್ಶಿಸಿತು. ಇಸ್ರೇಲ್‌ಗೆ, ತನ್ನ ಕಡೆಯಿಂದ ಒಪ್ಪಂದ ಮುರಿಯುವುದಕ್ಕೆ ಧಾರಾಳ ನೆಪಗಳು ಸಿಕ್ಕವು. 1995 ನವೆಂಬರ್‌ನಲ್ಲಿ ಉಗ್ರವಾದಿ ಯಹೂದಿ ವಿದ್ಯಾರ್ಥಿಯೊಬ್ಬ ಪ್ರಧಾನಿ ರಾಬಿನ್‌ರನ್ನು ಗುಂಡೆಸೆದು ಕೊಂದು ಬಿಟ್ಟ. ಈ ದುರಂತ ಮತ್ತು ಮುಂದಿನ ಕೆಲವು ರಾಜಕೀಯ ಬೆಳವಣಿಗೆಗಳ ಹೆಸರಲ್ಲಿ ಇಸ್ರೇಲ್, ಒಪ್ಪಂದದ ವಿವಿಧ ಅಂಶಗಳ ಅನುಷ್ಠಾನವನ್ನು ಅನಿರ್ದಿಷ್ಟಾವಧಿಗೆ ವಿಳಂಬಿಸುತ್ತಾ ಹೋಯಿತು. ಒಪ್ಪಂದದ ವೇಳೆ ಎಷ್ಟೋ ನಿರ್ಣಾಯಕ ವಿಷಯಗಳ ಕುರಿತು ಸಂವಾದವನ್ನು ಮುಂದಿನ ಹಂತಗಳಿಗೆಂದು

ಮುಂದೂಡಲಾಗಿತ್ತು. ಆದರೆ ಒಪ್ಪಂದದ ಬಳಿಕ ಇಸ್ರೇಲ್ ಆ ವಿಷಯಗಳ ಕುರಿತು ಚರ್ಚಿಸಲು ಯಾವ ಆಸಕ್ತಿಯನ್ನೂ ತೋರಲಿಲ್ಲ. ಮಾತ್ರವಲ್ಲ, ಅದು ಒಪ್ಪಂದದಲ್ಲಿ ಸ್ಪಷ್ಟವಾಗಿ ಒಪ್ಪಲಾದ ಕ್ರಮಗಳನ್ನೂ ಅನುಷ್ಠಾನಿಸದೆ ಒಪ್ಪಂದವನ್ನು ಸಂಪೂರ್ಣ ಉಲ್ಲಂಘಿಸಿತು.

1998ರಲ್ಲಿ ಇಸ್ರೇಲ್ ನಾಗರಿಕರು ತಮ್ಮ ದೇಶದ ಸ್ಥಾಪನೆಯ 50ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದ್ದಾಗ, ತಾನು ಮೋಸ ಹೋಗಿದ್ದೇನೆಂಬ ಅರಿವಿನಿಂದ ತೀವ್ರ ನಿರಾಶೆಯ ಸ್ಥಿತಿಯಲ್ಲಿದ್ದ ಅರಫಾತ್ ಹೇಳಿದರು: "ಓಸ್ಲೋ ಒಪ್ಪಂದದ ಪ್ರಕಾರ 5 ವರ್ಷಗಳ ಹಂಗಾಮಿ ಅವಧಿಯ ಬಳಿಕ ಎಲ್ಲವೂ ಕಾರ್ಯಗತವಾಗಬೇಕು. 1999 ಮೇ 4ರಂದು ನಾವು ನಮ್ಮದೇ ಆದ ಒಂದು ಸ್ವತಂತ್ರ ಫೆಲೆಸ್ತೀನ್ ದೇಶದ ಸ್ಥಾಪನೆಯನ್ನು ಘೋಷಿಸಬಹುದು. ನೆತನ್ಯಾಹುಗೆ ಅದು ಇಷ್ಟವಿಲ್ಲ ಎಂದಾದರೆ ಆತ ಕಪ್ಪು ಸಮುದ್ರದ ನೀರು ಕುಡಿಯಲಿ."

ಆದರೆ ಒಂದು ಸ್ವತಂತ್ರ ದೇಶದ ಸ್ಥಾಪನೆಯನ್ನು ಘೋಷಿಸುವುದಕ್ಕೆ ಬೇಕಾದ ಯಾವುದೇ ತಯಾರಿ ಅಂದೂ ನಡೆದಿರಲಿಲ್ಲ. ಇಂದೂ ನಡೆದಿಲ್ಲ. ಸ್ವಾತಂತ್ರ್ಯ ಬಯಸುವವರನ್ನು ಅಮಾನುಷವಾಗಿ ತುಳಿಯುವ ಪ್ರಕ್ರಿಯೆ ಮಾತ್ರ ಅಂದೂ ಜಾರಿಯಲ್ಲಿತ್ತು, ಇಂದಿಗೂ ಜಾರಿಯಲ್ಲಿದೆ. ಒಪ್ಪಂದದ ಅನುಷ್ಠಾನದ ಕುರಿತು ಪ್ರಶ್ನೆಗಳನ್ನು ಕೇಳಲು ಆರಂಭಿಸಿದ್ದಕ್ಕಾಗಿ, "ಫೆಲೆಸ್ತೀನ್ ರಾಷ್ಟ್ರಪತಿ" ಅರಫಾತ್‌ರನ್ನು ಇಸ್ರೇಲಿ ಸೇನೆಯ ಕಣ್ಗಾವಲಿನಲ್ಲಿ ಒಂದು ಬಂಗಲೆಯಲ್ಲಿ ಗೃಹ ಬಂಧನದಲ್ಲಿಡಲಾಯಿತು. ಫೆಲೆಸ್ತೀನ್‌ಗೆ ವಿಮೋಚನೆ ಕೊಡಿಸಲು ಹೊರಟಿದ್ದ ಅರಫಾತ್ ಸ್ವತಃ ಕೈದಿಯ ಬದುಕು ಬದುಕಬೇಕಾಯಿತು. ಇಸ್ರೇಲ್ ಪಡೆಗಳು ಅವರಿದ್ದ ಆವರಣದೊಳಗಿನ ಇತರ ಅನೇಕ ಮನೆಗಳ ಮೇಲೆ ಭೀಕರ ದಾಳಿಗಳನ್ನು ನಡೆಸಿ ಕೆಲವು ಮನೆಗಳನ್ನು ಧ್ವಂಸಗೊಳಿಸಿದ್ದವು. ಅವರನ್ನು ಭೇಟಿಯಾಗಲು, ಮಾತ್ರವಲ್ಲ, ಅವರ ಒಂದು ಫೋಟೊ ಕ್ಲಿಕ್ಕಿಸಲು ಕೂಡಾ ಜಾಗತಿಕ ಮಟ್ಟದ ಮಾಧ್ಯಮ ಪ್ರತಿನಿಧಿಗಳು ಪಾಡು ಪಡಬೇಕಾಗಿತ್ತು.

### ಅರಫಾತ್ ಖಾಸಗಿ ಬದುಕಿನ ನಿಗೂಢ

ಅರಫಾತ್ ತಮ್ಮ ಹೋರಾಟದ ಬದುಕಿನುದ್ದಕ್ಕೂ ಆಹಾರ, ವಿರಾಮಗಳನ್ನು ಲೆಕ್ಕಿಸದೆ ಅವಿಶ್ರಾಂತ ದುಡಿದವರು. ಮದ್ಯ, ತಂಬಾಕುಗಳಿಂದ ದೂರ ಉಳಿದವರು. ಅರಫಾತ್‌ರಿಗೆ ನಿದ್ದೆ ಮಾಡಲು ಸಾಕಷ್ಟು ಬಿಡುವು ಸಿಗುತ್ತಿರಲಿಲ್ಲ. ಅದೇ ವೇಳೆ ಅವರು ವಿವಾಹವಾಗುತ್ತಿಲ್ಲವೇಕೆ? ಎಂಬ ಪ್ರಶ್ನೆ ಅವರ ಲಕ್ಷಾಂತರ ಅಭಿಮಾನಿಗಳ ನಿದ್ದೆಗೆಡಿಸಿತ್ತು. ವಯಸ್ಸು 60 ಮೀರುವ ತನಕವೂ ಅವರು ವಿವಾಹವಾಗದೆ ಇದ್ದುದಕ್ಕೆ ಸಮಯಾಭಾವ ಕಾರಣ ಎಂದು ಅವರ

ಬೆಂಬಲಿಗರು ಸಮಾಧಾನ ಪಟ್ಟುಕೊಂಡಿದ್ದರು. ಆದರೆ ಅವರ ವಿಮರ್ಶಕರು, ಅವರ ಒಂಟಿತನಕ್ಕೆ ಅವರ 'ಗೇ' ಒಲವು ಕಾರಣ ಎಂಬ ವದಂತಿಯನ್ನು ಎಲ್ಲೆಂದರಲ್ಲಿ ವ್ಯಾಪಿಸಿ ಬಿಟ್ಟರು. ಇಂತಹ 'ಗೇ' ಗಾಸಿಪ್ ಪ್ರಸಾರದಲ್ಲಿ ಅವರ ಕೆಲವು ಅತೃಪ್ತ ನಿಕಟವರ್ತಿಗಳ ದೊಡ್ಡ ಪಾತ್ರ ಮುಖ್ಯವಾಗಿತ್ತು.

ಕೊನೆಗೂ 1990ರಲ್ಲಿ ಅರಫಾತ್ ವಿವಾಹವಾದರು. ಅವರ ಬದುಕಿನ ಬೇರೆಲ್ಲ ಮುಖಗಳಂತೆ ಅವರ ವಿವಾಹ ಕೂಡ ಅಸಾಮಾನ್ಯವಾಗಿತ್ತು. 61ರ ಹರೆಯದ ಯಾಸಿರ್ ಅರಫಾತ್, ಟ್ಯುನೀಷಿಯಾದಲ್ಲಿ ತೀರಾ ಖಾಸಗಿಯಾಗಿ 27ರ ಹರೆಯದ ಸುಹಾ ತವೀಲ್‌ರನ್ನು ವಿವಾಹವಾದರು. ಮಗಳು ಝುಹ್ವಾ ಜನಿಸಿದಾಗ ಅರಫಾತ್‌ಗೆ 66 ವರ್ಷವಾಗಿತ್ತು. ಮುಂದೆ ಒಂದು ಸಂದರ್ಶನದಲ್ಲಿ ಅವರ ಪತ್ನಿ ಹೇಳಿಕೊಂಡಂತೆ, ಅರಫಾತ್ ಖಂಡಿತ ಪ್ರೀತಿಗೆ ಅರ್ಹ ವ್ಯಕ್ತಿಯಾಗಿದ್ದರೇ ಹೊರತು ವಿವಾಹಕ್ಕಲ್ಲ. ಏಕೆಂದರೆ ಅವರನ್ನು ವಿವಾಹವಾಗುವುದೆಂದರೆ ಒಂದು ದೊಡ್ಡ ಆಂದೋಲನ ಅಥವಾ ಸರಕಾರವನ್ನು ವಿವಾಹವಾದಂತಿತ್ತು. ವಿಶೇಷವಾಗಿ, ಅವರು ವಿವಾಹಿತರಾದ ದಿನಗಳು ಅವರ ಬದುಕಿನ ಅತ್ಯಂತ ಒತ್ತಡದ, ಕಠಿಣ ದಿನಗಳಾಗಿದ್ದವು. ಅರಫಾತ್‌ರನ್ನು ವಿವಾಹವಾಗುವ ಮುನ್ನ ಸುಹಾ ತವೀಲ್ ಅಧಿಕೃತವಾಗಿ ಇಸ್ಲಾಮ್ ಧರ್ಮ ಸ್ವೀಕರಿಸಿದ್ದರು. ಆದರೆ ಹಿಂದಿನಂತೆ, ವಿವಾಹದ ಬಳಿಕವೂ ಆಕೆ ಮುಕ್ತವಾಗಿಯೇ, ಚರ್ಚ್‌ಗೆ ಹೋಗುತ್ತಾ, ಕ್ರೈಸ್ತ ಧರ್ಮಾನುಸಾರ ಬದುಕುತ್ತಿದ್ದರು. ಇದರಲ್ಲಿ ಗುಟ್ಟೇನೂ ಇರಲಿಲ್ಲ. ಇಷ್ಟಾಗಿಯೂ, ಅರಫಾತ್ ಅವರ ಎಲ್ಲ ಚಟುವಟಿಕೆಗಳ ಹಿಂದೆ 'ಯಹೂದಿ ಷಡ್ಯಂತ್ರ'ವನ್ನು ಕಾಣಲು ಕಾತರರಾಗಿದ್ದವರು ಸುಹಾ ಒಬ್ಬ ಯಹೂದಿ ಗೂಢಚಾರೆ ಎಂಬ ವದಂತಿ ಹರಡುವುದನ್ನು ನಿಲ್ಲಿಸಲಿಲ್ಲ.

ಒಂದಂತೂ ಸತ್ಯ – ಅರಫಾತ್ ಕೇವಲ ಯಾರನ್ನಾದರೂ ವಿವಾಹವಾಗುವುದಕ್ಕಾಗಿ ತನ್ನ ಧೋರಣೆಗಳನ್ನು ಬದಲಿಸುವ ಮಟ್ಟದ ವ್ಯಕ್ತಿಯಾಗಿರಲಿಲ್ಲ. ಅವರ ಬದುಕಿನ ಕೊನೆಯ ಹಂತದಲ್ಲೂ ಅವರ ಮುಂದೆ 'ಉನ್ನತ' ಅಲ್ಲದಿದ್ದರೂ, 'ದೊಡ್ಡದು' ಅನ್ನಲೇಬೇಕಾದ ಹಲವು ಗುರಿಗಳಿದ್ದವು.

### ವಿದಾಯದಲ್ಲೂ ವಿವಾದ

ಹತ್ತಾರು ಯುದ್ಧ, ಬಾಂಬ್ ದಾಳಿಗಳು, ಕೊಲೆಯತ್ನ, ಕೊಲೆ ಸಂಚುಗಳು ಮತ್ತು ಮಾರಕ ವಿಮಾನ ಅಪಘಾತಗಳನ್ನು ಮೀರಿ ಬದುಕಿದ್ದ ದೀರ್ಘಾಯುಷಿ ಅರಫಾತ್ 2004 ನವೆಂಬರ್ 10 ರಂದು ಜೆರುಸಲೇಮ್ ಸಮೀಪದ ತಮ್ಮ ರಮಲ್ಲಾ ನಿವಾಸದಲ್ಲಿ ಅಸ್ವಸ್ಥರಾದರು. ಅವರನ್ನು ವಿಶೇಷ ವಿಮಾನದಲ್ಲಿ ಪ್ಯಾರಿಸ್‌ನ ಆಸ್ಪತ್ರೆಯೊಂದಕ್ಕೆ ಸಾಗಿಸಲಾಯಿತು. ಮರುದಿನ, 75ರ ಹರೆಯದ

ಯಾಸಿರ್ ಅರಫಾತ್ ಕೊನೆಯುಸಿರೆಳೆದರು. ಅದಕ್ಕೆ ಮೊದಲ ದಿನ, ಅವರಿಗೆ ಮಿದುಳಿನಲ್ಲಿ ರಕ್ತಸ್ರಾವವಾಗಿದೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿದ್ದವು.

ಅರಫಾತ್ ಅವರ ಸಾವಿಗೆ ನೈಜ ಕಾರಣ ಏನೆಂಬ ಬಗ್ಗೆ ಇನ್ನೂ ಸರ್ವಾನುಮತ ಮೂಡಿಲ್ಲ. ಈ ಕುರಿತು ಹಲವು ನಿಗೂಢತೆಗಳು, ತರ್ಕಗಳು ಮತ್ತು ವದಂತಿಗಳು ಇಂದು ಕೂಡಾ ಚರ್ಚೆಯಲ್ಲಿವೆ. ರೇಡಿಯೋ ಆಕ್ಟಿವ್ ಗುಣವಿರುವ ಪೊಲೋನಿಯಮ್ ಎಂಬ ಮಾರಕ ದ್ರವ್ಯವನ್ನು ಅರಫಾತ್ ಮೇಲೆ ಪ್ರಯೋಗಿಸಲಾಗಿತ್ತು ಎಂದು ಈ ಕುರಿತು ತನಿಖೆ ನಡೆಸಿರುವ ಅಲ್ ಜಝೀರಾ ತರದ ಸಂಸ್ಥೆಗಳು ಆರೋಪಿಸಿವೆ. ಅರಫಾತ್ ಸಾವಿನ ಕಾರಣವನ್ನು ಅಂತಿಮವಾಗಿ ಖಚಿತ ಪಡಿಸಿಕೊಳ್ಳುವ ಉದ್ದೇಶದಿಂದ, ಅವರ ಶರೀರವನ್ನು ದಫನ ಮಾಡಿದ 8 ವರ್ಷಗಳ ಬಳಿಕ ಅದೇ ಸ್ಥಳದಿಂದ, ಶವವನ್ನು ಹೊರತೆಗೆದು ಅದರ ಮರು ಪರೀಕ್ಷೆ ನಡೆಸಲಾಯಿತು. ಊಹಾಪೋಹಗಳ ಸರಣಿ ಮಾತ್ರ ಇಂದಿಗೂ ಮುಂದುವರಿದಿದೆ.

ಅರಫಾತ್‌ರ ವಿಶೇಷತೆ ಏನೆಂದರೆ, ಅವರೊಬ್ಬ ಸಾಟಿಯಿಲ್ಲದ ನಾಯಕನೆಂದು ಅವರ ಅಭಿಮಾನಿಗಳು ವಾದಿಸಿದರೆ, ಅವರೊಬ್ಬ ಸಾಟಿಯಿಲ್ಲದ ಶತ್ರು ಎಂದು ಅವರ ಶತ್ರುಗಳು ಒಪ್ಪುತ್ತಾರೆ. ಅವರ ಕೆಲವು ಧೋರಣೆ ಮತ್ತು ನಿರ್ಧಾರಗಳ ಬಗ್ಗೆ ತೀವ್ರ ಆಕ್ಷೇಪ ಉಳ್ಳವರು ಕೂಡ ಅವರನ್ನು ವಿಮರ್ಶಿಸುವಾಗ ಎಚ್ಚರ ವಹಿಸುತ್ತಾರೆ. ಅವರು ತಪ್ಪು ಮಾಡಿದರು, ವಿಫಲರಾದರು ಎಂದೆಲ್ಲಾ ಹೇಳುತ್ತಾರೆ. ಆದರೆ ಅವರು ತಮ್ಮ ಸ್ವಾರ್ಥಕ್ಕಾಗಿ ಫೆಲೆಸ್ತೀನ್ ಹಿತವನ್ನು ಮಾರಿದರು ಎಂದು ಯಾರೂ ಆರೋಪಿಸುವುದಿಲ್ಲ. ರಾಜಿಗಳನ್ನು ಮಾಡಿ ಅರಫಾತ್‌ರಿಗೆ ದೊಡ್ಡ ಸಾಮ್ರಾಜ್ಯವೇನೂ ಸಿಗಲಿಲ್ಲ. ನಿಜವಾಗಿ ಎಲ್ಲ ರಾಜಿಗಳ ಅಂತ್ಯದಲ್ಲಿ ಅವರಿಗೆ ಸಿಕ್ಕಿದ್ದು ರಮಲ್ಲಾದಲ್ಲಿ ತೀರಾ ಅರಕ್ಷಿತ ಅವರಣವೊಂದರಲ್ಲಿ, ಪದೇ ಪದೇ ದಾಳಿಗೆ ತುತ್ತಾಗುತ್ತಿದ್ದ ಒಂದು ಬಂಗಲೆ ಮಾತ್ರ. ಕೊಲ್ಲಿಯಲ್ಲಿ ದೊಡ್ಡ ದೊಡ್ಡ ಅರಮನೆಗಳಲ್ಲಿ, ಭವ್ಯ ಸಿಂಹಾಸನಗಳಲ್ಲಿ ಕೂತ ರಾಜ ಮಹಾರಾಜರು ತಮ್ಮ ಇಚ್ಛಾನುಸಾರ ಮಾಡಿಕೊಂಡ ರಾಜಿಗಳಿಗೆ ಹೋಲಿಸಿದರೆ, ತೀರಾ ಅಸಹಾಯಕ ಸನ್ನಿವೇಶಗಳಲ್ಲಿ ತನ್ನ ತಂಡವನ್ನು ರಕ್ಷಿಸಲಿಕ್ಕಾಗಿ ಅರಫಾತ್ ಮಾಡಿಕೊಂಡ ರಾಜಿ ತುಂಬಾ ದೊಡ್ಡ ದ್ರೋಹವೇನೂ ಅಲ್ಲ ಎನಿಸುತ್ತದೆ.

ಅರಫಾತ್‌ರ ಬದುಕಿನ ಕೊನೆಯ ಕೆಲವು ವರ್ಷಗಳು, ತುಂಬಾ ನೋವಿನ ಅಸ್ಥಿರ ವರ್ಷಗಳಾಗಿದ್ದವು. ಅವರು, ನಿಜಲೋಕದಲ್ಲಿ ಅಸ್ತಿತ್ವದಲ್ಲಿಲ್ಲದ ಒಂದು ಸರಕಾರದ ಮುಖ್ಯಸ್ಥರಾಗಿದ್ದರು. ಕೇವಲ ಉಪಚಾರಕ್ಕೆ ಮಾತ್ರ ಅಸ್ತಿತ್ವದಲ್ಲಿದ್ದ ಆ ಹುದ್ದೆಯೊಂದಿಗೆ ಅವರು, ರಾಮಲ್ಲಾದಲ್ಲಿ ಯಾವುದೇ ಕ್ಷಣ ಇಸ್ರೇಲ್ ಬಾಂಬ್ ದಾಳಿಗೆ ತುತ್ತಾಗಿ ಧ್ವಂಸವಾಗಬಹುದಾದ, ಒಂದು ಬಂಗಲೆಯಲ್ಲಿ

ಕೈದಿಯಾಗಿದ್ದರು.

ಇಸ್ರೇಲ್‌ನ ನಾಯಕರಾದ ಇಟ್ಸ್ ಹಾಕ್ ರಾಬಿನ್ ಮತ್ತು ಏರಿಯಲ್ ಶೆರಾನ್‌ರಿಗೆ ಅವರು ಅಪೇಕ್ಷಿಸಿದ್ದ 'ವಿಶಾಲ ಇಸ್ರೇಲ್' ಸಿಕ್ಕಿತು. ಜೊತೆಗೆ ನೊಬೆಲ್ ಕೂಡಾ ಸಿಕ್ಕಿತು. ರಾಬಿನ್ ಮತ್ತು ಶೆರಾನ್‌ರ ಸಾಧನೆಯಿಂದ 'ಗ್ರೇಟರ್ ಇಸ್ರೇಲ್'ನ ಕನಸು ಕಂಡವರಿಗೆಲ್ಲಾ ಸಾರ್ಥಕ್ಯದ ಅನುಭವವಾಯಿತು. ಅವರ ಮಟ್ಟಿಗೆ ನೊಬೆಲ್ ಪ್ರಶಸ್ತಿ ಅಂತಹ ಅಪರೂಪದ ವಸ್ತುವೇನೂ ಆಗಿರಲಿಲ್ಲ. ಏಕೆಂದರೆ ಜಗತ್ತಿನಲ್ಲಿ 1.5 ಕೋಟಿಗಿಂತ ಕಡಿಮೆ ಜನಸಂಖ್ಯೆ ಇರುವ ಯಹೂದಿ ಸಮುದಾಯದ ಸದಸ್ಯರಿಗೆ ಈಗಾಗಲೇ 193 ನೊಬೆಲ್ ಪ್ರಶಸ್ತಿಗಳು ಸಿಕ್ಕಿವೆ.

❖ ❖ ❖

# 18

# ಶೇಖ್ ಅಹ್ಮದ್ ಯಾಸೀನ್: ಎಲ್ಲೆಡೆ ಸಂಚಲನ ಮೂಡಿಸಿದ ನಿಶ್ಚಲ ಮನುಷ್ಯ



ಶೇಖ್ ಅಹ್ಮದ್ ಯಾಸೀನ್

ಇಂದು ಫೆಲೆಸ್ತೀನ್‌ನಲ್ಲಿ ಪ್ರಬಲವಾಗಿರುವ ಹಮಾಸ್ ಪಕ್ಷದ ಸ್ಥಾಪಕ, ಶೇಖ್ ಅಹ್ಮದ್ ಯಾಸೀನ್ 1936 ರಲ್ಲಿ ಅಲ್ ಜೂರಾ ಎಂಬ ಫೆಲೆಸ್ತೀನ್‌ನ ಒಂದು ಸುಂದರ ಗ್ರಾಮದಲ್ಲಿ ಜನಿಸಿದರು. ಸುಮಾರು 500 ಮನೆಗಳಿದ್ದ ಆ ಗ್ರಾಮ ಇಂದು ಭೂಪಟದಿಂದ ಅಳಿದುಹೋಗಿದೆ. 1948ರಲ್ಲಿ ಫೆಲೆಸ್ತೀನ್ ಅನ್ನು ಆಕ್ರಮಿಸುವ ವೇಳೆ ಇಸ್ರೇಲ್ ಸೇನೆಯು ಬುಲ್‌ಡೋಝರ್‌ಗಳನ್ನು ತಂದು ಆ ಗ್ರಾಮವನ್ನು ನೆಲಸಮ ಮಾಡಿತ್ತು. ಅಂದು ನಿರಾಶ್ರಿತರಾಗಿದ್ದ ಲಕ್ಷಾಂತರ ಫೆಲೆಸ್ತೀನಿಗಳಲ್ಲಿ ಶೇಖ್ ಯಾಸೀನ್‌ರ ಕುಟುಂಬವೂ ಸೇರಿತ್ತು. ಅವರ ಪರಿವಾರವು ಗಾಝಾ ಪಟ್ಟಿಯಲ್ಲಿ ಶಿಬಿರ ಹೂಡಿತ್ತು. ಅದೇ ವರ್ಷ ಅಂದರೆ ಶೇಖ್ ಯಾಸೀನ್ 12 ವರ್ಷದವರಾಗಿದ್ದಾಗ ಆಟ ಆಡುತ್ತಿದ್ದ ವೇಳೆ ಸಂಭವಿಸಿದ ಒಂದು ಅಪಘಾತದಲ್ಲಿ

ಅವರಿಗೆ ಗಂಭೀರ ಗಾಯವಾಗಿ ಎರಡೂ ಕಾಲುಗಳು ಮತ್ತು ಎರಡೂ ಕೈಗಳು ನಿಷ್ಕ್ರಿಯವಾಗಿ ಬಿಟ್ಟವು. ಮುಂದಿನ ಅವರ ಬದುಕೆಲ್ಲಾ ವೀಲ್‌ಚೇರ್‌ನಲ್ಲೇ ಕಳೆಯಿತು.

ಅಸ್ವಸ್ಥರಾಗಿದ್ದರೂ ಶಿಕ್ಷಣ ಮುಂದುವರಿಸಿದ ಯಾಸೀನ್ 1959ರಲ್ಲಿ 'ಐನ್ ಶಮ್ಸ್ ವಿಶ್ವವಿದ್ಯಾನಿಲಯ' ಸೇರಲು ಈಜಿಪ್ಟ್‌ಗೆ ಹೋದರು. ಆರ್ಥಿಕ ಸಮಸ್ಯೆಯಿಂದಾಗಿ ಕೋರ್ಸ್ ಪೂರ್ತಿಮಾಡಲಾಗದೆ ಮಧ್ಯದಲ್ಲೇ ಮರಳಿ ಬಂದರು. ಈಜಿಪ್ಟ್‌ನಲ್ಲಿ ತಮ್ಮ ಅಲ್ಪಾವಧಿಯ ವಾಸ್ತವ್ಯದ ಮಧ್ಯೆ ಶೇಖ್ ಯಾಸೀನ್, ಅಲ್ಲಿನ 'ಇಖ್ವಾನ್ ಅಲ್ ಮುಸ್ಲಿಮೂನ್' ಅಥವಾ ಮುಸ್ಲಿಮ್ ಬ್ರದರ್ ಹುಡ್ ಸಂಘಟನೆಯ ನಾಯಕರ ಜೊತೆ ಸಂಪರ್ಕ ಬೆಳೆಸಿಕೊಂಡರು ಮತ್ತು ಅವರ ವಿಚಾರಧಾರೆಯಿಂದ ಪ್ರಭಾವಿತರಾದರು. ಮುಂದೆ ಅವರು ಫೆಲೆಸ್ತೀನ್‌ನಲ್ಲಿ ಸ್ಥಾಪಿಸಿದ 'ಹಮಾಸ್' ಸಂಘಟನೆಯ ಹಿಂದೆಯೂ ಅದೇ ವಿಚಾರ ಧಾರೆಯ ಪ್ರಭಾವವಿತ್ತು.

ಶೇಖ್ ಯಾಸೀನ್, ಫೆಲೆಸ್ತೀನ್‌ನಲ್ಲಿ ಅರಬಿ ಮತ್ತು ಇಸ್ಲಾಮ್ ಧರ್ಮದ ಶಿಕ್ಷಕರಾಗಿ ಸೇವೆ ಸಲ್ಲಿಸಲಾರಂಭಿಸಿದ ಬಳಿಕ ಕೆಲವೇ ವರ್ಷಗಳ ಅವಧಿಯಲ್ಲಿ ಜನರು ಅವರನ್ನು ಆ ಪ್ರದೇಶದ ಅತ್ಯಂತ ಗೌರವಾನ್ವಿತ ವಿದ್ವಾಂಸರಾಗಿ ಗುರುತಿಸತೊಡಗಿದರು. ವಿಶೇಷವಾಗಿ ಅವರು ಸಾಮಾಜಿಕ ನ್ಯಾಯ, ನವ ವಸಾಹತುಶಾಹಿತ್ವ, ಅಭಿವ್ಯಕ್ತಿ ಸ್ವಾತಂತ್ರ್ಯ, ಮಾನವಹಕ್ಕುಗಳು ಇತ್ಯಾದಿಗಳ ಕುರಿತಂತೆ ಆಡುತ್ತಿದ್ದ ಮಾತುಗಳು, ಅಪಾರ ಅಭಿಮಾನಿಗಳನ್ನು ಅವರೆಡೆಗೆ ಸೆಳೆದವು. ಯುವಪೀಳಿಗೆಯಲ್ಲಿ ಅವರ ಅಭಿಮಾನಿಗಳ ಒಂದು ದೊಡ್ಡ ಬಳಗವೇ ಬೆಳೆಯಿತು. ಅವರ ಜನಪ್ರಿಯತೆ ಬೆಳೆದಂತೆಲ್ಲಾ ಇಸ್ರೇಲ್ ಸರಕಾರವು ಅವರ ವಿರುದ್ಧ ಕಟ್ಟುನಿಟ್ಟಿನ ಬೇಹುಗಾರಿಕೆ ನಡೆಸಲು ಮತ್ತು ಅವರಿಗೆ ಕಿರುಕುಳ ನೀಡಲು ಆರಂಭಿಸಿತು. 1983ರಲ್ಲಿ, ಶೇಖ್ ಯಾಸೀನ್ ಒಂದು ಭೂಗತ ಸಂಘಟನೆಯನ್ನು ಸ್ಥಾಪಿಸಿದ್ದಾರೆ ಮತ್ತು ಅಕ್ರಮ ಶಸ್ತ್ರಾಸ್ತ್ರ ಸಂಗ್ರಹಿಸುತ್ತಿದ್ದಾರೆ ಎಂಬ ಆರೋಪ ಹೊರಿಸಿ ಸರಕಾರವು ಈ ವೀಲ್ ಚೇರ್ ದಾರ್ಶನಿಕನನ್ನು ಬಂಧಿಸಿತು. ಮುಂದೆ ಇವರಿಗೆ 13 ವರ್ಷಗಳ ಜೈಲು ಶಿಕ್ಷೆಯನ್ನು ವಿಧಿಸಲಾಯಿತು. ಎರಡು ವರ್ಷಗಳ ಬಳಿಕ ಕೈದಿಗಳ ವಿನಿಮಯ ಕಾರ್ಯಕ್ರಮವೊಂದರ ಪ್ರಕಾರ ಅವರನ್ನು ಬಿಟ್ಟು ಬಿಡಲಾಯಿತು.

1987ರಲ್ಲಿ ಶೇಖ್ ಯಾಸೀನ್ ಅವರು 'ಹರಕ ಅಲ್ ಮುಖಾವಮ ಅಲ್ ಇಸ್ಲಾಮಿಯ್ಯ' (ಇಸ್ಲಾಮಿಕ್ ಪ್ರತಿರೋಧ ಆಂದೋಲನ – ಸಂಕ್ಷಿಪ್ತವಾಗಿ 'ಹಮಾಸ್') ಸಂಘಟನೆಯನ್ನು ಸ್ಥಾಪಿಸಿದರು. ಫೆಲೆಸ್ತೀನ್ ಬೆಳವಣಿಗೆಗಳನ್ನು ಗಮನಿಸುತ್ತಿದ್ದವರು ಆಗಲೇ, ಅಲ್ಲಿಯ ವಿಮೋಚನಾ ಚಳವಳಿಯನ್ನು ಶೇಖ್ ಯಾಸೀನ್, ಅವರ ವೀಲ್ ಚೇರ್, ಅವರ ಹಮಾಸ್ ಸಂಘಟನೆ ಮತ್ತು ಅವರಿಂದ

ಪ್ರೇರಿತ 'ಇನ್ತಿಫಾದಃ' ಆಂದೋಲನದ ಜೊತೆ ಗುರುತಿಸಲು ಆರಂಭಿಸಿದ್ದರು.

1989ರಲ್ಲಿ ಅವರನ್ನು ಮತ್ತೆ ಬಂಧಿಸಲಾಯಿತು. ಈ ಬಾರಿ ಅವರ ಮೇಲೆ, ಹಿಂಸೆಗೆ ಪ್ರಚೋದನೆ ಮತ್ತು ಒಬ್ಬ ಇಸ್ರೇಲಿ ಯೋಧನ ಹತ್ಯೆಗೆ ಆದೇಶ ನೀಡಿದ್ದರೆಂಬ ಆರೋಪ ಹೊರಿಸಲಾಯಿತು. ನ್ಯಾಯಾಲಯವು ಅವರಿಗೆ 40 ವರ್ಷಗಳ ಕಠಿಣ ಶಿಕ್ಷೆಯನ್ನೂ ವಿಧಿಸಿತು. ಅವರ ಬಂಧನ, ವಿಚಾರಣೆ ಮತ್ತು ಶಿಕ್ಷೆಯ ಸುದ್ದಿಗಳು ಅರಬ್ ಮಾಧ್ಯಮಗಳಲ್ಲಿ ಸತತ ಚರ್ಚೆಯಲ್ಲಿದ್ದವು. ವೀಲ್ ಚೇರ್‌ನಲ್ಲಿರುವ ಶೇಖ್ ಯಾಸೀನ್‌ರ ನಿಶ್ಚಲ ಶರೀರ ಮತ್ತು ಅವರ ಮೇಲೆ ಹೊರಿಸಲಾದ ಗಂಭೀರ ಆರೋಪಗಳ ಪಟ್ಟಿ, ಇವೆರಡನ್ನೂ ಜೊತೆಗಿಟ್ಟು ಜನರು ಇಸ್ರೇಲ್ ಸರಕಾರವನ್ನು ಲೇವಡಿ ಮಾಡುತ್ತಿದ್ದರು. 8 ವರ್ಷ ಅವರು ಜೈಲಲ್ಲಿದ್ದರು. ತೀವ್ರ ಅಂತರ್‌ರಾಷ್ಟ್ರೀಯ ಒತ್ತಡದಡಿಯಲ್ಲಿ, ಅವರ ಇಬ್ಬರು ಪುತ್ರರನ್ನು ಅವರ ಸೇವೆಗಾಗಿ ಅವರ ಜೊತೆಗಿರಲು ಅನುಮತಿಸಲಾಯಿತು. ಜಗತ್ತಿನ ವಿವಿಧ ಭಾಗಗಳಿಂದ ಅವರ ಬಿಡುಗಡೆಗೆ ಆಗ್ರಹಿಸುವ ಮನವಿಗಳು ಬರತೊಡಗಿದವು. ಕೊನೆಗೆ 1997ರಲ್ಲಿ ಇಸ್ರೇಲ್ ಸರಕಾರ ಮತ್ತು ಜೋರ್ಡನ್‌ನ ಕಿಂಗ್ ಹುಸೈನ್ ಮಧ್ಯೆ ನಡೆದ ಒಂದು ಒಪ್ಪಂದದ ಪ್ರಕಾರ ಅವರನ್ನು ಬಿಡುಗಡೆಗೊಳಿಸಲಾಯಿತು. ಆದರೆ ಅಷ್ಟರಲ್ಲೇ ಅವರ ಆರೋಗ್ಯವು ತೀವ್ರ ಹದಗೆಟ್ಟಿತ್ತು. ವಿಚಾರಣೆಯ ಹೆಸರಲ್ಲಿ ನಡೆಸಲಾದ ಚಿತ್ರಹಿಂಸೆಯಿಂದಾಗಿ ಅವರ ಬಲಗಣ್ಣು ನಿಷ್ಕ್ರಿಯವಾಗಿತ್ತು ಹಾಗೂ ಶ್ರವಣ ಶಕ್ತಿ ಕ್ಷೀಣಿಸಿತ್ತು. ಜೈಲಿನಲ್ಲಿದ್ದ ತೀರಾ ಪ್ರತಿಕೂಲ ಪರಿಸ್ಥಿತಿಯಿಂದಾಗಿ ಉಸಿರಾಟದ ತೊಂದರೆಯೂ ಕಾಣಿಸಿಕೊಂಡಿತ್ತು.

## ಎಫ್ – 16 ಫೈಟರ್ ಜೆಟ್ ಅನ್ನು ಸೋಲಿಸಿದ ವೀಲ್ ಚೇರ್

ಹಮಾಸ್ ನಾಯಕ ಶೇಖ್ ಯಾಸೀನ್‌ರ ಹತ್ಯೆಗೆ ಇಸ್ರೇಲ್ ಸರಕಾರ ನೇರ ಹಾಗೂ ಪರೋಕ್ಷವಾಗಿ ಹಲವು ಪ್ರಯತ್ನಗಳನ್ನು ನಡೆಸಿತ್ತು. ಸುದ್ದಿ ಸಂಸ್ಥೆ ಅಲ್ ಜಝೀರಾ ವರದಿ ಪ್ರಕಾರ 2003 ಸೆಪ್ಟಂಬರ್ 6ರಂದು ಇಸ್ರೇಲ್ ವಾಯುಪಡೆಯ ಎಫ್–16 ಫೈಟರ್ ಜೆಟ್ ವಿಮಾನವು ಗಾಝಾದಲ್ಲಿದ್ದ ಶೇಖ್ ಅಹ್ಮದ್ ಯಾಸೀನ್ ಅವರ ಮನೆಯನ್ನು ಗುರಿಯಾಗಿಸಿ ಹಲವು ಮಿಸೈಲ್‌ಗಳನ್ನು ಪ್ರಯೋಗಿಸಿತ್ತು. ಆವೇಳೆ ಯಾಸೀನ್ ಆ ಮನೆಯಲ್ಲಿದ್ದರು. ತೀವ್ರ ಅನಾರೋಗ್ಯ ಪೀಡಿತ ಸ್ಥಿತಿಯಲ್ಲಿ ವೀಲ್ ಚೇರ್‌ನಲ್ಲಿದ್ದ ಅವರು, ಅಲ್ಪ ಸ್ವಲ್ಪ ಗಾಯಗಳೊಂದಿಗೆ ಬಚಾವಾದರು.

ಘಟನೆಯ ಬಳಿಕ ಮಾಧ್ಯಮದವರ ಜೊತೆ ಮಾತನಾಡಿದ ಶೇಖ್ ಯಾಸೀನ್ ಹೇಳಿದರು: "ನಾಯಕರನ್ನು ಕೊಲ್ಲುವ ಮೂಲಕ ಹಮಾಸ್ ಅನ್ನು ಮುಗಿಸಬಹುದು ಎಂಬುದು ಇಸ್ರೇಲ್‌ನ ಭ್ರಮೆ. ಹಮಾಸ್ ನಾಯಕರು ಯಾರೂ

ಮರಣಕ್ಕೆ ಅಂಜುವುದಿಲ್ಲ. ಅವರು ಹುತಾತ್ಮರಾಗುವುದಕ್ಕೆ ಕಾತರರಾಗಿದ್ದಾರೆ."

ಈ ಘಟನೆಯ ಬಳಿಕ ಅವರು ಅಜ್ಞಾತ ಸ್ಥಳಗಳಲ್ಲಿ ಅವಿತಿರುವುದನ್ನು ಬಿಟ್ಟು ತಾನು ಯಾವಾಗ ಎಲ್ಲಿ ಇರುತ್ತೇನೆಂಬುದನ್ನು ಮುಂಗಡವಾಗಿ ಪ್ರಕಟಿಸಲಾರಂಭಿಸಿದರು. 2004 ಜನವರಿ 14ರಂದು ರೀಮ್ ರಿಯಾಶಿ ಎಂಬ ಮಹಿಳೆ ಆತ್ಮಹತ್ಯಾ ದಾಳಿಯೊಂದರಲ್ಲಿ ನಾಲ್ಕು ಮಂದಿ ಇಸ್ರೇಲಿ ನಾಗರಿಕರನ್ನು ಕೊಂದಾಗ ಅದನ್ನು, ಶೇಖ್ ಯಾಸೀನ್ ಅವರ ಆದೇಶ ಪ್ರಕಾರ ನಡೆಸಲಾದ ಕೃತ್ಯವೆಂದು ಆರೋಪಿಸಲಾಯಿತು. ಯಾಸೀನ್ ಮತ್ತು ಹಮಾಸ್ ಈ ಆರೋಪವನ್ನು ಅಲ್ಲಗಳೆದವು. 2004 ಮಾರ್ಚ್ 22ರಂದು ಶೇಖ್ ಯಾಸೀನ್ ಗಾಝಾದಲ್ಲಿ ಮುಂಜಾವಿನ ನಮಾಝ್ ಮುಗಿಸಿ ಮಸೀದಿಯಿಂದ ಹೊರ ಬರುತ್ತಿದ್ದಾಗ ಇಸ್ರೇಲಿ ವಾಯುಪಡೆಯ ಹೆಲಿಕಾಪ್ಟರ್‌ಗಳು ಗುಂಡಿನ ಮಳೆ ಸುರಿಸಿ ಯಾಸೀನ್ ಸಹಿತ 9 ಮಂದಿಯನ್ನು ಕೊಂದು ಹಾಕಿದವು. ಈ ಹತ್ಯೆಯು ಫೆಲೆಸ್ತೀನ್ ಜನತೆಯ ಆಕ್ರೋಶವನ್ನು ಮತ್ತಷ್ಟು ಹೆಚ್ಚಿಸಿತು. ಜಗತ್ತಿನ ಹೆಚ್ಚಿನೆಲ್ಲ ದೇಶಗಳು ಇದನ್ನು ಸರಕಾರ ಪ್ರಾಯೋಜಿತ ಹತ್ಯಾಕಾಂಡ ಎಂದು ಖಂಡಿಸಿದವು. ಎಲ್ಲ ಪ್ರತಿಬಂಧಗಳ ಹೊರತಾಗಿಯೂ 2 ಲಕ್ಷಕ್ಕೂ ಹೆಚ್ಚಿನ ಅಭಿಮಾನಿಗಳು ಅವರ ಅಂತಿಮ ಸಂಸ್ಕಾರದಲ್ಲಿ ಭಾಗವಹಿಸಿದರು. ಈ ವೇಳೆ ಒಬ್ಬ ವಿದ್ಯಾರ್ಥಿ ಸ್ಪ್ರೇ ಪೇಂಟ್ ಮೂಲಕ ಬರೆದ ಒಂದು ಗೋಡೆ ಬರಹ ಹೀಗಿತ್ತು: "ಇಲ್ಲಿ ಪ್ರತಿಯೊಬ್ಬರೂ ಶೇಖ್ ಯಾಸೀನ್‌ಗಳೇ. ಅವರೊಬ್ಬರ ಜಾಗ ತುಂಬಲು ಇಲ್ಲಿ ಒಂದು ಮಿಲಿಯ ಜನ ಕಾದಿದ್ದಾರೆ".

### ಶೇಖ್ ಯಾಸೀನ್ ಅವರ ಕೆಲವು ಹೇಳಿಕೆಗಳು

"ನನ್ನನ್ನು ಕೊಂದರೇನಂತೆ? ನನ್ನಂತಹ ಸಾವಿರಾರು ಮಂದಿ ಎದ್ದು ಬರುತ್ತಾರೆ. ಇಸ್ರೇಲಿಗಳು ತಿಳಿದಿರಬೇಕು: ಅವರು ಏನೇ ಮಾಡಿದರೂ ಈ ಹೋರಾಟ ಮುಂದುವರಿಯಲಿದೆ. ಅವರ ಅಪರಾಧಗಳಿಗಾಗಿ ಅವರು ಭಾರೀ ಬೆಲೆ ತೆರಬೇಕಾಗುತ್ತದೆ. ನಮ್ಮ ಕೆಲಸ ತುಂಬಾ ಕಠಿಣವಾಗಿದೆ ಮತ್ತು ಇದಕ್ಕಾಗಿ ನಾವು ಬಹಳಷ್ಟು ತ್ಯಾಗ ಬಲಿದಾನಗಳನ್ನು ನೀಡಬೇಕಾದೀತು. ಆದರೆ ಇನ್ ಶಾ ಅಲ್ಲಾಹ್ (ಅಲ್ಲಾಹನಿಚ್ಛಿಸಿದರೆ), ಭವಿಷ್ಯವು ನಮ್ಮ ಪರವಾಗಿದೆ."

"ಜಗತ್ತಿನ ಎಲ್ಲ ದೇಶಗಳು ನಮ್ಮ ಗುರಿ ಮತ್ತು ನಮ್ಮ ಹೋರಾಟವನ್ನು ಗೌರವಿಸಿದ್ದರೆ ಎಷ್ಟು ಚೆನ್ನಾಗಿತ್ತು! ನಾವು ಅವರ ಯಾವ ವ್ಯವಹಾರದಲ್ಲೂ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಅಮೆರಿಕ ಅಥವಾ ಯುರೋಪ್ ಜೊತೆ ನಮಗೆ ಯಾವ ಜಗಳವೂ ಇಲ್ಲ. ನಮ್ಮ ತಾಯಿನಾಡನ್ನು ಮತ್ತು ನಮ್ಮ ಮನೆಗಳನ್ನು ನಮ್ಮಿಂದ ಕಿತ್ತುಕೊಂಡ ಇಸ್ರೇಲ್ ಎಂಬ ಶತ್ರುವಿನ ವಿರುದ್ಧ ಮಾತ್ರ ನಾವು ಹೋರಾಡುತ್ತಿದ್ದೇವೆ.

❖ ❖ ❖

## 19

# ವಿಮೋಚನಾ ಸಂಗ್ರಾಮಕ್ಕೆ ಜೀವ ತುಂಬಿದ 'ಇನ್ತಿಫಾದಃ'

"ಮೂರನೆಯ 'ಇನ್ತಿಫಾದಃ' ಆರಂಭವಾಗಿ ಬಿಟ್ಟಿತೇ?" – ಈ ವರ್ಷ ಮೇ ತಿಂಗಳಲ್ಲಿ ಇಸ್ರೇಲ್ ಪಡೆಗಳು ಮತ್ತು ಫೆಲೆಸ್ತೀನ್ ಪೌರರ ನಡುವೆ ಘರ್ಷಣೆ ಭುಗಿಲೆದ್ದಾಗ ಎಲ್ಲೆಂದರಲ್ಲಿ ಕೇಳಿ ಬಂದಿದ್ದ ಪ್ರಶ್ನೆ ಇದು. ಈ ಪ್ರಶ್ನೆಗೆ ಅಂತಿಮ ಉತ್ತರ ಇನ್ನೂ ಸಿಕ್ಕಿಲ್ಲ. ಏಕೆಂದರೆ ಸದ್ಯ ಯುದ್ಧ ವಿರಾಮ ಘೋಷಿತವಾಗಿದ್ದರೂ ಶಾಂತಿ ಸ್ಥಾಪನೆಯೇನೂ ಆಗಿಲ್ಲ. ಅದೇ ವೇಳೆ, ಕಳೆದ ತಿಂಗಳ ಬೆಳವಣಿಗೆಗಳು ಮೂರನೆಯ 'ಇನ್ತಿಫಾದಃ'ಕ್ಕೆ ಪೀಠಿಕೆಯಾಗುವ ಎಲ್ಲ ಸಾಧ್ಯತೆಗಳಿವೆ. ಈ ಹಿನ್ನೆಲೆಯಲ್ಲಿ ನಾವು, ಈ ಹಿಂದಿನ ಎರಡು 'ಇನ್ತಿಫಾದಃ'ಗಳನ್ನು ನೆನಪಿಸಿಕೊಳ್ಳಬೇಡವೇ?

### ಪ್ರಥಮ 'ಇನ್ತಿಫಾದಃ' – 1987 ರಿಂದ 1993

1987ರಲ್ಲಿ, ಪಿಎಲ್‌ಒ ಮತ್ತು ಅರಫಾತ್ ಬಳಗವು ಫೆಲೆಸ್ತೀನ್ ವಿಮೋಚನೆಗಾಗಿ ತಮ್ಮ ಆವರೆಗಿನ ಹೋರಾಟದಿಂದ ದಣಿದು, ಇನ್ನೇನು ನಿವೃತ್ತಿ ಘೋಷಿಸುವುದರಲ್ಲಿತ್ತು. ಒಂದೆಡೆ ಇಸ್ರೇಲ್ ಅನ್ನು ಸೋಲಿಸಲು ಅವರಿಗೆ ಸಾಧ್ಯವಾಗಲಿಲ್ಲ. ಇನ್ನೊಂದೆಡೆ ಅಕ್ಕಪಕ್ಕದ ಎಲ್ಲ ದೇಶಗಳಲ್ಲಿ ಅವರು ಅನಪೇಕ್ಷಿತರಾಗಿದ್ದರು. ಸ್ವತಃ ಫೆಲೆಸ್ತೀನಿಗಳ ಮಧ್ಯೆ ಅವರ ಜನಪ್ರಿಯತೆ ಕಸಿದಿತ್ತು. ಅಷ್ಟರಲ್ಲೇ, ಹಠಾತ್ತನೆ ಫೆಲೆಸ್ತೀನ್‌ನಲ್ಲಿ 'ಹಮಾಸ್' ಎಂಬ

ಒಂದು ಹೊಸ ಸಂಘಟನೆಯಿಂದ ಪ್ರೇರಿತವಾದ 'ಇನ್ತಿಫಾದಃ' ಎಂಬ ಹೊಸದೊಂದು ವಿಶಿಷ್ಟ ಜನಾಂದೋಲನ ತಲೆ ಎತ್ತಿತು. ('ಇನ್ತಿಫಾದಃ' ಎಂಬ ಸಮಗ್ರ ಅರಬಿ ಪದವನ್ನು, ಬಂಡಾಯ, ಪ್ರತಿಭಟನೆ, ದಂಗೆ, ನಡುಕ, ಕಂಪನ ಎಂದಿತ್ಯಾದಿಯಾಗಿ ಅನುವಾದಿಸಬಹುದು.) ಯಾವ ದೃಷ್ಟಿಯಿಂದ ನೋಡಿದರೂ ಅದು ಜನಾಂದೋಲನವೇ ಆಗಿತ್ತು. ಜನಮಾನಸದಲ್ಲಿ ಭಾರೀ ಆಳ ಬೇರುಗಳಿದ್ದ ಆಂದೋಲನ. ಅದು ಯಾವುದೇ ನಿರ್ದಿಷ್ಟ ಪಕ್ಷವನ್ನಾಗಲಿ ನಾಯಕನನ್ನಾಗಲಿ ಅವಲಂಬಿಸದ, ಸಹಜತೆಯೇ ಪ್ರಧಾನ ಸ್ವಭಾವವಾಗಿದ್ದ ಆಂದೋಲನವಾಗಿತ್ತು. ಹತಾಶರಲ್ಲಿ ಆಶೆ ಚಿಗುರಿಸಲು ಮತ್ತು ಸರ್ವಾಧಿಕಾರಿಗಳಲ್ಲಿ ನಡುಕ ಹುಟ್ಟಿಸಲು ಬೇಕಾದ ಎಲ್ಲ ಗುಣಗಳೂ ಅದರಲ್ಲಿದ್ದವು.

ಹಲವರ ಪಾಲಿಗೆ ಇದೊಂದು ಅನಿರೀಕ್ಷಿತ ಬೆಳವಣಿಗೆಯಾಗಿತ್ತು. ತಾವೇ ಫೆಲೆಸ್ತೀನಿಗಳ ಎಲ್ಲ ಹಿತಾಸಕ್ತಿಗಳ ಶಾಶ್ವತ ಪ್ರತಿನಿಧಿಗಳೆಂದು ನಂಬಿಕೊಂಡಿದ್ದ ಪಿಎಲ್‌ಒಗೆ ಇದರಿಂದ ಆಘಾತವಾಯಿತು. ಅತ್ತ ಪಿಎಲ್‌ಒ ಅನ್ನು ನಿಯಂತ್ರಿಸಿಟ್ಟರೆ ಸಾಕು,ಸಂಪೂರ್ಣ ಫೆಲೆಸ್ತೀನ್ ನಮ್ಮ ನಿಯಂತ್ರಣದಲ್ಲಿರುತ್ತದೆ ಎಂದು ನಂಬಿದ್ದ ಇಸ್ರೇಲ್ ಸರಕಾರಕ್ಕೂ ಆಘಾತವಾಯಿತು.

1987ರಲ್ಲಿ ಮೊದಲ 'ಇನ್ತಿಫಾದಃ' ಯಾವುದೇ ಉದ್ಘಾಟನಾ ಸಮಾರಂಭದೊಂದಿಗೆ ಆರಂಭವಾಗಿರಲಿಲ್ಲ. ಇಸ್ರೇಲ್ ಮಟ್ಟಿಗೆ ಆ ವರ್ಷವೆಲ್ಲಾ 1967ರ ಸಮರದ ಇಪ್ಪತ್ತನೇ ವಾರ್ಷಿಕೋತ್ಸವ ಆಚರಿಸುವ ವರ್ಷವಾಗಿತ್ತು. ಆದರೆ ಅದೇ ವರ್ಷ ಡಿಸೆಂಬರ್ 9ರಂದು ಗಾಝಾ ಪಟ್ಟಿಯಲ್ಲಿ ಸಂಭವಿಸಿದ ಒಂದು ರಸ್ತೆ ಅಪಘಾತವು, ಹಠಾತ್ತನೆ ಎಲ್ಲ ಉತ್ಸವಗಳಿಗೆ ತೆರೆ ಎಳೆದು, 'ಇನ್ತಿಫಾದಃ' ಎಂಬ ಹೊಸ ಯುಗವೊಂದರ ಪ್ರವೇಶಕ್ಕೆ ಕಾರಣವಾಯಿತು. ಇಸ್ರೇಲ್ ಸೇನೆಯ ಒಂದು ಟ್ರಕ್, ಕೆಲವು ಫೆಲೆಸ್ತೀನಿ ನಾಗರಿಕರು ಪ್ರಯಾಣಿಸುತ್ತಿದ್ದ ಕಾರೊಂದಕ್ಕೆ ಢಿಕ್ಕಿ ಹೊಡೆದು ಪರಾರಿಯಾಗಿತ್ತು. ಕಾರಿನಲ್ಲಿದ್ದ ನಾಲ್ಕು ಮಂದಿ ಪ್ರಾಣ ಕಳೆದುಕೊಂಡಿದ್ದರು. ಕೆಲವು ದಿನಗಳ ಹಿಂದೆ ಅದೇ ಪ್ರದೇಶದಲ್ಲಿ ಇಸ್ರೇಲಿ ವಲಸಿಗನೊಬ್ಬನ ಹತ್ಯೆ ಸಂಭವಿಸಿತ್ತು. ಇದು ಆ ಹತ್ಯೆಯ ಪ್ರತೀಕಾರವೇ ಹೊರತು ಅಪಘಾತವೇನಲ್ಲ ಎಂದು ವಾದಿಸುತ್ತಾ ಸ್ಥಳೀಯರು ದೊಡ್ಡ ಸಂಖ್ಯೆಯಲ್ಲಿ ಬೀದಿಗಿಳಿದು ತಮ್ಮ ರೋಷವನ್ನು ಪ್ರಕಟಿಸತೊಡಗಿದರು.

ಅಂದು ಆರಂಭವಾದ ಪ್ರತಿಭಟನೆಗಳ ಸರಣಿ ಅದೇ ದಿನ ಕನಿಷ್ಠ 5 ಲಕ್ಷ ಮಂದಿಯನ್ನು ಬೀದಿಗೆ ತಂದಿತು. ಈ ರೀತಿ ಒಂದೇ ದಿನ ಅಷ್ಟೊಂದು ಮಂದಿ ಬೇರೆಡೆಯೂ ಬೀದಿಗೆ ಬಂದಿರಬಹುದು. ಆದರೆ ಅಂದು ಬೀದಿಗೆ ಬಂದವರು ಮುಂದಿನ 6 ವರ್ಷಗಳ ಕಾಲ ತಮ್ಮ ಆಕ್ರೋಶದ ಕಾವನ್ನು ಕಾಯ್ದುಕೊಂಡರು. ಅವರದ್ದು ತಾತ್ಕಾಲಿಕ ಭಾವಾವೇಶವಾಗಿರಲಿಲ್ಲ. ಪ್ರತಿದಿನ ಪ್ರತಿಯೊಂದು

ಊರಲ್ಲೂ ಸಾವಿರಾರು ಜನ ಬೀದಿಗೆ ಬಂದು ಮತ ಪ್ರದರ್ಶನ ನಡೆಸುತ್ತಿದ್ದರು. ವ್ಯಾಪಾರಿಗಳು ಎಷ್ಟೋ ದಿನ ಅಂಗಡಿ ಮುಚ್ಚಿಟ್ಟರು. ಕೆಲಸಗಾರರು ಕೆಲಸಕ್ಕೆ ಹೋಗಲು ನಿರಾಕರಿಸಿದರು. ಜನರೆಲ್ಲಾ ಅಲ್ಲಲ್ಲಿ ಇಸ್ರೇಲ್ ಸರಕಾರ ಮತ್ತದರ ಜನಾಂಗವಾದಿ ಧೋರಣೆಗಳ ವಿರುದ್ಧ ತಮ್ಮ ಆಕ್ರೋಶ ಪ್ರಕಟಿಸುತ್ತಿದ್ದರು. ನಿರಂತರ 6 ವರ್ಷಗಳ ಕಾಲ ಈ ಪ್ರದರ್ಶನಗಳ ಸರಣಿ ಮುಂದುವರಿಯಿತು. ಇಸ್ರೇಲ್‌ನ ಹೆಚ್ಚಿನೆಡೆ, ವಿಶೇಷವಾಗಿ ಆಕ್ರಮಿತ ಪ್ರದೇಶಗಳಲ್ಲಿ 'ಇನ್ತಿಫಾದಃ' ವನ್ನು ನಿಯಂತ್ರಿಸುವುದೇ ಸರಕಾರದ ಮುಂದಿನ ನಿತ್ಯದ ಸವಾಲಾಗಿತ್ತು. ಚಳವಳಿಗಾರರನ್ನು ತಡೆಯುವುದಕ್ಕಾಗಿ ಸರಕಾರವು 80 ಸಾವಿರಕ್ಕೂ ಹೆಚ್ಚಿನ ತನ್ನ ಸಶಸ್ತ್ರ ಯೋಧರನ್ನು ನಿಯೋಜಿಸಿತ್ತು. ಜನರನ್ನು ಹೆದರಿಸಲು ಮತ್ತು ತಡೆಯಲು ಎಲ್ಲ ಬಗೆಯ ಅಮಾನುಷ ಕ್ರಮಗಳನ್ನು ಕೈಗೊಂಡಿತ್ತು. ಆದರೆ ಕಾಯಕ ಸುಲಭವಾಗಿರಲಿಲ್ಲ.

1993ರಲ್ಲಿ ಮೊದಲ 'ಇನ್ತಿಫಾದಃ' ಸ್ಥಗಿತಗೊಂಡಾಗ 1,962 ಮಂದಿ ಫೆಲೆಸ್ತೀನಿ ನಾಗರಿಕರು ಹತರಾಗಿದ್ದರು. ಅವರ 1.20 ಲಕ್ಷ ಮಂದಿ ಗಾಯಗೊಂಡಿದ್ದರು. 6 ಲಕ್ಷ ಮಂದಿ ವಿವಿಧ ಅವಧಿಯ ಜೈಲುವಾಸ ಅನುಭವಿಸಿದ್ದರು. ಇಸ್ರೇಲ್ ಕಡೆಯಲ್ಲಿ 102 ಮಂದಿ ಯೋಧರು ಮತ್ತು 175 ನಾಗರಿಕರ ಸಹಿತ ಒಟ್ಟು 277 ಮಂದಿ ಹತರಾಗಿದ್ದರು.

**ಎರಡನೇ 'ಇನ್ತಿಫಾದಃ'– 2000ದಿಂದ 2005**

ಎರಡನೇ 'ಇನ್ತಿಫಾದಃ' 2000 ಸೆಪ್ಟಂಬರ್ 28ರಂದು ಆರಂಭವಾಯಿತು. ಒಂದು ರಸ್ತೆ ಅಪಘಾತವು ಮೊದಲ 'ಇನ್ತಿಫಾದಃ'ಕ್ಕೆ ತಕ್ಷಣದ ಪ್ರಚೋದನೆಯಾಗಿದ್ದರೆ ಈ ಬಾರಿ ಇಸ್ರೇಲ್ ಸರಕಾರ ಬಹಳಷ್ಟು ಪೂರ್ವಸಿದ್ಧತೆಯೊಂದಿಗೆ ಘರ್ಷಣೆಗೆ ಇಳಿದಿತ್ತು. ಮೊದಲ 'ಇನ್ತಿಫಾದಃ' ತಣಿಯುವುದಕ್ಕೆ, ಇಸ್ರೇಲ್ ಮತ್ತು ಅಮೆರಿಕ ಓಸ್ಲೋ ಒಪ್ಪಂದದನ್ವಯ ಫೆಲೆಸ್ತೀನ್ ಜನತೆಗೆ ನೀಡಿದ್ದ ಕೆಲವು ಆಶ್ವಾಸನೆಗಳು ಕಾರಣವಾಗಿದ್ದವು. ಹಲವು ಸುತ್ತಿನ ಮಾತುಕತೆ ಹಾಗೂ ಚೌಕಾಸಿಯ ಬಳಿಕ ಮೂಡಿ ಬಂದಿದ್ದ ಆ ಆಶ್ವಾಸನೆಗಳನ್ನು ಯಾಸಿರ್ ಅರಫಾತ್ ಥರದ ಅಪಾರ ಲೋಕಾನುಭವವಿದ್ದ ಹಿರಿಯ ನಾಯಕರು ನಂಬಿದ ಬಳಿಕವಷ್ಟೇ ಫೆಲೆಸ್ತೀನ್‌ನ ಮುಗ್ಧ ಜನಸಾಮಾನ್ಯರು ನಂಬಿದ್ದರು. ಆದರೆ 1993ರಲ್ಲಿ ನಡೆದ ಮೊದಲ ಹಂತದ ಒಪ್ಪಂದದ ಬಳಿಕ 2000ದ ಕ್ಯಾಂಪ್ ಡೇವಿಡ್ ಒಪ್ಪಂದದ ತನಕ ಉದ್ದಕ್ಕೂ ನಡೆದಿರುವುದು, ಇಸ್ರೇಲನ್ನು ಬಲಪಡಿಸಿ ಫೆಲೆಸ್ತೀನ್ ಅನ್ನು ವಂಚಿಸುವ ಜಾಣ ಶ್ರಮ ಮಾತ್ರ ಎಂಬುದು ಫೆಲೆಸ್ತೀನಿಗಳಿಗೆ ಮನವರಿಕೆಯಾದಾಗ ಬಹಳ ತಡವಾಗಿತ್ತು. ಅವರು ಆಗಲೇ

ಬಹಳಷ್ಟನ್ನು ಕಳೆದುಕೊಂಡಿದ್ದರು. ವಿಶೇಷವಾಗಿ, ಒಲ್ಲದ ಮನಸ್ಸಿನಿಂದ ಅವರು ಅಮೆರಿಕದ ಮೇಲೆ ಇಟ್ಟಿದ್ದ ವಿಶ್ವಾಸವು ಸಂಪೂರ್ಣ ಕುಸಿದು ಬಿದ್ದಿತ್ತು. ಅರಫಾತ್ ಮೋಸ ಹೋಗುವುದಿಲ್ಲ ಎಂಬ ಭ್ರಮೆ ಕರಗಿತ್ತು. ಯಾಸಿರ್ ಅರಫಾತ್ ಕೂಡ ಬಹಿರಂಗವಾಗಿ ತಮಗಾದ ಭ್ರಮನಿರಸನವನ್ನು ಪ್ರಕಟಿಸತೊಡಗಿದ್ದರು. 1999 ಮೇ ತಿಂಗಳ ಹೊತ್ತಿಗೆ, ಒಂದು ಪೂರ್ಣಪ್ರಮಾಣದ, ಸ್ವತಂತ್ರ, ಸ್ವಾಯತ್ತ ಫೆಲೆಸ್ತೀನ್ ದೇಶ ನಿರ್ಮಾಣವಾಗಿ ಬಿಡುತ್ತದೆಂಬ ಕನಸು ನುಚ್ಚುನೂರಾಗಿತ್ತು. ಅಷ್ಟೇ ಅಲ್ಲ ಆಕ್ರಮಿತ ಪ್ರದೇಶಗಳಲ್ಲಿ ಹೊಸ ಯಹೂದಿ ನಿವಾಸಗಳ ನಿರ್ಮಾಣ ಕಾರ್ಯವನ್ನು ನಿಲ್ಲಿಸಲಾಗುವುದೆಂದು ಆಶ್ವಾಸನೆ ನೀಡಿದ್ದ ಇಸ್ರೇಲ್, 7 ವರ್ಷಗಳ ಅವಧಿಯಲ್ಲಿ ಅವರ ಸಂಖ್ಯೆಯನ್ನು ದ್ವಿಗುಣ ಗೊಳಿಸಿತ್ತು. ಸ್ವತಂತ್ರ ಫೆಲೆಸ್ತೀನ್‌ನ ಕನಸನ್ನು ಮಾರಿದವರಿಗೆ ಅಂತಹ ಯಾವ ಇರಾದೆ ಕೂಡಾ ಇರಲಿಲ್ಲ ಎಂಬುದು ಈಗ ಸ್ಪಷ್ಟವಾಗಿ ಬಿಟ್ಟಿತ್ತು.

ಸೆಪ್ಟಂಬರ್ 28ರಂದು ವಿಪಕ್ಷ ನಾಯಕ ಏರಿಯಲ್ ಶೆರಾನ್ ಇಸ್ರೇಲ್ ಸರಕಾರದ ಅನುಮತಿ ಪಡೆದು, ನೂರಾರು ಸಶಸ್ತ್ರ ಯೋಧರ ರಕ್ಷಣೆಯಲ್ಲಿ, ತನ್ನ ಲಿಕುಡ್ ಪಕ್ಷದ ಒಂದು ನಿಯೋಗದೊಂದಿಗೆ ಜೆರುಸಲೇಮ್‌ನ ಮಸ್ಜಿದ್ ಅಲ್ ಅಕ್ಸಾಗೆ ಭೇಟಿ ನೀಡಿದರು.

ಫೆಲೆಸ್ತೀನಿಗಳನ್ನು ಹಿಂಸೆಗಿಳಿಯುವಂತೆ ಪ್ರಚೋದಿಸಿ, ಅದನ್ನು ನಿಯಂತ್ರಿಸುವ ಹೆಸರಲ್ಲಿ ಅವರ ಮೇಲೆ ದೊಡ್ಡ ಪ್ರಮಾಣದಲ್ಲಿ ನಾಶನಷ್ಟಗಳನ್ನು ಹೇರಿ ಕೊನೆಗೆ ಅವರ ಸದ್ದಡಗಿಸಿ ಬಿಡುವುದು ಇಸ್ರೇಲ್‌ನ ಯೋಜನೆಯಾಗಿತ್ತು. ಆ ವರೆಗಿನ ಎಲ್ಲ ಶಿಷ್ಟಾಚಾರಗಳನ್ನು ಉಲ್ಲಂಘಿಸಿ ನಡೆದ ಶೆರಾನ್‌ರ ಆ ಯೋಜಿತ, ಪ್ರಚೋದನಾತ್ಮಕ ಭೇಟಿಯ ಬೆನ್ನಿಗೆ ಭುಗಿಲೆದ್ದ ಭಾರೀ ಪ್ರತಿಭಟನೆಗಳ ಸರಣಿಯನ್ನು ಎರಡನೇ 'ಇನ್ತಿಫಾದಃ' ಎಂದು ಗುರುತಿಸಲಾಯಿತು. ಪ್ರಸ್ತುತ 'ಇನ್ತಿಫಾದಃ'ದ ಆರಂಭದಲ್ಲಿ ಹಿಂಸೆಯ ಪ್ರಮಾಣ ತೀರಾ ಸೀಮಿತವಾಗಿತ್ತು. ಆದರೆ ಇಸ್ರೇಲ್ ಕಡೆಯಿಂದ ಭಾರೀ ಅತಿರೇಕದ ಕ್ರಮಗಳನ್ನು ಕೈಗೊಳ್ಳಲಾಯಿತು. ಆಗ ಇಸ್ರೇಲ್ ಸೇನೆಯ ಬೇಹುಗಾರಿಕಾ ಇಲಾಖೆಯಲ್ಲಿ ನಿರ್ದೇಶಕರಾಗಿದ್ದ ಅಮೋಸ್ ಮಾಲ್ಕ ಅವರ ಪ್ರಕಾರ ಎರಡನೇ 'ಇನ್ತಿಫಾದಃ' ಆರಂಭವಾಗಿ ಕೆಲವೇ ದಿನಗಳೊಳಗೆ ಇಸ್ರೇಲ್ ಸೇನೆ ಫೆಲೆಸ್ತೀನಿ ಪ್ರದರ್ಶನಕಾರರ ಮೇಲೆ 13 ಲಕ್ಷ ಸುತ್ತು ಗುಂಡುಗಳ ಮಳೆ ಸುರಿಸಿಯಾಗಿತ್ತು. ಮೊದಲು ರಬ್ಬರ್ ಗುಂಡುಗಳನ್ನು ಬಳಸಿ ಅದರ ಬೆನ್ನಿಗೆ ನೈಜ ಗುಂಡುಗಳನ್ನು ಬಳಸಲಾಯಿತು. ಸಾಲದ್ದಕ್ಕೆ ಹೆಲಿಕಾಪ್ಟರ್‌ಗಳ ಮೂಲಕವೂ ನಿಶಸ್ತ್ರ ಪ್ರದರ್ಶನಕಾರರ ಮೇಲೆ ಗುಂಡು ಹಾರಿಸಲಾಯಿತು.

ಎಮ್ನೆಸ್ಟಿ ಇಂಟರ್‌ನ್ಯಾಷನಲ್ ವರದಿ ಪ್ರಕಾರ ಎರಡನೇ ಇನ್ತಿಫಾದಃ

ಆರಂಭವಾದ ದಿನವೇ 7 ಮಂದಿ ಪ್ರದರ್ಶನಕಾರರು ಹತರಾಗಿ 300 ಮಂದಿ ಗಾಯಗೊಂಡಿದ್ದರು. ಕೇವಲ 5 ದಿನದೊಳಗೆ ಇಸ್ರೇಲ್ ಪಡೆಗಳು 47 ಫೆಲೆಸ್ತೀನಿ ನಾಗರಿಕರನ್ನು ಕೊಂದು 1,885 ಮಂದಿಯನ್ನು ಗಾಯಗೊಳಿಸಿದ್ದವು. ಈ ಅವಧಿಯಲ್ಲಿ 5 ಮಂದಿ ಇಸ್ರೇಲಿಗಳು ಫೆಲೆಸ್ತೀನಿಗಳ ಕೈಯಲ್ಲಿ ಹತರಾದರು. ಎಮ್ನೆಸ್ಟಿ ಪ್ರಕಾರ ಇಸ್ರೇಲಿ ಸೈನಿಕರ ಕೈಯಲ್ಲಿ ಹತರಾದ 80ಶೇ. ಮಂದಿ ಯಾವುದಾದರೂ ಕಠೋರ ಪ್ರತಿಕ್ರಿಯೆಗೆ ಕಾರಣವಾದಂತಹ ಯಾವುದೇ ಚಟುವಟಿಕೆಯಲ್ಲಿ ತೊಡಗಿರಲಿಲ್ಲ.

'ಫೆಲೆಸ್ತೀನ್ ಸೆಂಟರ್ ಫಾರ್ ಹ್ಯೂಮನ್ ರೈಟ್ಸ್' ಸಂಸ್ಥೆಯ ವರದಿ ಪ್ರಕಾರ ಎರಡನೇ 'ಇನ್ತಿಫಾದಃ' ದ ಐದು ವರ್ಷಗಳಲ್ಲಿ 32 ಮಂದಿ ವೈದ್ಯಕೀಯ ಸಿಬ್ಬಂದಿ, 274 ಮಹಿಳೆಯರು ಮತ್ತು 1,262 ಮಕ್ಕಳ ಸಹಿತ 4,973 ಫೆಲೆಸ್ತೀನಿಗಳು ಹತರಾಗಿದ್ದರು. ಈ ಜನಾಂದೋಲನದಿಂದ ಫೆಲೆಸ್ತೀನಿಗಳಿಗಾದ ಲಾಭವೇನೆಂದರೆ ಜಗತ್ತು ಅವರ ಸಮಸ್ಯೆಗಳ ಕಡೆಗೆ ಗಮನ ಹರಿಸತೊಡಗಿತು. ಹಾಗೆಯೇ, ಕೆಲವು ಬೀದಿ ಪುಂಡರ ಮಾಮೂಲಿ ಕಿರುಕುಳ ಬಿಟ್ಟರೆ ಇಸ್ರೇಲ್‌ನಲ್ಲಿ ಬೇರೆಲ್ಲವೂ ಕ್ಷೇಮವಾಗಿದೆ ಎಂದು ಬಹುಕಾಲ ಜಗತ್ತನ್ನು ನಂಬಿಸುವಲ್ಲಿ ಯಶಸ್ವಿಯಾಗಿದ್ದ ಇಸ್ರೇಲ್‌ನ ಬಂಡವಾಳ ಈ ಆಂದೋಲನದಿಂದಾಗಿ ಜಗತ್ತಿನ ಮುಂದೆ ಬಟಾ ಬಯಲಾಗಿಬಿಟ್ಟಿತು.

ಜನಧ್ವನಿಯನ್ನು ಮೆಟ್ಟುವ ಸಾವಿರ ಕಲೆಗಳಲ್ಲಿ ಪಳಗಿದ್ದ ಇಸ್ರೇಲ್ 'ಇನ್ತಿಫಾದಃ' ವನ್ನು ಗುಟ್ಟಾಗಿಡಲು ನಡೆಸಿದ ಎಲ್ಲ ಶ್ರಮಗಳು ವ್ಯರ್ಥವಾದವು. ಎರಡು ಹಂತಗಳ ಇನ್ತಿಫಾದಃದಿಂದ ಲೋಕದಲ್ಲಿ ಫೆಲೆಸ್ತೀನ್ ಬಗ್ಗೆ ದೊಡ್ಡ ಪ್ರಮಾಣದ ಜಾಗೃತಿ ಬೆಳೆಯದಿದ್ದರೂ ಆ ಕುರಿತು ಕುತೂಹಲ ಮಾತ್ರ ಖಂಡಿತ ಕೆರಳಿತ್ತು. ಅಲ್ಲೇನು ನಡೆಯುತ್ತಿದೆ ಎಂಬ ಪ್ರಶ್ನೆ ಜಗತ್ತಿನ ವಿವಿಧೆಡೆಗಳಿಂದ ಕೇಳಿಬರತೊಡಗಿತ್ತು. 'ಇನ್ತಿಫಾದಃ' ಮೂಲಕ ಇಸ್ರೇಲ್ ಮತ್ತು ಅದರ ಆಕ್ರಮಿತ ಪ್ರದೇಶಗಳಲ್ಲಿ ಮೊಳಗಿದ ನ್ಯಾಯ ಮತ್ತು ಸ್ವಾತಂತ್ರ್ಯದ ಮೊರೆ ಹಾಗೂ ದಾಸ್ಯ ಮತ್ತು ಅಕ್ರಮದ ವಿರುದ್ಧ ಆಕ್ರೋಶ ಜಗತ್ತಿನೆಲ್ಲೆಡೆ ಮಾರ್ದನಿಸತೊಡಗಿತ್ತು. ಇಸ್ರೇಲ್ ಪಾಲಿಗೆ ಅದುವೇ ಒಂದು ಐತಿಹಾಸಿಕ ಹಿನ್ನಡೆಯಾಗಿತ್ತು.

### 'ಆಕ್ರಮಣಕಾರಿ ಅಹಿಂಸೆ'

'ಇನ್ತಿಫಾದಃ'ದುದ್ದಕ್ಕೂ, ಚಳವಳಿ ನಿರತರು ಕೆಲವು ನಿರ್ದಿಷ್ಟ ಬೇಡಿಕೆಗಳನ್ನು ಬೇರೆ ಬೇರೆ ವಿಧಾನಗಳಿಂದ ಪದೇ ಪದೇ ಪುನರಾವರ್ತಿಸಿ, ಅವು ಜನರ ನೆನಪಿನಲ್ಲಿ ಸದಾ ಉಳಿಯುವಂತೆ ಮಾಡಿದರು. ಉದಾ :

1. ಇಸ್ರೇಲ್ ಸರಕಾರ 1967ರಲ್ಲಿ ತಾನು ಆಕ್ರಮಿಸಿಕೊಂಡ ಎಲ್ಲ ಪ್ರದೇಶಗಳನ್ನು

ಸಂಪೂರ್ಣವಾಗಿ ತೆರವುಗೊಳಿಸಬೇಕು.

2. ಆಕ್ರಮಿತ ಪ್ರದೇಶಗಳಿಂದ ಹೊರಹಾಕಲ್ಪಟ್ಟ ಹಾಗೂ ನಿರಾಶ್ರಿತರಾಗಿ ಮಾರ್ಪಟ್ಟ ಎಲ್ಲ ಫೆಲೆಸ್ತೀನಿಗಳನ್ನು ಮತ್ತೆ ಅವರ ನಾಡಿಗೆ ಕರೆಸಿಕೊಳ್ಳಬೇಕು ಮತ್ತು ಅವರ ಪುನರ್ವಸತಿಗೆ ಪೂರ್ಣ ಪ್ರಮಾಣದ ಏರ್ಪಾಡು ಮಾಡಬೇಕು.
3. ಆಕ್ರಮಿತ ಪ್ರದೇಶಗಳಲ್ಲಿ ಕರ್ಫ್ಯೂ ಹಿಂದೆಗೆದುಕೊಳ್ಳಬೇಕು, ಚೆಕ್ ಪಾಯಿಂಟ್ ಗಳನ್ನು ರದ್ದುಗೊಳಿಸಬೇಕು, ಮುಕ್ತ ಸಂಚಲನಕ್ಕೆ ಅವಕಾಶ ಒದಗಿಸಬೇಕು.
4. ಫೆಲೆಸ್ತೀನ್ ವಿಮೋಚನೆಯ ಮೊದಲ ಹೆಜ್ಜೆಯಾಗಿ ಪಶ್ಚಿಮ ದಂಡೆ ಮತ್ತು ಗಾಝಾ ಪಟ್ಟಿಯಲ್ಲಿ ಪೂರ್ಣ ಪ್ರಮಾಣದ ಸ್ವತಂತ್ರ, ಸಾರ್ವಭೌಮ ಫೆಲೆಸ್ತೀನ್ ಸರಕಾರವನ್ನು ಸ್ಥಾಪಿಸಬೇಕು.

ಮೊದಲ 'ಇನ್ತಿಫಾದಃ' ಸ್ವಭಾವತಃ ಶಾಂತಿಯುತವಾಗಿತ್ತು. ಮಹಿಳೆಯರು ಮತ್ತು ಹದಿಹರೆಯದವರು ಈ ಆಂದೋಲನದ ಮುಂಚೂಣಿಯಲ್ಲಿದ್ದರು. ಭಾಷಣ, ಕರಪತ್ರ, ಗೋಡೆ ಬರಹ, ಘೋಷಣೆ, ಕಚೇರಿಗಳಿಗೆ ಮುತ್ತಿಗೆ, ರಸ್ತೆ ತಡೆ ಇತ್ಯಾದಿಗಳೇ ಪ್ರಧಾನ ವಿಧಾನಗಳಾಗಿದ್ದವು. ಆಂದೋಲನದ ಉದ್ದೇಶಗಳ ಕುರಿತು ಜನಜಾಗೃತಿ ಬೆಳೆಸಲು ವಿಶೇಷವಾಗಿ ವಿದ್ಯಾರ್ಥಿ ಸಮುದಾಯದ ಕಡೆಯಿಂದ ಹಲವು ಸೃಜನಶೀಲ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಆದರೆ ಸಹಜವಾಗಿಯೇ, ಲಕ್ಷಾಂತರ ಮಂದಿ ಭಾಗವಹಿಸಿದ ಆ ದೀರ್ಘ ಚಳವಳಿ ಸಂಪೂರ್ಣ ಹಿಂಸಾ ಮುಕ್ತವಾಗಿ ಉಳಿಯಲಿಲ್ಲ. 'ಇನ್ತಿಫಾದಃ'ದಲ್ಲೂ ಕೆಲವು ಹಿಂಸಾತ್ಮಕ ಘಟನೆಗಳು ನಡೆದವು. 'ಇನ್ತಿಫಾದಃ' ನಾಯಕರು ಪದೇ ಪದೇ ಶಾಂತಿ ಮತ್ತು ಸಂಯಮ ಪಾಲಿಸಲು ಕರೆ ನೀಡುತ್ತಲೇ ಇದ್ದರು. ಆದರೂ ಕೆಲವೊಮ್ಮೆ, ವಿಶೇಷವಾಗಿ ಪೊಲೀಸರು ಅಥವಾ ಭದ್ರತಾ ಪಡೆಗಳು ಅತಿರೇಕವೆಸಗಿದಾಗ, ಯುವಕರು ಪ್ರಚೋದಿತರಾಗಿ ಕಲ್ಲೆಸೆಯಲು ಆರಂಭಿಸುತ್ತಿದ್ದರು. ಕೆಲವೆಡೆ ಪೆಟ್ರೋಲ್ ಬಾಂಬ್ ಎಸೆದ ಘಟನೆಗಳೂ ನಡೆದಿದ್ದವು. ಆದರೆ ಒಟ್ಟಿನಲ್ಲಿ ಮೊದಲ 'ಇನ್ತಿಫಾದಃ' ಒಬ್ಬ ಪಾಶ್ಚಿಮಾತ್ಯ ವಿಮರ್ಶಕನ ಪ್ರಕಾರ 'ಆಕ್ರಮಣಕಾರಿ ಅಹಿಂಸೆ'ಯ ರೂಪದಲ್ಲಿತ್ತು!.

### ಸರಕಾರದ ದೌರ್ಜನ್ಯ

'ಸೇವ್ ದಿ ಚಿಲ್ಡ್ರನ್' ಸಂಘಟನೆಯ ಸ್ವೀಡಿಷ್ ಶಾಖೆಯ ವರದಿ ಪ್ರಕಾರ 'ಇನ್ತಿಫಾದಃ'ದ ಮೊದಲ ಎರಡು ವರ್ಷಗಳಲ್ಲಿ ಸುಮಾರು 30 ಸಾವಿರ ಎಳೆಯ ಮಕ್ಕಳು ಪೊಲೀಸ್ ದೌರ್ಜನ್ಯಕ್ಕೆ ತುತ್ತಾಗಿ ವೈದ್ಯಕೀಯ ಸಹಾಯ ಪಡೆಯಲು ನಿರ್ಬಂಧಿತರಾಗಿದ್ದರು. ಅವರಲ್ಲಿ 30 ಶೇ. ಮಂದಿ 10 ವರ್ಷಕ್ಕಿಂತಲೂ ಕೆಳಗಿನವರಾಗಿದ್ದರು.

ಆಂದೋಲನವನ್ನು ಹತ್ತಿಕ್ಕುವ ತಂತ್ರವಾಗಿ ಸರಕಾರವು, ಅದರಲ್ಲಿ ಸಕ್ರಿಯರಾಗಿದ್ದ ಯುವಕರನ್ನು ಕಂಡ ಕಂಡಲ್ಲಿ ಬಂಧಿಸತೊಡಗಿತು. ವಿಶೇಷವಾಗಿ, ವಿವಿಧ ಸಂಘಟನೆಗಳ ಪದಾಧಿಕಾರಿಗಳನ್ನು ಗುರಿಯಾಗಿಸಿ ಅವರನ್ನು ಬಂಧಿಸಲಾಗುತ್ತಿತ್ತು. ಅವರ ವಕೀಲರಿಗೆ ಅವರನ್ನು ಭೇಟಿಯಾಗುವ ಅನುಮತಿ ಸಿಗುತ್ತಿರಲಿಲ್ಲ. ಈ ನೀತಿಯ ವಿರುದ್ಧ ವಕೀಲರ ಸಂಘವು ಪ್ರತಿಭಟಿಸಿದಾಗ ವಕೀಲರ ಸಂಘದ ಉಪಾಧ್ಯಕ್ಷರನ್ನೇ ಯಾವುದೇ ವಿಚಾರಣೆ ಇಲ್ಲದೆ 6 ತಿಂಗಳ ಕಾಲ ಬಂಧನದಲ್ಲಿಡಲಾಯಿತು. ಗಾಝಾ ಮೆಡಿಕಲ್ ಎಸೋಸಿಯೇಶನ್‌ನ ಅಧ್ಯಕ್ಷ ಡಾ.ಝುಕರಿಯಾ ಅವರನ್ನೂ ಇದೇ ರೀತಿ ವಿಚಾರಣೆ ಇಲ್ಲದೆ 6 ತಿಂಗಳ ಕಾಲ ಜೈಲಲ್ಲಿಡಲಾಯಿತು. ಸರಕಾರಿ ಪಡೆಗಳು ಶೋಧ ಕಾರ್ಯಾಚರಣೆಗಳ ಹೆಸರಲ್ಲಿ 5,000ಕ್ಕೂ ಹೆಚ್ಚು ಫೆಲೆಸ್ತೀನಿ ಮನೆಗಳನ್ನು ಸಂಪೂರ್ಣ ಧ್ವಂಸಗೊಳಿಸಿದ್ದು 6,500ಕ್ಕೂ ಹೆಚ್ಚಿನ ಮನೆಗಳಿಗೆ ಗಂಭೀರ ಹಾನಿ ಮಾಡಿದವು.

## ಇಸ್ರೇಲ್‌ಗೆ ವಿಶ್ವಸಂಸ್ಥೆಯ ಖಂಡನೆ

ಇನ್ತಿಫಾದಃದ ಅವಧಿಯಲ್ಲಿ ಇಸ್ರೇಲ್ ಸರಕಾರ ಮತ್ತು ಇಸ್ರೇಲಿ ಪಡೆಗಳು ನಡೆಸಿದ ಅಮಾನುಷ ದೌರ್ಜನ್ಯಗಳನ್ನು ಮತ್ತು ಮಾನವಹಕ್ಕುಗಳ ಬರ್ಬರ ಉಲ್ಲಂಘನೆಯನ್ನು ವಿಶ್ವಸಂಸ್ಥೆಯು ಹಲವು ಬಾರಿ ಖಂಡಿಸಿತು. ಭದ್ರತಾ ಮಂಡಳಿಯು ತನ್ನ 607 ಹಾಗೂ 608ನೇ ನಿರ್ಣಯಗಳಲ್ಲಿ, ಫೆಲೆಸ್ತೀನಿಗಳನ್ನು ದೇಶದಿಂದ ಹೊರಹಾಕುವ ಕ್ರಮವನ್ನು ಇಸ್ರೇಲ್ ಸರಕಾರವು ತಕ್ಷಣ ನಿಲ್ಲಿಸಬೇಕೆಂದು ಆಗ್ರಹಿಸಿತು. 1988 ನವೆಂಬರ್‌ನಲ್ಲಿ ವಿಶ್ವಸಂಸ್ಥೆ ಮಹಾ ಸಭೆಯ ಹೆಚ್ಚಿನೆಲ್ಲಾ ಸದಸ್ಯ ದೇಶಗಳು ಇನ್ತಿಫಾದಃದ ದಮನಕ್ಕಾಗಿ ಇಸ್ರೇಲ್ ಸರಕಾರವು ಕೈಗೊಂಡ ಕ್ರೂರ ಕ್ರಮಗಳನ್ನು ಖಂಡಿಸಿದವು. 1989ರಲ್ಲಿ ಒಂದೇ ವರ್ಷ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಇಸ್ರೇಲ್ ವಿರುದ್ಧ ಅಂಗೀಕರಿಸಲಿದ್ದ ಮೂರು ನಿರ್ಣಯಗಳನ್ನು ಅಮೆರಿಕ ತನ್ನ ವೀಟೋ ಅಧಿಕಾರದ ಮೂಲಕ ತಡೆ ಹಿಡಿಯಿತು.

## ವಿಶ್ವಸಂಸ್ಥೆಗೆ ಇಸ್ರೇಲ್‌ನ ಬಹಿಷ್ಕಾರ !!

ಇಂದಿನ ಜಾಗತಿಕ ವ್ಯವಸ್ಥೆಯಲ್ಲಿ ನ್ಯಾಯ ಎಷ್ಟೊಂದು ಅಸಹಾಯಕವಾಗಿ ಬಿಡುತ್ತದೆ ಎಂಬುದನ್ನು ಇನ್ತಿಫಾದಃದ ಹಿನ್ನೆಲೆಯಲ್ಲಿ ಜಗತ್ತೆಲ್ಲಾ ಕಾಣುವಂತಾಯಿತು. ಫೆಲೆಸ್ತೀನ್ ನಾಗರಿಕರ ಮೇಲೆ ಇಸ್ರೇಲ್ ಸರಕಾರ ಎಸಗಿರುವ ಅಕ್ಷಮ್ಯ ದೌರ್ಜನ್ಯಗಳಿಗಾಗಿ ಇಸ್ರೇಲ್ ಮೇಲೆ ದಿಗ್ಬಂಧನ ಹೇರಬೇಕು, ಇಸ್ರೇಲ್ ಅನ್ನು ಬಹಿಷ್ಕರಿಸಬೇಕು ಎಂದೆಲ್ಲಾ ಜಗತ್ತಿನ ಹೆಚ್ಚಿನೆಲ್ಲಾ

ದೇಶಗಳು ವಿಶ್ವಸಂಸ್ಥೆಯನ್ನು ಆಗ್ರಹಿಸುತ್ತಿದ್ದಾಗ, ಇಸ್ರೇಲ್ ಸರಕಾರವು ಸಾಕ್ಷಾತ್ ವಿಶ್ವಸಂಸ್ಥೆಯನ್ನೇ ಬಹಿಷ್ಕರಿಸುವ ಮತ್ತು ಅದಕ್ಕೆ ಛೀಮಾರಿ ಹಾಕುವ ಕೆಲಸ ಮಾಡಿತು.

1990 ಅಕ್ಟೋಬರ್‌ನಲ್ಲಿ ಇಸ್ರೇಲ್ ಸರಕಾರವು, ವಿಶ್ವಸಂಸ್ಥೆಯ 672 ನೇ ನಿರ್ಣಯವನ್ನು ತಾನು ಗಣನೆಗೇ ತೆಗೆದುಕೊಳ್ಳುವುದಿಲ್ಲ ಎಂದು ಘೋಷಿಸಿ ಬಿಟ್ಟಿತು. ಜಗತ್ತಿನ ಹಲವಾರು ದೇಶಗಳ ಆಗ್ರಹದ ಮೇರೆಗೆ, ವಿಶ್ವಸಂಸ್ಥೆಯು, ಫೆಲೆಸ್ತೀನ್ ಜನತೆಯ ವಿರುದ್ಧ ಇಸ್ರೇಲ್ ಸರಕಾರವು ನಡೆಸಿರುವ ದೌರ್ಜನ್ಯಗಳ ವಿರುದ್ಧ ತನಿಖೆಗಾಗಿ ತನ್ನ ಪ್ರಧಾನ ಕಾರ್ಯದರ್ಶಿಯವರ ನೇತೃತ್ವದಲ್ಲಿ ಒಂದು ತನಿಖಾ ಆಯೋಗವನ್ನು ಕಳಿಸಲು ಬಯಸಿತು. ಆಗ ಇಸ್ರೇಲ್ ಸರಕಾರವು ತಾನು ಅಂತಹ ಯಾವುದೇ ಆಯೋಗವನ್ನು ಬಹಿಷ್ಕರಿಸುವುದಾಗಿ ಘೋಷಿಸಿ ಬಿಟ್ಟಿತು.

## ಬಲಿಷ್ಠ ಶಕ್ತಿಯ ವಿರುದ್ಧ ದುರ್ಬಲ ಗುಂಪಿನ ಹೋರಾಟ!

ಎರಡನೇ 'ಇನ್ತಿಫಾದಃ'ದ ಮಧ್ಯೆ ಇಸ್ರೇಲ್ ಸರಕಾರವು ಎಸಗಿದ ಅಪರಾಧಗಳ ಪಟ್ಟಿ ಸಾಕಷ್ಟು ದೀರ್ಘವಾಗಿದೆ. ಆದರೆ ಅದೇವೇಳೆ ಫೆಲೆಸ್ತೀನಿಗಳ ಕಡೆಯಿಂದಲೂ ಬಾಂಬು ದಾಳಿ, ಅಪಹರಣ, ಆತ್ಮ ಹತ್ಯಾ ದಾಳಿಯಂತಹ ಹಲವು ಅಪರಾಧಕೃತ್ಯಗಳು ನಡೆದಿವೆ. ಹೆಚ್ಚಿನ ದೊಡ್ಡ ಕೃತ್ಯಗಳ ಹೊಣೆಯನ್ನು ಸಣ್ಣ ಅಪರಿಚಿತ ಗುಂಪುಗಳು ವಹಿಸಿಕೊಂಡಿವೆ. ಒಟ್ಟಿನಲ್ಲಿ ಪರಸ್ಪರ ಆರೋಪಗಳ ಪಟ್ಟಿ ಬೆಳೆದಿದೆಯೇ ಹೊರತು ಒಟ್ಟು ಸಮಸ್ಯೆಯ ಪರಿಹಾರದ ನಿಟ್ಟಿನಲ್ಲಿ ಯಾರೊಬ್ಬರೂ ಒಂದಿಂಚು ಮುಂದೆ ಸಾಗಿಲ್ಲ. ಸದ್ಯ ಇಸ್ರೇಲ್ ಎಂಬ ಬಲಿಷ್ಠ ಶಕ್ತಿಯ ವಿರುದ್ಧ ಒಂದು ದುರ್ಬಲ ಗುಂಪು ವಿಮೋಚನಾ ಹೋರಾಟಕ್ಕೆ ನಿಂತಿದೆ. ಆ ಗುಂಪಿನಲ್ಲಿರುವ ಲಕ್ಷಾಂತರ ಮಂದಿಯ ಮಾನವೀಯ ಹಕ್ಕುಗಳ ಉಲ್ಲಂಘನೆಯಾಗುತ್ತಿರುವುದು ಮಾತ್ರವಲ್ಲ ಅವರ ಅಸ್ತಿತ್ವವೇ ಅಪಾಯದಲ್ಲಿದೆ. ಫೆಲೆಸ್ತೀನ್‌ನ ಲಕ್ಷಾಂತರ ನಾಗರಿಕರಿಗೆ ನ್ಯಾಯದ ಅಗತ್ಯವಿದೆ. ಆದರೆ ಅದಕ್ಕಿಂತ ತುರ್ತಾಗಿ, ಅವರಿಗೆ ಘನತೆಯೊಂದಿಗೆ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಭದ್ರತೆ ಮತ್ತು ಮೂಲಭೂತ ಸವಲತ್ತುಗಳ ಅಗತ್ಯವಿದೆ.

❖ ❖ ❖

# 20

# ಅರಬ್ ಮತ್ತು ಮುಸ್ಲಿಮ್ ಬಾಹುಳ್ಯದ ದೇಶಗಳೇಕೆ ನಿಷ್ಕ್ರಿಯವಾಗಿವೆ?

ಫೆಲೆಸ್ತೀನ್ ಮತ್ತದರ ಸುತ್ತಮುತ್ತ ಏನು ನಡೆಯುತ್ತಿದೆ ಎಂದು ಅರಿಯಲು ಹೊರಟವರು ಕೆಲವು ಪ್ರಶ್ನೆಗಳನ್ನು ಖಂಡಿತ ಕೇಳುತ್ತಾರೆ:

1. ಫೆಲೆಸ್ತೀನ್ ಎಂಬುದು ಮೂಲತಃ ಅರಬ್ ಹಾಗೂ ಮುಸ್ಲಿಮ್ ಬಾಹುಳ್ಯವಿರುವ ದೇಶ. ಅಂತಹ ದೇಶವನ್ನು ಯಾರೋ ಹೊರಗಿನವರು ಆಕ್ರಮಿಸಿ, ಅದರ ನಾಗರಿಕರನ್ನೆಲ್ಲಾ ದಾಸ್ಯಕ್ಕೆ ತಳ್ಳಿ, ಅವರ ವಿರುದ್ಧ ಸಾಮೂಹಿಕ ಹತ್ಯಾಕಾಂಡ ಸಹಿತ ವಿವಿಧ ಬಗೆಯ ದೌರ್ಜನ್ಯಗಳನ್ನು ನಡೆಸುತ್ತಿರುವಾಗ, ಅದನ್ನು ತಡೆಯುವುದಕ್ಕೆ ಫೆಲೆಸ್ತೀನ್‌ನ ಹಿತೈಷಿಗಳು ಯಾರೂ ಆ ಪ್ರದೇಶದಲ್ಲಿ ಇಲ್ಲವೇ? ಆ ಪ್ರದೇಶದಲ್ಲಿ ಅಷ್ಟೊಂದು ಸಂಖ್ಯೆಯಲ್ಲಿರುವ ಶ್ರೀಮಂತ ಹಾಗೂ ಬಲಿಷ್ಠ ಅರಬ್ ದೇಶಗಳು ಹಾಗೂ ಮುಸ್ಲಿಮ್ ಸರಕಾರಗಳೆಲ್ಲಾ ಏನು ಮಾಡುತ್ತಿವೆ?
2. ಅಮೆರಿಕ, ಮಧ್ಯ ಪ್ರಾಚ್ಯದಲ್ಲಿರುವ ಇತರೆಲ್ಲ ದೇಶಗಳನ್ನು ಬಿಟ್ಟು, ಸ್ವತಃ ತನ್ನ ಹಿತಾಸಕ್ತಿಗಳನ್ನು ಅಪಾಯಕ್ಕೊಡ್ಡಿ ಇಸ್ರೇಲ್ ಅನ್ನು ಬೆಂಬಲಿಸುವುದೇಕೇ?
3. ಫೆಲೆಸ್ತೀನ್ ನಾಗರಿಕರಿಗೆ ಎಂದಾದರೂ ನ್ಯಾಯ ಸಿಗುವ ಸಾಧ್ಯತೆ ಇದೆಯೇ?

ನಾವು ಈ ಪೈಕಿ ಮೊದಲ ಪ್ರಶ್ನೆಯನ್ನೇ ಮೊದಲು ಕೈಗೆತ್ತಿಕೊಳ್ಳುವುದಾದರೆ, ಅದರ ಉತ್ತರ ತೀರಾ ನಿರಾಶಾದಾಯಕವಾಗಿದೆ. ಕೊಲ್ಲಿಯ ಪ್ರತಿಯೊಂದು ದೇಶದಲ್ಲೂ ಜನಸಾಮಾನ್ಯರಿಗೆ ಫೆಲೆಸ್ತೀನ್ ಜೊತೆ ಬಹಳ ಗಾಢವಾದ, ಭಾವನಾತ್ಮಕ ಸಂಬಂಧವಿದೆ. ಫೆಲೆಸ್ತೀನಿಗಳ ಹಕ್ಕುಗಳು ಮತ್ತು ಅವರ ವಿಮೋಚನಾ ಹೋರಾಟದ ಬಗ್ಗೆ ಜನರಿಗೆ ಗಂಭೀರ ಕಾಳಜಿ ಇದೆ. ಆದರೆ ಸಮಸ್ಯೆ ಏನೆಂದರೆ ಈ ಪ್ರದೇಶದ ಎಲ್ಲ ದೇಶಗಳಲ್ಲೂ ಜನತೆ ಮತ್ತು ಸರಕಾರದ ನಡುವೆ ಅಗಾಧ ಅಂತರವಿದೆ. ಇಲ್ಲಿ ಯಾವ ಸರಕಾರ ಕೂಡಾ ತನ್ನ ನಾಡಿನ ಜನತೆಯನ್ನು ಪ್ರತಿನಿಧಿಸುವುದಿಲ್ಲ. ಯಾವುದೇ ಸರಕಾರದ ಧೋರಣೆಗಳು ಅಲ್ಲಿನ ಜನರ ಆಶೋತ್ತರಗಳನ್ನು ಪ್ರತಿಬಿಂಬಿಸುವುದಿಲ್ಲ.

**ಕೆಲವು ನಿರಾಶಾದಾಯಕ ಅಂಶಗಳು**

ಜಗತ್ತಿನ ಯಾವುದೇ ಅರಬ್ ಅಥವಾ ಮುಸ್ಲಿಮ್ ಸರಕಾರವು ನಿಕಟ ಭವಿಷ್ಯದಲ್ಲಿ ಫೆಲೆಸ್ತೀನ್‌ನ ನಾಗರಿಕರ ಹಿತಕ್ಕಾಗಿ ಇಸ್ರೇಲ್ ಅಥವಾ ಅಮೆರಿಕದ ವಿರುದ್ಧ ಘರ್ಷಣೆಗೆ ಇಳಿಯುವ ಸಾಧ್ಯತೆ ಖಂಡಿತ ಇಲ್ಲ. ಏಕೆಂದರೆ ಸದ್ಯ ಹೆಚ್ಚಿನ ಮುಸ್ಲಿಮ್, ಅರಬ್ ಮತ್ತು ಕೊಲ್ಲಿ ರಾಷ್ಟ್ರಗಳಲ್ಲಿ ಈ ಕೆಳಗಿನ ಕೆಲವು ನಿರಾಶಾದಾಯಕ ಅಂಶಗಳು ಸಮಾನವಾಗಿ ಕಂಡು ಬರುತ್ತಿವೆ:

1. ಪಶ್ಚಿಮದ ಹೆಚ್ಚಿನ ದೇಶಗಳಲ್ಲಿ ಕಳೆದ ಶತಮಾನದಲ್ಲೇ ರಾಜಾಳ್ವಿಕೆ ಮತ್ತು ಮಿಲಿಟರಿ ಆಡಳಿತಗಳು ಕೊನೆಗೊಂಡಿದ್ದರೂ ಏಶ್ಯದಲ್ಲಿ, ಅದರಲ್ಲೂ ವಿಶೇಷವಾಗಿ ಮಧ್ಯಪ್ರಾಚ್ಯದ ದೇಶಗಳಲ್ಲಿ ಈಗಲೂ ಎಲ್ಲೆಂದರಲ್ಲಿ ರಾಜಾಳ್ವಿಕೆ, ಮಿಲಿಟರಿ ಆಧಿಪತ್ಯ ಮತ್ತು ಸರ್ವಾಧಿಕಾರಗಳೇ ಮೆರೆಯುತ್ತಿವೆ. ಇಲ್ಲಿ ತಲೆ ಎತ್ತಿದ ಎಲ್ಲ ಪ್ರಜಾಸತ್ತಾತ್ಮಕ ಆಂದೋಲನಗಳನ್ನು ಬಹಳ ಅಮಾನುಷವಾಗಿ ಹೊಸಕಿ ಹಾಕಲಾಗಿದೆ. ಯಾರಾದರೂ ಇಲ್ಲಿ ಪ್ರಜಾಪ್ರಭುತ್ವದ ಪರವಾಗಿ ಮಾತನಾಡಿದರೆ ಸಾಕು, ಅವರೂ ಅವರಿಗೆ ಬೇಕಾದವರೆಲ್ಲರೂ ಶಾಶ್ವತವಾಗಿ ಕಣ್ಮರೆಯಾಗಿ ಬಿಡುತ್ತಾರೆ. ಕೊಲ್ಲಿಯ ಹೆಚ್ಚಿನೆಲ್ಲ ಅರಬ್ ಮತ್ತು ಮುಸ್ಲಿಮ್ ದೇಶಗಳಲ್ಲಿ ಅಧಿಕಾರವು ಯಾವಾಗಲೂ ಯಾವುದಾದರೂ ರಾಜ ಮನೆತನದವರ, ಮಿಲಿಟರಿ ಆಡಳಿತಗಾರರ ಅಥವಾ ಶಕ್ತಿಶಾಲಿ ವ್ಯಕ್ತಿಗಳ ಮುಷ್ಟಿಯಲ್ಲಿ ಇರುತ್ತದೆ. ಯಾರ ಮುಷ್ಟಿಯಲ್ಲಿದ್ದರೂ ಪರಿಣಾಮ ಒಂದೇ– ಅಲ್ಲಿ ಕ್ರೂರವಾದ, ನಿರಂಕುಶ ಸರ್ವಾಧಿಕಾರ ಮೆರೆಯುತ್ತಿರುತ್ತದೆ.
2. ಸರ್ವಾಧಿಕಾರಿ ಸರಕಾರಗಳು ಎಂದೂ ತಮ್ಮ ಜನತೆಯ ಹಿತೈಷಿಗಳಾಗಿರುವುದಿಲ್ಲ. ಅವು ತಮ್ಮ ದೇಶದ ಜನಸಾಮಾನ್ಯರನ್ನೇ ತಮ್ಮ ನಂಬರ್ 1 ಶತ್ರುವೆಂದು ಪರಿಗಣಿಸುತ್ತವೆ. ತಮ್ಮ ಜನತೆಯನ್ನು ಹದ್ದು

ಬಸ್ತಿನಲ್ಲಿಡುವುದೇ ಅವರ ಪ್ರಥಮ ಗುರಿಯಾಗಿರುತ್ತದೆ. ಪ್ರಜಾಪ್ರಭುತ್ವ, ಮಾನವೀಯ ಹಕ್ಕುಗಳು, ಸ್ವತಂತ್ರ ನ್ಯಾಯಾಂಗ, ಅಲ್ಪ ಸಂಖ್ಯಾತರ ಹಕ್ಕುಗಳು, ಅಭಿವ್ಯಕ್ತಿ ಸ್ವಾತಂತ್ರ್ಯ, ಮಾಧ್ಯಮ ಸ್ವಾತಂತ್ರ್ಯ, ಪಾರದರ್ಶಕ ಆಡಳಿತ ಮುಂತಾದ ಯಾವ ವಿಷಯ ಕೂಡಾ ತಮ್ಮ ದೇಶದೊಳಗೆ ಚರ್ಚೆಗೆ ಬರದಂತೆ ತಡೆಯುವುದು ಆ ಸರಕಾರಗಳ ಆದ್ಯತೆಯಾಗಿರುತ್ತದೆ. ತಮ್ಮ ಆಧಿಪತ್ಯವನ್ನು ಪ್ರಶ್ನಿಸಬಹುದಾದವರು ಯಾರೂ ಎಲ್ಲೂ ತಲೆ ಎತ್ತದಂತೆ, ಎಲ್ಲೂ ಚರ್ಚೆ, ಸಮಾಲೋಚನೆಗಳನ್ನು ಕೂಡಾ ನಡೆಸದಂತೆ ನೋಡಿಕೊಳ್ಳುವುದು ಅವರ ಪ್ರಾಶಸ್ತ್ಯವಾಗಿರುತ್ತದೆ. ಆ ಸರಕಾರಗಳ ಶಕ್ತಿ ಸಾಮರ್ಥ್ಯಗಳೆಲ್ಲಾ ಸ್ವತಃ ತಮ್ಮ ಜನತೆಯನ್ನು ನಿಯಂತ್ರಿಸುವುದಕ್ಕೇ ವ್ಯಯವಾಗುತ್ತಿರುತ್ತವೆ.

3. ಆಂತರಿಕವಾಗಿ ಈ ದೇಶಗಳ ಆಡಳಿತಗಾರರು, ಎಂದಾದರೂ ತಮ್ಮ ಪಟ್ಟಕ್ಕೆ ಸವಾಲಾಗಬಲ್ಲ, ತಮ್ಮದೇ ದೇಶದೊಳಗಿನ ಯಾವುದಾದರೂ ಪಕ್ಷ, ಪಂಗಡ, ಸಂಸ್ಥೆ, ವಿದ್ವಾಂಸರು, ಪತ್ರಕರ್ತರು ಅಥವಾ ಬುದ್ಧಿಜೀವಿಗಳನ್ನು ತಮ್ಮ ಅತಿದೊಡ್ಡ ಶತ್ರುವೆಂದು ಪರಿಗಣಿಸಿ ಅವರ ಸದ್ದು ಅಡಗಿಸುವ ಶ್ರಮದಲ್ಲೇ ಸದಾ ತಲ್ಲೀನರಾಗಿರುತ್ತಾರೆ. ದುರಂತವೇನೆಂದರೆ, ಚೀನಾದಲ್ಲಿ ಪ್ರಜಾಸತ್ತೆ ಯಾಕಿಲ್ಲ? ಉತ್ತರ ಕೊರಿಯಾದಲ್ಲಿ ಮಾನವ ಹಕ್ಕುಗಳಿಗೆ ಮಾನ್ಯತೆ ಯಾಕಿಲ್ಲ ಎಂದೆಲ್ಲಾ ಪ್ರಶ್ನಿಸುವ ಅಮೆರಿಕ ಮತ್ತು ಯುರೋಪಿನ ಪ್ರಜಾಸತ್ತಾತ್ಮಕ ಸರಕಾರಗಳು, ಅರಬ್ ದೇಶಗಳಲ್ಲಿ ಸರ್ವಾಧಿಕಾರಿಗಳನ್ನು ರಕ್ಷಿಸಲು ಮತ್ತು ಪ್ರಜಾಸತ್ತೆ, ಮಾನವಹಕ್ಕು ಇತ್ಯಾದಿಗಳ ಕೊರಳು ಕತ್ತರಿಸಲು, ಮಾಡಬಾರದ ಎಲ್ಲ ಅಪರಾಧಗಳನ್ನೂ ಮಾಡಿವೆ.

4. ವಿದೇಶ ನೀತಿಯ ವಿಷಯದಲ್ಲಿ ಈ ದೇಶಗಳ ಮಿತ್ರರು ಯಾರು, ಶತ್ರುಗಳು ಯಾರು ಎಂಬುದೆಲ್ಲ ಯಾವುದೇ ತತ್ವ ಸಿದ್ಧಾಂತ, ಧೋರಣೆ ಅಥವಾ ಮೌಲ್ಯದ ಆಧಾರದಲ್ಲಿ ನಿರ್ಧಾರವಾಗುವ ಬದಲು ಕೇವಲ ಆಯಾ ಸರಕಾರದ ತಕ್ಷಣದ ಹಿತಾಸಕ್ತಿಗಳನ್ನು ಅಥವಾ ಆ ಸರಕಾರಗಳನ್ನು ನಿಯಂತ್ರಿಸುವ ಅಮೆರಿಕದಂತಹ ಪೋಷಕ ರಾಷ್ಟ್ರದ ಮರ್ಜಿಯನ್ನು ಅವಲಂಬಿಸಿರುತ್ತದೆ. ಶೀತಲ ಸಮರದ ಯುಗದಲ್ಲಿ ಕೊಲ್ಲಿಯ ಹೆಚ್ಚಿನ ಸರ್ವಾಧಿಕಾರಿ ಸರಕಾರಗಳು ಒಂದೋ ಅಮೆರಿಕ ಅಥವಾ ಸೋವಿಯತ್ ಕಡೆಗೆ ವಾಲಿರುತ್ತಿದ್ದವು. ಸಂದರ್ಭಾನುಸಾರ ನಿಷ್ಠಾಂತರಕ್ಕೂ ಅವಕಾಶವಿತ್ತು. ಆದರೆ ಅನಂತರದ ಯುಗದಲ್ಲಿ, ಹೆಚ್ಚಿನ ದೇಶಗಳನ್ನು ಏಕಪಕ್ಷೀಯವಾಗಿ ಅಮೆರಿಕವೇ ನಿಯಂತ್ರಿಸುತ್ತಾ ಬಂದಿದೆ. ನಾವು ಒಂದು ನಿರ್ದಿಷ್ಟ ಸರಕಾರದ್ದು ಎಂದು ನಂಬುವ ಧೋರಣೆಗಳೆಲ್ಲಾ ನಿಜವಾಗಿ ಅಮೆರಿಕ

ನಿರ್ದೇಶಿತ ಧೋರಣೆಗಳಾಗಿರುತ್ತವೆ.

5. ಹೆಚ್ಚಿನೆಲ್ಲ ಅರಬ್ ಅಥವಾ ಮುಸ್ಲಿಮ್ ಸರಕಾರಗಳು ತಮ್ಮ ಅಕ್ಕಪಕ್ಕದ ಯಾವುದಾದರೂ ಮುಸ್ಲಿಮ್ ಅಥವಾ ಅರಬ್ ದೇಶವನ್ನೇ ತಮ್ಮ ಪರಮ ಶತ್ರು ಎಂದು ಪರಿಗಣಿಸಿರುತ್ತವೆ ಮತ್ತು ಸದಾ ಅದರ ವಿರುದ್ಧ ಸಮರ ಸನ್ನದ್ಧತೆಯಲ್ಲಿ ನಿರತವಾಗಿರುತ್ತವೆ. ಫೆಲೆಸ್ತೀನ್‌ನ ಜನತೆಗೆ ನೆರವಾಗಲು ಬಯಸುವ ಯಾವುದೇ ಸರಕಾರವು ಇಸ್ರೇಲ್ ಎಂಬ ಬಲಿಷ್ಠ ಸರಕಾರದ ವಿರುದ್ಧ ಮಾತ್ರವಲ್ಲ ಅಮೆರಿಕವೆಂಬ ಅದರ ಪೋಷಕ ಸರಕಾರದ ವಿರುದ್ಧ ಕೂಡಾ ಘರ್ಷಣೆಗೆ ಇಳಿಯಬೇಕಾಗುತ್ತದೆ. ಆದರೆ ಮಧ್ಯ ಪ್ರಾಚ್ಯದಲ್ಲಿ ಮಾತ್ರವಲ್ಲ, ಸಂಪೂರ್ಣ ಏಶಿಯಾ ಖಂಡದಲ್ಲೂ ಯಾವುದೇ ದೇಶ ಅಂತಹ ಸಾಹಸಕ್ಕೆ ಇಳಿಯುವ ಸಾಧ್ಯತೆ ದೂರದೂರಕ್ಕೂ ಕಾಣಿಸುತ್ತಿಲ್ಲ.

**ನೆಲೆ ಒದಗಿಸುವ ಔದಾರ್ಯ**

ಸಾಮಾನ್ಯವಾಗಿ ಯಾವುದೇ ಸ್ವತಂತ್ರ ದೇಶ ತನ್ನ ನೆಲದಲ್ಲಿ, ಇನ್ನೊಂದು ದೇಶಕ್ಕೆ ತನ್ನ ಸೇನಾ ನೆಲೆಯನ್ನು ಸ್ಥಾಪಿಸಲು ಅನುಮತಿಸುವುದಿಲ್ಲ – ಅದೆಷ್ಟೇ ಆಪ್ತ ದೇಶವಾಗಿದ್ದರೂ ಸರಿಯೇ. ತೀರಾ ಅನಿವಾರ್ಯ ಸನ್ನಿವೇಶದಲ್ಲಿ, ತನ್ನ ಪರಮ ಆಪ್ತ ಹಾಗೂ ತನ್ನ ರಕ್ಷಕ ಎಂದು ನಂಬಲಾಗುವ ದೇಶಕ್ಕೆ ಮಾತ್ರ ಸೇನಾ ನೆಲೆಗಳನ್ನು ಸ್ಥಾಪಿಸಲು ತಾತ್ಕಾಲಿಕವಾಗಿ ಅನುಮತಿಸಲಾಗುತ್ತದೆ. ಈ ದೃಷ್ಟಿಯಿಂದ ನಾವು, ಯಾವ ದೇಶದಲ್ಲಿ ಯಾವ ದೇಶಕ್ಕೆ ಸೇನಾ ನೆಲೆಗಳನ್ನು ಒದಗಿಸಲಾಗಿದೆ ಎಂಬುದನ್ನು ನೋಡಿ, ಅದರ ಆಧಾರದಲ್ಲಿ, ಯಾರು ತಮ್ಮ ಭದ್ರತೆಗಾಗಿ ಯಾರನ್ನು ಅವಲಂಬಿಸಿದ್ದಾರೆ ಎಂಬುದನ್ನು ನಿರ್ಧರಿಸಬಹುದು.

ಇಸ್ರೇಲ್‌ನೊಳಗೆ ಅಮೆರಿಕದ ಪ್ರಥಮ ಸೈನಿಕ ನೆಲೆ 2017 ರಲ್ಲಿ ಸ್ಥಾಪಿತವಾಯಿತು. ಇರಾನ್ ಕಡೆಯಿಂದ ನಡೆಯಬಹುದಾದ ಸಂಭವನೀಯ ಬ್ಯಾಲಿಸ್ಟಿಕ್ ಮಿಸೈಲ್‌ಗಳನ್ನು ತಡೆಯುವುದು ಈ ನೆಲೆಯ ಘೋಷಿತ ಉದ್ದೇಶವಾಗಿತ್ತು. ಸ್ಥಳೀಯರ ಕಡೆಯಿಂದ ಅದಕ್ಕೆ ವಿರೋಧವಿತ್ತಾದರೂ ಇರಾನ್‌ನ ಹೆಸರು ಹೇಳಿ ಪ್ರಸ್ತುತ ಪ್ರತಿರೋಧವನ್ನು ತಣಿಸಲಾಯಿತು.

ಇದಕ್ಕೆ ಹೋಲಿಸಿದರೆ ಸೌದಿ ಅರೇಬಿಯಾ ಮತ್ತು ಅಮೆರಿಕದ ನಡುವೆ ರಕ್ಷಣಾ ಒಪ್ಪಂದಗಳ ಸರಣಿ 1933ರಲ್ಲೇ ಆರಂಭವಾಗಿದ್ದು 1951ರ ಹೊತ್ತಿಗೆ ಅಲ್ಲಿ ಅಮೆರಿಕದ ಸೇನಾ ನೆಲೆಗಳು ಸ್ಥಾಪಿತವಾಗಿದ್ದವು! ಈಗಂತೂ ಸೌದಿ ಅರೇಬಿಯಾದಲ್ಲಿ ಅಮೆರಿಕದ ವಾಯು ನೆಲೆಗಳು, ನೌಕಾ ನೆಲೆಗಳು ಮತ್ತು ಮಿಲಿಟರಿ ಸ್ಥಾವರಗಳು ಹತ್ತಾರು ಸಂಖ್ಯೆಯಲ್ಲಿವೆ. ಇದು ಗಲ್ಫ್ ಕೋ ಆಪರೇಟಿವ್ ಕೌನ್ಸಿಲ್(GCC)ನ ಪ್ರಧಾನ ಸ್ಥಾನದಲ್ಲಿರುವ ಸೌದಿ ಅರೇಬಿಯಾದ

ಕಥೆ. ಜಿಸಿಸಿಯ ಇತರ ಸದಸ್ಯ ದೇಶಗಳಾದ ಕುವೈತ್, ಖತರ್, ಒಮಾನ್, ಯುಎಇ ಮತ್ತು ಬಹರೈನ್‌ಗಳು ಕೂಡ ಅಮೆರಿಕದ ಮಡಿಲಲ್ಲೇ ಆಶ್ರಯ ಪಡೆದಿವೆ. ಈ ಪೈಕಿ ಪ್ರತಿಯೊಂದು ದೇಶದಲ್ಲೂ ಅಮೆರಿಕದ ದೊಡ್ಡ ದೊಡ್ಡ ಸೇನಾ ನೆಲೆಗಳಿವೆ. ಗಮ್ಮತ್ತೇನೆಂದರೆ, ಇಸ್ರೇಲ್ ನಂತೆ ಈ ದೇಶಗಳು ಕೂಡ 'ಇರಾನ್ ಕಡೆಯಿಂದ ನಡೆಯಬಹುದಾದ ಸಂಭವನೀಯ ದಾಳಿಯನ್ನು ತಡೆಯುವುದಕ್ಕಾಗಿ' ಎಂಬ ಘೋಷಿತ ಸಬೂಬನ್ನೇ ಮುಂದಿಟ್ಟು ತಮ್ಮ ನೆಲದಲ್ಲಿ ಅಮೆರಿಕದ ಸೇನಾನೆಲೆಗಳ ಸ್ಥಾಪನೆಯನ್ನು ಸಮರ್ಥಿಸುತ್ತಿವೆ! ಇದರಿಂದ ಒಂದು ವಿಷಯವಂತೂ ಸಂಶಯಾತೀತವಾಗಿ ಸ್ಪಷ್ಟವಾಗುತ್ತದೆ. ಈ ಎಲ್ಲ ದೇಶಗಳು ತಮ್ಮ ಶತ್ರುವೆಂದು ಪರಿಗಣಿಸುವುದು ಇರಾನ್ ದೇಶವನ್ನೇ ಹೊರತು ಇಸ್ರೇಲ್ ದೇಶವನ್ನಲ್ಲ. ಹಾಗೆಯೇ ಇರಾನ್ ಅನ್ನು ಪರಮ ಶತ್ರುವೆಂದು ಪರಿಗಣಿಸುವ ವಿಷಯದಲ್ಲಿ ಈ ಎಲ್ಲ ದೇಶಗಳು ಇಸ್ರೇಲ್ ಜೊತೆ ಒಂದೇ ಸಾಲಲ್ಲಿ ನಿಂತಿವೆ!

ಜಿಸಿಸಿಯ ಸದಸ್ಯರಲ್ಲದ ಸಿರಿಯಾ ಮತ್ತು ಇರಾಕ್ ಎಂಬ ಎರಡು ಅರಬ್ ದೇಶಗಳಲ್ಲೂ, ಟರ್ಕಿ ಮತ್ತು ಅಫ್ಘಾನಿಸ್ತಾನ ಎಂಬ (ಅರಬ್ ಅಲ್ಲದ) ಎರಡು ಮುಸ್ಲಿಮ್ ದೇಶಗಳಲ್ಲೂ ಅಮೆರಿಕದ ಸೈನಿಕ ನೆಲೆಗಳಿವೆ. ಎಷ್ಟೋ ಮಂದಿ ಟರ್ಕಿಯನ್ನು ಇಸ್ರೇಲ್‌ನ ಪ್ರತಿಸ್ಪರ್ಧಿ ಎಂಬಂತೆ ಕಾಣುತ್ತಾರೆ. ಆದರೆ ಟರ್ಕಿ ಕೂಡ ಅಮೆರಿಕದ ಎರಡೆರಡು ವಾಯು ನೆಲೆಗಳಿಗೆ ಆಶ್ರಯವಾಗಿದೆ. ಈ ಪೈಕಿ ಹೆಚ್ಚಿನೆಲ್ಲ ದೇಶಗಳು ಬಹುಕಾಲದಿಂದ ಇಸ್ರೇಲ್ ಜೊತೆ ಗುಟ್ಟಾಗಿ ವಿವಿಧ ಬಗೆಯ ವಾಣಿಜ್ಯ ವ್ಯವಹಾರಗಳನ್ನು ನಡೆಸುತ್ತಿವೆ. ವಿಶೇಷವಾಗಿ ತಮ್ಮ ದೇಶದ ಒಳಗಿನ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ನಿಯಂತ್ರಿಸಲು ಬೇಹುಗಾರಿಕೆಯ ರಂಗದಲ್ಲಿ ಇಸ್ರೇಲ್‌ನಿಂದ ಗರಿಷ್ಠ ಸಹಕಾರವನ್ನು ಪಡೆಯುತ್ತಿವೆ. ಇತ್ತೀಚಿನ ವರ್ಷಗಳಲ್ಲಿ ಈ ಎಲ್ಲ ರಂಗಗಳಲ್ಲಿ ತೆರೆಮರೆಯ ವಹಿವಾಟುಗಳು ಕಡಿಮೆಯಾಗಿ ಬಹಿರಂಗ ಒಪ್ಪಂದ – ವ್ಯವಹಾರಗಳು ಕ್ಷಿಪ್ರವಾಗಿ ಹೆಚ್ಚುತ್ತಿವೆ.

## ವಿಮೋಚಕರಿಗೆ ಬೇಕಾಗಿದೆ ವಿಮೋಚನೆ!

ಕೊಲ್ಲಿಯ ಅರಬ್ ಮತ್ತು ಮುಸ್ಲಿಮ್ ದೇಶಗಳು ಸರ್ವಾಧಿಕಾರಿಗಳ ಕಪಿಮುಷ್ಟಿಯಲ್ಲಿದ್ದು ಅವು ಸ್ವತಃ ತಮ್ಮ ದೇಶದ ನಾಗರಿಕರಿಗೆ ಸ್ವಾತಂತ್ರ್ಯವನ್ನಾಗಲಿ ಮೂಲಭೂತ ಹಕ್ಕುಗಳನ್ನಾಗಲಿ ನೀಡಲು ಸಿದ್ಧವಿಲ್ಲ. ಇಂತಹ ದೇಶಗಳು ಫೆಲೆಸ್ತೀನ್ ಎಂಬ ಇನ್ನೊಂದು ನಾಡಿನವರಿಗೆ ಸ್ವಾತಂತ್ರ್ಯ ಕೊಡಿಸುತ್ತವೆಂದು

ನಿರೀಕ್ಷಿಸುವುದು ಮೂರ್ಖತನವಲ್ಲವೇ? ಬ್ರಿಟನ್‌ನ ಖ್ಯಾತ ಸಾಪ್ತಾಹಿಕ 'ದಿ ಇಕೊನೊಮಿಸ್ಟ್' ನವರು ಜಗತ್ತಿನ 167 ದೇಶಗಳ ಸ್ಥಿತಿಗತಿಗಳ ವೈಜ್ಞಾನಿಕ ಅಧ್ಯಯನ ನಡೆಸಿ, ಪ್ರಜಾಪ್ರಭುತ್ವ ಮತ್ತು ನಾಗರಿಕ ಸ್ವಾತಂತ್ರ್ಯದ ದೃಷ್ಟಿಯಿಂದ ಯಾವ ದೇಶ ಯಾವ ಸ್ಥಿತಿಯಲ್ಲಿದೆ ಎಂದು ಅಳೆದು ಪ್ರತಿಯೊಂದು ದೇಶಕ್ಕೆ ಇಂತಿಷ್ಟು ಅಂಕ ನೀಡುತ್ತಾರೆ. ಸಾಮಾನ್ಯವಾಗಿ ನಿಷ್ಪಕ್ಷವೆಂದು ನಂಬಲಾಗುವ ಪ್ರಸ್ತುತ ಪಟ್ಟಿಯಿಂದ ತಿಳಿಯುವಂತೆ ಕೊಲ್ಲಿ ಪ್ರದೇಶದ ಹೆಚ್ಚಿನ ಮುಸ್ಲಿಮ್ ದೇಶಗಳಲ್ಲಿ ಪ್ರಜಾಸತ್ತಾತ್ಮಕ ಹಾಗೂ ನಾಗರಿಕ ಹಕ್ಕುಗಳು ತೀರಾ ಕನಿಷ್ಠ ಮಟ್ಟದಲ್ಲಿವೆ. ಅತ್ಯುತ್ತಮ ಸ್ಥಿತಿಗೆ 10 ಅಂಕವೆಂದು ನಿಗದಿ ಪಡಿಸಿ ಅಳೆದಾಗ ಟರ್ಕಿಯೊಂದನ್ನು ಬಿಟ್ಟರೆ ಬೇರಾವ ದೇಶಕ್ಕೂ 5ಕ್ಕಿಂತ ಹೆಚ್ಚು ಅಂಕ ದೊರೆತಿಲ್ಲ. ಕುವೈತ್, ಅಲ್ಜೀರಿಯ, ಬಹರೈನ್, ಈಜಿಪ್ಟ್, ಮೊರೊಕ್ಕೋ, ಇರಾಕ್ ಮತ್ತು ಜೋರ್ಡನ್‌ಗಳಿಗೆ 3 ರಿಂದ 4 ಅಂಕಗಳು ಸಿಕ್ಕಿವೆ. ಸಿರಿಯಾ, ಯುಎಇ, ಇರಾನ್, ಒಮಾನ್ ಮತ್ತು ಖತರ್ ದೇಶಗಳಿಗೆ ಕೇವಲ 2 ರಿಂದ 3 ಅಂಕಗಳು ದೊರೆತಿವೆ. ಸೌದಿ ಅರೇಬಿಯಾ ಮತ್ತು ಲಿಬಿಯಾಗಳಿಗಂತೂ 2 ಕ್ಕಿಂತಲೂ ಕಡಿಮೆ ಅಂಕಗಳು ಸಿಕ್ಕಿವೆ. ಈ ದೃಷ್ಟಿಯಿಂದ ನೋಡಿದರೆ ಫೆಲೆಸ್ತೀನ್‌ಗಿಂತ ಹೆಚ್ಚಾಗಿ ಸ್ವತಃ ಈ ದೇಶಗಳ ಜನತೆಗೆ ಸ್ವಾತಂತ್ರ್ಯ ಮತ್ತು ನಾಗರಿಕ ಹಕ್ಕುಗಳ ತುರ್ತು ಅಗತ್ಯವಿದೆ. ವಿವಿಧ ಬಗೆಯ ಮತ್ತು ವಿಭಿನ್ನ ಮಟ್ಟದ ಸರ್ವಾಧಿಕಾರಗಳ ಅಧೀನದಲ್ಲಿ ನರಳುತ್ತಿರುವ ಈ ದೇಶಗಳ ಜನತೆಯ ಆಕ್ರೋಶವನ್ನು ಬಲಪ್ರಯೋಗಿಸಿ ಎಷ್ಟು ತುಳಿದಿಟ್ಟರೂ ಅದು ಒಂದಿಲ್ಲೊಂದು ದಿನ ದೊಡ್ಡ ಪ್ರಮಾಣದಲ್ಲಿ ಸ್ಫೋಟಗೊಳ್ಳಲಿಕ್ಕಿದೆ. ಆ ತನಕ ಈ ಪೈಕಿ ಯಾವುದೇ ದೇಶ ಫೆಲೆಸ್ತೀನ್‌ನ ವಿಮೋಚನೆಗೆ ಯಾವುದೇ ಗಣ್ಯ ಕೊಡುಗೆ ನೀಡುವ ಸಾಧ್ಯತೆ ಖಂಡಿತ ಇಲ್ಲ.

❖ ❖ ❖

## 21

# ಕೊಲ್ಲಿಯ ದೇಶಗಳ ಆಂತರಿಕ ಸ್ಥಿತಿ ಹೇಗಿದೆ? ಪರಸ್ಪರ ನಂಟುಗಳು ಹೇಗಿವೆ?

ಕೊಲ್ಲಿಯ ಅರಬ್ ಮತ್ತು ಮುಸ್ಲಿಮ್ ದೇಶಗಳು ಒಂದುಗೂಡಿ ಇಸ್ರೇಲ್ ವಿರುದ್ಧ ಸಂಯುಕ್ತ ಕಾರ್ಯಾಚರಣೆಗೆ ಇಳಿದರೆ ಇಸ್ರೇಲನ್ನು ಸೋಲಿಸಿ, ಫೆಲೆಸ್ತೀನಿಗಳಿಗೆ ಅವರ ಹಕ್ಕನ್ನು ಕೊಡಿಸಲು ಸಾಧ್ಯವಿದೆ– ಇದು ಬಹುಕಾಲದಿಂದ ಹಲವು ವಲಯಗಳಲ್ಲಿ ಚಲಾವಣೆಯಲ್ಲಿರುವ ಒಂದು ಜನಪ್ರಿಯ ಪರಿಹಾರ. ಇಂದು ಕೊಲ್ಲಿಯಲ್ಲಿರುವ ಅರಬ್ ಮತ್ತು ಮುಸ್ಲಿಮ್ ದೇಶಗಳ ಪೈಕಿ ಪ್ರತಿಯೊಂದು ದೇಶದ ಆಂತರಿಕ ಸ್ಥಿತಿ ಹೇಗಿದೆ ಮತ್ತು ಈ ದೇಶಗಳ ಪರಸ್ಪರ ಸಂಬಂಧ ಹೇಗಿದೆ ಎಂಬುದನ್ನೊಮ್ಮೆ ಕಣ್ಣೆತ್ತಿ ನೋಡಿದವರು ಯಾರೂ ಜೀವನದಲ್ಲಿ ಮತ್ತೆಂದೂ ಇಂತಹ ಭ್ರಾಮಕ ಪರಿಹಾರದ ಬಗ್ಗೆ ಮಾತನಾಡಲಾರರು.

ಕೆಲವೇ ವರ್ಷಗಳ ಹಿಂದೆ ಬಹಳ ಸಂಪನ್ನ ಹಾಗೂ ಶಕ್ತಿಶಾಲಿ ದೇಶಗಳಾಗಿದ್ದ ಇರಾಕ್, ಸಿರಿಯಾ ಮತ್ತು ಲಿಬಿಯಾ ಇಂದು ತೀವ್ರ ಸ್ವರೂಪದ ಆಂತರಿಕ ಬಿಕ್ಕಟ್ಟಿಗೆ ತುತ್ತಾಗಿ ಅರಾಜಕತೆಯ ಸ್ಥಿತಿಯಲ್ಲಿವೆ. ಯಮನ್, ದಕ್ಷಿಣ ಸುಡಾನ್, ಲೆಬನಾನ್ ಮತ್ತು ಅಫ್ಘಾನಿಸ್ತಾನಗಳು ಆಂತರಿಕವಾಗಿ ಛಿದ್ರವಾಗಿದ್ದು ದೀವಾಳಿಯೆದ್ದಿವೆ. ಬಹರೈನ್‌ನಲ್ಲಿ ಒಂದು ರಾಜ ಮನೆತನ ಅಲ್ಲಿಯ ಬಹುಸಂಖ್ಯಾತ (ಸುಮಾರು ಶೇ.65) ಶಿಯಾ ಸಮುದಾಯವನ್ನು ಸಂಪೂರ್ಣ ದಾಸ್ಯದಲ್ಲಿಟ್ಟು ಅವರ

ಮೇಲೆ ದಬ್ಬಾಳಿಕೆ ನಡೆಸುತ್ತಿದೆ ಮತ್ತು ಸ್ವತಃ ತನ್ನ ದೇಶದ ಪ್ರಜೆಗಳ ಆಕ್ರೋಶದ ಮುಂದೆ ಅಸ್ಥಿರವಾಗಿದೆ.

4 ದಶಕಗಳ ಹಿಂದೆ ಫೆಲೆಸ್ತೀನ್ ಸಮಸ್ಯೆ ಮತ್ತು ಇಸ್ರೇಲ್‌ನ ದಬ್ಬಾಳಿಕೆಯ ಸವಾಲು ಜೀವಂತವಿದ್ದಾಗಲೇ ಆಗಿನ ಕೊಲ್ಲಿ ಪ್ರದೇಶದ ಅತ್ಯಂತ ಶಕ್ತ ರಾಷ್ಟ್ರವಾಗಿದ್ದ, ಸದ್ದಾಮ್ ಹುಸೈನರ ಇರಾಕ್‌ನ ಪಡೆಗಳು, ನೆರೆಯ ಇರಾನ್ ಮೇಲೆ ಪೂರ್ಣ ಪ್ರಮಾಣದ ಆಕ್ರಮಣ ಮಾಡಿದವು. ಆಕ್ರಮಣಕ್ಕೆ ತಕ್ಷಣದ ಪ್ರಚೋದನೆ ಇರಾನ್ ಕಡೆಯಿಂದ ಬಂದಿತ್ತು. 1979ರಲ್ಲಿ ಇರಾನ್‌ನಲ್ಲಿ ಅಲ್ಲಿನ ಶಿಯಾ ವಿದ್ವಾಂಸ ಆಯತುಲ್ಲಾ ಖುಮೈನಿಯವರ ನೇತೃತ್ವದಲ್ಲಿ ನಡೆದ ಕ್ರಾಂತಿಯಲ್ಲಿ, ಪ್ರಾಚೀನ ಕಾಲದಿಂದ ಅಲ್ಲಿದ್ದ ರಾಜಾಳ್ವಿಕೆಯನ್ನು ಕಿತ್ತೊಗೆದು ಒಂದು ಇಸ್ಲಾಮಿ ಸರಕಾರವನ್ನು ಸ್ಥಾಪಿಸಲಾಗಿತ್ತು. ಅತ್ತ ಇರಾಕ್‌ನಲ್ಲಿ ಶೇ.60 ಕ್ಕೂ ಹೆಚ್ಚಿನ ಜನ ಶಿಯಾ ಪಂಥೀಯರಾಗಿದ್ದು, ಸದ್ದಾಮ್‌ರ ದಬ್ಬಾಳಿಕೆಯಿಂದ ರೋಸಿ ಹೋಗಿದ್ದರು. ಅವರು ಇರಾನ್‌ನ ಕ್ರಾಂತಿಯನ್ನು ಇರಾಕ್‌ಗೆ ವಿಸ್ತರಿಸುವ ಶ್ರಮವನ್ನು ಆರಂಭಿಸಿದ್ದರು. ಈ ಶ್ರಮಗಳಿಗೆ ಇರಾನ್‌ನ ಪೂರ್ಣ ಬೆಂಬಲವೂ ಇತ್ತು. ಇದರಿಂದ ಸರ್ವಾಧಿಕಾರಿ ಸದ್ದಾಮ್‌ರ ಪೀಠ ಅಭದ್ರವಾಗಿ ಬಿಟ್ಟಿತ್ತು. 1980ರಲ್ಲಿ ಸದ್ದಾಮ್‌ರ ಪಡೆಗಳು ಇರಾನ್ ಮೇಲೆ ಭಾರೀ ಪ್ರಮಾಣದ ಆಕ್ರಮಣ ನಡೆಸಿದವು. ಸೌದಿ ಅರೇಬಿಯಾ ಸಹಿತ ಕೊಲ್ಲಿಯ ಎಲ್ಲ ರಾಜ ಮನೆತನಗಳು ಈ ಕಾರ್ಯಾಚರಣೆಯಲ್ಲಿ ಸಕ್ರಿಯವಾಗಿ ಸದ್ದಾಮ್‌ರ ಬೆಂಬಲಕ್ಕೆ ನಿಂತಿದ್ದವು. ಇರಾನ್ ನಂತಹ ಕ್ರಾಂತಿ ತಮ್ಮ ದೇಶಕ್ಕೆ ಬಂದರೆ ತಾವೆಲ್ಲ ಬೀದಿ ಸೇರಬೇಕಾಗುತ್ತದೆ ಎಂಬ ಭಯ ಆ ಎಲ್ಲ ಸರ್ವಾಧಿಕಾರಿಗಳಿಗೂ ಇತ್ತು. 1988ರಲ್ಲಿ ಯುದ್ಧ ಮುಗಿಯಿತು. ಆದರೆ ಸತತ 8 ವರ್ಷ ನಡೆದ ಅಷ್ಟೊಂದು ದೀರ್ಘ, ವ್ಯಾಪಕ ಹಾಗೂ ದುಬಾರಿ ಯುದ್ಧದಿಂದಾಗಿ ಕೊಲ್ಲಿಯಲ್ಲಿ ಇಸ್ರೇಲ್‌ಗೆ ಬೆದರಿಕೆಯಾಗಿದ್ದ ಎರಡು ಶಕ್ತಿಶಾಲಿ ದೇಶಗಳು ತೀರಾ ದುರ್ಬಲವಾಗಿ ಬಿಟ್ಟವು. ಈ ಯುದ್ಧದಲ್ಲಿ ಎರಡೂ ಕಡೆ ವ್ಯಾಪಕ ನಾಶನಷ್ಟಗಳಾದವು. ಎಷ್ಟೋ ನಗರಗಳು ನಾಶವಾದವು. 10 ಲಕ್ಷಕ್ಕೂ ಹೆಚ್ಚು ಜೀವಗಳು ಬಲಿಯಾದವು. ಎರಡೂ ಕಡೆಯವರಿಗೆ 1,200 ಶತಕೋಟಿ (ಬಿಲಿಯನ್) ಡಾಲರ್‌ಗಳ ಆರ್ಥಿಕ ನಷ್ಟವಾಯಿತು.

ಈ ವಿನಾಶ ಪರ್ವ ಮುಗಿದು ಎರಡು ವರ್ಷಗಳೊಳಗೆ ಇನ್ನೊಂದು ವಿನಾಶ ಪರ್ವ ಆರಂಭವಾಯಿತು. 1990 ಆಗಸ್ಟ್ ತಿಂಗಳಲ್ಲಿ ಇರಾಕ್ ಸೇನೆ ಕುವೈತ್ ದೇಶದ ಮೇಲೆ ದಾಳಿ ಮಾಡಿ ಅದನ್ನು ಸಂಪೂರ್ಣ ವಶಪಡಿಸಿಕೊಂಡು ಅದನ್ನು ಇರಾಕ್‌ನ 19ನೇ ಪ್ರಾಂತವೆಂದು ಘೋಷಿಸಿತು. ಕುವೈತ್‌ನ ವಿಮೋಚನೆಗಾಗಿ ಅಮೆರಿಕದ ನೇತೃತ್ವದಲ್ಲಿ 35 ದೇಶಗಳ ಭಾರೀ

ಒಕ್ಕೂಟವೊಂದರ ರಚನೆಯಾಯಿತು. ಇದು ಎರಡನೇ ಜಾಗತಿಕ ಮಹಾ ಯುದ್ಧದ ಬಳಿಕ ರೂಪುಗೊಂಡ ಅತಿದೊಡ್ಡ ಮಿಲಿಟರಿ ಒಕ್ಕೂಟವಾಗಿತ್ತು. 1991 ಜನವರಿ ತಿಂಗಳಲ್ಲಿ ಪ್ರಸ್ತುತ ಒಕ್ಕೂಟದ ಸಂಯುಕ್ತ ಪಡೆಗಳು ಬೃಹತ್ ಕಾರ್ಯಾಚರಣೆಯೊಂದನ್ನು ಆರಂಭಿಸಿದವು. 6 ವಾರಗಳ ಆ ಭೀಕರ ಕಾರ್ಯಾಚರಣೆಯಲ್ಲಿ ಇರಾಕ್ ಸಂಪೂರ್ಣ ಸೋತಿತು. ಅದರ ಸೇನಾ ಶಕ್ತಿ ಧ್ವಂಸವಾಯಿತು. ಉತ್ತರ ಇರಾಕ್‌ನಲ್ಲಿದ್ದ ಕುರ್ದಿಸ್ತಾನದ ದಕ್ಷಿಣ ಭಾಗವನ್ನು ಇರಾಕ್‌ನಿಂದ ಪ್ರತ್ಯೇಕಿಸಿ ಸ್ವತಂತ್ರಗೊಳಿಸಲಾಯಿತು. ಕುವೈತ್ ಬಹುತೇಕ ನಾಶವಾಯಿತು. ಹೆಚ್ಚಿನ ಅರಬ್ ದೇಶಗಳು, ಅಮೆರಿಕ ಮತ್ತಿತರ ಪಾಶ್ಚಿಮಾತ್ಯ ದೇಶಗಳ ಜೊತೆ, ಆರ್ಥಿಕತೆ ಹಾಗೂ ಭದ್ರತೆಯ ದೃಷ್ಟಿಯಿಂದ ತಮಗೆ ತೀರಾ ಪ್ರಕೂಲವಾದ ಒಪ್ಪಂದಗಳನ್ನು ಮಾಡಿಕೊಳ್ಳಬೇಕಾಯಿತು. ಆ ಯುದ್ಧದಲ್ಲಿ ತನಗೆ 60 ಬಿಲಿಯನ್ ಡಾಲರ್ ಖರ್ಚಾಗಿದೆ ಎಂದು ಅಮೆರಿಕ ಹೇಳಿಕೊಂಡಿತು. ಆ ಪೈಕಿ 32 ಬಿಲಿಯನ್ ಡಾಲರ್‌ಗಳನ್ನು ಕುವೈತ್ ಮತ್ತು ಸೌದಿ ಸರಕಾರಗಳು ಪರಿಹಾರವಾಗಿ ಪಾವತಿಸಿದವು.

**ಆ ಯುದ್ಧವು ಫೆಲೆಸ್ತೀನ್ ಅನ್ನು ಬಾಧಿಸಿದ್ದು ಹೇಗೆ?**

ಮೊದಲನೆಯದಾಗಿ ಇದರಿಂದ ಬಲಿಷ್ಠ ಮಿಲಿಟರಿ ಶಕ್ತಿಯಾಗಿದ್ದ ಇರಾಕ್ ಎಂಬ ಅರಬ್ ದೇಶ ಮತ್ತು ತನ್ನ ಅಪಾರ ಶ್ರೀಮಂತಿಕೆಗೆ ಖ್ಯಾತವಾಗಿದ್ದ ಕುವೈತ್ ಎಂಬ ಇನ್ನೊಂದು ಅರಬ್ ದೇಶ – ಹೀಗೆ ಎರಡೆರಡು ದೇಶಗಳು ಧ್ವಂಸವಾದವು. ಕುವೈತ್ ಮೇಲೆ ಇರಾಕ್ ಆಕ್ರಮಣ ಆರಂಭವಾದ ಹಂತದಲ್ಲಿ, ಲಕ್ಷಾಂತರ ಸಂಖ್ಯೆಯಲ್ಲಿ ಕುವೈತ್‌ನಲ್ಲಿದ್ದ ಫೆಲೆಸ್ತೀನ್ ನಿರಾಶ್ರಿತರು ಸ್ಥಳೀಯರಿಗಿಂತ ಹೆಚ್ಚು ಉತ್ಸಾಹದಿಂದ ಇರಾಕ್ ಪಡೆಗಳ ವಿರುದ್ಧ ಪ್ರತಿರೋಧ ಪ್ರಕಟಿಸಿ ಇರಾಕ್ ಪಡೆಗಳ ಕೋಪಕ್ಕೆ ಪಾತ್ರರಾದರು. ಅವರ ಮೇಲೆ ವಿಶೇಷ ಪ್ರತಿಬಂಧಗಳನ್ನು ಹೇರಲಾಯಿತು. ಪರಿಣಾಮವಾಗಿ, ಆಕ್ರಮಣ ಆರಂಭವಾಗಿ ಕೆಲವೇ ದಿನಗಳೊಳಗೆ ಸುಮಾರು 2 ಲಕ್ಷ ಫೆಲೆಸ್ತೀನ್ ನಿರಾಶ್ರಿತರು, ಇರಾಕ್ ನಿಯಂತ್ರಣದಲ್ಲಿದ್ದ ಕುವೈತ್ ಅನ್ನು ಬಿಟ್ಟು ಬೇರೆಡೆ ಆಶ್ರಯ ಹುಡುಕಬೇಕಾಯಿತು. ಈ ಮಧ್ಯೆ ಪಿಎಲ್‌ಓ ನಾಯಕ ಯಾಸಿರ್ ಅರಫಾತ್, ಇರಾಕ್ ಅನ್ನು ಸಮರ್ಥಿಸಿ ಮಾತನಾಡಿದ್ದರಿಂದ, ಕುವೈತ್ ಪರವಿದ್ದ ಎಲ್ಲ ಅರಬ್ ದೇಶಗಳ ಮೂಡ್ ಬದಲಾಯಿತು. ಅವರು ಅರಫಾತ್ ಮತ್ತವರ ಪಕ್ಷದ ವಿರುದ್ಧ ಮಾತ್ರವಲ್ಲ ಫೆಲೆಸ್ತೀನ್‌ನ ಜನರ ವಿರುದ್ಧವೇ ಅಸಮಾಧಾನ ಪ್ರದರ್ಶಿಸಲು ಆರಂಭಿಸಿದರು. ಆವರೆಗೆ ಉದಾರವಾಗಿ ತನ್ನ ನೆಲದಲ್ಲಿ ಫೆಲೆಸ್ತೀನಿ ನಿರಾಶ್ರಿತರಿಗೆ ಆಶ್ರಯ ನೀಡುತ್ತಿದ್ದ ಕುವೈತ್ ಸರಕಾರ, ಯುದ್ಧ ಮುಗಿದೊಡನೆ, ತನ್ನಲ್ಲಿದ್ದ

ಫೆಲೆಸ್ತೀನಿ ನಿರಾಶ್ರಿತರ ಪೈಕಿ 2 ಲಕ್ಷ ಮಂದಿಯನ್ನು ದೇಶದಿಂದ ಹೊರಕ್ಕೆ ಅಟ್ಟಿ ಬಿಟ್ಟಿತು! ಅತ್ತ ಕುವೈತ್ ಮೇಲೆ ಆಕ್ರಮಣ ನಡೆದಾಗ ಸದ್ದಾಮ್‌ಗೆ ಬೆಂಬಲ ಸೂಚಿಸಿದರೆಂದು ಆರೋಪಿಸಿ, ಸೌದಿ ಅರೇಬಿಯಾ ಸರಕಾರವು, ತನ್ನಲ್ಲಿದ್ದ ಯಮನ್ ಮೂಲದ ಕೆಲವು ಲಕ್ಷ ಬಡ ಕಾರ್ಮಿಕರನ್ನು ಮನೆಗೆ ಕಳಿಸಿತು.

ನಾವು ಕೇವಲ ಭಾಷಣ, ಠರಾವು, ಪತ್ರಿಕಾ ಹೇಳಿಕೆ ಇತ್ಯಾದಿಗಳನ್ನು ಅವಲಂಬಿಸದೆ ಸ್ವಲ್ಪ ಹತ್ತಿರ ಹೋಗಿ ನೋಡಿದರೆ, ಒಂದು ವಿಷಯ ಬಹಳ ಸ್ಪಷ್ಟವಾಗಿ ಮನವರಿಕೆಯಾಗುತ್ತದೆ. ಅದೇನೆಂದರೆ, ಫೆಲೆಸ್ತೀನ್ ಎಂಬುದು ಯಾವುದೇ ಅರಬ್ ಅಥವಾ ಮುಸ್ಲಿಮ್ ದೇಶದ ಆದ್ಯತೆಯಲ್ಲ! ಹಾಗೆಯೇ, ಯಾವುದೇ ಅರಬ್ ಅಥವಾ ಮುಸ್ಲಿಮ್ ದೇಶ ಇಸ್ರೇಲ್ ಅನ್ನು ತನ್ನ ಪ್ರಥಮ ವಿರೋಧಿ ಎಂದು ಪರಿಗಣಿಸುವುದಿಲ್ಲ! ಎಷ್ಟೋ ವರ್ಷಗಳ ಕಾಲ ಇರಾಕ್ ಪಾಲಿಗೆ ಪ್ರಥಮ ಶತ್ರು ಇರಾನ್ ಆಗಿತ್ತು. ಇರಾನ್ ವಿರುದ್ಧ 8 ವರ್ಷಗಳ ಯುದ್ಧ ನಡೆಸಿದ ಬಳಿಕ ಇರಾಕ್, ಕುವೈತ್ ಮೇಲೆ ಆಕ್ರಮಣ ಮಾಡಿತು. ಆಗ ಕುವೈತ್ ಇರಾಕ್‌ನ ಪ್ರಥಮ ಶತ್ರುವಾದರೆ, ಇರಾಕ್ ಎಲ್ಲ ಅರಬ್ ದೇಶಗಳ ಪ್ರಥಮ ಶತ್ರುವಾಗಿ ಬಿಟ್ಟಿತು!

### 'ಅರಬ್ ವಸಂತ' ಎಂಬ ಬಂಡಾಯದ ಅಲೆ

ಹೆಚ್ಚಿನ ಅರಬ್ ದೇಶಗಳ ಜನತೆ ಹಲವು ದಶಕಗಳಿಂದ ಅಮೆರಿಕ ಮತ್ತು ಯುರೋಪ್ ಬೆಂಬಲಿತ ಸರ್ವಾಧಿಕಾರಿ ಸರಕಾರಗಳ ಅಧೀನದಲ್ಲಿ ನರಳುತ್ತಿದ್ದಾರೆ. ಅಪರೂಪಕ್ಕೊಮ್ಮೆ ಎಲ್ಲಾದರೂ ಅವರು ಈ ಸರ್ವಾಧಿಕಾರಿಗಳ ವಿರುದ್ಧ ಮಾತನಾಡಲು ಹೊರಟರೆ ಅತ್ಯಂತ ಅಮಾನುಷವಾಗಿ ಅವರ ಸದ್ದಡಗಿಸಲಾಗುತ್ತದೆ.

ಟ್ಯುನೀಷಿಯಾದಲ್ಲಿ 2010 ಡಿಸೆಂಬರ್‌ನಲ್ಲಿ ಮುಹಮ್ಮದ್ ಬೂ ಅಝೀಝಿ ಎಂಬ ಬಡ ತರಕಾರಿ ವ್ಯಾಪಾರಿಯೊಬ್ಬ ಪೊಲೀಸ್ ದೌರ್ಜನ್ಯದ ವಿರುದ್ಧ ಪ್ರತಿಭಟಿಸುತ್ತಾ ಸರಕಾರಿ ಕಚೇರಿ ಎದುರು ಆತ್ಮಾಹುತಿ ಮಾಡಿಕೊಂಡ. ಇದರೊಂದಿಗೆ, ಸರ್ವಾಧಿಕಾರದ ವಿರುದ್ಧ ಬಂಡಾಯದ ಹೊಸ ಸರಣಿಯೊಂದು ಆರಂಭವಾಯಿತು. ಬಹಳ ಕ್ಷಿಪ್ರವಾಗಿ ಬೆಳೆದು, ಹೆಚ್ಚಿನೆಲ್ಲಾ ಅರಬ್ ಸಮಾಜಗಳಿಗೆ ತಲುಪಿದ ಈ ಬಂಡಾಯ 'ಅರಬ್ ವಸಂತ' (ಅರಬ್ ಸ್ಪ್ರಿಂಗ್) ಎಂದೇ ಪ್ರಸಿದ್ಧವಾಯಿತು. ಲಿಬಿಯಾ, ಈಜಿಪ್ಟ್, ಯಮನ್, ಸಿರಿಯಾ, ಬಹರೈನ್ ಮುಂತಾದ ಹಲವು ದೇಶಗಳನ್ನು ಆವರಿಸಿತು. ಅಲ್ಲೆಲ್ಲಾ ಸರ್ವಾಧಿಕಾರವನ್ನು ಖಂಡಿಸಿ, ಪ್ರಜಾಸತ್ತೆ, ಆರ್ಥಿಕ ಸುಧಾರಣೆ ಹಾಗೂ ಉದ್ಯೋಗಾವಕಾಶಗಳಿಗಾಗಿ ಆಗ್ರಹಿಸಿ, ಜನರು ದೊಡ್ಡ ಸಂಖ್ಯೆಯಲ್ಲಿ ಬೀದಿಗಿಳಿದರು. ಬಂಡಾಯದ

ಜನಪ್ರಿಯತೆ ಹೆಚ್ಚಿದಂತೆ, ಸರ್ವಾಧಿಕಾರಿ ಸರಕಾರಗಳು ತಮ್ಮ ಪಡೆಗಳನ್ನು ಮತ್ತು ಪುಂಡಪೋಕರಿಗಳನ್ನು ಬೀದಿಗಿಳಿಸಿ, ಎಲ್ಲ ಬಗೆಯ ಹಿಂಸಾ ವಿಧಾನಗಳನ್ನು ಪ್ರಯೋಗಿಸಿ ಅವರ ಧ್ವನಿಯನ್ನು ಹತ್ತಿಕ್ಕಲು ಶ್ರಮಿಸಿದವು. ಆದರೆ ಬಂಡಾಯವನ್ನು ಸಂಪೂರ್ಣವಾಗಿ ಹತ್ತಿಕ್ಕಲು ಅವರಿಗೆ ಸಾಧ್ಯವಾಗಲಿಲ್ಲ. ವಿವಿಧ ದೇಶಗಳ, ವಿವಿಧ ಭಾಗಗಳಲ್ಲಿ, ಬೇರೆಬೇರೆ ಸ್ವರೂಪದಲ್ಲಿ ಪ್ರತಿಭಟನೆ ಮುಂದುವರಿದದ್ದು ಮಾತ್ರವಲ್ಲ, ಅದರ ಪ್ರತಿಧ್ವನಿ ಮೊರೊಕ್ಕೋ, ಅಲ್ಜೀರಿಯ, ಇರಾಕ್, ಕುವೈತ್, ಒಮಾನ್, ಲೆಬನಾನ್, ಜೋರ್ಡನ್ ಮುಂತಾದ ದೇಶಗಳಲ್ಲೂ ಮೊಳಗತೊಡಗಿತು. ಹೆಚ್ಚಿನ ಸರ್ವಾಧಿಕಾರಿಗಳಲ್ಲಿ ಮತ್ತು ರಾಜ ಮಹಾರಾಜರಲ್ಲಿ ನಡುಕ ಹುಟ್ಟಿತು.

ಟ್ಯುನೀಷಿಯಾದಲ್ಲಿ ಬಂಡಾಯ ಆರಂಭವಾಗಿ ಎರಡೇ ವಾರದಲ್ಲಿ ಅಲ್ಲಿನ ಅಧ್ಯಕ್ಷ ಝುಯ್ನುಲ್ ಆಬಿದೀನ್ ಪದತ್ಯಾಗ ಮಾಡಿ, ದೇಶಬಿಟ್ಟು ಸೌದಿ ಅರೇಬಿಯಾದಲ್ಲಿ ಆಶ್ರಯ ಪಡೆದರು. 2011 ಫೆಬ್ರವರಿಯಲ್ಲಿ ಈಜಿಪ್ಟ್‌ನ ಹುಸ್ನಿ ಮುಬಾರಕ್ ಅಧಿಕಾರ ಕಳೆದುಕೊಂಡರು. ಆ ವರ್ಷ ಮಾರ್ಚ್‌ನಲ್ಲಿ ಸಿರಿಯಾ ಮತ್ತು ಮೊರೊಕ್ಕೋದಲ್ಲಿ ರಾಷ್ಟ್ರವ್ಯಾಪಿ ಆಂದೋಲನಗಳು ನಡೆದವು. ಜುಲೈಯಲ್ಲಿ ಮೊರೊಕ್ಕೋದಲ್ಲಿ, ರಾಜಾಳ್ವಿಕೆಯ ಅಧಿಕಾರಗಳನ್ನು ಸೀಮಿತಗೊಳಿಸುವ ಆಧ್ಯಾದೇಶವೊಂದಕ್ಕೆ ಅಂಗೀಕಾರ ದೊರೆಯಿತು. ಆಗಸ್ಟ್‌ನಲ್ಲಿ, ಲಿಬಿಯಾದಲ್ಲಿ ಸರಕಾರದ ವಿರುದ್ಧ ಸಶಸ್ತ್ರ ದಂಗೆಗಳು ನಡೆದವು. ಸೆಪ್ಟಂಬರ್‌ನಲ್ಲಿ ಯಮನ್‌ನಲ್ಲಿ ಪ್ರಖ್ಯಾತ 'ಮಿಲಿಯನ್ ಮ್ಯಾನ್ ಮಾರ್ಚ್' ನಡೆಯಿತು. 5 ದಶಕಗಳಿಗಿಂತಲೂ ದೀರ್ಘ ಕಾಲ ತನ್ನನ್ನು ಲಿಬಿಯಾದ ಮೇಲೆ ಹೇರಿಕೊಂಡಿದ್ದ ಸರ್ವಾಧಿಕಾರಿ ಮುಅಮ್ಮರ್ ಗದ್ದಾಫಿಯ ಯುಗವು ಅಕ್ಟೋಬರ್‌ನಲ್ಲಿ ಹೀನಾಯ ಅಂತ್ಯವನ್ನು ಕಂಡಿತು. ಅದೇ ತಿಂಗಳಲ್ಲಿ ಟ್ಯುನೀಷಿಯಾದಲ್ಲಿ ಪ್ರಥಮ ಪ್ರಜಾಸತ್ತಾತ್ಮಕ ಸಂಸದೀಯ ಚುನಾವಣೆ ನಡೆಯಿತು. ಈಜಿಪ್ಟ್ ಮತ್ತು ಯಮನ್‌ನಲ್ಲೂ ಪ್ರಮುಖ ರಾಜಕೀಯ ಬದಲಾವಣೆಗಳುಂಟಾದವು.

ಅರಬ್ ವಸಂತದ ಅಪಾಯವನ್ನು ಗುರುತಿಸಿದ ಹೆಚ್ಚಿನ ಸರ್ವಾಧಿಕಾರಿ ಅರಬ್ ಸರಕಾರಗಳು ಬಂಡಾಯ ಮತ್ತು ಭಿನ್ನತೆಯ ಯಾವ ಕುರುಹೂ ತಮ್ಮ ನೆಲದಲ್ಲಿ ಕಾಣಿಸದಂತೆ ಅದನ್ನು ಅಮಾನುಷವಾಗಿ ಅಳಿಸಿ ಹಾಕಿದವು. ಈ ಕಾರ್ಯದಲ್ಲಿ ಮಾನವ ಹಕ್ಕುಗಳನ್ನು ಹತ್ತಿಕ್ಕುವ ತಮ್ಮ ಹಳೆಯ ನೈಪುಣ್ಯವನ್ನು ಮತ್ತು ಇಸ್ರೇಲ್ ಹಾಗೂ ಅಮೆರಿಕ ಒದಗಿಸಿದ ಬಹಳ ಸೂಕ್ಷ್ಮ ಮಟ್ಟದ ಬೇಹುಗಾರಿಕಾ ತಂತ್ರಜ್ಞಾನವನ್ನು ಆ ಸರಕಾರಗಳು ಬಹಳ ಚೆನ್ನಾಗಿ ಬಳಸಿಕೊಂಡವು.

ಅರಬ್ ವಸಂತವು ಕಾಣಿಸಿಕೊಂಡ ಎಲ್ಲ ನಾಡುಗಳಲ್ಲೂ ಅರಬ್ ಸರ್ವಾಧಿಕಾರಿಗಳ ಇಬ್ಬಂದಿತನ, ಅಸಾಮರ್ಥ್ಯ ಮತ್ತು ಸಂವೇದನಾ ಶೂನ್ಯತೆಯ

ಪ್ರಮುಖ ಪುರಾವೆಯಾಗಿ, ಫೆಲೆಸ್ತೀನ್ ಬಿಕ್ಕಟ್ಟನ್ನು ಪ್ರಸ್ತಾಪಿಸಲಾಯಿತು. ಅರಬ್ ವಸಂತದಿಂದಾಗಿ, ಈ ಭೂಭಾಗದಲ್ಲಿ ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಯ ತವಕ ಹಾಗೂ ಸರ್ವಾಧಿಕಾರದ ವಿರುದ್ಧ ರೋಷ ಎಷ್ಟು ಆಳವಾಗಿದೆ ಎಂಬುದನ್ನು ಜಗತ್ತು ಗಂಭೀರವಾಗಿ ಗಮನಿಸುವಂತಾಯಿತು. ಅದೇ ರೀತಿ, ಸರ್ವಾಧಿಕಾರಿಗಳ ಜೊತೆ ನಿಂತು, ಸ್ವಾತಂತ್ರ್ಯ ಹೋರಾಟಗಾರರನ್ನು ದಮನಿಸುವ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿರುವ ಅಮೆರಿಕ ಮತ್ತು ಯೂರೋಪಿನ ಪ್ರಜಾಸತ್ತಾತ್ಮಕ ಸರಕಾರಗಳ ನಾಟಕ ಪ್ರತಿಭೆಯನ್ನೂ ಅದು ಬೆಳಕಿಗೆ ತಂದಿತು.

❖ ❖ ❖

# 22

# ಸೌದಿ–ಯಮನ್ ನಡುವಣ ಕಲಹ

UNICEF ವರದಿ ಪ್ರಕಾರ ಇಂದು ಜಗತ್ತಿನಲ್ಲಿ ಅತ್ಯಧಿಕ ಪ್ರಮಾಣದ ಮಾನವೀಯ ದುರಂತವನ್ನು ಎದುರಿಸುತ್ತಿರುವ ದೇಶ ಯಮನ್. ಆ ಕಡು ದರಿದ್ರ ದೇಶ, ಸೌದಿ ಅರೇಬಿಯ ಎಂಬ ಸಂಪನ್ನ ದೇಶದ ನೆರೆಯಲ್ಲೇ ಇದೆ. ಸದ್ಯ ಅಲ್ಲಿ 1. 2 ಕೋಟಿ ಮಕ್ಕಳ ಸಹಿತ 2.4 ಕೋಟಿ ಮಂದಿಗೆ ತುರ್ತು ನೆರವಿನ ಅಗತ್ಯವಿದೆ. ಅಲ್ಲಿ 5 ವರ್ಷಕ್ಕಿಂತ ಕೆಳಗಿನ 23 ಲಕ್ಷ ಮಕ್ಕಳು ಪೋಷಕಾಂಶಗಳ ಕೊರತೆಯಿಂದ ನರಳುತ್ತಿದ್ದಾರೆ. ತುರ್ತು ಆಹಾರ ಮತ್ತು ಚಿಕಿತ್ಸೆ ದೊರೆಯದಿದ್ದರೆ ಈ ಪೈಕಿ ಸುಮಾರು 4 ಲಕ್ಷ ಮಕ್ಕಳು ಪ್ರಾಣ ಕಳೆದುಕೊಳ್ಳುವ ಅಪಾಯವಿದೆ. ಕೋವಿಡ್‌ನಿಂದಾಗಿ ಅಲ್ಲಿಯ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿದೆ. 20 ಲಕ್ಷ ಎಳೆಯ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಪ್ರಾಕೃತಿಕ ಕಾರಣಗಳಿಂದ ಯಮನ್ ದೇಶದ ಹೆಚ್ಚಿನ ಭಾಗಗಳು ತೀವ್ರ ಸ್ವರೂಪದ ಜಲಕ್ಷಾಮವನ್ನು ಎದುರಿಸುತ್ತಿವೆ. ಅಲ್ಲಿ ಕಳೆದ ಕೆಲವು ದಶಕಗಳ ಅವಧಿಯಲ್ಲಿ, ಕೇವಲ ಜಲ ಸಂಪನ್ಮೂಲಗಳ ಮೇಲೆ ನಿಯಂತ್ರಣ ಸಾಧಿಸುವುದಕ್ಕಾಗಿಯೇ ವಿವಿಧ ಸ್ಥಳೀಯ ಗುಂಪುಗಳ ಮಧ್ಯೆ ನೂರಾರು ಬಾರಿ ಹಿಂಸೆ ನಡೆದಿದ್ದು ಪ್ರತಿವರ್ಷ ಸರಾಸರಿ 4 ಸಾವಿರ ಮಂದಿ ಇಂತಹ ಹಿಂಸೆಗಳಿಗೆ ಬಲಿಯಾಗುತ್ತಿದ್ದಾರೆ. ಸಾಲದ್ದಕ್ಕೆ, ಕಳೆದ 10 ವರ್ಷಗಳಿಂದ

ಆ ದೇಶವು ಭೀಕರ ಸ್ವರೂಪದ ಆಂತರಿಕ ಯುದ್ಧವನ್ನು ಎದುರಿಸುತ್ತಿದೆ. ಈ ಬಿಕ್ಕಟ್ಟಿನಿಂದ ಯಮನ್ ಮತ್ತದರ ಜನತೆಗೆ ಮುಕ್ತಿ ನೀಡಬೇಕಾಗಿದ್ದ ಅದರ ಅಕ್ಕಪಕ್ಕದ ದೇಶಗಳು, ತಮ್ಮದೇ ಸ್ವಾರ್ಥಗಳಿಂದ ಪ್ರೇರಿತವಾದ ಬೇರೆಯೇ ಕ್ರೂರ ಆಟವೊಂದನ್ನು ಆಡುತ್ತಿವೆ. ಹಿಂದೆ ಪರೋಕ್ಷವಾಗಿ ಯಮನ್‌ನ ಯುದ್ಧನಿರತ ಗುಂಪುಗಳ ಪೈಕಿ ಕೆಲವರಿಗೆ ಬೆಂಬಲ ನೀಡುತ್ತಿದ್ದ ಸೌದಿ, ಯುಎಇ, ಇರಾನ್ ಮುಂತಾದ ಹಲವು ದೇಶಗಳು ಇತ್ತೀಚಿನ ವರ್ಷಗಳಲ್ಲಿ ಈ ಯುದ್ಧದಲ್ಲಿ ಪ್ರತ್ಯಕ್ಷ ಹಾಗೂ ಸಕ್ರಿಯ ಪಾತ್ರ ವಹಿಸುತ್ತಿವೆ. ಈ ಮೂಲಕ ಅವು ಆಗಲೇ ವಿನಾಶದ ಅಂಚಿನಲ್ಲಿರುವ ಯಮನ್ ಎಂಬ ಬಡ ದೇಶದ ಸರ್ವನಾಶಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡುತ್ತಿವೆ.

**ಸೌದಿ ಮತ್ತು ಖತರ್ ನಡುವಣ ವೈಷಮ್ಯ**

ಅರಬ್ ದೇಶಗಳ ಪರಸ್ಪರ ಸಂಬಂಧಗಳ ಕುರಿತು ಚರ್ಚಿಸುವಾಗ ಪ್ರಸ್ತಾಪಿಸಲೇ ಬೇಕಾದ ಇನ್ನೊಂದು ಮಹತ್ವದ ವಿಷಯವಿದೆ: GCC ಗೆ ಸೇರಿದ ಅರಬ್ ದೇಶಗಳು ಹಲವು ದಶಕಗಳ ತನಕ ಇಸ್ರೇಲ್ ಅನ್ನು ಬಹಿಷ್ಕರಿಸುವ ಮತ್ತು ಇಸ್ರೇಲ್ ಮೇಲೆ ದಿಗ್ಬಂಧನ ಹೇರುವ ಕುರಿತು ಚರ್ಚಿಸುತ್ತಲೇ ಬಂದಿವೆ. ಆದರೂ ಅವರಿಗೆ ಆ ನಿಟ್ಟಿನಲ್ಲೇ ಯಾವುದೇ ನಿರ್ಣಾಯಕ ಮುನ್ನಡೆ ಸಾದಿಸಲಿಕ್ಕಾಗಿಲ್ಲ. ಆದರೆ ಇದೇ ಅರಬ್ ದೇಶಗಳು 2017 ರಲ್ಲಿ ಒಂದು ದೊಡ್ಡ ಮುನ್ನಡೆ ಸಾಧಿಸಿದವು. ಆದರೆ ಅವರು ಬಹಿಷ್ಕರಿಸಿದ್ದು, ತಮ್ಮದೇ ಬಳಗದೊಳಗಿನ ಖತರ್ ಅರಬ್ ದೇಶವನ್ನೇ ಹೊರತು ಇಸ್ರೇಲ್ ದೇಶವನ್ನಲ್ಲ. ಸೌದಿ ಅರೇಬಿಯ, ಯುಎಇ, ಬಹರೈನ್ ಮತ್ತು ಈಜಿಪ್ಟ್ ಎಂಬ ನಾಲ್ಕು ಪ್ರಮುಖ ಅರಬ್ ದೇಶಗಳು ಖತರ್ ದೇಶದ ಜೊತೆಗಿನ ತಮ್ಮೆಲ್ಲಾ ರಾಜತಾಂತ್ರಿಕ ಸಂಪರ್ಕಗಳನ್ನು ಕಡಿದುಕೊಂಡು ಆ ದೇಶದ ಮೇಲೆ ಪೂರ್ಣ ಪ್ರಮಾಣದ ದಿಗ್ಬಂಧನವನ್ನು ಹೇರಿದವು. ಖತರ್ ದೇಶವನ್ನು ಸಂಪರ್ಕಿಸಲು ಲಭ್ಯವಿದ್ದ ನೆಲ, ಜಲ ಮತ್ತು ವಾಯು ಮಾರ್ಗವನ್ನು ಮುಚ್ಚಿದವು. ಖತರ್ ಜೊತೆ ಎಲ್ಲ ಬಗೆಯ ಆಮದು, ರಫ್ತು, ವಾಣಿಜ್ಯ, ಕ್ರೀಡೆ, ಮನರಂಜನೆ ಮತ್ತಿತರ ಸಕಲ ವ್ಯವಹಾರಗಳನ್ನು ನಿಷೇಧಿಸಿದವು.

ಇದೇನೂ ಹಠಾತ್ತನೆ ತಲೆದೋರಿದ ಬೆಳವಣಿಗೆಯಾಗಿರಲಿಲ್ಲ. ವಿವಿಧ ದೇಶಗಳಲ್ಲಿ 'ಅರಬ್ ವಸಂತ'ದ ಬಂಡಾಯ ಚಟುವಟಿಕೆಗಳು ನಡೆಯುತ್ತಿದ್ದಾಗ ಸೌದಿ ಮತ್ತು ಅದರ ಮಿತ್ರ ರಾಷ್ಟ್ರಗಳು ಸರ್ವಾಧಿಕಾರಿಗಳ ಪರ ನಿಂತಿದ್ದರೆ, ಖತರ್, ಇರಾನ್ ಮತ್ತು ಟರ್ಕಿ ಬಂಡುಕೋರ ಪಕ್ಷಗಳನ್ನು ಬೆಂಬಲಿಸುತ್ತಿವೆ ಎಂದು ಸೌದಿ ಸಹಿತ ಕೆಲವು ದೇಶಗಳು ಸಂಶಯಿಸತೊಡಗಿದ್ದವು. ಖತರ್‌ನ

ಅಲ್ ಜಝೀರಾ ಟಿವಿ ಯು 'ಅರಬ್ ವಸಂತ' ಕ್ಕೆ ಸಂಬಂಧಿಸಿದ ಬೆಳವಣಿಗೆಗಳಿಗೆ ನೀಡುತ್ತಿದ್ದ ಪ್ರಚಾರ ಕೂಡಾ ಈ ದೇಶಗಳ ಪಾಲಿಗೆ ತಲೆನೋವಾಗಿತ್ತು. ಈ ಹಿನ್ನೆಲೆಯಲ್ಲಿ 2014 ರಲ್ಲೇ ಸೌದಿ, ಯುಎಇ ಮತ್ತು ಬಹರೈನ್ ದೇಶಗಳು ಖತರ್ ಜೊತೆಗಿನ ತಮ್ಮ ರಾಜ ತಾಂತ್ರಿಕ ಸಂಬಂಧಗಳನ್ನು ಮೊಟಕುಗೊಳಿಸಿದ್ದವು. ಪ್ರಸ್ತುತ ದೇಶಗಳು ಖತರ್‌ನ ಮುಂದೆ ಕೆಲವು ಬೇಡಿಕೆಗಳನ್ನಿಟ್ಟು ಅವುಗಳನ್ನು ಈಡೇರಿಸುವ ತನಕ ಅದರ ಜೊತೆ ಸಂಬಂಧ ಸುಧಾರಣೆ ಸಾಧ್ಯವಿಲ್ಲ ಎಂಬ ಎಚ್ಚರಿಕೆಯನ್ನು ನೀಡಿದವು.

**ಪ್ರಮುಖ ಬೇಡಿಕೆಗಳು**

1. ಇರಾನ್ ಜೊತೆಗಿನ ರಾಜತಾಂತ್ರಿಕ ಸಂಬಂಧವನ್ನು ಕೆಳ ಮಟ್ಟಕ್ಕೆ ಇಳಿಸಬೇಕು.
2. ಟರ್ಕಿ ಜೊತೆಗಿನ ಮಿಲಿಟರಿ ಸಹಕಾರದ ಒಪ್ಪಂದಗಳನ್ನು ಕೈ ಬಿಡಬೇಕು.
3. ಮೂಲತಃ ಖತರ್‌ನಿಂದ ಕಾರ್ಯಾಚರಿಸುತ್ತಿರುವ 'ಅಲ್ ಜಝೀರಾ' ಮಾಧ್ಯಮ ಸಂಸ್ಥೆಯನ್ನು ಮುಚ್ಚಬೇಕು.
4. ಅಮೆರಿಕನ್ ಸರಕಾರವು 'ಭಯೋತ್ಪಾದಕ' ಎಂದು ಹೆಸರಿಸಿರುವ ಎಲ್ಲ ಸಂಘಟನೆಗಳನ್ನು, ಭಯೋತ್ಪಾದಕ ಎಂದು ಪರಿಗಣಿಸಿ ಅವುಗಳ ಜೊತೆ ಆ ಪ್ರಕಾರ ವ್ಯವಹರಿಸಬೇಕು.
5. ಬೇರೆ ಯಾವುದೇ ದೇಶದ ವ್ಯವಹಾರದಲ್ಲಿ ಹಸ್ತಕ್ಷೇಪ ನಡೆಸಬಾರದು.

ಖತರ್ ಸರಕಾರವು ಪ್ರಸ್ತುತ ದೇಶಗಳ ಯಾವ ಬೇಡಿಕೆಯನ್ನೂ ಗಂಭೀರವಾಗಿ ಪರಿಗಣಿಸಲಿಲ್ಲ. ಅತ್ತ ಆ ದೇಶಗಳು ಕೂಡ 2017ರ ತನಕವೂ ತಮ್ಮ ಬೆದರಿಕೆಗಳನ್ನು ಕಟ್ಟು ನಿಟ್ಟಾಗಿ ಅನುಷ್ಠಾನಿಸಲು ಹೊರಡಲಿಲ್ಲ. ಆದರೆ 2017ರಲ್ಲಿ ಪರಿಸ್ಥಿತಿ ಕೈ ಮೀರಿತು. ಈ ಬಾರಿ ಒಂದು ನಿರ್ದಿಷ್ಟ ಸನ್ನಿವೇಶವು, ಖತರ್ ಮೇಲೆ ತುಂಬಾ ಕಠಿಣ ಸ್ವರೂಪದ ಬಹಿಷ್ಕಾರ ಹೇರುವುದಕ್ಕೆ ಕಾರಣವಾಯಿತು. ಆ ಸನ್ನಿವೇಶ ಏನೆಂದು ಕೇಳುವಿರಾ? ಅದರ ಉತ್ತರ ನಿಜಕ್ಕೂ ಬಹಳ ಸ್ವಾರಸ್ಯಕರವಾಗಿದೆ.

2017 ಮೇ ತಿಂಗಳಲ್ಲಿ ಆಗಿನ ಅಮೆರಿಕ ಅಧ್ಯಕ್ಷ ಟ್ರಂಪ್ ಸೌದಿ ಅರೇಬಿಯಕ್ಕೆ ಭೇಟಿ ನೀಡಿದ್ದರು. ಅದರ ಬೆನ್ನಿಗೆ ಕೆಲವು ಹ್ಯಾಕರ್‌ಗಳು ಖತರ್ ಸರಕಾರದ ಕೆಲವು ಅಧಿಕೃತ ವೆಬ್‌ಸೈಟ್‌ಗಳನ್ನು ಹ್ಯಾಕ್ ಮಾಡಿ, ಖತರ್‌ನ ದೊರೆಯ ಹೆಸರಲ್ಲಿ, ಅಮೆರಿಕವನ್ನು ನಿಂದಿಸಿ ಇರಾನ್ ಅನ್ನು ಹೊಗಳುವ ಕೆಲವು ಹುಸಿ ಹೇಳಿಕೆಗಳನ್ನು ಪ್ರಕಟಿಸಿದರು. ಖತರ್ ಸರಕಾರವು ಕೂಡಲೇ, ಇದೆಲ್ಲ ಹ್ಯಾಕರ್‌ಗಳ ಕಿಡಿಗೇಡಿ ಕೃತ್ಯಗಳೆಂದು ಸ್ಪಷ್ಟೀಕರಿಸಿ ಅವುಗಳನ್ನು ತನ್ನ

ವೆಬ್‌ಸೈಟ್‌ಗಳಿಂದ ಕಿತ್ತು ಹಾಕಿತು. ಆದರೂ ಸೌದಿ ಮತ್ತು ಯುಎಇಯ ಹೆಚ್ಚಿನೆಲ್ಲಾ ಟಿವಿ ಚಾನೆಲ್‌ಗಳಲ್ಲಿ ಪ್ರಸ್ತುತ ಸುಳ್ಳು ಹೇಳಿಕೆಗಳನ್ನು ವ್ಯಾಪಕವಾಗಿ, ಪದೇ ಪದೇ ಪ್ರಸಾರ ಮಾಡಲಾಯಿತು. ಈ ಕುರಿತು ಸ್ಪಷ್ಟೀಕರಣ ನೀಡಲು ಪ್ರಯತ್ನಿಸಿದ ಅಲ್ ಜಝೀರಾ ಟಿವಿ ಚಾನೆಲ್‌ಗೆ ಕೂಡ ಸೌದಿ, ಬಹರೈನ್ ಮತ್ತು ಯುಎಇಗಳಲ್ಲಿ ನಿರ್ಬಂಧ ಹೇರಲಾಯಿತು. ಈ ರೀತಿ ಪ್ರಕ್ಷುಬ್ಧತೆ ಹೆಚ್ಚುತ್ತಾ ಹೋಗಿ ಕೊನೆಗೆ ಜೂನ್ 5 ರಂದು ಪ್ರಸ್ತುತ ನಾಲ್ಕು ದೇಶಗಳು ಖತರ್ ಮೇಲೆ ಕಠಿಣ ದಿಗ್ಬಂಧನ ಹೇರುವ ನಿರ್ಧಾರವನ್ನು ಪ್ರಕಟಿಸಿದವು.

ಈ ವರ್ಷ (2021) GCC ಶೃಂಗ ಸಭೆಯಲ್ಲಿ ಸೌದಿ ಅರೇಬಿಯ, ಯುಎಇ, ಬಹರೈನ್ ಮತ್ತು ಈಜಿಪ್ಟ್ ಸರಕಾರಗಳು ಖತರ್ ಮೇಲಿನ ಎಲ್ಲ ದಿಗ್ಬಂಧನವನ್ನು ಹಿಂದೆಗೆದುಕೊಂಡು ಸ್ನೇಹ ಪೂರ್ಣ ರಾಜತಾಂತ್ರಿಕ ಸಂಬಂಧಗಳನ್ನು ಪುನಃಸ್ಥಾಪಿಸುವ ಒಪ್ಪಂದಕ್ಕೆ ಸಹಿ ಹಾಕಿದವು. ಹೀಗೆ ಔಪಚಾರಿಕವಾಗಿ ಸಂಬಂಧಗಳನ್ನು ಸರಿಪಡಿಸುವ ಪ್ರಕ್ರಿಯೆಯಲ್ಲಿ ಕುವೈತ್ ಮತ್ತು ಅಮೆರಿಕ ಸರಕಾರಗಳು ಮಹತ್ವದ ಪಾತ್ರ ನಿರ್ವಹಿಸಿದ್ದವು. ಸದ್ಯ ಖತರ್ ಮತ್ತು ಇತರ ಅರಬ್ ದೇಶಗಳ ನಡುವೆ ಸಂಬಂಧಗಳು ಔಪಚಾರಿಕವಾಗಿ ಸುಧಾರಿಸಿದ್ದರೂ ತಳಮಟ್ಟದಲ್ಲಿ ಧಾರಾಳ ಉದ್ವಿಗ್ನತೆ ಈಗಲೂ ಇದೆ.

**ಕೆಲವು ಆಘಾತಕಾರಿ ಆಯಾಮಗಳು**

ಅರಬ್ ದೇಶಗಳಿಗೆ ಮತ್ತು ಅಲ್ಲಿನ ಆಡಳಿತಗಾರರಿಗೆ ಕೋಪ ಬಂದರೆ ಅವರು ಅದೆಷ್ಟು ಭಯಾನಕ ರುದ್ರಾವತಾರಗಳನ್ನು ತಾಳುತ್ತಾರೆ ಎಂಬುದನ್ನು ನೋಡಲು ಬಯಸಿದ್ದವರೆಲ್ಲ ಖತರ್ ಮೇಲೆ ನಾಲ್ಕು ಅರಬ್ ದೇಶಗಳು ಬಹಿಷ್ಕಾರ ಹಾಕಿದ್ದ ದಿನಗಳಲ್ಲಿ ನೋಡಿ ಬಿಟ್ಟರು. ಆ ಮಟ್ಟದ ಪರಸ್ಪರ ದ್ವೇಷ, ಆಕ್ರೋಶ, ಪ್ರತೀಕಾರ ಭಾವ, ಮೊಂಡುತನವೆಲ್ಲ ಆ ಅವಧಿಯಲ್ಲಿ ಬಹಿಷ್ಕಾರಿಗಳು ಮತ್ತು ಬಹಿಷ್ಕೃತರಿಂದ ಪ್ರದರ್ಶಿತವಾಯಿತು. ಈ ಒಟ್ಟು ಬೆಳವಣಿಗೆಯನ್ನು ಫೆಲೆಸ್ತೀನ್‌ನ ಹಿನ್ನೆಲೆಯಲ್ಲಿ ನೋಡಿದರೆ ಮಾತ್ರ, ಬೇರೆಯೇ ಕೆಲವು ಅಂಶಗಳು ಬಹಳ ಉಜ್ವಲವಾಗಿ ಎದ್ದು ಕಾಣುತ್ತವೆ. ಉದಾ: ಸೌದಿ ಅರೇಬಿಯಾ ಮತ್ತದರ ಮಿತ್ರ ದೇಶಗಳು ಖತರ್ ವಿರುದ್ಧ ತಾವು ತೋರಿದ ಕೋಪತಾಪಗಳ ಒಂದಂಶವನ್ನು ಕೂಡಾ ಈವರೆಗಿನ ತಮ್ಮ ಇತಿಹಾಸದಲ್ಲೆಂದೂ ಇಸ್ರೇಲ್ ವಿರುದ್ಧ ತೋರಿರಲಿಲ್ಲ!

ಖತರ್ ಮೇಲೆ ದಿಗ್ಬಂಧನ ಹೇರಿದ ನಾಲ್ಕು ದೇಶಗಳ ಪೈಕಿ ಈಜಿಪ್ಟ್ ಸಕಾರವಂತೂ 1979ರಲ್ಲೇ ಇಸ್ರೇಲ್ ಜೊತೆ ಪೂರ್ಣ ಪ್ರಮಾಣದ ರಾಜತಾಂತ್ರಿಕ ಸಂಬಂಧ ಸ್ಥಾಪಿಸಿಕೊಂಡಿದೆ. ಸ್ವತಃ ಖತರ್ ಮತ್ತು ಒಮಾನ್

ದೇಶಗಳು 1996ರಲ್ಲಿ ಇಸ್ರೇಲ್ ಜೊತೆ ಅಧಿಕೃತ ವ್ಯಾಪಾರ ಸಂಬಂಧಗಳನ್ನು ಸ್ಥಾಪಿಸಿಕೊಂಡಿವೆ. ವಿಪರ್ಯಾಸವೇನೆಂದರೆ, ಯುಎಇ ಮತ್ತು ಬಹರೈನ್ ಸರಕಾರಗಳು ತಾವು ಖತರ್ ಮೇಲೆ ದಿಗ್ಬಂಧನ ಹೇರಿದ್ದ ದಿನಗಳಲ್ಲೇ, ಅಂದರೆ 2020 ಸೆಪ್ಟಂಬರ್‌ನಲ್ಲಿ ಇಸ್ರೇಲ್ ಜೊತೆ ಬಹಿರಂಗ ಮತ್ತು ಅಧಿಕೃತ ರಾಜತಾಂತ್ರಿಕ ಸಂಬಂಧ ಸ್ಥಾಪನೆಯ ಒಪ್ಪಂದಕ್ಕೆ ಸಹಿ ಹಾಕುವುದರಲ್ಲಿ ಮಗ್ನರಾಗಿದ್ದವು!

ಇಸ್ರೇಲ್ ಜೊತೆ ಬಹಿರಂಗ ಸ್ನೇಹದ ವಿಷಯದಲ್ಲಿ ಯುಎಇ ಮತ್ತು ಬಹರೈನ್ ಸರಕಾರಗಳನ್ನು ಮುಂದೆ ಕಳಿಸಿರುವ ಸೌದಿ ಅರೇಬಿಯ ಇಸ್ರೇಲ್ ಜೊತೆ ಸ್ವತಃ ತನ್ನ ಸ್ನೇಹವನ್ನು ಬಹಿರಂಗವಾಗಿ ಘೋಷಿಸಲು ಹೆಚ್ಚು ಸಮಯ ತೆಗೆದುಕೊಳ್ಳಲಿಕ್ಕಿಲ್ಲ ಎಂಬುದು ಇದೀಗ ಎಲ್ಲರ ಲೆಕ್ಕಾಚಾರವಾಗಿದೆ.

ಜಗಳನಿರತರಾಗಿರುವ ಪ್ರಸ್ತುತ ಹಲವಾರು ದೇಶಗಳ ನಡುವೆ ಇರುವ ವ್ಯತ್ಯಾಸಗಳ ಬದಲು ಸಮಾನ ಅಂಶಗಳನ್ನು ನೋಡುವುದಾದರೆ ಸೌದಿ ಅರೇಬಿಯ, ಖತರ್, ಯುಎಇ ಮತ್ತು ಬಹರೈನ್ ಈ ಎಲ್ಲ ದೇಶಗಳೂ ಅಮೆರಿಕಕ್ಕೆ ಪರಮಾಪ್ತ ಸ್ಥಾನಮಾನವನ್ನು ನೀಡಿದ್ದು ಈ ಎಲ್ಲ ದೇಶಗಳಲ್ಲೂ ಅಮೆರಿಕದ ಬೃಹತ್ ಸೇನಾ ನೆಲೆಗಳಿವೆ ಎಂಬ ಅಂಶ ಗಮನಾರ್ಹವೆನಿಸುತ್ತದೆ. ವೈಚಿತ್ರ್ಯ ಮತ್ತು ವೈರುಧ್ಯಗಳ ಈ ದೀರ್ಘ ಸರಣಿಯಲ್ಲಿ ಅತ್ಯಂತ ಆಘಾತಕಾರಿ ಎಂದು ಫೆಲೆಸ್ತೀನಿಗಳು ಗುರುತಿಸುವ ಅಂಶವೇನೆಂದರೆ, ಸೌದಿ ಮತ್ತು ಅದರ ಮಿತ್ರಕೂಟವು 'ಹಮಾಸ್' ಸಂಘಟನೆಯನ್ನು ಗುರಿ ಮಾಡುವ ವಿಷಯದಲ್ಲಿ ತಾವೆಲ್ಲಾ ಸಾಕ್ಷಾತ್ ಇಸ್ರೇಲ್‌ನ ಏಜೆಂಟರು  ಎಂಬಂತೆ ವರ್ತಿಸುತ್ತಿವೆ. ಪಿಎಲ್‌ಒ ನಿಷ್ಕ್ರಿಯವಾದ ಬಳಿಕ ಆಕ್ರಮಿತ ಫೆಲೆಸ್ತೀನ್‌ನಲ್ಲಿ ಅಲ್ಲಿನ ಜನತೆಯ ಬೆಂಬಲದೊಂದಿಗೆ, ಅವರ  ಹಕ್ಕುಗಳಿಗಾಗಿ ಮತ್ತು ಅವರ ವಿಮೋಚನೆಗಾಗಿ ಹೋರಾಡುತ್ತಿರುವ ಸಂಘಟನೆ ಹಮಾಸ್. ಸ್ವಾಭಾವಿಕವಾಗಿಯೇ, ಇಸ್ರೇಲ್ ಸರಕಾರವು, ತನಗೆ ಸವಾಲಾಗಿರುವ ಈ ಸಂಘಟನೆಯನ್ನು ಭಯೋತ್ಪಾದಕ ಸಂಘಟನೆ ಎಂದು ಗುರುತಿಸುತ್ತದೆ. ಆದರೆ ಸೌದಿ ಅರೇಬಿಯ ಮತ್ತದರ ಮಿತ್ರ ದೇಶಗಳು ಕೂಡಾ ಹಮಾಸ್ ಅನ್ನು ಭಯೋತ್ಪಾದಕ ಎಂದು ಪರಿಗಣಿಸಿದರೆ ಮತ್ತು ಇದೇ ಧೋರಣೆ ಅನುಸರಿಸಬೇಕೆಂದು ಖತರ್‌ನಂತಹ ಇತರ ದೇಶಗಳನ್ನು ಆಗ್ರಹಿಸಿದರೆ, ಇಸ್ರೇಲ್ ಮತ್ತು ಈ ಸರಕಾರಗಳ ನಡುವೆ ಯಾವ ವ್ಯತ್ಯಾಸ ತಾನೇ ಉಳಿಯಿತು?

### ಹುಸಿ ನಿರೀಕ್ಷೆ ಬೇಡ

ಫೆಲೆಸ್ತೀನ್ ಎಂಬ ನಾಡಿನ ಜೊತೆ ಅರಬ್ ಮತ್ತು ಮುಸ್ಲಿಮ್ ಜನಸಾಮಾನ್ಯರಿಗೆ ಇರುವ ಅಸಾಮಾನ್ಯ, ಭಾವಾನಾತ್ಮಕ ನಂಟಿನಿಂದಾಗಿ ಯಾವುದೇ ಅರಬ್

ಅಥವಾ ಮುಸ್ಲಿಮ್ ಸರಕಾರವು ಅಧಿಕೃತವಾಗಿ ಫೆಲೆಸ್ತೀನ್ ವಿರುದ್ಧ ನಿಲುವು ತಾಳುವಂತಿಲ್ಲ. ಆದ್ದರಿಂದ ಸಂಪೂರ್ಣವಾಗಿ ಅಮೆರಿಕದ ಮಡಿಲಲ್ಲಿರುವ ಅರಬ್ ಲೀಗ್ ಅಥವಾ GCC ಸರಕಾರಗಳು ಕೂಡಾ ಫೆಲೆಸ್ತೀನ್ ವಿಮೋಚನೆ, ಮಸ್ಜಿದ್ ಅಲ್ ಅಕ್ಸಾ ವಿಮೋಚನೆ ಇತ್ಯಾದಿಗಳ ಬಗ್ಗೆ ಮಾತನಾಡುತ್ತಲೇ ಇರುತ್ತವೆ. ಆ ಕುರಿತು ಸೆಮಿನಾರ್‌ಗಳನ್ನೂ ಆಯೋಜಿಸುತ್ತಲಿರುತ್ತವೆ. ಅಪರೂಪಕ್ಕೊಮ್ಮೆ ವಿಶ್ವಸಂಸ್ಥೆ ಮತ್ತಿತರ ವೇದಿಕೆಗಳಲ್ಲಿ ಇಸ್ರೇಲ್ ಅನ್ನು ಅತ್ಯುಗ್ರವಾಗಿ ಖಂಡಿಸುವ ಮತ್ತು ಇಸ್ರೇಲ್‌ಗೆ ಗಂಭೀರ ಎಚ್ಚರಿಕೆಗಳನ್ನು ನೀಡುವ ನಿರ್ಣಯ, ಗೊತ್ತುವಳಿ ಇತ್ಯಾದಿಗಳನ್ನು ಅಂಗೀಕರಿಸುತ್ತಲೂ ಇರುತ್ತವೆ. ಫೆಲೆಸ್ತೀನ್ ನಿರಾಶ್ರಿತರಿಗೆ ಒಂದಷ್ಟು ವಾರ್ಷಿಕ ಸಹಾಯಧನವನ್ನೂ ಒದಗಿಸುತ್ತಲಿರುತ್ತವೆ. ಈ ಮೂಲಕ ಆ ಸರಕಾರಗಳಿಗೆ ತಮ್ಮ ದೇಶದೊಳಗಿನ ವಿರೋಧಿಗಳ ಬಾಯಿ ಮುಚ್ಚಿಸಲು ಸಾಧ್ಯವಾಗುತ್ತದೆ. ಜೊತೆಗೆ ಅವು ಇಸ್ರೇಲ್ ಜೊತೆ ರಾಜತಾಂತ್ರಿಕ, ವಾಣಿಜ್ಯ ಮತ್ತಿತರ ಎಲ್ಲ ಬಗೆಯ ಸಂಬಂಧಗಳನ್ನು ಸ್ಥಾಪಿಸಿಕೊಳ್ಳುತ್ತವೆ ಮತ್ತು ಫೆಲೆಸ್ತೀನ್ ಪರವಾಗಿ ಹೋರಾಡುವ ಸಂಘಟನೆಗಳನ್ನು ಭಯೋತ್ಪಾದಕ ಸಂಘಟನೆಗಳೆಂದು ಕರೆಯುತ್ತಲೂ ಇರುತ್ತವೆ. ಈ ಮೂಲಕ ಅವು ತಮ್ಮ ಪ್ರಭುಗಳನ್ನು ಪ್ರಸನ್ನಗೊಳಿಸುತ್ತವೆ. ಅತ್ತ, ಸಂಪೂರ್ಣವಾಗಿ ಅಮೆರಿಕದ ನಿಯಂತ್ರಣದಲ್ಲಿಲ್ಲದ ಇರಾನ್, ಟರ್ಕಿ ಮುಂತಾದ ದೇಶಗಳ ಸರಕಾರಗಳು ಒಂದು ಹೆಜ್ಜೆ ಮುಂದೆ ಹೋಗಿ, ತಮ್ಮ ದೇಶದಲ್ಲಿ ಫೆಲೆಸ್ತೀನ್ ನಿರಾಶ್ರಿತರಿಗೆ ಆಶ್ರಯ ಒದಗಿಸಿ, ಹಮಾಸ್‌ನಂತಹ ಸಂಘಟನೆಗಳಿಗೆ ಮಾತನಾಡಲು ಜಾಗತಿಕ ವೇದಿಕೆಗಳನ್ನೊದಗಿಸಿ, ಅವುಗಳಿಗೆ ಸೀಮಿತ ಸೈನಿಕ ನೆರವನ್ನೂ ನೀಡಿ ತಮ್ಮ ಜನತೆಯನ್ನು ಸಾಂತ್ವನಗೊಳಿಸಬಹುದು. ಇದರಾಚೆಗೆ ಪ್ರಸ್ತುತ ದೇಶಗಳು ಫೆಲೆಸ್ತೀನ್‌ಗಾಗಿ ಏನಾದರೂ ಮಾಡುವ ಸಾಧ್ಯತೆ ಕಡಿಮೆ. ಈ ಎಲ್ಲ ದೇಶಗಳಲ್ಲಿ ನಿಜಕ್ಕೂ ಜನರನ್ನು ಪ್ರತಿನಿಧಿಸುವ ಮತ್ತು ಅಮೆರಿಕದಂತಹ ದೈತ್ಯ ಶಕ್ತಿಗಳ ಪ್ರಭಾವದಿಂದ ಮುಕ್ತವಾದ ಸ್ವತಂತ್ರ, ಪ್ರಜಾಸತ್ತಾತ್ಮಕ ಸರಕಾರಗಳು ಸ್ಥಾಪಿತವಾದಾಗ ಮಾತ್ರ ಒಳ್ಳೆಯದೇನನ್ನಾದರೂ ನಿರೀಕ್ಷಿಸಬಹುದು.

❖ ❖ ❖

## 23

# ಅಮೆರಿಕ ಅಷ್ಟೊಂದು ನಿಷ್ಠೆಯಿಂದ ಇಸ್ರೇಲ್ ಬೆಂಬಲಕ್ಕೆ ನಿಂತಿರುವುದೇಕೆ?

ಇಂದು ಇಸ್ರೇಲ್ ಸಾಕಷ್ಟು ಸ್ವಾವಲಂಬಿಯಾಗಿದೆ. ಹಲವು ರಂಗಗಳಲ್ಲಿ ಹಲವು ದೇಶಗಳು, ತಮ್ಮ ಅನೇಕ ಅಗತ್ಯಗಳಿಗಾಗಿ ಇಸ್ರೇಲ್ ಅನ್ನು ಅವಲಂಬಿಸಿವೆ. ಅದು ಈಗಾಗಲೇ ಜಗತ್ತಿನ 4ನೆಯ ಅತ್ಯಂತ ಬಲಿಷ್ಠ ಮಿಲಿಟರಿ ಶಕ್ತಿ ಎಂಬ ಮಾನ್ಯತೆ ಪಡೆದಿದೆ.

ಅಂತಹ ಇಸ್ರೇಲ್ ಸರಕಾರದ ಕುರಿತಂತೆ – ಅದೊಂದು ಅಕ್ರಮವಾಗಿ ಸ್ಥಾಪಿತವಾಗಿ, ನಿರಂತರ ಅಕ್ರಮ ವಿಸ್ತರಣೆಯಲ್ಲಿ ನಿರತವಾಗಿರುವ ಸರಕಾರ, ತಾನು ಒಂಟಿಯಾಗಿ ಇದ್ದಿದ್ದರೆ ಎಂದೋ ಅಳಿದು ಹೋಗಬಹುದಾಗಿದ್ದ ಸರಕಾರ ಮತ್ತು ಅಮೆರಿಕದ ಬೆಂಬಲದಿಂದ ಮಾತ್ರ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುವ ಸರಕಾರ – ಎಂಬ ಜನಾಭಿಪ್ರಾಯ ಹಲವು ವಲಯಗಳಲ್ಲಿ ಕಂಡು ಬರುತ್ತದೆ. ಇಸ್ರೇಲ್ ಮತ್ತು ಅದರ ಭದ್ರತಾ ಪಡೆಗಳು ಪದೇಪದೇ ವಿಶ್ವಸಂಸ್ಥೆಯ ನಿರ್ಣಯಗಳನ್ನು, ಅಂತರ್‌ರಾಷ್ಟ್ರೀಯ ನಿಯಮಗಳನ್ನು ಮತ್ತು ಮೂಲಭೂತ ಮಾನವ ಹಕ್ಕುಗಳನ್ನು ಉಲ್ಲಂಘಿಸಿದರೂ ಅಮೆರಿಕ ಎಂಬ ಜಗತ್ತಿನ ಅತ್ಯಂತ ಬಲಿಷ್ಠ ಪ್ರಜಾಸತ್ತಾತ್ಮಕ ದೇಶವು ಇಸ್ರೇಲ್‌ಗೆ ನಿಶ್ಶರ್ತ ಬೆಂಬಲ ನೀಡುತ್ತಾ ಬಂದಿದೆ. ಅದು ಬಹಳ ಉದಾರವಾಗಿ ಹಣಕಾಸು, ಶಸ್ತ್ರಾಸ್ತ್ರ, ತಂತ್ರಜ್ಞಾನ

ಮತ್ತು ಬೇಹುಗಾರಿಕೆಯ ರಂಗಗಳಲ್ಲಿ ಇಸ್ರೇಲ್‌ಗೆ ಅತ್ಯಮೂಲ್ಯ ನೆರವು ನೀಡಿದ್ದು ಮಾತ್ರವಲ್ಲ, ಇಸ್ರೇಲ್ ಎಂಬ ದೇಶಕ್ಕೆ ಜಗತ್ತಿನ ಹಲವಾರು ದೇಶಗಳ ಮನ್ನಣೆ ದೊರಕಿಸಿಕೊಡುವಲ್ಲಿ ಕೂಡಾ ನಿರ್ಣಾಯಕ ಪಾತ್ರ ವಹಿಸಿದೆ. ಆರ್ಥಿಕವಾಗಿ ಇಸ್ರೇಲ್ ಸಾಕಷ್ಟು ಸ್ವಾವಲಂಬಿಯಾದ ಬಳಿಕವೂ ಅಮೆರಿಕ ತನ್ನ ಔದಾರ್ಯವನ್ನು ಕಡಿಮೆಗೊಳಿಸಿಲ್ಲ. ಇಸ್ರೇಲ್ ಯಾವುದಾದರೂ ದೊಡ್ಡ ಅಪರಾಧ ಮಾಡಿ, ಜಗತ್ತು ಅದನ್ನು ಖಂಡಿಸಿದಾಗ, ಅಮೆರಿಕ ಒಂಟಿಯಾಗಿ ಇಸ್ರೇಲ್‌ನ ರಕ್ಷಣೆಗೆ ನಿಂತಿದ್ದು ಮಾತ್ರವಲ್ಲ ವಿಶ್ವಸಂಸ್ಥೆಯಲ್ಲಿ ಕೂಡಾ ಇಸ್ರೇಲ್ ವಿರುದ್ಧ ಯಾವುದೇ ಖಂಡನಾ ನಿರ್ಣಯ ಅಂಗೀಕೃತವಾಗದಂತೆ ನೋಡಿಕೊಂಡಿದೆ. 1972 ರಿಂದೀಚೆಗೆ ಅಮೆರಿಕವು ಕನಿಷ್ಠ 53 ಬಾರಿ, ಜಾಗತಿಕ ಜನಾಭಿಪ್ರಾಯವನ್ನು ಅವಗಣಿಸಿ ಮತ್ತು ಸ್ವತಃ ತಾನು ಪ್ರತಿಪಾದಿಸುವ ಎಲ್ಲ ಮೌಲ್ಯಗಳನ್ನು ಕಡೆಗಣಿಸಿ, ಭದ್ರತಾ ಮಂಡಳಿಯಲ್ಲಿನ ತನ್ನ ವೀಟೋ ಅಧಿಕಾರವನ್ನು ಪ್ರಯೋಗಿಸಿ ಇಸ್ರೇಲ್ ಅನ್ನು ರಕ್ಷಿಸಿದೆ. ಈ ರೀತಿ ಅಮೆರಿಕ ಸ್ವತಃ ತನ್ನ ತತ್ವಾದರ್ಶ ಮತ್ತು ತನ್ನ ಹಿತಾಸಕ್ತಿಗಳನ್ನು ಬಲಿಗೊಟ್ಟು ಇಸ್ರೇಲ್‌ನ ಹಿಂದೆ ನಿಲ್ಲುವುದಕ್ಕೆ ಕಾರಣವೇನು? ಇದು ಬಹುಕಾಲದಿಂದ ಹಲವರ ಕುತೂಹಲ ಕೆರಳಿಸಿರುವ ಒಂದು ದೊಡ್ಡ ನಿಗೂಢ.

**ಪ್ರಜಾಪ್ರಭುತ್ವ ಕಾರಣವೇ?**

ಈ ಕುರಿತು ಅಮೆರಿಕದಲ್ಲಿನ ವ್ಯವಸ್ಥೆಯ ಸಾರಥಿಗಳು ಮತ್ತವರ ಬಾಲ ಬಡುಕರೊಡನೆ, ವಿಚಾರಿಸಿದರೆ ಅವರ ಬಳಿ ಇದಕ್ಕೊಂದು ಸಿದ್ಧ ಉತ್ತರವಿದೆ. "ಆ ಒಟ್ಟು ಭೂಭಾಗದಲ್ಲಿ ಒಂದು ಪೂರ್ಣ ಪ್ರಮಾಣದ ಪ್ರಜಾಸತ್ತಾತ್ಮಕ ದೇಶವಿದ್ದರೆ ಅದು ಇಸ್ರೇಲ್ ಮಾತ್ರ. ಆದ್ದರಿಂದ ಒಂದು ಹಿರಿಯ, ಬಲಿಷ್ಠ ಪ್ರಜಾಸತ್ತಾತ್ಮಕ ದೇಶವೆಂಬ ನೆಲೆಯಲ್ಲಿ ಇಸ್ರೇಲ್‌ನ ಬೆಂಬಲಕ್ಕೆ ನಿಲ್ಲುವುದು ನಮ್ಮ ಕರ್ತವ್ಯ" ಎಂಬುದೇ, ಸಾವಿರಾರು ಬಾರಿ ಆವರ್ತಿಸಲಾಗಿರುವ ಆ ಉತ್ತರ.

ನಮ್ಮ ಯುಗದಲ್ಲಿ ಒಂದು ದೇಶ ಅಥವಾ ಸರಕಾರವು ಪ್ರತಿಪಾದಿಸುವ ತತ್ವಾದರ್ಶಗಳು ಎಷ್ಟೇ ಉದಾತ್ತವಾಗಿದ್ದರೂ, ನಿಜ ಜೀವನದಲ್ಲಿ ಅವುಗಳ ಸ್ಥಾನ ಕೇವಲ ಆಲಂಕಾರಿಕವಾಗಿರುತ್ತದೆ. ಆ ಸರಕಾರದ ಆಂತರಿಕ ಅಥವಾ ಜಾಗತಿಕ ಧೋರಣೆಗಳು ಮತ್ತು ಪ್ರಮುಖ ನಿರ್ಧಾರಗಳೆಲ್ಲಾ ಕೇವಲ ನಿರ್ದಿಷ್ಟ ಹಿತಾಸಕ್ತಿಗಳಿಂದ ಪ್ರೇರಿತವಾಗಿರುತ್ತವೆಯೇ ಹೊರತು ತತ್ವಾದರ್ಶಗಳೊಂದಿಗೆ ಅವುಗಳಿಗೆ ದೂರದ ನಂಟೂ ಇರುವುದಿಲ್ಲ. ಅಮೆರಿಕದ ಕಥೆಯೂ ಅಷ್ಟೇ. ಅಮೆರಿಕವನ್ನು ಒಂದು ಪ್ರಜಾಸತ್ತಾತ್ಮಕ ದೇಶ ಎಂಬ ದೃಷ್ಟಿಯಿಂದ ನೋಡುವವರು ಅದು ಮಾನವ ಇತಿಹಾಸದ ಅತ್ಯಂತ ಪ್ರಬಲ ಬಂಡವಾಳ ಶಾಹಿ

ದೇಶ ಮತ್ತು ಆಧುನಿಕ ಯುಗದ ಅತ್ಯಂತ ಯಶಸ್ವಿ ನವ ವಸಾಹತುಶಾಹಿ ದೇಶ ಎಂಬುದನ್ನು ಮರೆಯಬಾರದು. ಈ ವಾಸ್ತವಗಳನ್ನು ಗಮನದಲ್ಲಿಟ್ಟುಕೊಂಡು ಸನ್ನಿವೇಶವನ್ನು ವೀಕ್ಷಿಸಿದರೆ, ಅಮೆರಿಕದ ವಿವಿಧ ಧೋರಣೆಗಳ ಹಿಂದೆ ಅಡಗಿರುವ ಒಳಗುಟ್ಟುಗಳೆಲ್ಲಾ ರಟ್ಟಾಗುವ ಸಾಧ್ಯತೆ ಇದೆ. ಉದಾ: ಇಸ್ರೇಲ್‌ನ ಬೆಂಬಲಕ್ಕೆ ನಿಲ್ಲಲು ಅಮೆರಿಕದ ಬಳಿ ಬೇರೆ ಸಾವಿರ ಕಾರಣವಿದ್ದರೂ ಡೆಮಾಕ್ರಸಿ ಎಂಬ ಒಂದು ಅಂಶವು ಅದಕ್ಕೆ ಕಾರಣವಾಗಿರಲು ಖಂಡಿತ ಸಾಧ್ಯವಿಲ್ಲ. ಏಕೆಂದರೆ, ಮಧ್ಯಪ್ರಾಚ್ಯದ ಯಾವುದೇ ದೇಶದಲ್ಲಿ ಡೆಮಾಕ್ರಸಿ ತಲೆ ಎತ್ತದಂತೆ ನೋಡಿಕೊಂಡಿರುವುದೇ ಅಮೆರಿಕ. ಕೊಲ್ಲಿಯ ಮುಸ್ಲಿಮ್ ಮತ್ತು ಅರಬ್ ದೇಶಗಳಲ್ಲಿ ಇಂದು ಮೆರೆಯುತ್ತಿರುವ ರಾಜಾಳ್ವಿಕೆ ಮತ್ತು ಸರ್ವಾಧಿಕಾರಗಳು ಅಲ್ಲಿಯ ಸ್ಥಳೀಯ ಜನರ ಒಪ್ಪಿಗೆಯಿಂದ ನಡೆಯುತ್ತಿಲ್ಲ. ಅವೆಲ್ಲಾ ನಿಜವಾಗಿ ಸ್ಥಳೀಯರ ಕೈ, ಕಾಲು, ಕಿವಿ ಮೂಗೆಲ್ಲಾ ಕಟ್ಟಿ, ಕಣ್ಣಿಗೆ ಪಟ್ಟಿ ಜಡಿದು, ಬಾಯಿಗೆ ಮುದ್ರೆ ಒತ್ತಿ ಸ್ಥಳೀಯರನ್ನು ಗುಲಾಮರಾಗಿಸಿ ನಡೆಯುತ್ತಿರುವ ಆಡಳಿತಗಳು. ಸೌದಿ ಅರೇಬಿಯಾದಲ್ಲಿ ಯಾರಾದರೂ ತನ್ನ ಮನೆಯೊಳಗೆ ಕುಳಿತು ಈ ದೇಶದಲ್ಲಿ ಚುನಾವಣೆ ಬೇಕೆಂದು ಹೇಳಿದರೆ ಅವನು ಮರುದಿನ ಕಣ್ಮರೆಯಾಗಿ ಬಿಡುತ್ತಾನೆ. ಈಜಿಪ್ಟ್‌ನಂತೆ ಎಲ್ಲಾದರೂ ಇಂತಹ ವ್ಯಕ್ತಿಗಳು ಅಥವಾ ಗುಂಪುಗಳು ಗಟ್ಟಿಯಾಗಿ ಬೆಳೆದು, ಚುನಾವಣೆಯಲ್ಲಿ ಭಾಗವಹಿಸಿ ಗೆದ್ದು ಬಂದರೂ, ಅಂತಹ ಚುನಾಯಿತ ಆಡಳಿತಗಾರರನ್ನು ಪದಚ್ಯುತಗೊಳಿಸಿ ಗಲ್ಲಿಗೇರಿಸುವ ಕಾರ್ಯಾಚರಣೆಗಳು ಕೂಡಾ ಅಮೆರಿಕದ ಉಸ್ತುವಾರಿಯಲ್ಲಿಯೇ ನಡೆಯುತ್ತವೆ. ಜಗತ್ತಿನ ಬೇರೆ ಅನೇಕ ಭಾಗಗಳಲ್ಲೂ ಅಮೆರಿಕ ತನ್ನ ಸ್ವಾರ್ಥಕ್ಕಾಗಿ ಪ್ರಜಾಸತ್ತಾತ್ಮಕ ಆಂದೋಲನಗಳನ್ನು ಧ್ವಂಸಗೊಳಿಸಿ ಸರ್ವಾಧಿಕಾರಿ ಶಕ್ತಿಗಳಿಗೆ ಬಲ ಒದಗಿಸಿದ ಡಜನ್ ಗಟ್ಟಲೆ ದಾಖಲೆಗಳಿವೆ.

## ಹತ್ಯಾ ಕಾಂಡದ ಪಾಪ ಪ್ರಜ್ಞೆ ಇರಬಹುದೇ?

1941 ರಿಂದ 1945ರ ವರೆಗಿನ ಅವಧಿಯಲ್ಲಿ ಯೂರೋಪಿನ ವಿವಿಧೆಡೆ ಬಿಳಿಯ ಆರ್ಯನ್ ಜನಾಂಗವಾದಿಗಳ ಕೈಯಲ್ಲಿ ಯಹೂದಿಗಳ ಸಾಮೂಹಿಕ ಹತ್ಯಾಕಾಂಡ ನಡೆದಿತ್ತು. ಒಂದು ಅಂದಾಜಿನ ಪ್ರಕಾರ ಅದರಲ್ಲಿ ಸುಮಾರು 60 ಲಕ್ಷ ನಿರಪರಾಧಿ ಯಹೂದಿಗಳು ಹತರಾಗಿದ್ದರು. ಈ ಪಾಪ ಪ್ರಜ್ಞೆಯಿಂದಾಗಿ ಅಮೆರಿಕವು, ಯಹೂದಿಗಳ ಒಂದು ಹೊಸ, ಸ್ವತಂತ್ರ ದೇಶದ ನಿರ್ಮಾಣಕ್ಕೆ ಬೆಂಬಲ ನೀಡುತ್ತಿದೆ ಎಂಬೊಂದು ಜನಪ್ರಿಯ ತರ್ಕವಿದೆ.

ಇದು ತೀರಾ ಹುರುಳಿಲ್ಲದ ತರ್ಕ. ಏಕೆಂದರೆ ಮೊದಲನೆಯದಾಗಿ, ಫೆಲೆಸ್ತೀನ್‌ನಲ್ಲಿ 'ಇಸ್ರೇಲ್'ಎಂಬ ಯಹೂದಿ ತಾಯಿನಾಡಿನ ನಿರ್ಮಾಣಕ್ಕೆ

ಬೇಕಾದ ಎಲ್ಲ ಸಿದ್ಧತೆಗಳು, ಯುರೋಪಿನಲ್ಲಿ ಯಹೂದಿಗಳ ಹತ್ಯಾಕಾಂಡ ಆರಂಭವಾಗುವುದಕ್ಕಿಂತ ಹಲವು ದಶಕಗಳ ಮುನ್ನವೇ ಆರಂಭವಾಗಿತ್ತು.

ಎರಡನೆಯದಾಗಿ, ಯಹೂದಿಗಳ ಹತ್ಯಾಕಾಂಡವು ಯುರೋಪಿಯನ್ನರ ಕೈಯಲ್ಲಿ ನಡೆದಿದ್ದು, ಅದರಲ್ಲಿ ನೇರವಾಗಿ ಅಮೆರಿಕದ ಯಾವ ಪಾತ್ರವೂ ಇರಲಿಲ್ಲ. ಹೀಗಿರುವಾಗ, ಯಾರೋ ಮಾಡಿದ ಪಾಪಕ್ಕೆ ಯಾರೋ ಪರಿಹಾರ ಸಲ್ಲಿಸುವುದು ಅನುಚಿತವಾಗಿತ್ತು.

ಮೂರನೆಯದಾಗಿ, ಅನ್ಯಾಯ ಯುರೋಪಿನಲ್ಲಿ ನಡೆದಿರುವಾಗ ಅದಕ್ಕೆ ನ್ಯಾಯೋಚಿತವಾದ ಪರಿಹಾರವನ್ನೂ ಯುರೋಪಿನಲ್ಲೇ ಏರ್ಪಡಿಸಬೇಕಿತ್ತು. ಜಗತ್ತಿನ ಎಲ್ಲ ಅರಕ್ಷಿತ ಯಹೂದಿಗಳಿಗೆ ಯುರೋಪಿನಲ್ಲೇ ಒಂದು ಸುರಕ್ಷಿತ ನೆಲೆ ಒದಗಿಸಲು ಖಂಡಿತ ಅವಕಾಶವಿತ್ತು. ಅದರ ಬದಲು, ಈ ಹತ್ಯಾಕಾಂಡದೊಂದಿಗೆ ಯಾವ ಸಂಬಂಧವೂ ಇಲ್ಲದ ಇನ್ನೊಂದು ಭೂಭಾಗದವರನ್ನು ಬಲಿ ಪಶುಗಳಾಗಿ ಮಾಡಿದ್ದಕ್ಕೆ ಯಾವ ಸಮರ್ಥನೆಯೂ ಇರಲಿಲ್ಲ.

ನಾಲ್ಕನೆಯದಾಗಿ, ಯುರೋಪ್ ಖಂಡದಲ್ಲಿ ನಡೆದ ಅನ್ಯಾಯಕ್ಕೆ ಏಶ್ಯ ಎಂಬ ಇನ್ನೊಂದು ಖಂಡದಲ್ಲಿ ಪರಿಹಾರ ಒದಗಿಸಿ ಅದಕ್ಕೆ ಅಮೆರಿಕ ಎಂಬ ಮತ್ತೊಂದು ಖಂಡದಿಂದ ಕಾವಲು ಒದಗಿಸುವುದು ಯಾವ ರೀತಿಯಲ್ಲೂ ತರ್ಕಬದ್ಧವೆನಿಸುವುದಿಲ್ಲ. ಅಮೆರಿಕಕ್ಕೆ ನಿಜಕ್ಕೂ ತನ್ನ ಗತಕಾಲದ ಪಾಪವನ್ನು ಅಂಗೀಕರಿಸಿ ಅದಕ್ಕೆ ಪರಿಹಾರೋಪಾಯಗಳನ್ನು ಹುಡುಕಲು ಹೊರಡುವಂತಹ ಸಜೀವ ಆತ್ಮಸಾಕ್ಷಿ ಮತ್ತು ದೊಡ್ಡ ಮನಸ್ಸು ಇದ್ದಿದ್ದರೆ, ಅದು ಕಳೆದ ಕೆಲವು ದಶಕಗಳ ಅವಧಿಯಲ್ಲಿ ಜಗತ್ತಿನ ನಾನಾ ಭಾಗಗಳಲ್ಲಿ ಮಾಡಿರುವ ಮತ್ತು ಮಾಡಿಸಿರುವ ಅನೇಕಾರು, ನೇರ ಹಾಗೂ ಪರೋಕ್ಷ ಹತ್ಯಾಕಾಂಡಗಳಿಗೆ ಪ್ರಾಯಶ್ಚಿತ್ತ ಮಾಡಲು ಹೊರಡಬೇಕಿತ್ತು. ಅದು ತನ್ನ ಅಮೆರಿಕ ಖಂಡದಲ್ಲಿ ಸ್ವತಃ ತಾನೇ ಮಾಡಿರುವ ಹತ್ಯಾಕಾಂಡಗಳ ಪಟ್ಟಿಯನ್ನೊಮ್ಮೆ ನೋಡಿಕೊಂಡು ಅದರ ಪರಿಹಾರಕ್ಕೆ ಹೊರಡಬಹುದಿತ್ತು. ಇಂದು ಅಮೆರಿಕನ್ ಖಂಡವನ್ನು ಆಕ್ರಮಿಸಿಕೊಂಡಿರುವವರು ಮತ್ತವರ ಸಭ್ಯ ಪೂರ್ವಜರು ಯುರೋಪಿನಲ್ಲಿ ಹಸಿವು ತಾಳಲಾಗದೆ ಅಮೆರಿಕವನ್ನು ಅರಸಿ ಹೋಗಿದ್ದಾಗ, ಅದೇನೂ ನಿರ್ಜನ, ಬರಡು ಭೂಮಿಯಾಗಿರಲಿಲ್ಲ. ಅಲ್ಲಿ ಜನರಿದ್ದರು.

ಪೂರ್ಣಪ್ರಮಾಣದಲ್ಲಿ ವಿಕಾಸ ಹೊಂದಿದ್ದ, ಸುಸಂಸ್ಕೃತ, ಜೀವಂತ ಮೂಲನಿವಾಸಿ ಜನರು. ಕ್ರೌರ್ಯ, ಯುದ್ಧ ತಂತ್ರ ಮತ್ತು ಶಸ್ತ್ರಾಸ್ತ್ರಗಳ ವಿಷಯದಲ್ಲಿ ಮಾತ್ರ ಯುರೋಪಿಯನ್ನರಿಗಿಂತ ಹಿಂದಿದ್ದ ಜನರು.

ಒಂದು ಹಂತದಲ್ಲಿ ಅಮೆರಿಕನ್ನರು ಅಮೆರಿಕದ ಇತಿಹಾಸ ಹೇಳುವಾಗ ಆ ಮೂಲ ನಿವಾಸಿ ಅಮೆರಿಕನ್ನರ ಅಸ್ತಿತ್ವವನ್ನೇ ಮರೆಮಾಚುತ್ತಿದ್ದರು. ಕ್ರಮೇಣ,

ಅದು ಅಸಾಧ್ಯವೆಂಬುದು ಮನವರಿಕೆಯಾದ ಬಳಿಕ, ಅಲ್ಲಿ ಮೂಲನಿವಾಸಿಗಳು ಇದ್ದರು ಎಂಬುದನ್ನು ಒಪ್ಪಿಕೊಂಡು, ಅವರು ತೀರಾ ಸೀಮಿತ ಸಂಖ್ಯೆಯಲ್ಲಿದ್ದರು ಎಂದು ವಾದಿಸಲಾರಂಭಿಸಿದರು. ಇದೀಗ ಅವರ ತಜ್ಞರೇ ಸತ್ಯವನ್ನು ಅನಾವರಣಗೊಳಿಸ ತೊಡಗಿದ್ದಾರೆ. ಉದಾ: ಆಂಥ್ರೊಪಾಲಜಿ ತಜ್ಞ ಜೇಮ್ಸ್ ಮೂನಿ 1910ರಲ್ಲಿ ಮುಂದಿಟ್ಟ ವರದಿಯಲ್ಲಿ, 1492ರಲ್ಲಿ ಇಟಲಿಯ ಕೊಲಂಬಸ್ ಅಮೆರಿಕಕ್ಕೆ ಕಾಲಿಟ್ಟಾಗ ಅಲ್ಲಿ ಕೇವಲ 11.15 ಲಕ್ಷ ಮೂಲ ನಿವಾಸಿಗಳಿದ್ದರು ಎಂದು ವಾದಿಸಿದ್ದರು. ಮುಂದೆ ಬೇರೆಬೇರೆ ವಿಜ್ಞಾನಿಗಳು ಈ ಸಂಖ್ಯೆಯನ್ನು ಹೆಚ್ಚಿಸುತ್ತಾ ಬಂದಿದ್ದಾರೆ. ಉದಾ: ಜನಾಂಗೀಯ ಇತಿಹಾಸದ ತಜ್ಞ ಹೆನ್ರಿ ಡೋಬಿನ್ಸ್ ಅವರು 1966ರ ತಮ್ಮ ವರದಿಯಲ್ಲಿ, ಕೊಲಂಬಸ್ ಅಮೆರಿಕಕ್ಕೆ ಹೋದಾಗ ಅಲ್ಲಿದ್ದ ಮೂಲನಿವಾಸಿಗಳ ಜನಸಂಖ್ಯೆ 98 ಲಕ್ಷ ಮತ್ತು 1.22 ಕೋಟಿಯ ಮಧ್ಯೆ ಇದ್ದಿರಬಹುದೆಂದು ಅಂದಾಜಿಸಿದ್ದರು. ಮುಂದೆ ಅವರೇ 1983ರಲ್ಲಿ ಈ ಹಿಂದಿನ ತಮ್ಮದೇ ಅಂದಾಜನ್ನು ಪರಿಷ್ಕರಿಸಿ ಆ ಸಂಖ್ಯೆಯನ್ನು 1.80 ಕೋಟಿಗೆ ಏರಿಸಿದ್ದಾರೆ. ಈಗ ಆ ಮೂಲ ನಿವಾಸಿಗಳು ಮತ್ತು ಅವರ ಮಕ್ಕಳೆಲ್ಲಾ ಎಲ್ಲಿದ್ದಾರೆ? ಎಂದು ಹುಡುಕಲು ಹೊರಟವರು ಹಲವು ಶತಮಾನಗಳ ತನಕ ನಡೆದ ಸತತ ಹಾಗೂ ವ್ಯವಸ್ಥಿತ ಸಾಮೂಹಿಕ ಹತ್ಯಾಕಾಂಡದ ಭಾರೀ ಭಯಾನಕ ಇತಿಹಾಸವನ್ನು ಎದುರಿಸಬೇಕಾಗುತ್ತದೆ. ಕೆಲವು ತಜ್ಞರ ಪ್ರಕಾರ, ಯೂರೋಪಿನ ಕೊಳ್ಳೆಗಾರರು ಅಮೆರಿಕದ ನೆಲಕ್ಕೆ ಕಾಲಿಟ್ಟ ಬಳಿಕ ಕೇವಲ 5 ಶತಮಾನಗಳ ಅವಧಿಯಲ್ಲಿ ಅಲ್ಲಿನ 95ಶೇ. ದಷ್ಟು ಮೂಲನಿವಾಸಿ ಜನಸಂಖ್ಯೆ ಕಣ್ಮರೆಯಾಗಿದೆ. ಅಂದರೆ ಕೆಲವೇ ತಲೆ ಮಾರುಗಳ ಅಂತರದಲ್ಲಿ 2 ಕೋಟಿ ಮೂಲನಿವಾಸಿಗಳು ಅಮೆರಿಕದ ತಮ್ಮ ಮೂಲ ನೆಲದಿಂದ ಮಾಯವಾಗಿದ್ದಾರೆ. ಈ ರೀತಿ ಕೋಟಿಗಟ್ಟಲೆ ಮಾನವರನ್ನು ಅವರದೇ ನೆಲದಲ್ಲಿ ಸಂಹರಿಸಿ ಬಿಟ್ಟ ಪಾಪಿಗಳಿಗೆ ಆ ಬಗ್ಗೆ ಯಾವುದೇ ಪಾಪ ಪ್ರಜ್ಞೆ ಇಲ್ಲವೆಂದಾದರೆ ಬೇರೆ ಯಾವ ಪಾಪಪ್ರಜ್ಞೆ ತಾನೇ ಅವರನ್ನು ಕಾಡೀತು?

## ಕುಖ್ಯಾತ 'ಮೊಸ್ಸಾದ್'!

ಇಸ್ರೇಲ್ ಜಗತ್ತಿನ ಅತಿ ಸಣ್ಣ ದೇಶಗಳಲ್ಲೊಂದು. ಆದರೆ ಅದರ ಬೇಹುಗಾರಿಕಾ ಏಜನ್ಸಿ ಮೊಸ್ಸಾದ್ (Mossad) ಅನ್ನು ಜಗತ್ತಿನ ಅತಿದೊಡ್ಡ ಬೇಹುಗಾರಿಕಾ ಜಾಲಗಳ ಸಾಲಲ್ಲಿ ಗಣಿಸಲಾಗುತ್ತದೆ. ಅದರ ವಾರ್ಷಿಕ ಬಜೆಟ್ ಸುಮಾರು

೩ ಬಿಲಿಯನ್ ಡಾಲರ್‌ಗಳಷ್ಟಿದೆ. ಇದಲ್ಲದೆ ಮಿಲಿಟರಿ ಬೇಹುಗಾರಿಕೆಗೆಂದೇ ಮೀಸಲಾಗಿರುವ 'ಅಮಾನ್' ಮತ್ತು ಆಂತರಿಕ ಭದ್ರತೆಗೆ ಸಂಬಂಧಿಸಿದ ಚಟುವಟಿಕೆಗಳಿಗೆ ನಿಯುಕ್ತವಾಗಿರುವ 'ಶಿನ್ ಬೆಟ್' – ಹೀಗೆ ಎರಡು ಪ್ರತ್ಯೇಕ ಸಂಸ್ಥೆಗಳೂ ಇಸ್ರೇಲ್‌ನಲ್ಲಿವೆ. ಮೊಸ್ಸಾದ್ ತನ್ನ ಅಸಾಂಪ್ರದಾಯಿಕ ಕಾರ್ಯ ವಿಧಾನಗಳಿಗಾಗಿ ಖ್ಯಾತವಾಗಿದೆ. ಖಾಸಗಿತನಕ್ಕೆ ಸಂಬಂಧಿಸಿದ ನೈತಿಕ ಮಿತಿಮೇರೆಗಳನ್ನು ಲೆಕ್ಕಿಸದೆ, ತುಂಬಾ ಮುಂದುವರಿದ ತಂತ್ರಜ್ಞಾನವನ್ನು ಪ್ರಯೋಗಿಸಿ ಮಾಹಿತಿ ಸಂಗ್ರಹಿಸುವ ಕಲೆಯಲ್ಲಿ ಪಳಗಿರುವ ಮೊಸ್ಸಾದ್, ತಾನು ಸಂಗ್ರಹಿಸಿದ ಮಾಹಿತಿಗಳನ್ನು ಬಳಸಿ, ಆ ಮೂಲಕ ವಿವಿಧ ದೇಶಗಳ ಧೋರಣೆಗಳ ಹಾಗೂ ಅಲ್ಲಿನ ಆಂತರಿಕ ಬೆಳವಣಿಗೆಗಳ ಮೇಲೆ ಪ್ರಭಾವ ಬೀರಿದ ದಾಖಲೆಗಳೂ ಇವೆ. ಜಗತ್ತಿನ ಎಷ್ಟೋ ಸರಕಾರಗಳು ತಮ್ಮ ವಿರೋಧಿ ದೇಶಗಳ ಕುರಿತು ಮಾಹಿತಿ ಸಂಗ್ರಹಕ್ಕಾಗಿ ಮೊಸ್ಸಾದ್‌ನ ಸೇವೆ ಪಡೆದದ್ದಿದೆ. ಮೊಸ್ಸಾದ್ ಇಸ್ರೇಲ್‌ನ ಪರಮಾಪ್ತ ದೇಶಗಳಾದ ಅಮೆರಿಕದ ವಿರುದ್ಧ ಹಾಗೂ ಹಲವು ಯುರೋಪಿಯನ್ ದೇಶಗಳ ವಿರುದ್ಧ ಬೇಹುಗಾರಿಕೆ ನಡೆಸಿದ ಆರೋಪಗಳಿವೆ ಮತ್ತು ಇದರಿಂದಾಗಿ ಇಸ್ರೇಲ್ ಜೊತೆ ಆ ದೇಶಗಳ ಸಂಬಂಧಗಳು ಉದ್ವಿಗ್ನವಾದದ್ದೂ ಇದೆ.

ಎಷ್ಟೋ ಸರ್ವಾಧಿಕಾರಿ ಅರಬ್ ಮತ್ತು ಮುಸ್ಲಿಮ್ ದೇಶಗಳು ಕೂಡಾ ತಮ್ಮ ದೇಶದೊಳಗಿನ ಪ್ರಜಾಸತ್ತಾತ್ಮಕ ಚಟುವಟಿಕೆಗಳ ಮೇಲೆ ಕಣ್ಣಿಡಲು ಮೊಸ್ಸಾದ್ ಜಾಲವನ್ನು ಬಳಸಿಕೊಂಡದ್ದಿದೆ. ಇಸ್ಲಾಮಿಕ್ ವಿಚಾರಧಾರೆಯ ಪಕ್ಷಗಳನ್ನು ಅಮೆರಿಕ, ಇಸ್ರೇಲ್ ಮತ್ತು ಮಧ್ಯಪ್ರಾಚ್ಯದ ಸರ್ವಾಧಿಕಾರಿಗಳು ಸಮಾನವಾಗಿ ದ್ವೇಷಿಸುವುದರಿಂದ ಆ ಪಕ್ಷಗಳನ್ನು ಹತ್ತಿಕ್ಕುವ ಹೆಸರಲ್ಲಿ ಪ್ರಸ್ತುತ ಮೂರೂ ವಲಯಗಳು ಒಂದಾಗುತ್ತಲಿರುತ್ತವೆ.

❖ ❖ ❖

## 24

# ಶೀತಲ ಸಮರದಲ್ಲಿ ಪಾಲುದಾರರ ಶೋಧ

ಅಮೆರಿಕಕ್ಕೆ ಇಸ್ರೇಲ್ ಎಂಬ ದೇಶ ಅಷ್ಟೊಂದು ಆಪ್ತವಾಗಿ ಬಿಡಲು ಶೀತಲ ಸಮರದ ಆರಂಭದ ಪರ್ವದಲ್ಲಿನ ಅನಿವಾರ್ಯ ಸನ್ನಿವೇಶವೂ ಕಾರಣವಾಗಿತ್ತು ಎಂಬೊಂದು ವಾದವಿದೆ. ಅದು ಭಾಗಶಃ ಸತ್ಯವೂ ಹೌದು. ಆದರೆ ಭಾಗಶಃ ಮಾತ್ರ. ಇಸ್ರೇಲ್ ಸ್ಥಾಪನೆಯಾದದ್ದು 1948ರಲ್ಲಿ. ಆ ವರ್ಷವು ಐತಿಹಾಸಿಕವಾಗಿ ಬಹಳ ನಿರ್ಣಾಯಕವಾಗಿತ್ತು. ಏಕೆಂದರೆ ಆಗ ತಾನೇ ವಿನಾಶಕಾರಿ ಎರಡನೇ ಜಾಗತಿಕ ಮಹಾ ಯುದ್ಧವು ಮುಗಿದು, ಶೀತಲ ಸಮರದ ಹೊಸ ಯುಗವೊಂದು ಆರಂಭವಾಗಿತ್ತು. ಜಾಗತಿಕ ಯುದ್ಧದ ವೇಳೆ ಜರ್ಮನಿ, ಇಟಲಿ ಮತ್ತು ಜಪಾನ್‌ಗಳ ಬೆನ್ನು ಮುರಿದೊಡನೆ, ಆತನಕ ಅವರ ವಿರುದ್ಧ ಒಂದೇ ಪಾಳಯದಲ್ಲಿದ್ದ ಅಮೆರಿಕ, ಬ್ರಿಟನ್, ಫ್ರಾನ್ಸ್, ಸೋವಿಯತ್ ಯೂನಿಯನ್ ಮತ್ತು ಚೀನಾಗಳ ಏಕತೆಯಲ್ಲಿ ಬಿರುಕು ಮೂಡಿತ್ತು. ಹೊಸ ಹಿತಾಸಕ್ತಿಗಳ ಆಧಾರದಲ್ಲಿ, ತೀರಾ ಭಿನ್ನ ಘಟಕಗಳನ್ನೊಳಗೊಂಡ ಹೊಸ ಪಾಳಯಗಳು ರೂಪುಗೊಳ್ಳತೊಡಗಿದವು.

ಪ್ರತಿಯೊಂದು ಪಾಳಯದವರಿಗೂ, ಸಾಮಾನ್ಯವಾಗಿ ಜಗತ್ತಿನ ಎಲ್ಲ ಪ್ರಾಂತಗಳಲ್ಲಿ ಮತ್ತು ವಿಶೇಷವಾಗಿ ಹೆಚ್ಚು ಸಂಪನ್ಮೂಲಗಳಿರುವ ಆಯಕಟ್ಟಿನ ಸ್ಥಳಗಳಲ್ಲಿ ನಂಬಲರ್ಹ

ಪಾಲುದಾರರು ಬೇಕಿತ್ತು. ಆ ಹಂತದಲ್ಲಿ ಇಸ್ರೇಲ್ ಕೈಯಲ್ಲಿ ಬೇರೆ ಆಯ್ಕೆಯೂ ಇರಲಿಲ್ಲ. ತನ್ನ ಬಂಡವಾಳಶಾಹಿ ಧೋರಣೆಗೆ ತಕ್ಕಂತೆ ಸಹಜವಾಗಿಯೇ ಅದು ಬಂಡವಾಳಶಾಹಿ ಅಮೆರಿಕದ ಮಡಿಲಲ್ಲಿ ಆಸರೆ ಪಡೆಯಿತು. ವಸಾಹತು ಯುಗದಿಂದ ಆಗ ತಾನೇ ಹೊರಬಂದಿದ್ದ ಅರಬ್ ಜಗತ್ತು ಆಗ ಭಾರೀ ಗೊಂದಲದಲ್ಲಿತ್ತು. ಎಲ್ಲೂ ಭವಿಷ್ಯದ ಕುರಿತು ವೈಚಾರಿಕ ಸ್ಪಷ್ಟತೆ ಇರಲಿಲ್ಲ. ಎಷ್ಟೋ ಕಡೆ ಹೊಸದಾಗಿ ಜನಪ್ರಿಯರಾಗಿದ್ದ ಅರಬ್ ಯುವ ನಾಯಕರು, ವೈಚಾರಿಕ ಬಿಕ್ಕಟ್ಟಿಗೆ ತುತ್ತಾಗಿದ್ದರು. ಇಸ್ಲಾಮೀ ವಿಚಾರಧಾರೆಯ ಪ್ರಭಾವ ತುಂಬಾ ಸೀಮಿತವಾಗಿತ್ತು. ಎಡವಿರಲಿ, ಬಲವಿರಲಿ ಸಂಸ್ಕೃತಿ ಮತ್ತು ವಿಚಾರಧಾರೆ ಪಶ್ಚಿಮದಿಂದಲೇ ಬರಬೇಕಿತ್ತು. ಆಧುನಿಕತೆ, ಸಮಾಜವಾದ ಮತ್ತು ಅರಬ್ ರಾಷ್ಟ್ರೀಯವಾದದ ಒಂದು ಮಿಶ್ರಣ ರಚಿಸಿಕೊಂಡು ತಮ್ಮ ಗೊಂದಲವನ್ನು ಹಂಚುವುದರಲ್ಲಿ ನಿರತರಾಗಿದ್ದರು. ಇಂತಹ ಸನ್ನಿವೇಶದಲ್ಲಿ ಇಸ್ರೇಲ್‌ನಂತಹ ಸಮರ್ಥ ಪಾಲುದಾರನ ಅಗತ್ಯ ಅಮೆರಿಕ ಮಾತ್ರವಲ್ಲ, ಆ ಭೂಭಾಗದಲ್ಲಿ ಹಿತಾಸಕ್ತಿಗಳಿರುವ ಎಲ್ಲರಿಗೂ ಇತ್ತು.

### ಧರ್ಮಕ್ಕೇನಾದರೂ ಪಾತ್ರವಿತ್ತೇ?

ಜಗತ್ತಿನಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಕ್ರೈಸ್ತ ಮತಾನುಯಾಯಿಗಳಿರುವ ದೇಶ ಅಮೆರಿಕ. ಹಾಗೆಯೇ ಜಗತ್ತಿನಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಪ್ರೊಟೆಸ್ಟೆಂಟ್ ಕ್ರೈಸ್ತರು ಇರುವ ದೇಶ ಕೂಡ ಅಮೆರಿಕ. 2018–19 ರ ಸಮೀಕ್ಷೆಯೊಂದರಲ್ಲಿ ಅಮೆರಿಕದ 65ಶೇ. ವಯಸ್ಕ ನಾಗರಿಕರು ತಮ್ಮನ್ನು ಕ್ರೈಸ್ತರೆಂದು ಗುರುತಿಸಿಕೊಂಡರು. (1990 ರಲ್ಲಿ ಆ ರೀತಿ ಗುರುತಿಸಿಕೊಂಡವರ ಸಂಖ್ಯೆ 85ಶೇ.ದಷ್ಟಿತ್ತು). ಅಮೆರಿಕದಲ್ಲಿನ ಕ್ರೈಸ್ತರ ಪೈಕಿ ಎಲ್ಲ ಬಗೆಯ ಕೆಥೊಲಿಕ್ ಪಂಥೀಯರ ಜನಸಂಖ್ಯಾ ಪ್ರಮಾಣ 22.7ಶೇ.ದಷ್ಟಿದೆ ಮತ್ತು ಎಲ್ಲ ಬಗೆಯ ಪ್ರೊಟೆಸ್ಟೆಂಟ್ ಪಂಥೀಯರ ಪ್ರಮಾಣ 48.5ಶೇ.ದಷ್ಟಿದೆ. ಪ್ರೊಟೆಸ್ಟೆಂಟ್‌ಗಳಲ್ಲೂ ಇವಾಂಜೆಲಿಕಲ್ ಕ್ರಿಶ್ಚಿಯನ್ ಎಂಬ ಪಂಗಡದವರು ಅತ್ಯಧಿಕ ಬಲಿಷ್ಠರಾಗಿದ್ದು ಸಮೀಕ್ಷಕರ ಪ್ರಕಾರ ಅಮೆರಿಕದ ಒಟ್ಟು ಜನಸಂಖ್ಯೆಯಲ್ಲಿ ಇವಾಂಜೆಲಿಕಲ್ ಕ್ರೈಸ್ತರ ಪ್ರಮಾಣ 25.4ಶೇ.ದಷ್ಟಿದೆ.

ಝಿಯೊನಿಝುಮ್ ಎಂಬುದು ಮೂಲತಃ ಒಂದು ಯಹೂದಿ ಆಂದೋಲನವಾಗಿದ್ದರೂ, ಇವಾಂಜೆಲಿಕಲ್ ಕ್ರೈಸ್ತರ ನಡುವೆ ಝಿಯೋನಿಝುಮ್‌ನ ಪ್ರತಿಪಾದಕರು ಯಾವಾಗಲೂ ಗಣ್ಯ ಸಂಖ್ಯೆಯಲ್ಲಿ ಕಂಡು ಬಂದಿದ್ದು ಅವರನ್ನು ಕ್ರಿಶ್ಚಿಯನ್ ಝಿಯೋನಿಸ್ಟ್‌ಗಳೆಂದು ಕರೆಯಲಾಗುತ್ತದೆ. ಕಳೆದ ಹಲವು ದಶಕಗಳಲ್ಲಿ ವಿವಿಧ ಅಮೆರಿಕನ್ ಸರಕಾರಗಳು ಇಸ್ರೇಲ್ ಕುರಿತಂತೆ ತಾಳುತ್ತ ಬಂದಿರುವ 'ನಿಶ್ಶರ್ತ ಬೆಂಬಲ'ದ ನಿಲುವಿಗೆ ಪ್ರಸ್ತುತ ಇವಾಂಜೆಲಿಕಲ್

ಕ್ರೈಸ್ತ ಪಂಥ ಮತ್ತು ಅದರೊಳಗಿನ ಝಿಯೋನಿಸ್ಟ್ ಪಂಗಡದವರ ಒತ್ತಡವೇ ಕಾರಣ ಎಂಬುದು ಇತ್ತೀಚೆಗೆ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ.

ಕ್ರೈಸ್ತರಲ್ಲಿ ವಿವಿಧ ಪಂಥಗಳ ನಂಬಿಕೆಗಳು ಭಿನ್ನವಾಗಿರುತ್ತವೆ. ಏಸು ಜಗತ್ತಿಗೆ ಮರಳಿ ಬಂದು ಈ ಭೂಮಿಯ ಮೇಲೆ ಸರ್ವ ಸುಭಿಕ್ಷ ದೇವರ ಸಾಮ್ರಾಜ್ಯವನ್ನು ಸ್ಥಾಪಿಸುವರೆಂಬ ನಂಬಿಕೆ ಹೆಚ್ಚಿನೆಲ್ಲ ಕ್ರೈಸ್ತರಲ್ಲಿದೆ. ಇವಾಂಜೆಲಿಕಲ್ ಕ್ರೈಸ್ತರ ಒಂದು ದೊಡ್ಡ ವರ್ಗದಲ್ಲಿ 'ಡಿಸ್ಪೆನ್ಸೇಶನಲ್ ಪ್ರಿ ಮಿಲ್ಲೇನಿಯಲಿಝಮ್' (dispensational pre-millennialism) ಎಂಬೊಂದು ನಂಬಿಕೆ ಇದೆ. ಈ ನಿರ್ದಿಷ್ಟ ನಂಬಿಕೆಯ ಪ್ರಕಾರ, ಮೊದಲನೆಯ ಬಾರಿ ಏಸು ಭೂಮಿಗೆ ಬಂದಾಗ ಯಹೂದಿಗಳು ಅವರನ್ನು ತಿರಸ್ಕರಿಸಿದ್ದರು. ಆಗ ಏಸು ಅವರನ್ನು ಕೈಬಿಟ್ಟು ತನ್ನ ಗುರಿಸಾಧನೆಗಾಗಿ ಚರ್ಚನ್ನು ಅವಲಂಬಿಸಿದರು. ಆದರೆ ಚರ್ಚ್ ಯುಗ ಆರಂಭವಾದ ಬಳಿಕವೂ ಯಹೂದಿಗಳು ದೇವರಿಗೆ ಪ್ರೀತಿ ಪಾತ್ರರಾಗಿಯೇ ಇದ್ದರು. ಲೋಕಾಂತ್ಯಕ್ಕೆ ತುಂಬಾ ಮುನ್ನವೇ ಅವರು ಧಾರ್ಮಿಕ ಪುನರ್ಜನ್ಮ ಪಡೆಯಲಿದ್ದಾರೆ. ಅವರೆಲ್ಲಾ ಜೆರುಸಲೇಮ್‌ನಲ್ಲಿ ಒಟ್ಟುಸೇರಿ ತಮ್ಮ ಆರಾಧನಾಲಯವನ್ನು ನಿರ್ಮಿಸಲಿದ್ದಾರೆ. ಆ ಬಳಿಕ ಹಲವು ಘಟನೆಗಳ ದೀರ್ಘ ಸರಮಾಲೆಯೊಂದು ನಡೆದು ಕೊನೆಗೆ ಮಾನವಕುಲದ ಕೊನೆಯ ಸಮರವಾದ ಅಂತಿಮ ಮಹಾ ಸಮರ ನಡೆಯಲಿದೆ. ಅದು ಮುಗಿಯುವಾಗ ಯಹೂದಿಗಳೆಲ್ಲಾ ಏಸುವನ್ನು ತಮ್ಮ ವಿಮೋಚಕನಾಗಿ ಅಂಗೀಕರಿಸುವರು. ಇಷ್ಟಾದ ಬಳಿಕ ಏಸು, ತನ್ನ ಪೂರ್ಣ ವೈಭವದೊಂದಿಗೆ ಮರಳಿ ಬಂದು ದೇವರ ಸಾಮ್ರಾಜ್ಯವನ್ನು ಸ್ಥಾಪಿಸುವರು. ಅದು ಒಂದು ಸಾವಿರ ವರ್ಷದ ಪ್ರಶಾಂತ ಆಡಳಿತವಾಗಿರುವುದು.

ಹೀಗೆ ಕ್ರೈಸ್ತರ ಈ ವಿಭಾಗವು ಯಹೂದಿಗಳ ಮೇಲಿನ ಪ್ರೀತಿಯಿಂದಲ್ಲವಾದರೂ, ಏಸು ಬರುತ್ತಾರೆ ಮತ್ತು ಅದಕ್ಕೆ ಪೂರ್ವಭಾವಿಯಾಗಿ ನಡೆಯಬೇಕಾದ ಎಲ್ಲ ಘಟನೆಗಳಿಗೆ ದಾರಿ ಸುಗಮಗೊಳಿಸಿಕೊಡುವುದು ತಮ್ಮ ಕರ್ತವ್ಯ ಎಂಬ ಮುಗ್ಧ ನಂಬಿಕೆಯಿಂದ, ಇಸ್ರೇಲ್‌ನ ನಿರ್ಮಾಣ, ಜೆರುಸಲೇಮ್ ಮೇಲೆ ಯಹೂದಿ ಆಕ್ರಮಣ, ಅಲ್ಲಿಯ ನಿವಾಸಿಗಳ ನಿರ್ಮೂಲನ – ಹೀಗೆ ಎಲ್ಲವನ್ನೂ ಉತ್ಸಾಹದಿಂದ ಬೆಂಬಲಿಸುತ್ತಾ ಬಂದಿದೆ. ಈವರೆಗಿನ ಎಲ್ಲ ಅಮೆರಿಕನ್ ಸರಕಾರಗಳು ಇಸ್ರೇಲ್ ವಿಷಯದಲ್ಲಿ ತಾಳುತ್ತಾ ಬಂದಿರುವ, ಕಣ್ಣು ಮುಚ್ಚಿ ಇಸ್ರೇಲ್ ಅನ್ನು ಬೆಂಬಲಿಸುವ ಧೋರಣೆಗೆ ಈ ಪ್ರಬಲಪಂಗಡದ ಒತ್ತಡವೇ ಕಾರಣ ಎಂಬುದನ್ನು ಹೆಚ್ಚಿನ ವೀಕ್ಷಕರು ಒಪ್ಪುತ್ತಾರೆ. ಕಳೆದ ಬಾರಿ ಅಮೆರಿಕವನ್ನು ಆಳುತ್ತಿದ್ದ ಟ್ರಂಪ್ ಮತ್ತವರ ರಿಪಬ್ಲಿಕನ್ ಪಕ್ಷಕ್ಕೆ ಪ್ರಸ್ತುತ ಇವಾಂಜೆಲಿಕಲ್ ಕ್ರೈಸ್ತರು ಭಾರೀ ಬೆಂಬಲ ನೀಡಿದ್ದರು. ಒಂದು ಸಮೀಕ್ಷೆಯ ಪ್ರಕಾರ ಈ ಸಮುದಾಯದ 81ಶೇ. ಶ್ವೇತ ಮತದಾರರು ಟ್ರಂಪ್ ಪರ ಮತ ಚಲಾಯಿಸಿದ್ದರು.

**ಅಡ್ವೊಕೆಸಿ ಜಾಲಗಳ ಪ್ರಭಾವ**

ದೂರಗಾಮಿ ಯಹೂದಿ ಹಿತಾಸಕ್ತಿಗಳಿಗಾಗಿ, ಯೋಜಿತವಾಗಿ ಹೋರಾಡಲು ಬದ್ಧವಾಗಿದ್ದ ಅನೇಕ ಯಹೂದಿ ಸಂಘಟನೆಗಳು ಅಮೆರಿಕ ಮತ್ತು ಯೂರೋಪಿನ ವಿವಿಧೆಡೆ ಬಹುಕಾಲದಿಂದ ಸಕ್ರಿಯವಾಗಿದ್ದವು. ಆಪೈಕಿ ಕೆಲವು ಸಂಘಟನೆಗಳು ಗುಪ್ತ ಹಾಗೂ ಅನಾಮಿಕವಾಗಿದ್ದವು. ಅಮೆರಿಕದಲ್ಲಿ 1897ರಲ್ಲಿ ಅಧಿಕೃತವಾಗಿ ಝಿಯೋನಿಸ್ಟ್ ಸಂಘಟನೆ ಆರಂಭವಾದಾಗಿನಿಂದ ಅಲ್ಲಿ ಝಿಯೋನಿಸ್ಟ್ ಲಾಬಿಯ ಅಡ್ವೊಕೆಸಿ ಚಟುವಟಿಕೆಗಳು ಹೆಚ್ಚು ಸಂಘಟಿತವಾಗಿ ನಡೆಯಲಾರಂಭಿಸಿದವು. ಅಮೆರಿಕದಲ್ಲಿ ಯಹೂದಿಗಳ ಜನಸಂಖ್ಯೆ ಕೇವಲ 2.4ಶೇ.ದಷ್ಟಿದ್ದರೂ ಅಲ್ಲಿ ಅವರು, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯರಂಗದಲ್ಲಿ ಯಾರೂ ಕಡೆಗಣಿಸಲು ಸಾಧ್ಯವೇ ಇಲ್ಲದಷ್ಟು ಬಲಿಷ್ಠರಾಗಿದ್ದಾರೆ. ಸಮಾಜದ ಪ್ರಭಾವಶಾಲಿ ನಾಯಕರು, ಮಾಧ್ಯಮಗಳು, ಪಕ್ಷ, ಸಂಘಟನೆ, ಆಂದೋಲನಗಳು, ಉದ್ಯಮಿಗಳು ಇವರೆಲ್ಲರ ಜೊತೆ ಸದಾ ಸಂಪರ್ಕದಲ್ಲಿದ್ದು, ಝಿಯೋನಿಸ್ಟ್ ಅಜೆಂಡಾದ ಪರ ಅಭಿಪ್ರಾಯ ರೂಪಿಸುವುದು, ಪಕ್ಷಗಳ ನಿಲುವು ಹಾಗೂ ಸರಕಾರಗಳ ಧೋರಣೆಗಳನ್ನು ಇಸ್ರೇಲ್ ಮತ್ತು ಝಿಯೋನಿಸ್ಟ್ ಹಿತಾಸಕ್ತಿಗನುಸಾರ ಬಾಗಿಸುವುದು – ಇವೇ ಮುಂತಾದ ಕೆಲಸಗಳನ್ನು ಇವರ 'ಅಡ್ವೊಕೆಸಿ' ಗುಂಪುಗಳು ಒಂದು ಶತಮಾನಕ್ಕೂ ಹೆಚ್ಚುಕಾಲ ಬಹಳ ಪರಿಣಾಮಕಾರಿಯಾಗಿ ಮಾಡಿದವು. ಅವರು ಈ ವಿಧಾನದ ಮೂಲಕ ಎಷ್ಟು ಮೌನವಾಗಿ ಹಾಗೂ ಎಷ್ಟು ಸಮರ್ಥವಾಗಿ ತಮ್ಮ ಗುರಿಗಳನ್ನು ಸಾಧಿಸಿದರೆಂದರೆ, ಅವರ ಕಾರ್ಯ ವೈಖರಿ, ತಂತ್ರಗಾರಿಕೆಗಳೆಲ್ಲಾ ಎಲ್ಲೆಡೆ ಕುತೂಹಲ ಕೆರಳಿಸಿದ್ದಲ್ಲದೆ ವ್ಯಾಪಕ ಮೆಚ್ಚುಗೆಯನ್ನೂ ಪಡೆದವು. ಅವರ ಎಷ್ಟೋ ಸಾಧನೆಗಳು, ಅವು ಸಾಧಿತವಾದ ಎಷ್ಟೋ ದಶಕಗಳ ಬಳಿಕವಷ್ಟೇ ಬೆಳಕಿಗೆ ಬಂದು, ಕಥಾವಸ್ತುಗಳಾಗಿ ಬಿಟ್ಟವು. ಇಂದು ಕೂಡಾ ಝಿಯೋನಿಸ್ಟ್ ಮತ್ತು ಇಸ್ರೇಲಿ ಅಡ್ವೊಕೆಸಿ ಸಂಸ್ಥೆಗಳು ಅಮೆರಿಕದಲ್ಲಿ ವಿವಿಧ ಪಕ್ಷ, ಸರಕಾರ ಮತ್ತು ನಾಯಕರನ್ನು ತಮ್ಮ ಇಚ್ಛಾನುಸಾರ ಕುಣಿಸುವಷ್ಟು ಶಕ್ತಿಶಾಲಿಯಾಗಿವೆ. ಈ ಗುಂಪುಗಳನ್ನು ಮನಸಾರೆ ದ್ವೇಷಿಸುವವರು ಕೂಡ ಯಾವುದೇ ವಿಷಯದಲ್ಲಿ, ಇವರ ವಿರುದ್ಧ ಅಥವಾ ಇವರಿಗೆ ಇಷ್ಟವಿಲ್ಲದ ನಿಲುವು ತಾಳಲು ಧೈರ್ಯ ಪಡುವುದಿಲ್ಲ.

ಅಮೆರಿಕದ ಮೇಲೆ ನೇರವಾಗಿ ಪ್ರಭಾವ ಬೀರುವ ಮೂಲಕ ಈ ಲಾಬಿ ಜಗತ್ತಿನ ಹತ್ತಾರು ಪ್ರಮುಖ ದೇಶಗಳ ಮೇಲೆ ಪರೋಕ್ಷ ಪ್ರಭಾವ ಬೀರಿತು. ಸಾಲದ್ದಕ್ಕೆ, ಪೂರ್ವ ಮತ್ತು ಪಶ್ಚಿಮದ ಹೆಚ್ಚಿನೆಲ್ಲಾ ದೇಶಗಳಲ್ಲಿ ತನ್ನ ಸಮರ್ಥ ಜಾಲವನ್ನು ಯಶಸ್ವಿಯಾಗಿ ಸ್ಥಾಪಿಸಿತು.

ಅಮೆರಿಕದಲ್ಲಿನ ಇಸ್ರೇಲಿ ಮತ್ತು ಝಿಯೋನಿಸ್ಟ್ ಲಾಬಿಯ ತಜ್ಞರ ಪ್ರಕಾರ, ಈ ಲಾಬಿಯವರು ಪ್ರತಿಭಾವಂತ ಹಾಗೂ ಪ್ರಭಾವಶಾಲಿ ನಾಯಕರನ್ನು ಅವರ

ತಾರುಣ್ಯದ ದಿನಗಳಿಂದಲೇ ಸೂಕ್ಷ್ಮವಾಗಿ ವೀಕ್ಷಿಸುತ್ತಾ ಅವರ ಕುರಿತಾದ ದಾಖಲೆ ನಿರ್ಮಿಸುತ್ತಾ ಬಂದಿರುತ್ತಾರೆ. ಇಸ್ರೇಲ್‌ನ ಹಿತಾಸಕ್ತಿಗಳಿಗೆ ವಿರುದ್ಧವಾದ ನಿಲುವು ತಾಳುವ ನಾಯಕರನ್ನು ಗುರುತಿಸಿ, ಅವರನ್ನು ಹಗರಣಗಳಲ್ಲಿ ಸಿಲುಕಿಸುವ ಅಥವಾ ಅವರ ಕೊರಳಿಗೆ 'ಆಂಟಿ ಸೆಮೆಟಿಕ್' ಎಂಬ ಕೊಳಕು ಪಟ್ಟಿ ಕಟ್ಟುವ ಮೂಲಕ ಅವರನ್ನು ಶಾಶ್ವತ ಅಸ್ಪೃಶ್ಯರಾಗಿಸಿ ಬಿಡುತ್ತಾರೆ.

ಅಮೆರಿಕದಲ್ಲಿ ಇಸ್ರೇಲಿ ಲಾಬಿ ಎಷ್ಟು ಬಲಿಷ್ಠವಾಗಿದೆ ಎಂಬುದನ್ನು ಸೂಚಿಸುವ ಸಹಸ್ರಾರು ಜೋಕುಗಳು ಜನಪ್ರಿಯವಾಗಿವೆ. ಇತ್ತೀಚೆಗೆ ಟ್ರಂಪ್ ವಿರೋಧಿ ಪತ್ರಕರ್ತನೊಬ್ಬ ಹಂಚಿಕೊಂಡ ಒಂದು ತಾಜಾ ಜೋಕ್ ಇಲ್ಲಿದೆ: ಜೋ ಬೈಡನ್, ಮೊನ್ನೆ ತಾನೇ ಒಂದು ಯುನಿವರ್ಸಿಟಿಯಲ್ಲಿ ಉಪನ್ಯಾಸ ನೀಡುತ್ತಿದ್ದಾಗ ಏಸು, ಮೇರಿ, ಪವಿತ್ರಾತ್ಮ, ಬೈಬಲ್ ಇವರೆಲ್ಲರನ್ನೂ ಅವಾಚ್ಯ ಪದಗಳಿಂದ ಬಯ್ದಿದ್ದರು ಎಂದು ನೀವು ನಾಳೆ ಸಾಬೀತು ಪಡಿಸಿದರೆ ಅದರಿಂದ ಜೋ ಬೈಡನ್‌ರಿಗೆ ಯಾವ ನಷ್ಟವೂ ಆಗುವುದಿಲ್ಲ. ಹಾಗೆಯೇ ನೀವು, ಅವರು 20 ವರ್ಷಗಳ ಹಿಂದೆ ಕೊಲೆ ಮತ್ತು ಅತ್ಯಾಚಾರದ ಆರೋಪವೊಂದರಲ್ಲಿ ಸಿಕ್ಕಿ ಬಿದ್ದು ಜೈಲುವಾಸ ಅನುಭವಿಸಿದ್ದರೆಂದು ಸಾಬೀತು ಪಡಿಸಿದರೂ ಅವರ ಅಧ್ಯಕ್ಷ ಸ್ಥಾನಕ್ಕೆ ಯಾವುದೇ ಚ್ಯುತಿ ಬರುವುದಿಲ್ಲ. ಆದರೆ ನೀವೆಲ್ಲಾದರೋ, ಅವರು ಹೈಸ್ಕೂಲ್‌ನಲ್ಲಿದ್ದಾಗ, ಹೋಲೊ ಕಾಸ್ಟ್ ಅನ್ನು ನಿರಾಕರಿಸಿದ್ದರು, ಇಸ್ರೇಲ್ ಸರಕಾರದ ಧೋರಣೆಯನ್ನು 'ಅಪಾರ್ಥಿಡ್' (Apartheid) ನೀತಿಗೆ ಹೋಲಿಸಿದ್ದರು ಅಥವಾ ಇಸ್ರೇಲ್ ವಿರುದ್ಧ ದಿಗ್ಬಂಧನ ಹೇರುವ ಕುರಿತು ಮಾತನಾಡಿದ್ದರು ಎಂದು ಆರೋಪಿಸಿದರೆ ಸಾಕು. ಬೈಡನ್ ತಕ್ಷಣ ರಾಜೀನಾಮೆ ನೀಡಬೇಕಾಗುತ್ತದೆ. ಅವರ ಪಕ್ಷವು ಮುಂದಿನ ಕನಿಷ್ಠ ಐದು ಮಹಾ ಚುನಾವಣೆಗಳಲ್ಲಿ ಹೀನಾಯ ಸೋಲುಣ್ಣಬೇಕಾಗುತ್ತದೆ.

ಇಸ್ರೇಲಿ ಲಾಬಿ ಇಷ್ಟು ಶಕ್ತಿಶಾಲಿಯಾಗಿದ್ದರೆ ಮತ್ತು ನಿಜಕ್ಕೂ ರಾಜಕಾರಣಿಗಳು ಅದಕ್ಕೆ ಇಷ್ಟು ಅಂಜುತ್ತಾರೆಂದಾದರೆ ಇಸ್ರೇಲ್ ಕುರಿತು ಅಮೆರಿಕದ ಎಲ್ಲ ಧೋರಣೆ ಮತ್ತು ನಿರ್ಧಾರಗಳು ಪ್ರಸ್ತುತ ಲಾಬಿಯಿಂದಲೇ ನಿರ್ದೇಶಿತವಾಗಿರುತ್ತವೆ ಎಂಬ ಬಗ್ಗೆ ಸಂಶಯಕ್ಕೆ ಎಡೆಯೇ ಎಲ್ಲಿದೆ?.

❖ ❖ ❖

25

# ಆಶಾವಾದಕ್ಕೆ ಕೆಲವು ತಳಹದಿಗಳು

ಫೆಲೆಸ್ತೀನ್ ಜನತೆಯ ವಿಮೋಚನಾ ಹೋರಾಟಕ್ಕೆ ಸದ್ಯ ಭೂಮಿಯ ಯಾವುದಾದರೂ ಭಾಗದಿಂದ ನೈಜ ನೆರವು ಸಿಗುವ ನಿರೀಕ್ಷೆ ಇದ್ದರೆ ಅದು ಯುರೋಪ್ ಮತ್ತು ಅಮೆರಿಕದಿಂದ – ಅಲ್ಲಿಯ ಜಾಗೃತ ಜನತೆಯಿಂದ ಮತ್ತು ಅವರು ಸಂಘಟಿಸಲಿರುವ ಸಾಮೂಹಿಕ ಒತ್ತಡದಿಂದ. ಹೀಗೆಂದಾಗ ಅನೇಕರಿಗೆ ಅದನ್ನು ನಂಬಲಾಗುವುದಿಲ್ಲ. ಯುರೋಪ್ ಮತ್ತು ಅಮೆರಿಕದವರೆಂದರೆ ಅವರೆಲ್ಲ ಹುಟ್ಟಿನಿಂದಲೇ ಇಸ್ರೇಲ್‌ನ ಪರ ಮತ್ತು ಮುಸ್ಲಿಮರ ವಿರುದ್ಧ ಪಕ್ಷಪಾತಿಗಳಾಗಿರುತ್ತಾರೆ ಎಂಬ ಪೂರ್ವಗ್ರಹ ಹೆಚ್ಚಿನೆಲ್ಲ ಮುಸ್ಲಿಮ್ ಸಮಾಜಗಳಲ್ಲಿ ಕಂಡು ಬರುವುದುಂಟು. ಇದಕ್ಕೆ ಕಾರಣ ಇಸ್ರೇಲ್ – ಫೆಲೆಸ್ತೀನ್ ವಿಷಯದಲ್ಲಿ ಪಶ್ಚಿಮದ ಸರಕಾರಗಳು ತಾಳುತ್ತ ಬಂದಿರುವ ಶುದ್ಧ ಆತ್ಮವಂಚನೆಯ ಧೋರಣೆ. ಇಸ್ರೇಲ್ ಬಗ್ಗೆ ವಿಪರೀತ ವಾತ್ಸಲ್ಯ ತೋರುತ್ತಾ, ಅದು ಎಷ್ಟು ದೊಡ್ಡ ಅನ್ಯಾಯವೆಸಗಿದರೂ ಹೆಚ್ಚೆಂದರೆ ಔಪಚಾರಿಕವಾಗಿ ಮಾತ್ರ ಅದನ್ನು ಖಂಡಿಸಿ, ಫೆಲೆಸ್ತೀನ್‌ನ ಸಂತ್ರಸ್ತರಿಗೆ ಒಂದಿಷ್ಟು ಆರ್ಥಿಕ ನೆರವು ನೀಡಿ, ಉಳಿದಂತೆ, ಇಸ್ರೇಲ್‌ನ ಬೆಂಬಲಕ್ಕೆ ನಿಲ್ಲುವುದು – ಇದುವೇ ಆ ಸರಕಾರಗಳು ಬಹುಕಾಲದಿಂದ ತಾಳುತ್ತಾ ಬಂದಿರುವ ನಿಲುವು. ಆದರೆ ಈ ವ್ಯಕ್ತ ದೃಶ್ಯದ ಹಿಂದೆ ಹಲವು ಅವ್ಯಕ್ತ ಸತ್ಯಗಳು

ಅಡಗಿವೆ. ನಿಜವಾಗಿ, ಇಸ್ರೇಲ್ ಅನ್ನು ಬೆಂಬಲಿಸುವ ವಿಷಯದಲ್ಲಿ ಪಶ್ಚಿಮದ ಕೆಲವು ಸರಕಾರಗಳು ತೋರುವಂತಹ ಅಮಿತೋತ್ಸಾಹವು, ಅಲ್ಲಿನ ಸಮಾಜಗಳಲ್ಲಿನ ಜನಾಭಿಪ್ರಾಯವನ್ನು ಖಂಡಿತ ಪ್ರತಿನಿಧಿಸುವುದಿಲ್ಲ. ಈ ವಿಷಯದಲ್ಲಿ ಅಲ್ಲಿನ ಸರಕಾರಗಳ ಧೋರಣೆ ಮತ್ತು ಜನಸಾಮಾನ್ಯರ ನಿಲುವಿನ ನಡುವೆ ಬಹಳಷ್ಟು ಅಂತರವಿದೆ. ಪಶ್ಚಿಮದ ಹೆಚ್ಚಿನೆಲ್ಲ ದೇಶಗಳಲ್ಲಿ, ತಳಮಟ್ಟದಲ್ಲಿ, ಮುಸ್ಲಿಮ್ ವಿರೋಧಿ ಪೂರ್ವಗ್ರಹಕ್ಕಿಂತ ಯಹೂದಿ ವಿರೋಧಿ ಪೂರ್ವಗ್ರಹವು ಹೆಚ್ಚು ಆಳವಾಗಿ ಬೇರೂರಿದೆ. ಕುರುಡಾಗಿ ಯಹೂದಿಗಳನ್ನು ಸಂಶಯಿಸುವವರು ಹಾಗೂ ದ್ವೇಷಿಸುವವರು ಪಶ್ಚಿಮದ ಹಲವೆಡೆ ಗಣ್ಯಸಂಖ್ಯೆಯಲ್ಲಿ ಕಂಡು ಬರುತ್ತಾರೆ. ತಾತ್ಕಾಲಿಕವಾಗಿ, ಇಸ್ರೇಲ್ ಮತ್ತು ಝಿಯೋನಿಸ್ಟ್ ಮಾಧ್ಯಮಗಳ ಅಬ್ಬರದ ಪ್ರಚಾರಗಳಿಂದ ಪ್ರಭಾವಿತರಾಗಿ ಅನೇಕ ಮಂದಿ ಇಸ್ರೇಲ್‌ನ ಬೆಂಬಲಿಗರಾಗಿ ಮಾರ್ಪಟ್ಟಿರಬಹುದು. ಅಥವಾ ಕನಿಷ್ಠ ಪಕ್ಷ ಇಸ್ರೇಲ್ ಕುರಿತು ತಮ್ಮ ಸರಕಾರದ ನಿಲುವು ಸರಿ ಎಂದು ನಂಬಿರಬಹುದು. ಆದರೆ ಇತ್ತೀಚಿನ ವರ್ಷಗಳಲ್ಲಿ ಪರಿಸ್ಥಿತಿ ಬದಲಾಗುತ್ತಿದೆ.

**ಯುರೋಪ್ ಮತ್ತು ಅಮೆರಿಕದಲ್ಲಿ ಕಣ್ಣು ತೆರೆಯುತ್ತಿರುವ ಹೊಸ ಪೀಳಿಗೆ**

28 ಸದಸ್ಯ ರಾಷ್ಟ್ರಗಳಿರುವ ಯುರೋಪಿಯನ್ ಒಕ್ಕೂಟದ ಎಲ್ಲ ದೇಶಗಳು ಇಸ್ರೇಲ್ – ಫೆಲೆಸ್ತೀನ್ ಬಿಕ್ಕಟ್ಟಿನ ಕುರಿತಂತೆ ಒಕ್ಕೊರಲಿನಿಂದ ಸ್ಪಷ್ಟವಾಗಿ ಒಂದು ಸಮಾನ ತೀರ್ಮಾನಕ್ಕೆ ಬರಲು ಕೆಲವು ವರ್ಷಗಳ ಸಮಯ ಬೇಕಾದೀತು. ವಿಶೇಷವಾಗಿ ಯಹೂದಿಗಳ ಸಾಮೂಹಿಕ ಹತ್ಯಾಕಾಂಡದಲ್ಲಿ ಹೆಚ್ಚು ಸಕ್ರಿಯ ಪಾತ್ರ ವಹಿಸಿದ್ದ ದೇಶಗಳು ತಮ್ಮ ಅಪರಾಧ ಪ್ರಜ್ಞೆ ಮತ್ತು ಅದರಿಂದ ಪ್ರೇರಿತ ಅಸಂತುಲಿತ ಧೋರಣೆಗಳಿಂದ ಹೊರಬಂದು ನ್ಯಾಯೋಚಿತ ನಿಲುವು ತಾಳುವುದಕ್ಕೆ ಬರುವುದಕ್ಕೆ ಇನ್ನಷ್ಟು ಸಮಯ ತಗಲಬಹುದು. ಆದರೆ ಆ ನಿಟ್ಟಿನಲ್ಲಿ ಪ್ರಯಾಣ ಖಂಡಿತ ಆರಂಭವಾಗಿದೆ. ಇಸ್ರೇಲ್ ವಿಷಯದಲ್ಲಿ ಈಗಾಗಲೇ ಹೆಚ್ಚಿನೆಲ್ಲ ಯುರೋಪಿಯನ್ ದೇಶಗಳು ಅಮೆರಿಕಕ್ಕಿಂತ ತುಂಬಾ ಭಿನ್ನವಾದ ನಿಲುವನ್ನು ತಾಳಲು ಆರಂಭಿಸಿವೆ. ಈ ವರ್ಷ ಜಗತ್ತಿನ ಕಣ್ಣ ಮುಂದೆಯೇ ಇಸ್ರೇಲ್ ಪಡೆಗಳು ಫೆಲೆಸ್ತೀನ್ ನಾಗರಿಕರ ಮೇಲೆ ನಡೆಸಿದ ದಾಳಿಗಳ ದೃಶ್ಯಾವಳಿ ಸಾಮಾಜಿಕ ಮಾಧ್ಯಮಗಳ ಮೂಲಕ ಯೂರೋಪಿನ ಜನರಿಗೆ ತಲುಪಿದಾಗ ಅವರಲ್ಲಿ ಅನೇಕರು ಆ ಕುರಿತು ಆಘಾತ ಪ್ರಕಟಿಸಿದ್ದಾರೆ. ನಾವೇಕೆ ಈ ಅನ್ಯಾಯವನ್ನು ಬೆಂಬಲಿಸುತ್ತಿದ್ದೇವೆ? ಎಂದು ಪ್ರಶ್ನಿಸುವವರ ಸಂಖ್ಯೆ ಅಲ್ಲಿ ಹೆಚ್ಚುತ್ತಿದೆ.

2018 ರಲ್ಲಿ ಸಿಎನ್ಎನ್ (CNN) ಪ್ರಾಯೋಜಕತ್ವದಲ್ಲಿ ಕಾಮ್ ರೆಸ್ (ComRes) ಸಂಸ್ಥೆಯವರು ಒಂದು ಸಮೀಕ್ಷೆ ನಡೆಸಿದ್ದರು. ಯೂರೋಪಿನ

7 ಪ್ರಮುಖ ದೇಶಗಳ ವಿವಿಧ ಜನವರ್ಗಗಳನ್ನು ಪ್ರತಿನಿಧಿಸುವ 7,000 ಮಂದಿಯನ್ನು ಒಳಗೊಂಡ ಈ ಸಮೀಕ್ಷೆಯಲ್ಲಿ ಎಷ್ಟು ಮಂದಿ ಯುರೋಪಿಯನ್ನರು ಇಸ್ರೇಲ್ ಪರ ಅಭಿಪ್ರಾಯ ತಾಳಿದ್ದಾರೆಂದು ಅರಿಯುವ ಪ್ರಯತ್ನ ನಡೆದಿತ್ತು. ಈ ಸಮೀಕ್ಷೆಯಿಂದ ಒಂದು ವಿಷಯ ಬಹಳ ಸ್ಪಷ್ಟವಾಗಿ ಪ್ರಕಟವಾಯಿತು. 65 ವರ್ಷದ ಆಸುಪಾಸಿನ ವಯೋಮಾನದವರಲ್ಲಿ 57ಶೇ. ಮಂದಿ ಇಸ್ರೇಲ್ ಪರವಾದ ನಿಲುವು ತಾಳಿದ್ದರು. ಆದರೆ ಸರಾಸರಿ 35 ವರ್ಷ ವಯಸ್ಸಿನವರಲ್ಲಿ ಕೇವಲ 32ಶೇ. ಮಂದಿ ಮಾತ್ರ ಇಸ್ರೇಲ್ ಬಗ್ಗೆ ಸದಭಿಪ್ರಾಯ ಉಳ್ಳವರಾಗಿದ್ದರು. ಅಂದರೆ ಇಸ್ರೇಲ್ ಕುರಿತು ಹೊಸ ಪೀಳಿಗೆಯ ಅಭಿಪ್ರಾಯ ಹಿಂದಿನ ಪೀಳಿಗೆಗಿಂತ ತೀರಾ ಭಿನ್ನವಾಗಿತ್ತು. 2021ರ ಮೇ ತಿಂಗಳ ಘಟನಾವಳಿಗಳು ಫೆಲೆಸ್ತೀನ್ ಕುರಿತು ಜನರ ಸಹಾನುಭೂತಿಯನ್ನು ಬಹಳಷ್ಟು ಹೆಚ್ಚಿಸಿವೆ. ಯುರೋಪಿನಲ್ಲಿ ಎಷ್ಟೋ ಕಡೆ, ಸರಕಾರಗಳು ಸಾಂಪ್ರದಾಯಿಕವಾಗಿ ಇಸ್ರೇಲನ್ನು ಬೆಂಬಲಿಸುತ್ತಾ ಬಂದಿದ್ದರೂ ಸಮಾಜದಲ್ಲಿ, ಜನಸಾಮಾನ್ಯರು, ಅದರಲ್ಲೂ ವಿಶೇಷವಾಗಿ ಹೊಸ ಪೀಳಿಗೆಯವರು ಇಸ್ರೇಲ್‌ನ ದೌರ್ಜನ್ಯ ನೀತಿಯ ವಿರುದ್ಧ ಅಸಮಾಧಾನ ವ್ಯಕ್ತ ಪಡಿಸುತ್ತಿದ್ದಾರೆ. ಆ ಸಮಾಜಗಳಲ್ಲೀಗ ಇಸ್ರೇಲ್– ಫೆಲೆಸ್ತೀನ್ ಬಿಕ್ಕಟ್ಟಿನ ಕುರಿತಾದ ಸಂವಾದಗಳಲ್ಲಿ ವರ್ಣಭೇದ, ಸಾಮೂಹಿಕ ಹತ್ಯಾಕಾಂಡ, ಜನಾಂಗೀಯ ಶುದ್ಧೀಕರಣ ಮುಂತಾದ ಪದಗಳು ದೊಡ್ಡ ಪ್ರಮಾಣದಲ್ಲಿ ಚರ್ಚೆಗೆ ಬರುತ್ತಿವೆ.

ಅತ್ತ ಅಮೆರಿಕದಲ್ಲೂ ಇಸ್ರೇಲ್‌ನ ಕ್ರೌರ್ಯಗಳ ವಿರುದ್ಧ ಅಸಮಾಧಾನ ವೃದ್ಧಿಸುತ್ತಿದೆ. 2019ರಲ್ಲಿ ಮೇರಿ ಲ್ಯಾಂಡ್ ವಿಶ್ವವಿದ್ಯಾಲಯದ ವತಿಯಿಂದ ನಡೆಸಲಾದ ಸಮೀಕ್ಷೆಯೊಂದರಲ್ಲಿ ತಿಳಿದು ಬಂದಂತೆ, ಅಲ್ಲಿನ ಡೆಮೋಕ್ರಾಟ್ ಪಕ್ಷದಲ್ಲಿ 66ಶೇ. ಮಂದಿ ಇಸ್ರೇಲ್ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೆಂದು ಆಗ್ರಹಿಸುತ್ತಾರೆ. ಇಸ್ರೇಲ್ ಪಾಲಿಗೆ ಸದಾ ಹೆತ್ತ ತಾಯಿಯಂತಿರುವ ರಿಪಬ್ಲಿಕನ್ ಪಕ್ಷದೊಳಗೂ 23ಶೇ. ಮಂದಿ, ಇಸ್ರೇಲ್ ವಿರುದ್ಧ ವಿವಿಧ ಬಗೆಯ ದಿಗ್ಬಂಧನಗಳನ್ನು ಹೇರಬೇಕೆಂಬ ನಿಲುವು ತಾಳಿದ್ದಾರೆ. ಟ್ರಂಪ್ ಸೋಲು ನಿಜವಾಗಿ ಜನಾಭಿಪ್ರಾಯವು ಇಸ್ರೇಲ್ ವಿರುದ್ಧ ಹಾಗೂ ಫೆಲೆಸ್ತೀನ್ ಪರ ವಾಲುತ್ತಿರುವುದರ ಸೂಚನೆಯಾಗಿದೆ. ಈ ವರ್ಷ ಮೇ ತಿಂಗಳಲ್ಲಿ ಅಮೆರಿಕದ ಹೆಚ್ಚಿನೆಲ್ಲ ಭಾಗಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನರು ಬೀದಿಗಿಳಿದು ಇಸ್ರೇಲ್ ಅನ್ನು ಖಂಡಿಸಿ ಫೆಲೆಸ್ತೀನ್ ಜನತೆಗೆ ತಮ್ಮ ಬೆಂಬಲ ಪ್ರಕಟಿಸಿದ್ದಾರೆ. ಇಂತಹ ಪ್ರತಿಭಟನೆಗಳು ಹಿಂದೆಯೂ ನಡೆದಿವೆಯಾದರೂ ಈಬಾರಿಯ ಪ್ರತಿಭಟನೆಯಲ್ಲಿ ಪಾಲುಗೊಂಡವರ ಸಂಖ್ಯೆ ಮತ್ತು ಅವರ ತೀರಾ ವಿಭಿನ್ನ ಹಿನ್ನೆಲೆ ಇಸ್ರೇಲ್ ಪರ ಗುಂಪುಗಳನ್ನು ಕಳವಳಕ್ಕೀಡು ಮಾಡುವ ಸ್ವರೂಪದಲ್ಲಿತ್ತು. ಈ ಬಾರಿ

ಬೀದಿಗಿಳಿದವರಲ್ಲಿ ಅರಬ್ ಹಿನ್ನೆಲೆಯವರಿಗಿಂತ ಅಮೆರಿಕನ್ ಹಿನ್ನೆಲೆಯವರೇ ಹೆಚ್ಚಿನ ಸಂಖ್ಯೆಯಲ್ಲಿ ಎದ್ದು ಕಾಣುತ್ತಿದ್ದರು. ಹಲವೆಡೆ ಸಂಪ್ರದಾಯವಾದಿ ಯಹೂದಿಗಳೇ ಪ್ರತಿಭಟನೆಯ ಮುಂಚೂಣಿಯಲ್ಲಿದ್ದರು.

ಸಾಮಾನ್ಯವಾಗಿ ರಾಜಕೀಯ ವಿಷಯಗಳ ಕುರಿತು ಮಾತನಾಡಲು ನಿರಾಕರಿಸುವ ಅನೇಕ ಕಲಾವಿದರು, ಉದ್ಯಮಿಗಳು ಮತ್ತು ವಿವಿಧ ಸಾಮುದಾಯಿಕ, ಜನಾಂಗೀಯ ಗುಂಪುಗಳ ನಾಯಕರು ಇಸ್ರೇಲ್ ವಿರುದ್ಧ ಗಟ್ಟಿಯಾಗಿ ಮಾತನಾಡಿದ್ದಾರೆ. ಕರಿಯ ಜನಾಂಗದವರ ಹೆಚ್ಚಿನ ಸಂಘಟನೆಗಳು ಅಸಾಮಾನ್ಯ ಉತ್ಸಾಹದೊಂದಿಗೆ ಪ್ರತಿಭಟನೆಯಲ್ಲಿ ಭಾಗವಹಿಸಿವೆ. ಎಲ್ಲಕ್ಕಿಂತ ಮುಖ್ಯವಾಗಿ, ಈ ಬಾರಿ ತೀರಾ ಭಿನ್ನ ಹಿನ್ನೆಲೆಯ ಹಲವು ಗುಂಪುಗಳು ಇಸ್ರೇಲ್ ವಿರುದ್ಧ ಒಂದು ದೀರ್ಘಕಾಲೀನ ಹೋರಾಟಕ್ಕಾಗಿ ಪರಸ್ಪರ ಕೈಜೋಡಿಸಿವೆ.

**ಬಿಕ್ಕಟ್ಟು ಬಗೆಹರಿಯುವ ಸಾಧ್ಯತೆಗಳು**

ಈ ಜಗತ್ತಿನಲ್ಲಿ ಯಾವ ಬಿಕ್ಕಟ್ಟೂ ಶಾಶ್ವತವಲ್ಲ. ಎಷ್ಟು ಸಂಕೀರ್ಣವಾಗಿರುವ ಬಿಕ್ಕಟ್ಟು ಕೂಡಾ ಬಗೆಹರಿಯುವ ಸಾಧ್ಯತೆ ಇದೆ. ಆದರೆ ಅದಕ್ಕೆ ಕೆಲವು ಶರತ್ತುಗಳಿವೆ. ಉದಾ: ಪರಸ್ಪರ ಘರ್ಷಣೆಯಲ್ಲಿ ತೊಡಗಿರುವ ಎರಡೂ ಪಕ್ಷಗಳು ಪ್ರಾಮಾಣಿಕವಾಗಿ ಪರಿಹಾರ ಬಯಸಬೇಕು ಮತ್ತು ನ್ಯಾಯ ಇಲ್ಲದೆ ಶಾಂತಿ ಇಲ್ಲ ಎಂಬ ವಿಶ್ವ ಮಾನ್ಯ ಮೂಲ ಸೂತ್ರವನ್ನು ಒಪ್ಪಿಕೊಳ್ಳಬೇಕು. ಪರಿಹಾರವು, ಕೇವಲ ತಾತ್ಕಾಲಿಕ ಯುದ್ಧವಿರಾಮದ ಸ್ವರೂಪದ್ದಾಗಲಿ, ಸಮಸ್ಯೆಯ ಮೂಲವನ್ನು ಕಡೆಗಣಿಸುವ ತೇಪೆ ಸ್ವರೂಪದ್ದಾಗಲಿ ಆಗಿರಬಾರದು. ಪರಿಹಾರವು, ಒಂದು ದುರ್ಬಲ ಪಕ್ಷದ ಅಸಹಾಯಕತೆಯನ್ನು ಶೋಷಿಸಿ ಅವರ ಮೇಲೆ ಒಂದು ಏಕಪಕ್ಷೀಯ ಪರಿಹಾರ  ಸೂತ್ರವನ್ನು ಬಲವಂತವಾಗಿ ಹೇರುವ ರೂಪದಲ್ಲಿರಬಾರದು. ಶಾಂತಿ ಒಪ್ಪಂದವು ಎರಡೂ ಕಡೆಯ ತೀವ್ರವಾದಿಗಳನ್ನು ಬದಿಗಿಟ್ಟು, ಎರಡೂ ಕಡೆಯ ಜನಸಾಮಾನ್ಯರ ಮಧ್ಯೆ ಮಾನ್ಯತೆ ಇರುವ, ಮಾಧ್ಯಮ ನಿಲುವಿನ ಗುಂಪುಗಳ ನಡುವೆ ನಡೆಯಬೇಕು. ಎರಡೂ ಕಡೆಯವರು ತಾವು ತಮ್ಮ ಆಂತರಿಕ ಪ್ರೇಕ್ಷಕರನ್ನು ಮೆಚ್ಚಿಸಲು ಘೋಷಿಸಿಕೊಂಡಿರುವ ಅಮಿತಾಕಾಂಕ್ಷೆಯ ಅಜೆಂಡಾಗಳನ್ನು ತೊರೆದು, ಐತಿಹಾಸಿಕ ಮತ್ತು ಸಮಕಾಲೀನ ವಾಸ್ತವಗಳನ್ನು ಮುಂದಿಟ್ಟುಕೊಂಡು ಪ್ರಾಯೋಗಿಕ ಹಾಗೂ ವ್ಯಾವಹಾರಿಕ ಪರಿಹಾರಗಳನ್ನು ಮುಕ್ತವಾಗಿ ಪರಿಗಣಿಸಬೇಕು.

ಅಂತರ್‌ರಾಷ್ಟ್ರೀಯ ಸಮುದಾಯವು ಒಬ್ಬರ ಪಾಲಿಗೆ ತಾಯಿ ಮತ್ತು ಇನ್ನೊಬ್ಬರ ಪಾಲಿಗೆ ಹಂತಕನಾಗದೆ, ನ್ಯಾಯೋಚಿತ ಆಯ್ಕೆಗಳನ್ನು ಮುಂದಿಡಬೇಕು.

ಬಿಕ್ಕಟ್ಟನ್ನು ಬಗೆಹರಿಸುವ ನಿಟ್ಟಿನಲ್ಲಿ ಈ ವರೆಗೆ ಹಲವಾರು ಪರಿಹಾರ ಸೂತ್ರಗಳು ಮುಂದೆ ಬಂದಿವೆ. ಆ ಪೈಕಿ 'ಏಕ ರಾಷ್ಟ್ರ' ಸೂತ್ರ ಮತ್ತು 'ದ್ವಿರಾಷ್ಟ್ರ' ಸೂತ್ರಗಳು ಅತ್ಯಧಿಕವಾಗಿ ಚರ್ಚಿಸಲ್ಪಟ್ಟಿವೆ. 'ಏಕ ರಾಷ್ಟ್ರ' ಸೂತ್ರ ಅಂದರೆ ಸದ್ಯ ಇಸ್ರೇಲ್ ಅಧೀನದಲ್ಲಿರುವ ಸಂಪೂರ್ಣ ಪ್ರದೇಶದಲ್ಲಿ ಯಹೂದಿಗಳು ಮತ್ತು ಅರಬಿಗಳಿಗೆ ಸಮಾನ ಸ್ಥಾನಮಾನವಿರುವ ಒಂದು ಪ್ರಜಾಸತ್ತಾತ್ಮಕ ಸರಕಾರವನ್ನು ಸ್ಥಾಪಿಸುವುದು ಮತ್ತು ಒಂದು ಸೆಕ್ಯುಲರ್ ಸಂವಿಧಾನದ ಅಡಿಯಲ್ಲಿ ಚುನಾಯಿತ ಪ್ರತಿನಿಧಿಗಳು ಆಡಳಿತ ನಡೆಸುವುದು. ಪ್ರಸ್ತುತ ಏಕ ರಾಷ್ಟ್ರ ಸೂತ್ರವನ್ನು ಒಪ್ಪಲು ಇಸ್ರೇಲ್ ಮತ್ತು ಯಹೂದಿ ಬಹುಸಂಖ್ಯಾತರು ಖಂಡಿತ ತಯಾರಿಲ್ಲ. ಅದಕ್ಕೆ ಒಪ್ಪಿದರೆ, ಬಹಳ ಕಷ್ಟಪಟ್ಟು ನಿರ್ಮಿಸಲಾಗಿರುವ ಜಗತ್ತಿನ ಏಕಮಾತ್ರ ಯಹೂದಿ ರಾಷ್ಟ್ರವೇ ಇಲ್ಲವಾಗಿ ಬಿಡುತ್ತದೆ ಮತ್ತು ಪ್ರಜಾಸತ್ತೆಯಲ್ಲಿ ಎಲ್ಲವೂ ಬಹುಮತದ ಆಧಾರದಲ್ಲಿ ತೀರ್ಮಾನವಾಗುವುದರಿಂದ ಅರಬ್ ಬಾಹುಳ್ಯದ ಮುಂದೆ ಯಹೂದಿಗಳು ಅಲ್ಪ ಸಂಖ್ಯಾತರಾಗಿ ಮಾರ್ಪಟ್ಟು ತಮ್ಮ ಪ್ರಾಬಲ್ಯ ಕಳೆದುಕೊಳ್ಳಬೇಕಾಗುತ್ತದೆ ಎಂಬುದು ಅವರ ಆಶಂಕೆ.

'ದ್ವಿರಾಷ್ಟ್ರ' ಸೂತ್ರವೆಂದರೆ ಸದ್ಯ ಇಸ್ರೇಲ್ ಅಧೀನದಲ್ಲಿರುವ ಭೂಭಾಗವನ್ನು ವಿಭಜಿಸಿ ಒಂದು ಭಾಗವನ್ನು ಯಹೂದಿಗಳಿಗೆ ಮತ್ತು ಇನ್ನೊಂದು ಭಾಗವನ್ನು ಅರಬರಿಗೆ ನೀಡಿ ಅಕ್ಕ ಪಕ್ಕದಲ್ಲೇ ಎರಡು ಸ್ವತಂತ್ರ, ಸಾರ್ವಭೌಮ ದೇಶಗಳನ್ನು ಸ್ಥಾಪಿಸುವುದು. ಮೇಲ್ನೋಟಕ್ಕೆ ತುಂಬಾ ಸರಳ ಹಾಗೂ ವ್ಯಾವಹಾರಿಕವೆಂಬಂತೆ ಕಾಣುವ ಈ ಸೂತ್ರಕ್ಕೆ ಇಸ್ರೇಲ್ ಮತ್ತು ಫೆಲೆಸ್ತೀನ್‌ಗಳೊಳಗೆ ಮಾತ್ರವಲ್ಲದೆ ಜಾಗತಿಕ ಮಟ್ಟದಲ್ಲೂ ಸಾಕಷ್ಟು ಬೆಂಬಲ ಕಂಡು ಬರುತ್ತದೆ. ಆದರೆ ಭೂಮಿಯ ಯಾವ ಭಾಗಗಳು, ಪ್ರಸ್ತುತ ಎರಡು ದೇಶಗಳ ಪೈಕಿ ಯಾವ ದೇಶಕ್ಕೆ ಸೇರಬೇಕು ಎಂಬೊಂದು ಭಾರೀ ಸಂಕೀರ್ಣ ಪ್ರಶ್ನೆ ಇದೆ. ಎರಡೂ ಕಡೆಯವರು ಅಪಾರ ಔದಾರ್ಯದ ನಿಲುವು ತಾಳದಿದ್ದರೆ ಇದು ಎಂದೂ ಬಗೆಹರಿಸಲಾಗದ ಯಕ್ಷ ಪ್ರಶ್ನೆಯಾಗಿಯೇ ಉಳಿಯಲಿದೆ.

ಕಳೆದ ಏಳು ದಶಕಗಳ ಅವಧಿಯಲ್ಲಿ ಫೆಲೆಸ್ತೀನ್‌ನಿಂದ ಹೊರ ದಬ್ಬಲ್ಪಟ್ಟು ಜಗತ್ತಿನ ವಿವಿಧ ದೇಶಗಳಲ್ಲಿ ಆಶ್ರಯ ಪಡೆದಿರುವ ಲಕ್ಷಾಂತರ ಫೆಲೆಸ್ತೀನಿಗಳ ಪುನರ್ವಸತಿಯ ಪ್ರಶ್ನೆಯು ಪ್ರಸ್ತುತ ಎರಡು ಸೂತ್ರಗಳ ಪೈಕಿ ಯಾವುದೇ ಸೂತ್ರದ ಅನುಷ್ಠಾನದ ಹಾದಿಯಲ್ಲಿ ಅತಿದೊಡ್ಡ ಸವಾಲಾಗಿದೆ.

### ತದ್ವಿರುದ್ಧ ಚರಮ ಸೀಮೆಗಳು

ಜಗತ್ತಿನ ಎಲ್ಲ ಶಾಂತಿಪ್ರಿಯರನ್ನು ಕಳವಳಕ್ಕೆ ಕೆಡವಿರುವ ಫೆಲೆಸ್ತೀನ್–ಇಸ್ರೇಲ್ ಬಿಕ್ಕಟ್ಟಿನ ಪರಿಹಾರದ ಹಾದಿಯಲ್ಲಿ ಎರಡು ದೊಡ್ಡ ತೊಡಕುಗಳಿವೆ.

ಮೊದಲನೆಯದಾಗಿ, ಮಾತುಕತೆಗಳ ಮೂಲಕ ಪರಿಹಾರ ಕಂಡುಕೊಳ್ಳಬೇಕಿದ್ದರೆ ಎರಡೂ ಬಣಗಳ ನೈಜ ಪ್ರತಿನಿಧಿಗಳನ್ನುಗುರುತಿಸುವುದು ಅನಿವಾರ್ಯವಾಗಿದ್ದು, ಸದ್ಯ ಈ ವಿಷಯದಲ್ಲಿ ಎರಡೂ ಕಡೆ ಬಹಳಷ್ಟು ಗೊಂದಲ ಮತ್ತು ಅಸ್ಪಷ್ಟತೆ ಇದೆ. ಇಸ್ರೇಲ್‌ನ ಯಹೂದಿ ಸಮುದಾಯ ಸೈದ್ಧಾಂತಿಕ ಹಾಗೂ ರಾಜಕೀಯವಾಗಿ ತುಂಬಾ ವಿಚ್ಛಿದ್ರವಾಗಿದೆ. ಅಲ್ಲಿನ ಹೆಚ್ಚಿನೆಲ್ಲ ಬಣಗಳು ಮೂಲತಃ ಝಿಯೋನಿಝುಮ್‌ಗೆ ನಿಷ್ಠವಾಗಿದ್ದರೂ ಧರ್ಮದೊಳಗಿನ ಆಂತರಿಕ ವಿವಾದಗಳ ಆಧಾರದಲ್ಲಿ ಹಾಗೂ ಝಿಯೋನಿಝುಮ್‌ನ ವ್ಯಾಖ್ಯೆ, ವಿಶ್ಲೇಷಣೆ ಇತ್ಯಾದಿಗಳ ಆಧಾರದಲ್ಲಿ ಅಲ್ಲಿ ಹತ್ತಾರು ಪಂಥ, ಉಪಪಂಥಗಳು ತಲೆ ಎತ್ತಿದ್ದು ಅವುಗಳ ನಡುವೆ ತೀವ್ರ ಪೈಪೋಟಿ ಇದೆ. ಇತ್ತೀಚೆಗಷ್ಟೇ ಕೇವಲ ಎರಡು ವರ್ಷಗಳಲ್ಲಿ ನಾಲ್ಕು ಮಹಾ ಚುನಾವಣೆಗಳನ್ನು ನಡೆಸಿದ  ಅನುಭವವಿರುವ ದೇಶ ಅದು. ಇದು ಇಂದು ನಿನ್ನೆಯ ಬೆಳವಣಿಗೆಯೇನಲ್ಲ. 1969ರಲ್ಲಿ ಇಸ್ರೇಲ್ ಪ್ರಧಾನಿಯಾಗಿದ್ದ ಗೋಲ್ಡಾ ಮೀರ್, ಒಮ್ಮೆ ತಮ್ಮ ಕಾಲದ ಅಮೆರಿಕದ ಅಧ್ಯಕ್ಷ ರಿಚರ್ಡ್ ನಿಕ್ಸನ್ ಅವರೊಡನೆ ಮಾತನಾಡುತ್ತ, "ನೀವು 15 ಕೋಟಿ ಅಮೆರಿಕನ್ನರ ಅಧ್ಯಕ್ಷರಾದರೆ ನಾನು ಇಸ್ರೇಲಿನ 60 ಲಕ್ಷ ಪ್ರಧಾನ ಮಂತ್ರಿಗಳ ಪ್ರಧಾನಮಂತ್ರಿಯಾಗಿದ್ದೇನೆ" ಎನ್ನುವ ಮೂಲಕ ಇಸ್ರೇಲ್‌ನಲ್ಲಿ ಜನಮತ ಎಷ್ಟು ಛಿದ್ರವಾಗಿದೆ ಎಂಬುದನ್ನು ಸೂಚಿಸಿದ್ದರಂತೆ.

ಅತ್ತ ಫೆಲೆಸ್ತೀನ್ ಪಾಳಯದಲ್ಲೂ ಹಲವು ಗುಂಪುಗಳು ಪರಸ್ಪರರನ್ನೇ ಪರಮ ಶತ್ರುಗಳಾಗಿ ಕಾಣುತ್ತಾ ತದ್ವಿರುದ್ಧ ದಿಕ್ಕಿನಲ್ಲಿ ನಡೆಯುತ್ತಿವೆ. ಅಲ್ಲಿ ಫತಹ್ ಮತ್ತು ಹಮಾಸ್ ಎಂಬ ಎರಡು ಪ್ರಮುಖ ಹಾಗೂ ಹಳೆಯ ಪ್ರತಿಸ್ಪರ್ಧಿಗಳಲ್ಲದೆ ಇನ್ನೂ ಹತ್ತಾರು ಪಕ್ಷ ಪಂಗಡಗಳಿವೆ. ಆ ಪಕ್ಷಗಳ ಬೆಂಬಲಿಗ ದೇಶಗಳ ಪಟ್ಟಿ ಕೂಡ ಭಿನ್ನವಾಗಿದೆ. ಫೆಲೆಸ್ತೀನ್‌ನ ಆಂತರಿಕ ರಾಜಕೀಯ ಬಿಕ್ಕಟ್ಟಿನ ಪರಿಹಾರಕ್ಕಾಗಿ ಈ ವರ್ಷ ಫೆಬ್ರವರಿಯಲ್ಲಿ ಕೈರೋದಲ್ಲಿ ನಡೆದ ಮಾತುಕತೆಯಲ್ಲಿ 14 ಪಂಗಡಗಳು ಭಾಗವಹಿಸಿದ್ದವು. ಇಷ್ಟೆಲ್ಲಾ ಪಂಗಡಗಳಿರುವ ಒಂದು ಪಾಳಯದ ಜೊತೆ ಮಾತುಕತೆ ನಡೆಸಬೇಕಿದ್ದರೆ ಅವರ ಪೈಕಿ ಯಾರನ್ನು ಪ್ರತಿನಿಧಿಯಾಗಿ ಪರಿಗಣಿಸಬೇಕೆಂಬ ಜಟಿಲ ಪ್ರಶ್ನೆ ಎದುರಾಗುತ್ತದೆ. ಸದ್ಯ ಹಮಾಸ್ ಪಂಗಡವು ಫೆಲೆಸ್ತೀನ್ ಜನತೆಯ ಮಧ್ಯೆ ಅತ್ಯಧಿಕ ಮಾನ್ಯತೆ ಇರುವ ಪಂಗಡ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಹಿಂದೊಮ್ಮೆ ಫತಹ್ ಪಕ್ಷ ಮತ್ತು ಅದರ ಮಾತೃ ಸಂಸ್ಥೆಯಾದ  ಪಿಎಲ್‌ಒ ಜನಪ್ರಿಯವಾಗಿದ್ದಾಗ ಅವುಗಳನ್ನು ಭಯೋತ್ಪಾದಕ ಸಂಘಟನೆಗಳೆಂದು ಹೆಸರಿಸಿದ್ದ ಇಸ್ರೇಲ್ ಮತ್ತು ಅಮೆರಿಕ ಇದೀಗ ಆ ಕಿರೀಟವನ್ನು ಹಮಾಸ್ ತಲೆಗೆ ಕಟ್ಟಿದೆ. ಹಮಾಸ್ ಅನ್ನು ಫೆಲೆಸ್ತೀನ್ ಪ್ರತಿನಿಧಿಯೆಂದು ಅಂಗೀಕರಿಸಿ ಅದರ ಜೊತೆ ಮಾತುಕತೆ

ಆರಂಭಿಸಬೇಕಿದ್ದರೆ ಆ ಕಿರೀಟವನ್ನು ಕಿತ್ತೊಗೆಯ ಬೇಕಾಗುತ್ತದೆ.

ಎರಡನೆಯದಾಗಿ, ಎರಡೂ ಕಡೆಯಲ್ಲಿ ಕಂಡು ಬರುವ ವಿಪರೀತ ಆದರ್ಶವಾದಿ, ಭಾವುಕ ಮತ್ತು ಭ್ರಾಮಕ ನಿಲುವುಗಳು ಯಾವುದೇ ಪರಿಹಾರದ ನಿಟ್ಟಿನಲ್ಲಿರುವ ಅತಿದೊಡ್ಡ ತೊಡಕಾಗಿ ಪರಿಣಮಿಸಿದ್ದು ಯಾವುದೇ ರಾಜಿ ಪ್ರಕ್ರಿಯೆಯು ಒಂದಿಂಚಿನಷ್ಟು ಕೂಡಾ ಮುನ್ನಡೆಯದಂತೆ ನೋಡಿಕೊಂಡಿವೆ. ಒಂದು ಕಡೆ ಇಸ್ರೇಲ್‌ನಲ್ಲಿ ಒಂದು ಬಲಿಷ್ಠ ವರ್ಗವು 'ಗ್ರೇಟರ್ ಇಸ್ರೇಲ್' ಎಂಬ ಭ್ರಮೆಯನ್ನು ಬೆನ್ನಟ್ಟುತ್ತಿದೆ. ಬೈಬಲ್‌ನ ಹಳೆಯ ಒಡಂಬಡಿಕೆಯಲ್ಲಿ ಯಹೂದಿಗಳಿಗೆಂದು ದೇವರು ವಾಗ್ದಾನ ಮಾಡಿರುವ ಸಾಮ್ರಾಜ್ಯವನ್ನು ಸ್ಥಾಪಿಸುವುದು ಅವರ ಗುರಿಯಾಗಿದೆ. ಅವರ ಕನಸಿನ 'ಗ್ರೇಟರ್ ಇಸ್ರೇಲ್' ಇರಾಕ್, ಈಜಿಪ್ಟ್, ಸಿರಿಯಾ, ಜೋರ್ಡನ್, ಸೌದಿ ಅರೇಬಿಯಾ ಮತ್ತು ಲೆಬನಾನ್ ದೇಶಗಳ ಬಹುಭಾಗವನ್ನು ಒಳಗೊಳ್ಳುವಷ್ಟು ವಿಶಾಲವಾಗಿದೆ. ಅಮೆರಿಕದ ದೂರಗಾಮಿ, ವಿಸ್ತರಣವಾದಿ ಅಜೆಂಡಾದಲ್ಲಿ ಪ್ರಸ್ತುತ ಕನಸಿಗೆ ಮಹತ್ವದ ಸ್ಥಾನವಿದೆ. ಕಳೆದ ಶತಮಾನದ ಆರಂಭದಲ್ಲಿ ಒಂದು ತಮಾಷೆಯ ರೂಪದಲ್ಲಿ ಚರ್ಚೆಗೆ ಬರುತ್ತಿದ್ದ 'ಗ್ರೇಟರ್ ಇಸ್ರೇಲ್' ಕನಸು, ಇತ್ತೀಚಿನ ದಶಕಗಳ ಕೆಲವು ಬೆಳವಣಿಗೆಗಳ ಹಿನ್ನೆಲೆಯಲ್ಲಿ ಬಹಳ ಗಂಭೀರ ಸ್ವರೂಪವನ್ನು ಪಡೆದುಕೊಂಡಿವೆ. ಬಿಕ್ಕಟ್ಟನ್ನು ಬಗೆಹರಿಸುವ ಬದಲು ಅದನ್ನು ನೂರಾರು ಪಟ್ಟು ಜಟಿಲಗೊಳಿಸಲು ಉತ್ಸುಕರಾಗಿರುವ ಇಂತಹ ಕನಸುಗಳ ಪೋಷಕರು ಸಹಜವಾಗಿಯೇ ಶಾಂತಿ ಪ್ರಕ್ರಿಯೆಯ ಪಾಲಿಗೆ ದೊಡ್ಡ ಸವಾಲಾಗಿರುತ್ತಾರೆ. ಆ ಕಡೆ ಫೆಲೆಸ್ತೀನ್‌ನಲ್ಲಿ ಮತ್ತು ಅರಬ್ ದೇಶಗಳಲ್ಲಿ ಕೂಡಾ ಒಂದು ದೊಡ್ಡ ವರ್ಗವು ಇನ್ನೊಂದು ಚರಮ ಸೀಮೆಯಲ್ಲಿ ನಿಂತಿದೆ. ಈಗಲೂ ಅವರು ಇಸ್ರೇಲ್ ಎಂಬ ಸರಕಾರದ ಅಸ್ತಿತ್ವಕ್ಕೆ ಮನ್ನಣೆ ನೀಡಲು ಸಾಧ್ಯವಿಲ್ಲ ಎಂಬ ತಮ್ಮ ಹಳೆಯ ನಿಲುವಿಗೆ ಅಂಟಿಕೊಂಡಿದ್ದಾರೆ. 'ಗ್ರೇಟರ್ ಇಸ್ರೇಲ್' ಎಂಬ ಸ್ವಪ್ನವು ಯಹೂದಿಗಳನ್ನು ಯಾವುದೇ ಮಾತುಕತೆಯಿಂದ ತಡೆದಿಡುವಂತೆ, ನಾವು ಇಸ್ರೇಲ್‌ನ ಅಸ್ತಿತ್ವವನ್ನೇ ಸಕ್ರಮವೆಂದು ಒಪ್ಪುವುದಿಲ್ಲ ಎಂಬ ಫೆಲೆಸ್ತೀನಿಗಳ ಹಠವು ಕೂಡಾ ಮಾತುಕತೆಯನ್ನು ಅಸಾಧ್ಯಗೊಳಿಸಿದೆ. ಹಮಾಸ್‌ನಂತಹ ಆದರ್ಶವಾದಿ ಪಕ್ಷಗಳು ತಾತ್ಕಾಲಿಕವಾಗಿಯಾದರೂ 1967ರ ಯುದ್ಧಕ್ಕಿಂತ ಮುಂಚಿನ ಇಸ್ರೇಲ್ ಗಡಿಗಳನ್ನು ಮಾನ್ಯ ಮಾಡಿದರೆ 'ದ್ವಿರಾಷ್ಟ್ರ' ಸೂತ್ರ ಸಹಿತ ಯಾವುದೇ ಸೂತ್ರದ ಕುರಿತು ಮಾತುಕತೆಗೆ ಒಂದು ಕನಿಷ್ಠ ಬುನಾದಿಯಾದರೂ ಲಭ್ಯವಾಗುತ್ತದೆ.

❖ ❖ ❖

## ಇಸ್ರೇಲ್ ಹೇಗೆ ಕ್ರಮೇಣ ಬೆಳೆಯಿತು?
## ಫೆಲೆಸ್ತೀನ್ ಹೇಗೆ ಕ್ರಮೇಣ ಅಳಿಯಿತು?

ಫೆಲೆಸ್ತೀನ್ ಎಂಬೊಂದು ದೇಶದಲ್ಲಿ ಯಾವ ರೀತಿ ಇಸ್ರೇಲ್ ಎಂಬ ಒಂದು ಹೊಸ ದೇಶವನ್ನು ಸೃಷ್ಟಿಸಿ ಬೆಳೆಸಲಾಯಿತು ಎಂಬ ಕಥೆಯ ಹಿಂದೆ ಬಹಳಷ್ಟು ಯೋಜನೆಗಳು, ಸಿದ್ಧತೆಗಳು, ಸಂಚುಗಳು ಮತ್ತು ಅನೇಕ ಹಿಂಸಾತ್ಮಕ ಕಾರ್ಯಾಚರಣೆಗಳು ಅಡಗಿವೆ. 1948 ರಲ್ಲಿ ಇಸ್ರೇಲ್ ಎಂಬ ದೇಶ ರಚಿತವಾದಾಗ ಫೆಲೆಸ್ತೀನ್ನ 80ಶೇ. ಕ್ಕೂ ಹೆಚ್ಚಿನ ನಾಗರಿಕರು, ರಾತ್ರಿ ಬೆಳಗಾಗುವುದರೊಳಗೆ ತಮ್ಮದೇ ನಾಡಿನಲ್ಲಿ ನಿರಾಶ್ರಿತರಾಗಿ ಬಿಟ್ಟರು. ನಿಜವಾಗಿ ಅದು 20ನೇ ಶತಮಾನದ ಆರಂಭದಲ್ಲಿ ಪ್ರಾರಂಭವಾದ ದೀರ್ಘ ಪ್ರಕ್ರಿಯೆಯ ಒಂದು ಪ್ರಮುಖ ಮೈಲುಗಲ್ಲಾಗಿತ್ತು. ಪ್ರಕ್ರಿಯೆ ಈಗಲೂ ಮುಂದುವರಿದಿದೆ.

ಇಸ್ರೇಲ್ ಎಂಬೊಂದು ದೇಶವನ್ನು ಸ್ಥಾಪಿಸಲಿಕ್ಕಾಗಿ ಝಿಯೋನಿಸ್ಟ್ ಪಡೆಗಳು ಫೆಲೆಸ್ತೀನ್ನ ಕೆಲವು ಪ್ರಮುಖ ನಗರಗಳ ಮೇಲೆ ದಾಳಿ ನಡೆಸಿದವು. 530 ಗ್ರಾಮಗಳನ್ನು ಸಂಪೂರ್ಣ ನಾಶಪಡಿಸಿಬಿಟ್ಟವು. 1948ರಲ್ಲಿ ಈ ಕಾರ್ಯಾಚರಣೆಯ ಫಲವಾಗಿ 13,000 ಫೆಲೆಸ್ತೀನ್ ನಾಗರಿಕರು ಹತರಾದರು. 7,50,000 ಫೆಲೆಸ್ತೀನಿ ನಾಗರಿಕರನ್ನು ಅವರ ಮನೆಗಳಿಂದ ಹೊರದಬ್ಬಲಾಯಿತು. ಅವರೆಲ್ಲಾ ನಿರಾಶ್ರಿತರಾಗಿ ಬಿಟ್ಟರು. ಇದು ಝಿಯೋನಿಸ್ಟರು ಯೋಜಿಸಿದ್ದ, ಫೆಲೆಸ್ತೀನ್ ಜನತೆಯನ್ನು

ಅವರ ನೆಲದಿಂದ ಹೊರದಬ್ಬುವ, ಜನಾಂಗೀಯ ಶುಚೀಕರಣದ ಪ್ರಕ್ರಿಯೆಯಲ್ಲಿ, ಆವರೆಗಿನ ಅತಿದೊಡ್ಡ ಕ್ರಮವಾಗಿತ್ತು. ಇಂದು ಇಂತಹ ನಿರಾಶ್ರಿತರು ಮತ್ತವರ ಸಂತತಿಗಳ ಒಟ್ಟು ಸಂಖ್ಯೆ 70 ಲಕ್ಷಕ್ಕಿಂತ ಅಧಿಕವಿದೆ. ಅವರಲ್ಲಿ ಅನೇಕರು ಅಕ್ಕಪಕ್ಕದ ಅರಬ್ ದೇಶಗಳಲ್ಲಿ ನಿರಾಶ್ರಿತರಾಗಿ ಬದುಕುತ್ತಿದ್ದಾರೆ. ಒಂದಿಲ್ಲೊಂದು ದಿನ ತಮಗೆ ತಮ್ಮ ತಾಯ್ನಾಡಿಗೆ ಮರಳುವ ಅವಕಾಶ ಸಿಕ್ಕೀತು ಎಂಬ ಆಶೆಯನ್ನು ಉಳಿಸಿಕೊಂಡಿದ್ದಾರೆ. ಎಲ್ಲೂ ಇಲ್ಲದಿದ್ದ ಇಸ್ರೇಲ್ ಎಂಬ ದೇಶ 50 ವರ್ಷಗಳಲ್ಲಿ ಹೇಗೆ ಕ್ರಮೇಣ ಬೆಳೆಯಿತು? ಮತ್ತು ಫೆಲೆಸ್ತೀನ್ ಎಂಬ ದೇಶ 50 ವರ್ಷಗಳಲ್ಲಿ ಹೇಗೆ ಕ್ರಮೇಣ ಅಳಿದು ಹೋಯಿತು? ಈ ಪ್ರಶ್ನೆಯ ಉತ್ತರವನ್ನು ಈ ಕೆಳಗಿನ ಚಾರ್ಟ್ ಚೆನ್ನಾಗಿ ವಿವರಿಸುತ್ತದೆ:

| ವರ್ಷ | ಅರಬರ ಅಧೀನದಲ್ಲಿ | ಯಹೂದಿಗಳ ಅಧೀನದಲ್ಲಿ |
|---|---|---|
| ■ 1917 | 97ಶೇ. | 03ಶೇ. |
| ■ 1939 | 95ಶೇ. | 05ಶೇ. |
| ■ 1946 | 94.50ಶೇ. | 5.5ಶೇ. |
| ■ 1947 | 94ಶೇ. | 06ಶೇ. |
| ■ 1948 | 22ಶೇ. | 78ಶೇ. |
| ■ 1967 | 00ಶೇ. | 100ಶೇ. |

**30 ಅಕ್ಟೋಬರ್ 2023ರಂದು 'ವಾರ್ತಾಭಾರತಿ'ಯಲ್ಲಿ ಪ್ರಕಟವಾದ ಲೇಖನ.**

❖ ❖ ❖